ಮಂಗಳೂರು
ಶುಕ್ರವಾರ, 29 ಮೇ 2026
ಸಂಪುಟ 48, ಸಂಚಿಕೆ 71, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಆರೋಗ್ಯ ವೆಚ್ಚದಲ್ಲಿ ಗಮನಾರ್ಹ ಏರಿಕೆ | 02
ಸಂಚಾರಿ ಚಲನ್ ಪರಿಶೀಲನೆ | 02
ಹಾರ್ಮುಜ್ ಮೂಲಕ ಸುರಕ್ಷಿತ ವ್ಯಾಪಾರ ಮುಖ್ಯ | 02

ಸಚಿವರ ಜತೆ ಉಪಾಹಾರ ಸಭೆ | ಹೈಕಮಾಂಡ್ ಸೂಚನೆಯಂತೆ ಅಧಿಕಾರ ತ್ಯಾಗ

ಸಿದ್ದರಾಮಯ್ಯ ರಾಜೀನಾಮೆ

ಬೆಂಗಳೂರು: ರಾಜ್ಯ ರಾಜಕಾರಣದಲ್ಲಿ ಕಳೆದ ಕೆಲವು ದಿನಗಳಿಂದ ಮುಂದುವರಿದಿದ್ದ ತೀವ್ರ ಕುತೂಹಲ ಮತ್ತು ಹೈಡ್ರಾಮಾಗೆ ಕೊನೆಗೂ ಭಾವುಕ ತೆರೆ ಬಿದ್ದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ಅಧಿಕೃತವಾಗಿ ರಾಜೀನಾಮೆ ಸಲ್ಲಿಸುವ ಮೂಲಕ ಅಧಿಕಾರದಿಂದ ಕೆಳಗಿಳಿದಿದ್ದಾರೆ.



ರಾಜೀನಾಮೆ ಸಲ್ಲಿಕೆಗೂ ಮುನ್ನ ಗುರುವಾರ ಬೆಳಗ್ಗೆ ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಯಲ್ಲಿ ಸಚಿವರೊಂದಿಗೆ ಕೊನೆಯ ಉಪಾಹಾರ ಸಭೆ ನಡೆಯಿತು. ಕಾವೇರಿ ನಿವಾಸದ ಅಂಗಳ ಸದಾ ಜನಸಾಗರದಿಂದ, ಅಧಿಕಾರದ ಗಿಜಿಗುಡುವಿಕೆಯಿಂದ ತುಂಬಿರುತ್ತಿತ್ತು. ಆದರೆ ಇಂದು ಅಲ್ಲಿ ಆವರಿಸಿದ್ದ ಮೌನವೇ ಬೇರೆಯಾಗಿತ್ತು. ಉಪಾಹಾರ ಸಭೆಯಲ್ಲಿ ಭಾಗಿಯಾಗಿದ್ದ ಸಚಿವರು ಮತ್ತು ಆಪ್ತ ನಾಯಕರು ಸಿದ್ದರಾಮಯ್ಯ ಅವರ ಸುದೀರ್ಘ ಹೋರಾಟದ ಪಯಣವನ್ನು ನೆನೆದು ಭಾವುಕರಾದರು. ಹಲವು ಸಚಿವರ ಕಣ್ಣಾಲಿಗಳು ತೇವಗೊಂಡಿದ್ದವು. ಸಹೋದ್ಯೋಗಿ ಮಂತ್ರಿಗಳಿಗೆ ಧೈರ್ಯ ತುಂಬಿದ ಸಿದ್ದರಾಮಯ್ಯ ತಮಗೆ ನೀಡಿದ ಸಹಕಾರವನ್ನು ಮೆಲುಕು ಹಾಕಿದರು. ಸಚಿವರುಗಳಿಗೆ ಧನ್ಯವಾದ ಸಲ್ಲಿಸಿ ವಿದಾಯ ಹೇಳಿದರು.

ಸಚಿವರಿಗೆ ಧನ್ಯವಾದ: ತಮ್ಮ ರಾಜೀನಾಮೆ ನೀಡಲು ಕಾರಣ ಹಾಗೂ ಹೈಕಮಾಂಡ್‌ನ ನಿರ್ಧಾರದ ಬಗ್ಗೆ ಸಿದ್ದರಾಮಯ್ಯ ಅವರು ಎಲ್ಲ ಸಚಿವರಿಗೆ ಮನವರಿಕೆ ಮಾಡಿಕೊಟ್ಟರು. ದೆಹಲಿಯಿಂದ ವಾಪಸ್ಸಾದ ನಂತರ ಏನನ್ನೂ ಮಾತನಾಡದೆ ಮೌನಕ್ಕೆ ಶರಣಾಗಿದ್ದ ಸಿಎಂ ಸಿದ್ದರಾಮಯ್ಯ ಅವರು, ಗುರುವಾರ ಸಚಿವರ ಸಭೆಯಲ್ಲಿ ಎಲ್ಲರ ಜತೆ ಮನಬಿಚ್ಚಿ ಮಾತನಾಡಿ, ಹೈಕಮಾಂಡ್ ಸೂಚನೆಯಂತೆ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ತಿಳಿಸಿ, 3 ವರ್ಷಗಳ ಕಾಲ ತಮ್ಮ ಜತೆ ರಾಜ್ಯದ ಪ್ರಗತಿಗೆ ಕೆಲಸ ಮಾಡಿದ ಎಲ್ಲ ಸಂಪುಟ ಸಹೋದ್ಯೋಗಿಗಳಿಗೆ ಧನ್ಯವಾದ ಹೇಳಿದರು. ➡ಪುಟ ೪

ಸಿಎಂ ಕಾಲಿಗೆ ಬಿದ್ದು ಆಶೀರ್ವಾದ ಪಡೆದ ಡಿಕೆಶಿ

ದುಡುಕಿನ ಹೇಳಿಕೆ ಬೇಡ: ಬೆಂಬಲಿಗರಿಗೆ ಡಿಸಿಎಂ

ಆಡಳಿತ ಸಂತೃಪ್ತಿ ನೀಡಿದೆ: ಸಿಎಂ ◆ಪುಟ ೪

ಯಾವುದೇ ನೋವಿಲ್ಲ, ಮನಃಪೂರ್ವಕ ನಿರ್ಧಾರ

ನನಗೆ ಯಾವುದೇ ನೋವಿಲ್ಲ, ಮನಃಪೂರ್ವಕವಾಗಿ ರಾಜೀನಾಮೆ ನೀಡುತ್ತಿದ್ದೇನೆ ಎಂದು ಸಿದ್ದರಾಮಯ್ಯ ತಿಳಿಸಿದರು. ಸಚಿವರೊಂದಿಗಿನ ಉಪಾಹಾರ ಸಭೆಯಲ್ಲಿ ಮಾತನಾಡಿದ ಸಿಎಂ, ಹೈಕಮಾಂಡ್ ಹೇಳುವುದನ್ನು ಪಾಲನೆ ಮಾಡುವುದು ನನ್ನ ಕರ್ತವ್ಯ. ನನಗೆ ಯಾವುದೇ ನೋವಿಲ್ಲ, ಮನಃಪೂರ್ವಕವಾಗಿ ರಾಜೀನಾಮೆ ನೀಡುತ್ತಿದ್ದೇನೆಂದು ಹೇಳಿದರು.

ಕಣ್ಣೀರಿಟ್ಟ ಸಿಎಂ

ಸಿಎಂ ಸಿದ್ದರಾಮಯ್ಯ ಸಚಿವರನ್ನು ದ್ದೇಶಿಸಿ ಮಾತನಾಡುವಾಗ ಭಾವುಕರಾದ ಘಟನೆಯೂ ನಡೆದಿದೆ. 2028ರವರೆಗೆ ಡಿಕೆ ಶಿವಕುಮಾರ್ ಸಿಎಂ ಆಗಿರುತ್ತಾರೆ. ಮುಂದೆ ಒಳ್ಳೆಯ ಕೆಲಸಗಳನ್ನು ಮಾಡಿಕೊಂಡು ಹೋಗಿ ಎನ್ನುವಾಗ ಕಣ್ಣೀರಾದರು ಎನ್ನಲಾಗಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಎಲ್ಲ ಸಚಿವರು ಇಂದಿನ ಉಪಾಹಾರ ಸಭೆಯಲ್ಲಿ ಪಾಲ್ಗೊಂಡಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಲಭಾಗದಲ್ಲಿ ಡಿ.ಕೆ. ಶಿವಕುಮಾರ್, ಎಡಭಾಗದಲ್ಲಿ ಡಾ.ಜಿ.ಪರಮೇಶ್ವರ್ ಕುಳಿತಿದ್ದುದು ವಿಶೇಷವಾಗಿತ್ತು. ➡ಪುಟ ೪

ಹಿಂದುಳಿದವರ ರಾಮಯ್ಯ
◆ವಿಶೇಷ ಪುಟ ೨



ಮತದಾರರೇ ಅಭಿಮಾನಿ ದೇವರು

ಬೆಂಗಳೂರು: ಕರ್ನಾಟಕದಲ್ಲಿ ಸುದೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿದ್ದ ಮತ್ತು ಹದಿನೇಳು ಬಜೆಟ್ ಮಂಡಿಸಿ ದಾಖಲೆ ಮಾಡಿದ್ದ ಸಿದ್ದರಾಮಯ್ಯ ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಗುರುವಾರ ಲೋಕಭವನಕ್ಕೆ ತೆರಳಿ ರಾಜ್ಯಪಾಲರ ಅನುಪಸ್ಥಿತಿಯಲ್ಲಿ ಅವರ ವಿಶೇಷ ಕಾರ್ಯದರ್ಶಿಯವರಿಗೆ ಒಂದು ಪುಟದ ರಾಜೀನಾಮೆ ಪತ್ರ ನೀಡಿದ್ದಾರೆ. ರಾಜೀನಾಮೆ ಸಲ್ಲಿಸಿದ ಬಳಿಕ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹಿತ ಸಂಪುಟದ ಕೆಲ ಸಚಿವರೊಂದಿಗೆ ಸುದ್ದಿಗೋಷ್ಠಿ ನಡೆಸಿದ ಸಿದ್ದರಾಮಯ್ಯ ತಾವು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವುದನ್ನು ಅಧಿಕೃತವಾಗಿ ಘೋಷಿಸಿದರು. ಹೈಕಮಾಂಡ್ ಸೂಚಿಸಿದಾಗ ರಾಜೀನಾಮೆ ಕೊಡುತ್ತೇನೆಂದು ಮೊದಲಿಂದಲೂ ಹೇಳುತ್ತಿದ್ದೆ, ಮೊನ್ನೆ ಕರೆದು ರಾಜೀನಾಮೆ ಕೊಡಬೇಕೆಂದು ಸೂಚಿಸಿದರು. ➡ಪುಟ ೪

ರಾಷ್ಟ್ರ ರಾಜಕಾರಣಕ್ಕೆ ಹೋಗುವುದಿಲ್ಲ

ನಾನು 1978ರಲ್ಲಿ ರಾಜಕಾರಣಕ್ಕೆ ಬಂದಿದ್ದು, ಇನ್ನೆರಡು ವರ್ಷಗಳಾದರೆ 50 ವರ್ಷಗಳಾಗುತ್ತವೆ. ನನ್ನ ರಾಜಕೀಯ ಜೀವನ ತೆರೆದ ಪುಸ್ತಕ. ಅಧಿಕಾರ ಅಥವಾ ಹಣಕ್ಕಾಗಿ ಆಸೆಪಟ್ಟವನಲ್ಲ. ಮತದಾರ ದೇವರು ನನಗೆ ಅಧಿಕಾರ ಕೊಟ್ಟಿದ್ದಾರೆ. ಸಕ್ರಿಯ ರಾಜಕಾರಣದಲ್ಲೇ ಇರುತ್ತೇನೆ. ಅಹಿಂದ ಚಟುವಟಿಕೆ ಮುಂದುವರಿಸುತ್ತೇನೆ, ಸಮಾನತೆಗಾಗಿ ಹೋರಾಟ ಮಾಡುತ್ತೇನೆ. ರಾಜ್ಯಸಭೆಗೆ ಹೋಗಬೇಕು ಎಂದು ವರಿಷ್ಠರು ಹೇಳಿದರು. ಆದರೆ, ರಾಷ್ಟ್ರ ರಾಜಕಾರಣಕ್ಕೆ ಹೋಗುವುದಿಲ್ಲ. ➡ಪುಟ ೪

ಒಂದು ಪುಟದ ರಾಜೀನಾಮೆ ಪತ್ರ

ರಾಜ್ಯಪಾಲರ ಅನುಪಸ್ಥಿತಿಯಲ್ಲಿ ವಿಶೇಷ ಕಾರ್ಯದರ್ಶಿ ಪ್ರಭುಶಂಕರ್‌ಗೆ ಸಲ್ಲಿಕೆ

ಬೆಂಗಳೂರು: ಹೈಕಮಾಂಡ್ ನಿರ್ದೇಶನದ ಬೆನ್ನಲ್ಲೇ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ರಾಜ್ಯಪಾಲರ ಅನುಪಸ್ಥಿತಿಯಲ್ಲಿ ಒಂದು ಪುಟದ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಮಧ್ಯಾಹ್ನ 2.45ಕ್ಕೆ ಮುಖ್ಯಮಂತ್ರಿಗಳ ಸರ್ಕಾರಿ ನಿವಾಸ ಕಾವೇರಿಯಿಂದ ಕಪ್ಪು ಬಣ್ಣದ ರೇಂಜ್ ರೋವರ್ ಖಾಸಗಿ ಕಾರಿನಲ್ಲಿ ಲೋಕಭವನಕ್ಕೆ ಹೊರಟರು. 2.55ಕ್ಕೆ ಲೋಕಭವನ ತಲುಪಿ, ಅಲ್ಲಿ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪ್ರಭುಶಂಕರ್ ಅವರಿಗೆ ರಾಜೀನಾಮೆ ಪತ್ರ ಹಸ್ತಾಂತರಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ವೈಯಕ್ತಿಕ ಕಾರಣಗಳಿಂದ ತುರ್ತಾಗಿ ಇಂದೋರ್‌ಗೆ ತೆರಳಿದ್ದರಿಂದ ಅವರು ಲಭ್ಯವಿರಲಿಲ್ಲ. ಹೀಗಾಗಿ, ರಾಜ್ಯಪಾಲರ ಮುನ್ಸೂಚನೆ ಹಾಗೂ ನಿಯಮಾವಳಿಗಳ ಪ್ರಕಾರ ಸಿಎಂ ಸಿದ್ದರಾಮಯ್ಯ ಅವರು ಲೋಕಭವನದ ವಿಶೇಷ ಕಾರ್ಯದರ್ಶಿ ಪ್ರಭುಶಂಕರ್ ಅವರಿಗೆ ತಮ್ಮ ರಾಜೀನಾಮೆ ಪತ್ರ ಕೊಟ್ಟರು. ➡ಪುಟ ೪

> **ಕಳೆದ ಎರಡ್ಮೂರು ದಿನಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿರುವ ಆಂತರಿಕ ವಿದ್ಯಮಾನಗಳನ್ನು ಗಮನಿಸಿದರೆ ಸಿದ್ದರಾಮಯ್ಯ ರಾಜೀನಾಮೆ ಬಳಿಕ ಸಿಎಂ ಯಾರು ಆಗುತ್ತಾರೆ ಎಂಬ ಯಕ್ಷಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ.**
> ■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಸ್ವಾತಿ

ದಿನದ ಮಾತು

ಸಜ್ಜನರು ಎಲ್ಲರಿಗೂ ಕರುಣಾಳುವಾಗಿ, ಏನೊಂದು ಕಾರಣವಿಲ್ಲದಾಗ್ಯೂ ಬಂಧುಗಳಂತೆ ವರ್ತಿಸುತ್ತಾರೆ.
▲ಕಥಾ ಸರಿತ್ಸಾಗರ

ಮತದಾರರ ತೀರ್ಪು ಪ್ರಶ್ನಿಸುವ ಚಾಳಿ: ಈಗ ಜಿರಳೆಯ ಪಾಳಿ
ಲೇಖನ
◆ಅರುಣ್ ಆನಂದ್
◆ಪುಟ ೬

ಕಿರುಸುದ್ದಿ

ನೀರಾನೆ ಮರಿಗೆ ಸಮೀಕ್ಷಾ ರೆಡ್ಡಿ ಹೆಸರಿಡಲು ಸೂಚನೆ
◆ಪುಟ ೫

ಜನಪ್ರಿಯ ನಾಯಕ ಸಿದ್ದರಾಮಯ್ಯ: ಜೋಶಿ
◆ಪುಟ ೫

ನೀಟ್ ಪ್ರಶ್ನೆಪತ್ರಿಕೆ ಸಾಗಣೆಗೆ ಸೇನಾ ಲಾಜಿಸ್ಟಿಕ್ಸ್ ಬಳಕೆ?
◆ಪುಟ ೭

4 ರಾಜ್ಯಗಳಿಗೆ ಬಿಜೆಪಿ ಹೊಸ ರಾಜ್ಯಾಧ್ಯಕ್ಷರು
◆ಪುಟ ೭

ಗೋ ಹತ್ಯೆ ನಿಷೇಧಕ್ಕೆ ಮದ್ರಾಸ್ ಹೈ ಆದೇಶ
◆ಪುಟ ೭

ಬಿಎಸ್‌ಎಫ್‌ಗೆ ಭೂಮಿ ಹಸ್ತಾಂತರ
◆ಪುಟ ೭

ಮತ್ತೆ ಭುಗಿಲೆದ್ದ ಸಂಘರ್ಷ | ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ

ಡ್ರೋನ್ ಹೊಡೆದುರುಳಿಸಿದ ಅಮೆರಿಕ

4 ಡ್ರೋನ್ ಹೊಡೆದ ಅಮೆರಿಕ ಸೇನೆ

ವಾಷಿಂಗ್ಟನ್: ಕದನ ವಿರಾಮಗಳ ಹಲವು ಮಾತುಕತೆಗಳ ಮಧ್ಯೆ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಮತ್ತೆ ತೀವ್ರಗೊಂಡಿದೆ. ಅಮೆರಿಕ ಮತ್ತು ಇರಾನ್ ಸಂಘರ್ಷ ಮತ್ತೆ ಭುಗಿಲೆದ್ದಿದೆ.

ಹಾರ್ಮುಜ್ ಜಲಸಂಧಿ ಪ್ರದೇಶದ ಭದ್ರತೆಗೆ ಗಂಭೀರ ಸಮಸ್ಯೆಯಾಗಿ ಪರಿಣಮಿಸಿದ್ದ ನಾಲ್ಕು ಇರಾನಿಯನ್ ಡ್ರೋನ್‌ಗಳನ್ನು ಅಮೆರಿಕ ಸೇನೆ ಹೊಡೆದುರುಳಿಸಿದೆ. ಜತೆಗೆ ದಕ್ಷಿಣ ಇರಾನ್‌ನ ಬಂದರ್ ಅಬ್ಬಾಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಡ್ರೋನ್ ನಿಯಂತ್ರಣ ಕೇಂದ್ರದ ಮೇಲೂ ದಾಳಿ ನಡೆಸಿದೆ. ಈ ಘಟನೆ ಬಳಿಕ ಅಮೆರಿಕ-ಇರಾನ್ ನಡುವಿನ ತಾತ್ಕಾಲಿಕ ಕದನ ವಿರಾಮದ ಬಗ್ಗೆ ಕಳವಳ ಹೆಚ್ಚು ಮಾಡಿದೆ. ಹಾರ್ಮುಜ್ ಜಲಸಂಧಿ ಸುತ್ತಮುತ್ತ ಅಮೆರಿಕ ಮತ್ತು ಮೈತ್ರಿ ರಾಷ್ಟ್ರಗಳ ಹಡಗುಗಳಿಗೆ ಅಪಾಯ ಉಂಟುಮಾಡುವ ರೀತಿಯಲ್ಲಿ ಇರಾನ್ ಡ್ರೋನ್ ಚಟುವಟಿಕೆಗಳು ಹೆಚ್ಚಾಗಿತ್ತು ಎಂದು ಅಮೆರಿಕದ ರಕ್ಷಣಾ ಇಲಾಖೆ ಮೂಲಗಳು ತಿಳಿಸಿವೆ. ➡ಪುಟ ೪



- ಸಂಧಾನಕಾರರಲ್ಲಿ ಒಮ್ಮತ, ಅಧ್ಯಕ್ಷ ಟ್ರಂಪ್ ಒಪ್ಪಿಗೆಯೊಂದೇ ಬಾಕಿ
- ಇರಾನ್ ಪರಮಾಣು ಯೋಜನೆಗಳ ಸಂಧಾನ ಸಭೆ ಶೀಘ್ರ ಆರಂಭ

ಕೆನ್-ಬೆಟ್ವಾ ಮಾದರಿಯಾಗಲಿ | ರಾಜ್ಯಗಳಿಗೆ ಮೋದಿ ಸಲಹೆ

ಜಲವಿವಾದಕ್ಕೆ ಸಹಕಾರವೇ ಪರಿಹಾರ

ಹೊಸದಿಲ್ಲಿ: ಅಂತಾರಾಜ್ಯ ಜಲ ವಿವಾದಗಳನ್ನು ಸಹಕಾರ, ತ್ವರಿತ ಅನುಮೋದನೆ ಹಾಗೂ ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣೆಯ ಮೂಲಕ ಬಗೆಹರಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಗಳಿಗೆ ಕರೆ ನೀಡಿದ್ದಾರೆ. ಕೆನ್-ಬೆಟ್ವಾ ನದಿ ಜೋಡಣೆ ಯೋಜನೆ ಇತರ ರಾಜ್ಯಗಳಿಗೆ ಮಾದರಿಯಾಗಬೇಕು ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.



ಬುಧವಾರ ನಡೆದ 51ನೇ ಪ್ರಗತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಧಾನಿ, ರೈಲು, ವಿದ್ಯುತ್ ಮತ್ತು ರಸ್ತೆ ಕ್ಷೇತ್ರಗಳಿಗೆ ಸಂಬಂಧಿಸಿದ ಒಟ್ಟು 30 ಸಾವಿರ ಕೋಟಿ ರೂ. ಮೌಲ್ಯದ ಏಳು ಪ್ರಮುಖ ಮೂಲಸೌಕರ್ಯ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಿದರು. ಸಾರ್ವಜನಿಕ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬ ಉಂಟಾದರೆ ವೆಚ್ಚ ಹೆಚ್ಚಳವಾಗುವುದಲ್ಲದೆ, ಜನರಿಗೆ ಅಗತ್ಯ ಸೌಲಭ್ಯಗಳು ಸಮಯಕ್ಕೆ ಸಿಗುವುದಿಲ್ಲ ಎಂದು ಮೋದಿ ಎಚ್ಚರಿಸಿದರು. ➡ಪುಟ ೪

ವಾಧವನ್ ಬಂದರು ರಾಷ್ಟ್ರದ ದ್ವಾರವಾಗಲಿ

ರಸ್ತೆ ಮತ್ತು ಬಂದರು ಸಂಪರ್ಕ ಯೋಜನೆಗಳ ಪರಿಶೀಲನೆ ವೇಳೆ ವಾಧವನ್ ಬಂದರನ್ನು ಬಹುಮಾಧ್ಯಮ



ಸಾರಿಗೆ ಕೇಂದ್ರವಾಗಿ ಅಭಿವೃದ್ಧಿಪಡಿಸಬೇಕು ಎಂದು ಪ್ರಧಾನಿ ಸೂಚಿಸಿದರು. ಕರಾವಳಿ ಸಾಗಾಟ, ಒಳನಾಡು ಜಲಮಾರ್ಗ, ವಿಶೇಷ ಸರಕು ರೈಲು ಮಾರ್ಗ, ವೇಗದ ರೈಲು, ಹೆದ್ದಾರಿ ಹಾಗೂ ವಿಮಾನ ನಿಲ್ದಾಣ ಸಂಪರ್ಕಗಳನ್ನು ಸಮಗ್ರವಾಗಿ ಜೋಡಿಸುವಂತೆ ಸಲಹೆ ನೀಡಿದರು.

ಗಿರಿಬಾಲಾ ಸಿಬಿಐ ವಶಕ್ಕೆ

ಭೋಪಾಲ್: ಸೊಸೆ ತ್ವಿಶಾ ಶರ್ಮಾ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಗುರುವಾರ ಆಕೆ ಅತ್ತೆ ಮಾಜಿ ನ್ಯಾಯಾಧೀಶೆ ಗಿರಿಬಾಲಾ ಸಿಂಗ್ ಅವರನ್ನು ವಶಕ್ಕೆ ಪಡೆದಿದೆ. ಗಿರಿಬಾಲಾ ಸಿಂಗ್‌ರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ್ದ ಭೋಪಾಲ್ ಸೆಷನ್ಸ್ ನ್ಯಾಯಾಲಯದ ಮೇ



15ರ ಆದೇಶವನ್ನು ಮಧ್ಯಪ್ರದೇಶ ಹೈಕೋರ್ಟ್ ರದ್ದುಗೊಳಿಸಿದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ. ನ್ಯಾಯಮೂರ್ತಿ ದೇವನಾರಾಯಣ್ ಮಿಶ್ರಾ, ಜಾಮೀನು ಪ್ರಶ್ನಿಸಿದ್ದ ಅರ್ಜಿಗಳನ್ನು ಪುರಸ್ಕರಿಸಿದ್ದು, ವಿಚಾರಣಾ ನ್ಯಾಯಾಲಯ, ಕೇಸ್ ಡೈರಿ, ಸಾಕ್ಷಿಗಳ ಹೇಳಿಕೆಗಳು, ಮೃತರ ಕುಟುಂಬಸ್ಥರ ಆರೋಪಗಳನ್ನು ಸರಿಯಾಗಿ ಪರಿಶೀಲಿಸುವಲ್ಲಿ ವಿಫಲವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ➡ಪುಟ ೪

ಚಂದ್ರನ ಮೇಲ್ಮೈನಲ್ಲಿ ಮಂಜುಗಡ್ಡೆ

ಹೊಸದಿಲ್ಲಿ: ಚಂದ್ರನ ದಕ್ಷಿಣ ಧ್ರುವದ ಸಮೀಪವಿರುವ ಕುಳಿಗಳಲ್ಲಿ ಮೇಲ್ಮೈ ಅಡಿಯಲ್ಲಿ ಮಂಜುಗಡ್ಡೆ ಇರುವ ಬಲವಾದ ಪುರಾವೆಗಳನ್ನು ವಿಜ್ಞಾನಿಗಳು ಚಂದ್ರಯಾನ-2 ದತ್ತಾಂಶ ಬಳಸಿ ಪತ್ತೆಹಚ್ಚಿದ್ದಾರೆ, ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ ತಿಳಿಸಿದೆ. ಇತ್ತೀಚೆಗೆ ಬಿಡುಗಡೆ ಮಾಡಲಾದ ಈ ಸಂಶೋಧನಾ ಫಲಿತಾಂಶಗಳು ಅಹಮದಾಬಾದ್‌ನ ಭೌತಿಕ ಸಂಶೋಧನಾ ಪ್ರಯೋಗಾಲಯದ ದತ್ತಾಂಶವನ್ನು ಆಧರಿಸಿವೆ. ➡ಪುಟ ೪



ಹಿಂದುಳಿದವರ ರಾಮಯ್ಯ
ಹೆಚ್ಚು ಬಜೆಟ್ ಮಂಡಿಸಿದ ಅರ್ಥರಾಮಯ್ಯ

ಮೇ 28 ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟ ಸಹೋದ್ಯೋಗಿಗಳ ಮುಖಗಳ ಮೇಲೆ ಮಾತಿಗಿಂತ ಮೌನವೇ ದಟ್ಟವಾಗಿತ್ತು. ಹೈಕಮಾಂಡ್ ರಾಜೀನಾಮೆ ನೀಡುವಂತೆ ಹೇಳಿದೆ. ನಾನು ಒಪ್ಪಿದ್ದೇನೆ ಎಂಬ ಒಂದೇ ಸಾಲಿನಲ್ಲಿ, ಎಪ್ಪತ್ತೇಳು ವರ್ಷ ವಯಸ್ಸಿನ ಆ ಧೀಮಂತ ತನ್ನ ರಾಜಕೀಯ ಜೀವನದ ಅತ್ಯಂತ ದೊಡ್ಡ ಗದ್ದುಗೆಯನ್ನು ಇಳಿದು ನಿಂತ. ಮಧ್ಯಾಹ್ನ ಮೂರು ಗಂಟೆಗೆ ರಾಜಭವನಕ್ಕೆ ಹೋಗಿ ರಾಜೀನಾಮೆ ಪತ್ರ ಸಲ್ಲಿಸುವ ಮೂಲಕ ಸಿದ್ದರಾಮಯ್ಯ ಎಂಬ ಒಂದು ಯುಗ ಹೀಗೆ, ತೀರಾ ಸದ್ದಿಲ್ಲದೇ, ತೆರೆ ಸರಿಸಿಕೊಂಡಿದೆ. ಆದರೆ ಯಾವ ಗದ್ದುಗೆಯೂ ಒಂದು ಜೀವನದ ಕಥನವನ್ನು ಹೇಳಲಾರದು. ಗದ್ದುಗೆ ಎಂಬುದು ಕೇವಲ ಒಂದು ತಂಗುದಾಣ ಅಷ್ಟೆ. ಮುಖ್ಯವಾದದ್ದು ಅಲ್ಲಿಯವರೆಗೆ ನಡೆದು ಬಂದ ಹಾದಿ. ಆ ಹಾದಿ ಆರಂಭವಾಗಿದ್ದು ವಿಧಾನಸೌಧದ ಮೆಟ್ಟಿಲುಗಳಲ್ಲಿ ಅಲ್ಲ, ಮೈಸೂರಿನಿಂದ ನೂರ ಅರವತ್ತು ಮೈಲಿ ದೂರದ, ಕುರಿಮಂದೆಗಳ ಧೂಳಿನ ಗೆರೆಗಳಲ್ಲಿ. ಇಂದು ಆ ಆರಂಭದ ದಿನಗಳನ್ನು ಒಮ್ಮೆ ಹಿಂದಿರುಗಿ ನೋಡುವುದು ಸೂಕ್ತ.

ಸಿದ್ದರಾಮಯ್ಯ ರಾಜಕೀಯ

ಲೋಕದಳದಿಂದ ಸಿದ್ದರಾಮಯ್ಯ ಅವರ ರಾಜಕೀಯ ಜೀವನ ಆರಂಭವಾಯ್ತು. ಜನತಾದಳ ಸೇರಿದ ಸಿದ್ದರಾಮಯ್ಯ ಅವರು ಜನಪ್ರಿಯರಾದ್ರು. ಬಳಿಕ ಜೆಡಿಎಸ್ ಪಕ್ಷ ತೊರೆದು 2006 ರಲ್ಲಿ ಕಾಂಗ್ರೆಸ್ ಗೂಡು ಸೇರಿದ್ರು. ಕಾಂಗ್ರೆಸ್ ಪಕ್ಷದ ಬಲಿಷ್ಠ ನಾಯಕರಾಗಿ ಬೆಳೆದ ಸಿದ್ದರಾಮಯ್ಯ, ಪಕ್ಷ ಸಂಘಟನೆಗಾಗಿ ತನು-ಮನ ಅರ್ಪಿಸಿ ದುಡಿದಿದ್ದಾರೆ. ಇದೀಗ 2 ಬಾರಿ ಸಿಎಂ ಆಗುವ ಮೂಲಕ ರಾಜ್ಯದಲ್ಲಿ ದೀರ್ಘಕಾಲದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಸಿದ್ದರಾಮನಹುಂಡಿಯ ಕುರಿಗಾಹಿ



ಮೈಸೂರಿನ ವರುಣಾ ಹೋಬಳಿಯ ಒಂದು ಪುಟ್ಟ ಹಳ್ಳಿ, ಹೆಸರು ಸಿದ್ದರಾಮನಹುಂಡಿ. 1948ರ ಆಗಸ್ಟ್ 12ರಂದು, ಹಾಲುಮತ ಸಮುದಾಯದ ಸಿದ್ದರಾಮೇಗೌಡ ಮತ್ತು ಬೋರಮ್ಮ ದಂಪತಿಗೆ ಜನಿಸಿದ ಮಗ ಇವನು. ಕುರಿ ಕಾಯುವುದು, ದನ ಮೇಯಿಸುವುದು, ಹೊಲ ಉಳುವುದು – ಇದೇ ಆ ಮನೆಯ ಬದುಕಿನ ಲಯ. ಬಾಲ್ಯದ ಆ ದಿನಗಳಲ್ಲಿ, ಬೇರೆ ಹುಡುಗರು ಅಕ್ಷರ ಕಲಿಯುತ್ತಿದ್ದಾಗ, ಸಿದ್ದರಾಮಯ್ಯ ತಂದೆಯ ಜತೆ ಮಂದೆ ಹೊಡೆಯುತ್ತಿದ್ದ. ಶಾಲೆಯ ಬಾಗಿಲು ಅವನಿಗೆ ತೆರೆದದ್ದು ಸುಮಾರು ಹತ್ತು ವರ್ಷ ತುಂಬಿದ ಮೇಲೆ ನೇರವಾಗಿ ನಾಲ್ಕನೆಯ ತರಗತಿಗೆ. ಅಕ್ಷರ ತಡವಾಗಿ ಬಂದರೂ, ಬಂದ ಮೇಲೆ ಅದು ಆ ಹುಡುಗನನ್ನು ಬಿಡಲೇ ಇಲ್ಲ.

ತಂದೆಗೆ ಮಗನ ಓದಿನ ಮೇಲೆ ನಂಬಿಕೆಯಿತ್ತು, ಆದರೆ ರಾಜಕೀಯದ ಮೇಲೆ ಇಲ್ಲ. ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸೋತು ಕಹಿ ಅನುಭವಿಸಿದ್ದ ಸಿದ್ದರಾಮೇಗೌಡ, ರಾಜಕೀಯದವರನ್ನು ನಂಬಬೇಡ ಎಂದು ಮಗನಿಗೆ ಎಚ್ಚರಿಕೆ ನೀಡಿದ್ದರು. ಮುಂದೆ ಆ ಮಗ ಐದು ದಶಕ ರಾಜಕೀಯದ ಆಳ ಸಮುದ್ರದಲ್ಲಿ ಈಜುತ್ತಾನೆ, ಎರಡು ಬಾರಿ ಮುಖ್ಯಮಂತ್ರಿಯಾಗುತ್ತಾನೆ ಎಂದು ಆ ತಂದೆ ಊಹಿಸಿರಲಿಕ್ಕಿಲ್ಲ. ಆದರೆ ಆ ಎಚ್ಚರಿಕೆ, ಆ ಜಾಗರೂಕತೆಯೇ ಮುಂದೆ ಸಿದ್ದರಾಮಯ್ಯ ಎಂಬ ರಾಜಕಾರಣಿಯ ಒಳಗೆ ಗಟ್ಟಿಯಾಗಿ ಕುಳಿತುಬಿಟ್ಟಿತು ಎನ್ನಬಹುದು.



ಸುದೀರ್ಘ ಶಿಷ್ಯ ಪರ್ವ

ರಾಜಕೀಯದ ಮೊದಲ ಹೆಜ್ಜೆ 1978ರಲ್ಲಿ. ತಾಲ್ಲೂಕು ಬೋರ್ಡ್ ಚುನಾವಣೆ ಸದಸ್ಯನಾಗಿ ಪದಾರ್ಪಣೆ. ತಂದೆಯ ವಿರೋಧವನ್ನು ಮೀರಿ ಸ್ಪರ್ಧಿಸಿ ಗೆದ್ದರು. ಅದೇ ವರ್ಷ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ ಲೋಕದಳದ ಅಭ್ಯರ್ಥಿಯಾಗಿ ನಿಂತು ಸೋತರು. 1980ರಲ್ಲಿ ಮೈಸೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಮತ್ತೆ ಸೋಲು. ಸೋಲು ಅವರಿಗೆ ಹೊಸದಲ್ಲ, ಆದರೆ ಅದು ಅವರನ್ನು ಹಿಮ್ಮೆಟ್ಟಿಸಲಿಲ್ಲ. 1983ರಲ್ಲಿ ಚಾಮುಂಡೇಶ್ವರಿಯಿಂದ ಗೆದ್ದು ಮೊದಲ ಬಾರಿ ಶಾಸಕರಾದರು. ಆ ಗೆಲುವಿನ ಬೆನ್ನಲ್ಲೇ ಕನ್ನಡ ಕಾವಲು ಸಮಿತಿಯ ಮೊದಲ ಅಧ್ಯಕ್ಷ ಪಟ್ಟವೂ ಸಿಕ್ಕಿತು. ಕನ್ನಡವನ್ನು ರಾಜ್ಯಭಾಷೆಯಾಗಿ ನೆಲೆಗೊಳಿಸುವ ಮಹತ್ತರ ಜವಾಬ್ದಾರಿ ಇವರ ಮೇಲಿತ್ತು.


ನಂತರದ್ದು ಜನತಾ ಪರಿವಾರದ ಸುದೀರ್ಘ ಪರ್ವ. 1985ರಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಮರು ಆಯ್ಕೆಯಾಗಿ ರಾಮಕೃಷ್ಣ ಹೆಗಡೆ ಸಂಪುಟದಲ್ಲಿ ರೇಷ್ಮೆ, ಪಶುಸಂಗೋಪನೆ, ಸಾರಿಗೆ, ಹೀಗೆ ಒಂದರ ಮೇಲೊಂದು ಖಾತೆಗಳು. 1989ರಲ್ಲಿ ಒಂದು ಸೋಲು, 1991ರಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಮತ್ತೊಂದು ಸೋಲು. ಆದರೆ 1994ರಲ್ಲಿ ಮತ್ತೆ ಗೆದ್ದು, ದೇವೇಗೌಡ ಸರ್ಕಾರದಲ್ಲಿ ಹಣಕಾಸು ಸಚಿವರಾದರು. ಕುರಿ ಲೆಕ್ಕ ಹಾಕುವವನು ರಾಜ್ಯದ ಹಣಕಾಸು, ಬಜೆಟ್ ಹೇಗೆ ಲೆಕ್ಕ ಹಾಕುತ್ತಾನೆ ಎಂದು ಹೀಯಾಳಿಸಿದವರೇ ಹೆಚ್ಚು. ಮುಂದೆ ಜೆ.ಎಚ್. ಪಟೇಲ್ ನೇತೃತ್ವದಲ್ಲಿ ಉಪಮುಖ್ಯಮಂತ್ರಿ. ಹಣಕಾಸು ಸಚಿವನಾಗಿ ಅವರು ಮಂಡಿಸಿದ ಬಜೆಟ್‌ಗಳ ಸಂಖ್ಯೆ ಹದಿಮೂರು. ರಾಜ್ಯದ ಇತಿಹಾಸದಲ್ಲೇ ದಾಖಲೆ. ಆ ಲೆಕ್ಕದ ಪುಸ್ತಕಗಳ ಮೇಲೆ ಅವರ ಹಿಡಿತ ಎಷ್ಟು ಗಟ್ಟಿ ಎಂದರೆ, ಬಜೆಟ್ ಮನುಷ್ಯ ಎಂಬ ಬಿರುದೇ ಅಂಟಿಕೊಂಡಿತು.

ದೇವೇಗೌಡರೊಂದಿಗಿನ ಸಿದ್ದರಾಮಯ್ಯನ ಸಂಬಂಧ ಕನ್ನಡ ರಾಜಕೀಯದ ಒಂದು ದಂತಕಥೆ. ಒಂದು ಕಾಲಕ್ಕೆ ಗುರು, ಮುಂದೆ ಕಡು ಪ್ರತಿಸ್ಪರ್ಧಿ. ಸಿದ್ದರಾಮಯ್ಯ ತನ್ನ ಪಕ್ಷದೊಳಗೇ ಒಂದು ಸಮಾನಾಂತರ ಶಕ್ತಿಯಾಗಿ ಬೆಳೆಯುತ್ತಿರುವುದನ್ನು ಚಾಣಾಕ್ಷ ದೇವೇಗೌಡರು ಗಮನಿಸದೇ ಇರಲಿಲ್ಲ. ಆ ಗಮನವೇ ಮುಂದೆ ಬಿರುಕಾಯಿತು, ಆ ಬಿರುಕೇ ಒಂದು ಚಳವಳಿಯಾಯಿತು.



ಗಡ್ಡದ ಲೋಹಿಯಾವಾದಿ

ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ. ಪದವಿ, ನಂತರ ಕಾನೂನು ಪದವಿ. ವೈದ್ಯಕೀಯ ಓದಲು ಬೇಕಾದ ಅಂಕಗಳು ಬಾರದ ಕಾರಣ ಕಾನೂನಿನ ಹಾದಿ ಹಿಡಿದೆ ಎಂದು ಸ್ವತಃ ಅವರೇ ಹಲವಾರು ಕಾರ್ಯಕ್ರಮಗಳಲ್ಲಿ ಹೇಳಿಕೊಂಡಿದ್ದಾರೆ. ಮೈಸೂರಿನಲ್ಲಿ ಕಿರಿಯ ವಕೀಲನಾಗಿ ಕೆಲಸ, ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಕೆಲಕಾಲ ಪಾಠ. ಆದರೆ ಆ ತಾರುಣ್ಯದ ದಿನಗಳಲ್ಲಿ ಅವನನ್ನು ರೂಪಿಸಿದ್ದು ಪಠ್ಯ ಪುಸ್ತಕಗಳಿಗಿಂತ ಹೆಚ್ಚಾಗಿ ರಾಮಮನೋಹರ ಲೋಹಿಯಾರ ವಿಚಾರಗಳು. ಸಮಾಜವಾದ, ಜಾತಿ ವಿನಾಶ, ಹಿಂದುಳಿದವರ ಪ್ರಾತಿನಿಧ್ಯ ಎಂಬ ಈ ಪದಗಳು ಆ ಯುವಕನ ರಕ್ತದಲ್ಲಿ ಬೆರೆತುಹೋದವು. ಆಗಿನ ಲೋಹಿಯಾವಾದಿಗಳ ಹಾಗೆ ಇವರೂ ಗಡ್ಡ ಬಿಟ್ಟರು. ವೈಚಾರಿಕ ಪ್ರವೃತ್ತಿ ಬೆಳಸಿಕೊಂಡರು. ಆಗಿನ ಕಾಲದಲ್ಲಿ ಕಾಂಗ್ರೆಸ್ ವಿರೋಧ ಆ ಪೀಳಿಗೆಯ ಉಸಿರು, ಸಿದ್ದರಾಮಯ್ಯ ಅವರೂ ಅದೇ ಉಸಿರನ್ನೇ ಎಳೆದುಕೊಂಡರು. ಮುಂದೆ ಇದೇ ಮನುಷ್ಯ ಕಾಂಗ್ರೆಸ್ ಪಕ್ಷದ ದಕ್ಷಿಣದ ಅಧಿಪತಿ ಆಗುತ್ತಾನೆ ಎಂಬುದು ಆಗ ಯಾರ ಊಹೆಗೂ ನಿಲುಕದ ವಿಪರ್ಯಾಸ. ಆದರೆ ಆ ವಿಪರ್ಯಾಸದ ಒಳಗೇ ಸಿದ್ದರಾಮಯ್ಯನ ಇಡೀ ರಾಜಕೀಯ ಜೀವನದ ತಿರುಳು ಅಡಗಿದೆ. ಪಕ್ಷ ಬದಲಾದರೂ, ಬದಲಾಗದ ಒಂದು ನಿಷ್ಠೆ ಅವರಲ್ಲಿತ್ತು. ಅದು ಹಿಂದುಳಿದವರ ಪರವಾದ ನಿಷ್ಠೆ.



ಅಹಿಂದ ಒಂದು ಮಹಾಸಮ್ಮಿಲನದ ಕನಸು

ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು. ಈ ಮೂರು ಸಮುದಾಯಗಳ ಮೊದಲಕ್ಷರಗಳಿಂದ ಹುಟ್ಟಿದ ಪದ ಅಹಿಂದ'. ಇದು ಸಿದ್ದರಾಮಯ್ಯನ ರಾಜಕೀಯ ಕನಸಿನ ಹೃದಯ. ಶತಮಾನಗಳಿಂದ ಅಂಚಿಗೆ ತಳ್ಳಲ್ಪಟ್ಟ ಜಾತಿಗಳನ್ನು ಒಂದೇ ಸಾಮಾಜಿಕ ಒಕ್ಕೂಟದ ಅಡಿಯಲ್ಲಿ ತರುವುದು ಒಬ್ಬ ಸಮಾಜವಾದಿಗೆ ಇದು ದೊಡ್ಡ ಸವಾಲಾಗಿತ್ತು. ಅಷ್ಟೇ ದೊಡ್ಡ ಆನಂದ. ಧರಂ ಸಿಂಗ್ ಸಂಪುಟದಲ್ಲಿ ಉಪಮುಖ್ಯಮಂತ್ರಿಯಾಗಿ, ಜೆಡಿಎಸ್ ರಾಜ್ಯಾಧ್ಯಕ್ಷನಾಗಿ ಇದ್ದುಕೊಂಡೇ ಅವರು ಈ ಚಳವಳಿಗೆ ಜೀವ ತುಂಬಿದರು.

ಅಹಿಂದದ ಹೆಸರಿನಲ್ಲಿ ಗುರುತಿಸಿಕೊಳ್ಳಬೇಡ ಎಂದು ದೇವೇಗೌಡರು ಎಚ್ಚರಿಸಿದರೂ, ಸಿದ್ದರಾಮಯ್ಯ ಬಗ್ಗಲಿಲ್ಲ. ಹುಬ್ಬಳ್ಳಿಯ ಬೃಹತ್ ಅಹಿಂದ ಸಮಾವೇಶದಲ್ಲಿ ಭಾಗವಹಿಸಿದ್ದೇ ಜೆಡಿಎಸ್‌ನೊಂದಿಗಿನ ನಂಟಿಗೆ ಕೊನೆಯ ದಿನ. ಪಕ್ಷ ವಿರೋಧಿ ಚಟುವಟಿಕೆ ಎಂಬ ಆರೋಪದ ಮೇಲೆ 2005ರಲ್ಲಿ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಯಿತು, ಜತೆಗೆ ಉಪಮುಖ್ಯಮಂತ್ರಿ ಸ್ಥಾನವೂ ಕೈತಪ್ಪಿತು. 2006ರ ಜುಲೈನಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. ತನಗಾಗಿ ಸೋನಿಯಾ ಗಾಂಧಿಯ ಬಳಿ ದೇವೇಗೌಡರು ಮುಖ್ಯಮಂತ್ರಿ ಸ್ಥಾನ ಕೇಳಲೇ ಇಲ್ಲ ಎಂಬ ಸಂಗತಿ ಸಿದ್ದರಾಮಯ್ಯನ ಮನಸ್ಸಿನಲ್ಲಿ ಆಳವಾದ ಗಾಯ ಮಾಡಿತ್ತು ಎಂದು ಹೇಳಲಾಗುತ್ತದೆ.



ಕಾಂಗ್ರೆಸ್‌ಗೆ ದಡ ದಾಟಿದ ಘಳಿಗೆ

ಚಳವಳಿಗೆ ಆದರ್ಶ ಬೇಕು, ಆದರೆ ಅದನ್ನು ಮುನ್ನಡೆಸಲು ಸಂಘಟನೆ ಮತ್ತು ಸಂಪನ್ಮೂಲ ಬೇಕು. ಪಕ್ಷದ ನೆರಳಿಲ್ಲದೇ ಅಹಿಂದ ಚಳವಳಿಯನ್ನು ಬಹುಕಾಲ ಸಾಗಿಸುವುದು ಕಷ್ಟ ಎಂದು ಮನಗಂಡ ಸಿದ್ದರಾಮಯ್ಯ, 2006ರಲ್ಲಿ ಒಂದು ಕಠಿಣ ನಿರ್ಧಾರ ಕೈಗೊಂಡರು. ತಾವು ತಾರುಣ್ಯದಿಂದ ವಿರೋಧಿಸುತ್ತಾ ಬಂದಿದ್ದ ಕಾಂಗ್ರೆಸ್ ಪಕ್ಷಕ್ಕೇ ಸೇರ್ಪಡೆಯಾದರು. ಹಿಂದುಳಿದ ವರ್ಗಗಳ ಬೆಂಬಲವನ್ನು ಬಂಡವಾಳ ಮಾಡಿಕೊಳ್ಳಲು ಕಾಂಗ್ರೆಸ್‌ಗೂ ಇದು ಬೇಕಾಗಿತ್ತು. ಎರಡೂ ಕಡೆಯ ಲೆಕ್ಕಾಚಾರಗಳು ಒಂದೇ ಬಿಂದುವಿನಲ್ಲಿ ಸಂಧಿಸಿದವು.



ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಮೇಲೆ ಸ್ಪರ್ಧಿಸಿದ ಸಿದ್ದರಾಮಯ್ಯ ಗೆದ್ದದ್ದು ಕೇವಲ 257 ಮತಗಳ ಅಂತರದಿಂದ. ಆಗ ಇವರನ್ನು ಸೋಲಿಸಲು ವಿರೋಧ ಪಕ್ಷಗಳೆಲ್ಲವೂ ಒಂದಾಗಿದ್ದವು. ಒಂದು ಸುದೀರ್ಘ ರಾಜಕೀಯ ಜೀವನದ ಅತ್ಯಂತ ತೆಳ್ಳಗಿನ ಗೆಲುವು. ಆದರೆ ಗೆಲುವು ಗೆಲುವೇ. 2008ರಲ್ಲಿ ವರುಣಾ ಕ್ಷೇತ್ರದಿಂದ ನಿರಾಯಾಸ ಜಯ, ಪಕ್ಷ ಅವರಿಗೆ ವಿಧಾನಸಭಾ ವಿಪಕ್ಷ ನಾಯಕ ಸ್ಥಾನ ನೀಡಿತು. ಹೊರಗಿನವ ಎಂದು ಆರಂಭದಲ್ಲಿ ಮೂದಲಿಸಿದ್ದ ಪಕ್ಷದಲ್ಲೇ, ಮುಂದೆ ಅವರು ಎಲ್ಲರನ್ನೂ ಮೀರಿಸಿ ನಿಂತರು.



ಮೊದಲ ಪೂರ್ಣಾವಧಿ-2013ರ ಗದ್ದುಗೆ

2013ರ ಮೇ 13ರಂದು ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿಯಾದರು. ಮುಂದಿನ ಐದು ವರ್ಷ ಅಧಿಕಾರ ಪೂರ್ಣಗೊಳಿಸಿದ್ದು ಇನ್ನೂ ದೊಡ್ಡ ಸಾಧನೆ. ಆ ಹೊತ್ತಿಗೆ ಎರಡು ದಶಕಗಳಿಗೂ ಹೆಚ್ಚು ಕಾಲ ಯಾವ ಮುಖ್ಯಮಂತ್ರಿಯೂ ಪೂರ್ಣಾವಧಿ ಪೂರೈಸಿರಲಿಲ್ಲ. ಅನ್ನಭಾಗ್ಯ, ಕ್ಷೀರಭಾಗ್ಯ, ಇಂದಿರಾ ಕ್ಯಾಂಟೀನ್, ಕೃಷಿಭಾಗ್ಯ, ಬಡವರ ಹೊಟ್ಟೆ ಮತ್ತು ಜೇಬನ್ನು ಗುರಿಯಾಗಿಸಿದ ಯೋಜನೆಗಳ ಸಾಲು. ಭಾಗ್ಯ ಎಂಬ ಪದವೇ ಆ ಸರ್ಕಾರದ ಮುದ್ರೆಯಾಯಿತು. ಜಾತಿ ಗಣತಿಯ ಪ್ರಯತ್ನ, ಸಾಮಾಜಿಕ-ಆರ್ಥಿಕ ಸಮೀಕ್ಷೆ – ಇವೆಲ್ಲ ಅವರ ಸಾಮಾಜಿಕ ನ್ಯಾಯದ ಬದ್ಧತೆಯ ಗುರುತುಗಳು. ಆದರೆ ರಾಜಕೀಯ ಸಂಪೂರ್ಣ ಸುಗಮ ಹಾದಿಯಲ್ಲ. 2018ರಲ್ಲಿ ಕಾಂಗ್ರೆಸ್ ಬಹುಮತ ಕಳೆದುಕೊಂಡಿತು, ಸ್ವತಃ ಸಿದ್ದರಾಮಯ್ಯ ಚಾಮುಂಡೇಶ್ವರಿಯಲ್ಲಿ ಸೋತು ಬಾದಾಮಿಯಲ್ಲಿ ಮಾತ್ರ ಪಾರಾದರು. ಕೈಗೆ ಬಂದ ತುತ್ತು ಬಾಯಿಗೆ ಬಾರದ ಆ ಸನ್ನಿವೇಶ ಅವರಿಗೆ ಹೊಸದಲ್ಲ. ಆದರೂ ಪ್ರತಿ ಸೋಲಿನ ನಂತರವೂ ಅವರು ಮತ್ತೆ ಎದ್ದು ನಿಲ್ಲುತ್ತಿದ್ದರು. ಒಂದು ಹಳೆಯ ಯುದ್ಧಾಶ್ವದ ಹಾಗೆ.

ಇತಿಹಾಸ ಬರೆದ ಮುಖ್ಯಮಂತ್ರಿ

2013–2018ರ ಅವಧಿಯಲ್ಲಿ

ಮೊದಲ ಬಾರಿಗೆ ಸಿಎಂ ಆದ ಸಿದ್ದರಾಮಯ್ಯ ಅವರು 1,829 ದಿನಗಳ ಕಾಲ ಅಧಿಕಾರದಲ್ಲಿದ್ದರು. ಸಿದ್ದರಾಮಯ್ಯ ಮೊದಲ ಅವಧಿ ಪೂರ್ಣಗೊಂಡ ಬಳಿಕ ಮತ್ತೆ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರಲಿಲ್ಲ. 2018ರ ವಿಧಾನ ಸಭೆ ಚುನಾವಣೆ ಫಲಿತಾಂಶ ಅತಂತ್ರವಾಗಿತ್ತು. ಜೆಡಿಎಸ್ ಜೊತೆ ಸೇರಿ ಕಾಂಗ್ರೆಸ್ ಮೈತ್ರಿ ಸರ್ಕಾರ ರಚಿಸಿತ್ತು. ಆದ್ರೆ ಕುಮಾರಸ್ವಾಮಿ ಅವರ ನೇತೃತ್ವದ ಸರ್ಕಾರ 14 ತಿಂಗಳಿಗೇ ಪತನವಾಗಿತ್ತು. ಬಳಿಕ ಅಧಿಕಾರಕ್ಕೆ ಬಂದ ಬಿಜೆಪಿಯಿಂದ ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಕ್ರಮವಾಗಿ ಮುಖ್ಯಮಂತ್ರಿಗಳಾಗಿದ್ದರು. ಅದಾದ ಬಳಿಕ 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆಯಿತು. ಈಗ ಎರಡನೇ ಅವಧಿಗೆ ಆಡಳಿತದ ಸೂತ್ರ ಹಿಡಿದಿರುವ ಸಿದ್ದರಾಮಯ್ಯ ಹೊಸ ಇತಿಹಾಸ ಸೃಷ್ಟಿಸಿದ್ದಾರೆ.

ಅರಸು ದಾಖಲೆ ಸರಿಗಟ್ಟಿದ ಸಿದ್ದರಾಮಯ್ಯ



ಒಬ್ಬ ಮನುಷ್ಯನ ಜೀವನವನ್ನು ಅಧಿಕಾರದ ವರ್ಷಗಳಿಂದ ಅಳೆಯುವುದು ಸುಲಭ, ಆದರೆ ಅದು ಅಪೂರ್ಣ. ಸಿದ್ದರಾಮಯ್ಯ ಎಂಬ ಹೆಸರನ್ನು ನೆನೆದಾಗ ಉಳಿಯುವುದು ಗದ್ದುಗೆಯಲ್ಲ, ಕುರಿ ಕಾಯುತ್ತಿದ್ದ ಒಬ್ಬ ಹುಡುಗ, ಅಕ್ಷರವನ್ನು ತಡವಾಗಿ ಕಲಿತೂ ಒಂದು ರಾಜ್ಯದ ಹಣೆಬರಹವನ್ನು ಬರೆಯುವ ಲೆಕ್ಕದ ಪುಸ್ತಕವನ್ನು ಹದಿನೇಳು ಬಾರಿ ಬರೆದದ್ದು, ತನ್ನ ಜಾತಿಯ ಗಡಿಯನ್ನು ದಾಟಿ, ಅಂಚಿನ ಎಲ್ಲ ಸಮುದಾಯಗಳ ದನಿಯಾಗಲು ಹೊರಟದ್ದು. ಅಹಿಂದ ಎಂಬ ಮೂರಕ್ಷರ ಇದು ಅವರ ಯಶಸ್ಸಿನ ಮೂಲವೂ ಹೌದು, ಅವರ ಮಿತಿಗಳ ಕನ್ನಡಿಯೂ ಹೌದು. ಪಕ್ಷ ಬದಲಾಯಿತು, ಗದ್ದುಗೆ ಬದಲಾಯಿತು, ಆದರೆ ನಿಷ್ಠೆ ಮಾತ್ರ ಐದು ದಶಕ ಬದಲಾಗಲಿಲ್ಲ. ಅತಿ ಹೆಚ್ಚು ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ದಾಖಲೆಯನ್ನು ಸಿಎಂ ಸಿದ್ದರಾಮಯ್ಯ ಬ್ರೇಕ್ ಮಾಡಿದ್ದಾರೆ. ದೇವರಾಜ ಅರಸು ಅವರು ಸತತವಾಗಿ ಏಳೂವರೆ ವರ್ಷಗಳ ಕಾಲ ಅಧಿಕಾರದಲ್ಲಿದ್ದರು. ದೇವರಾಜ ಅರಸು ಅವ್ರು 2,789 ದಿನ ಅಂದ್ರೆ 7 ವರ್ಷ– 239 ದಿನಗಳ (ಎರಡು ಅವಧಿ) ಕಾಲ ರಾಜ್ಯದ ಮುಖ್ಯಮಂತ್ರಿ ಆಗಿದ್ದರು.

ಒಪ್ಪಂದದ ಗಡಿಯಾರ ಮತ್ತು ಇಂದಿನ ತೆರೆ

2023ರ ಗೆಲುವಿನ ನಂತರ ಸಿಎಂ ಸ್ಥಾನಕ್ಕಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ನಡೆದ ಪೈಪೋಟಿಯ ಪರಿಹಾರವಾಗಿ ಅಧಿಕಾರ ಹಂಚಿಕೆಯ ಒಪ್ಪಂದ ರೂಪುಗೊಂಡಿತು ಎಂದು ಹೇಳಲಾಗುತ್ತದೆ. ಅವಧಿಯ ಮೊದಲ ಭಾಗ ಸಿದ್ದರಾಮಯ್ಯನವರಿಗೆ, ಮುಂದಿನ ಭಾಗ ಶಿವಕುಮಾರ್ ಅವರಿಗೆ. 2028ರ ಚುನಾವಣೆಗೆ ಪಕ್ಷವನ್ನು ಮುನ್ನಡೆಸುವ ಜವಾಬ್ದಾರಿ. ದೆಹಲಿಯಲ್ಲಿ ನಡೆದ ಸುದೀರ್ಘ ಸಮಾಲೋಚನೆಗಳ ನಂತರ, ಆ ಗಡಿಯಾರ ಮೇ 28, 2026ರಂದು ಗಂಟೆ ಬಾರಿಸಿತು. ಬೆಳಗಿನ ಸಂಪುಟ ಸಹೋದ್ಯೋಗಿಗಳ ಸಭೆಯಲ್ಲಿ, ಹೈಕಮಾಂಡ್ ಸೂಚನೆಯಂತೆ ರಾಜೀನಾಮೆ ನೀಡಲು ಸಂತೋಷದಿಂದ ಒಪ್ಪಿದ್ದೇನೆ. ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅದಕ್ಕೂ ಒಪ್ಪಿಗೆ ನೀಡಿದ್ದೇನೆ ಎಂದು ಅವರು ಸ್ಪಷ್ಟವಾಗಿ ಹೇಳಿದರು. ಯಾವುದೇ ಬಿರುಕಿಲ್ಲ, ಭಿನ್ನಮತವಿಲ್ಲ, ಇದು ಸರ್ವಾನುಮತದ ತೀರ್ಮಾನ ಎಂಬ ಸಚಿವರ ಮಾತುಗಳಲ್ಲಿ ಪಕ್ಷದ ಶಿಸ್ತಿನ ಧ್ವನಿಯಿತ್ತು.



ಮರಳಿ ಬಂದ ಗದ್ದುಗೆ ಮತ್ತು ಐದು ಗ್ಯಾರಂಟಿಗಳು

2023ರ ಮೇ 20ರಂದು ಸಿದ್ದರಾಮಯ್ಯ 2ನೇ ಬಾರಿ ಮುಖ್ಯಮಂತ್ರಿ. ಆ ಚುನಾವಣೆಯ ಗೆಲುವಿನ ಬೆನ್ನೆಲುಬು, ಐದು ಗ್ಯಾರಂಟಿಗಳು. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಶಕ್ತಿ, ಮನೆಯ ಯಜಮಾನಿಗೆ ಮಾಸಿಕ ನೆರವಿನ ಗೃಹಲಕ್ಷ್ಮಿ, ಉಚಿತ ವಿದ್ಯುತ್ತಿನ ಗೃಹ ಜ್ಯೋತಿ, ಉಚಿತ ಅಕ್ಕಿಯ ಅನ್ನಭಾಗ್ಯ, ನಿರುದ್ಯೋಗಿ ಯುವಕರಿಗೆ ಭತ್ಯೆಯ ಯುವನಿಧಿ. ಬಡವರ ಬದುಕಿನ ಗಲ್ಲಿಗಳಿಗೆ ನೇರವಾಗಿ ತಲುಪುವ ಈ ಯೋಜನೆಗಳು. ಒಂದು ಸಮಾಜವಾದಿಯ ಅಂತಃಕರಣದ ಪ್ರತಿಬಿಂಬ. ಇದೇ ಕಾರಣಕ್ಕೆ ರಾಜಕೀಯ ವಿಶ್ಲೇಷಕರು ಸಿದ್ದರಾಮಯ್ಯನನ್ನು ದೇವರಾಜ ಅರಸು ನಂತರದ ಸಾಲಿನಲ್ಲಿ ನಿಲ್ಲಿಸುತ್ತಾರೆ. ಅರಸು ಹಿಂದುಳಿದವರ ಪ್ರಾತಿನಿಧ್ಯದ ಬಾಗಿಲನ್ನು ತೆರೆದಿದ್ದರೆ, ಸಿದ್ದರಾಮಯ್ಯ ಆ ಬಾಗಿಲನ್ನು ಮತ್ತಷ್ಟು ಅಗಲ ಮಾಡಿದರು. ಕರ್ನಾಟಕದ ಹಿಂದುಳಿದ ವರ್ಗಗಳ ಬಗ್ಗೆ ಅರಸು ನಂತರ ಇಷ್ಟು ಆಳವಾಗಿ, ಇಷ್ಟು ನಿರಂತರವಾಗಿ ಯೋಚಿಸಿದ ಮತ್ತೊಬ್ಬ ನಾಯಕನಿಲ್ಲ ಎಂಬ ಮಾತು ಅತಿಶಯೋಕ್ತಿಯಲ್ಲ. ಹಿಂದುಳಿದವರ ರಾಮಯ್ಯ ಎಂಬ ಪ್ರೀತಿಯ ಹೆಸರು ಹುಟ್ಟಿದ್ದು ಹೀಗೆ. ದೇವರಾಜ ಅರಸು ಬಾಗಿಲು ತೆರೆದರು. ಸಿದ್ದರಾಮಯ್ಯ ಆ ಬಾಗಿಲನ್ನು ಅಗಲ ಮಾಡಿದರು.

ಬಜೆಟ್ ಮಂಡನೆಯಲ್ಲೂ ದಾಖಲೆ



ಕರ್ನಾಟಕದ ಇತಿಹಾಸದಲ್ಲಿ ಅತಿ ಹೆಚ್ಚು ಅವಧಿಗೆ ಮುಖ್ಯಮಂತ್ರಿ ಯಾಗಿದ್ದವರಲ್ಲಿ ದೇವರಾಜ ಅರಸು ಮೊದಲಿಗರು ನಂತರ ಎಸ್ ನಿಜಲಿಂಗಪ್ಪ (7 ವರ್ಷ 175 ದಿನಗಳು), ರಾಮಕೃಷ್ಣ ಹೆಗಡೆ (5 ವರ್ಷ 216 ದಿನಗಳು), ಬಿ.ಎಸ್. ಯಡಿಯೂರಪ್ಪ (5 ವರ್ಷ 82 ದಿನಗಳು). ಈ ಎಲ್ಲ ದಾಖಲೆಗಳನ್ನು ಮೆಟ್ಟಿ ನಿಂತವರು ಮುಖ್ಯಮಂತ್ರಿ ಸಿದ್ದರಾಮಯ್ಯ. ದೇವರಾಜು ಅರಸು ಅವರ ದಾಖಲೆಯನ್ನೂ ಮುರಿದಿದ್ದಾರೆ. ರಾಜ್ಯ ಬಜೆಟ್ ಮಂಡನೆಯಲ್ಲೂ ಸಿಎಂ ಸಿದ್ದರಾಮಯ್ಯ ದಾಖಲೆ ಬರೆದಿದ್ದಾರೆ. ಮುಖ್ಯ ಮಂತ್ರಿ ಸಿದ್ದರಾಮಯ್ಯ ಇದುವರೆಗೂ 17 ಬಜೆಟ್ ಮಂಡನೆ ಮಾಡಿದ್ದು, ಈ ಮೂಲಕ ರಾಜ್ಯದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದವರಾಗಿದ್ದಾರೆ. ಎರಡನೇ ಸ್ಥಾನದಲ್ಲಿ ರಾಮಕೃಷ್ಣ ಹೆಗಡೆ ಅವರಿದ್ದು, ಒಟ್ಟು 13 ಬಜೆಟ್ ಮಂಡಿಸಿದ್ದಾರೆ.

2013ರಲ್ಲಿ ಹೊಸ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಲು ಕಾಂಗ್ರೆಸ್ ರಹಸ್ಯ ಮತದಾನವನ್ನು ಅಂಗೀಕರಿಸಿದ ನಂತರ ಸಿದ್ದರಾಮಯ್ಯ ಅವರನ್ನು ಸಿಎಂ ಆಗಿ ಆಯ್ಕೆ ಮಾಡಲಾಯಿತು. 2013ರ ಶಾಸಕಾಂಗ ಚುನಾವಣೆಯಲ್ಲಿ 122/224 ಸ್ಥಾನಗಳ ಸಂಪೂರ್ಣ ಬಹುಮತ ಸಾಧಿಸುವ ಮೂಲಕ ಅವರು ಕಾಂಗ್ರೆಸ್ ಅನ್ನು ಗೆಲುವಿನತ್ತ ಕೊಂಡೊಯ್ದರು.

ಮೇ 15, 2018 ರಂದು ಅವರು ಕರ್ನಾಟಕದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. 40 ವರ್ಷಗಳ ಅವರ ರಾಜಕೀಯ ಪಯಣದಲ್ಲಿ ಪೂರ್ಣ 5 ವರ್ಷಗಳ ಅವಧಿಯನ್ನು ಪೂರೈಸಿದ ಕರ್ನಾಟಕದ ಮೊದಲ ಮುಖ್ಯಮಂತ್ರಿಯಾದರು ಮತ್ತು ದೇವರಾಜ್ ಅರಸ್ ನಂತರ ದಕ್ಷಿಣದ ರಾಜ್ಯದ ಇತಿಹಾಸದಲ್ಲಿ 2ನೆಯವರಾದರು. ಅವರು ಹಣಕಾಸು ಸಚಿವರಾಗಿ 17 ಬಾರಿ ರಾಜ್ಯ ಬಜೆಟ್ ಮಂಡಿಸಿದ ದಾಖಲೆಯನ್ನು ಹೊಂದಿದ್ದಾರೆ. ಸಿದ್ದರಾಮಯ್ಯ ಅವರು ತಮ್ಮ ಮೊದಲ ಬಜೆಟ್ ಅನ್ನು 1995–1996ರಲ್ಲಿ ದೇವೇಗೌಡರ ಅವರ ನೇತೃತ್ವದಲ್ಲಿ ಮಂಡಿಸಿದರು. ಇದರ ಬಜೆಟ್ ಗಾತ್ರ ಸುಮಾರು 12,616 ಕೋಟಿ ರೂ.ಆಗಿತ್ತು.

ಸಿಎಂ ಆಗಿ ಮೊದಲ ಅವಧಿ

- 2013-14ರಲ್ಲಿ 1,21,611 ಕೋಟಿ ರೂ.
- 2014-15ರಲ್ಲಿ 1,38,008 ಕೋಟಿ ರೂ.
- 2015-16ರಲ್ಲಿ 1,42,534 ಕೋಟಿ ರೂ.
- 2016-17ರಲ್ಲಿ 1,63,419 ಕೋಟಿ ರೂ.
- 2017-18ರಲ್ಲಿ 1,86,561ಕೋಟಿ ರೂ.
- 2018-19ರಲ್ಲಿ 2,09,181 ಕೋಟಿ ರೂ.

ಸಿಎಂ ಆಗಿ 2ನೇ ಅವಧಿ

- 2023-24ರಲ್ಲಿ 3,27,453 ಕೋಟಿ ರೂ.,
- 2024-25ರಲ್ಲಿ 3,71,383 ಕೋಟಿ ರೂ.
- 2026-27ರಲ್ಲಿ 4,48,004 ಕೋಟಿ ರೂ. ಬಜೆಟ್ ಮಂಡಿಸಿದ್ದಾರೆ.

ಕಿರುಸುದ್ದಿ

ಚೆನ್ನೈನ ಶಾಲೆಯಿಂದ ತಲಕಾವೇರಿಯಲ್ಲಿ ಸಂಗೀತ ಕಾರ್ಯಕ್ರಮ

• **ಮಡಿಕೇರಿ:** ಚೆನ್ನೈನ ಮನೋಗಾನಂ ಸಂಗೀತ ವಿದ್ಯಾಸಂಸ್ಥೆಯು ಮಡಿಕೇರಿ ಹಾಗೂ ತಲಕಾವೇರಿಯಲ್ಲಿ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಮೇ 30ರಂದು ಬೆಳಗ್ಗೆ 8.30ಕ್ಕೆ ತಲಕಾವೇರಿಯಲ್ಲಿ ಹಾಗೂ 31ರಂದು ಬೆಳಗ್ಗೆ 7ಗಂಟೆಗೆ ಮಡಿಕೇರಿಯ ಕಂಚಿ ಕಾಮಾಕ್ಷಿ ದೇವಾಲಯದಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಚೆನ್ನೈನ ಈ ಸಂಗೀತ ವಿದ್ಯಾ ಸಂಸ್ಥೆ ಪ್ರತಿ ವರ್ಷ ತನ್ನ ವಿದ್ಯಾರ್ಥಿಗಳನ್ನು ದೇಶದ ವಿವಿಧ ದೇವಾಲಯಗಳಿಗೆ ಕರೆದುಕೊಂಡು ಹೋಗಿ ಅಲ್ಲಿ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ. ತನ್ನ ಆರು ಮತ್ತು ಏಳನೇ ವರ್ಷದ ಕಾರ್ಯಕ್ರಮದ ಅಂಗವಾಗಿ ಕೊಡಗಿನಲ್ಲಿ ಸಂಗೀತ ಸುಧೆ ಹರಿದು ಬರಲಿದ್ದು, ಮಕ್ಕಳ ಸಂಗೀತದೊಂದಿಗೆ ಪಿಟೀಲು ವಾದನ ಕೂಡಾ ಇರಲಿದೆ. ಪತ್ರಕರ್ತ ಜಿ.ಚಿದ್ವಿಲಾಸ್ ಅವರ ಸಹಕಾರದಿಂದ ಈ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಸಂಸ್ಥೆಯ ಪ್ರಾಂಶುಪಾಲೆ ರಮಾಶ್ರೀ ತಿಳಿಸಿದ್ದಾರೆ.

ರಾಷ್ಟ್ರ ಮಟ್ಟದ ಸ್ಪರ್ಧೆಗೆ ಮಿಲನಾ ಭರತ್ ಆಯ್ಕೆ

• **ಮಡಿಕೇರಿ:** ಬೆಂಗಳೂರಿನಲ್ಲಿ ನಡೆದ 2025– 26ನೇ ಸಾಲಿನ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಭರತನಾಟ್ಯ, ಕೂಚುಪುಡಿ ಮತ್ತು ಒಡಿಸ್ಸಿ



ವಿಭಾಗದಲ್ಲಿ ಕೊಡಗಿನ ಮಿಲನಾ ಕೆ.ಭರತ್ ಅವರು ಪ್ರಶಸ್ತಿ ಪಡೆಯುವುದರೊಂದಿಗೆ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಕೊಡಗು ಜಿಲ್ಲೆಯ ಮೀನುಗಾರಿಕೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕಿಯಾಗಿರುವ ಮಿಲನಾ ಅವರು ನೃತ್ಯ ಗುರು ವಿದ್ವಾನ್ ರಾಜೇಶ್ ಆಚಾರ್ಯ ಅವರಿಂದ ಮಾರ್ಗದರ್ಶನ ಪಡೆದುಕೊಂಡಿದ್ದರು. ಅಭಿನಯ ಕಲಾ ಮಿಲನ ಚಾರಿಟೇಬಲ್ ಟ್ರಸ್ಟ್ ಅಡಿಯಲ್ಲಿ ಅವರು ಶನಿವಾರಸಂತೆ ಮತ್ತು ಭಾಗಮಂಡಲದಲ್ಲಿ ನಾಟ್ಯ ಮಿಲನ ನೃತ್ಯ ಶಾಲೆಯನ್ನು ಮುನ್ನಡೆಸುತ್ತಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಸಂಭ್ರಮ ಸಡಗರದ ಬಕ್ರೀದ್ ಹಬ್ಬ ಆಚರಣೆ

• **ಸುಂಟಿಕೊಪ್ಪ:** ಕೊಡಗು ಜಿಲ್ಲೆಯಲ್ಲಿ ತ್ಯಾಗ, ಸಮಾನತೆ, ಸಹಬಾಳ್ವೆಯ ಸಂಕೇತವಾದ ಬಕ್ರೀದ್ ಹಬ್ಬದ ಅಂಗವಾಗಿ ವಿವಿಧ ಮಸೀದಿಗಳಲ್ಲಿ ಮುಸ್ಲಿಮರು ಶ್ರದ್ಧಾ ಭಕ್ತಿಯಿಂದ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸುವ ಮೂಲಕ ಪರಸ್ಪರ ಅಲಂಗಿಸಿಕೊಂಡು ಶುಭಾಶಯ



ವಿನಿಮಯಗೊಳಿಸುವುದರೊಂದಿಗೆ ಸಡಗರ ಸಂಭ್ರಮದಿಂದ ಬಕ್ರೀದ್ ಹಬ್ಬವನ್ನು ಆಚರಿಸಿಕೊಂಡರು. ಹಬ್ಬದ ಅಂಗವಾಗಿ ಹೊಸ ಉಡುಪುಗಳನ್ನು ತೊಟ್ಟು ಒಬ್ಬರಿಗೊಬ್ಬರು ಈದ್ ಉಲ್ ಆಧಾ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವುದು ದಂದು ಸುಂಟಿಕೊಪ್ಪದಲ್ಲಿ ಮುಂಜಾನೆ ವೇಳೆ ದೃಶ್ಯ ಕಂಡು ಬಂದವು. ಈದ್‌ಉಲ್ ಆಧಾ ಫಿತ್ತರ್ ಅಂಗವಾಗಿ ಗುರುವಾರ ಎಲ್ಲಾ ಜುಮ್ಮಾ ಮಸೀದಿಗಳಲ್ಲಿ ಪ್ರಾರ್ಥನೆ, ಮತ ಪ್ರವಚನದ ನಂತರ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡು ಹಬ್ಬದ ಶುಭಾಶಯಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು. ನಂತರ ಮುಸ್ಲಿಂ ಬಾಂದವರು ಗದ್ದೆಹಳ್ಳದ ಈದ್ಗಾಗಳಿಗೆ ತೆರಳಿ ಕುಟುಂಬದಲ್ಲಿ ಮೃತರಿಗೆ ಪ್ರಾರ್ಥನೆಯನ್ನು ಸಲ್ಲಿಸುವ ಜೊತೆಗೆ ಮನೆಗಳಲ್ಲಿ ಕುಟುಂಬದವರೊಂದಿಗೆ ಹಬ್ಬಆಚರಣೆ ಸಡಗರದಲ್ಲಿ ತೊಡಗಿಸಿಕೊಂಡರು. ಸುಂಟಿಕೊಪ್ಪ ಠಾಣಾಧಿಕಾರಿ ಮೋಹನ್ ರಾಜ್, ಹಾಗೂ ಪೊಲೀಸ್ ಸಿಬ್ಬಂದಿಗಳು ಸೂಕ್ತ ಬಂದೋಬಸ್ತ್ ವಹಿಸಿದ್ದರು.

ಕುಂದಾಪುರದಲ್ಲಿಯೂ ಬಕ್ರೀದ್ ಹಬ್ಬ ಆಚರಣೆ

• **ಕುಂದಾಪುರ:** ಮುಸ್ಲಿಮರು ಕುಂದಾಪುರ ತಾಲೂಕಿನ ವಿವಿಧೆಡೆಗಳಲ್ಲಿ ತ್ಯಾಗ ಬಲಿದಾನಗಳ ಸಂಕೇತವಾದ ಬಕ್ರೀದ್ ಹಬ್ಬವನ್ನು ಗುರುವಾರ ಸಂಭ್ರಮದಿಂದ ಆಚರಿಸಿದರು. ಕುಂದಾಪುರ, ಕೋಡಿ ಜುಮ್ಮಾ ಮಸೀದಿ, ಹಂಗಳೂರು, ಮಾವಿನಕಟ್ಟೆ, ಬಸ್ರೂರು, ಕಂಡ್ಲೂರು, ಹೆಮ್ಮಾಡಿ, ತಲ್ಲೂರು, ಪಾನಕದಕಟ್ಟೆ, ಗಂಗೊಳ್ಳಿ, ತ್ರಾಸಿ, ನಾವುಂದ, ಕಿರಿಮಂಜೇಶ್ವರ, ನಾಗೂರು, ಬೈಂದೂರು, ಶಿರೂರು ಸಹಿತ ಕುಂದಾಪುರ ಹಾಗೂ ಬೈಂದೂರಿನ ವಿವಿಧ ಮಸೀದಿಗಳಿಗೆ ಬೆಳಗ್ಗೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಮಾಜ್ ಬಳಿಕ ಮುಸ್ಲಿಮರು ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಕುಂದಾಪುರದ ಜಾಮೀಯಾ ಮಸೀದಿಯಲ್ಲಿ ಈದ್ ವಿಶೇಷ ಪ್ರಾರ್ಥನೆ, ದುವಾ ನೆರವೇರಿಸಿದ ಬಳಿಕ ಮೆರವಣಿಗೆ ನಡೆಯಿತು. ಬಳಿಕ ಇಲ್ಲಿನ ಮೈದಾನದಲ್ಲಿ ಮಸೀದಿಯ ಧರ್ಮಗುರುಗಳು ಈದ್ ನಮಾಜ್ ನೆರವೇರಿಸಿದರು. ಈ ಸಂದರ್ಭದಲ್ಲಿ ಮಸೀದಿಯ ಪ್ರಮುಖರು, ಸಮುದಾಯದ ಮುಖಂಡರು, ಸಮುದಾಯದ ಮಂದಿ ಪಾಲ್ಗೊಂಡಿದ್ದರು. ಮುನ್ನೆಚ್ಚರಿಕೆ ಕ್ರಮವಾಗಿ ಕುಂದಾಪುರ ನಗರ ಠಾಣಾ ವೃತ್ತ ನಿರೀಕ್ಷಕ ಜಯರಾಮ ಗೌಡ ನೇತೃತ್ವದಲ್ಲಿ ಪಿಎಸ್ಐ ಗಳಾದ ನಂಜಾ ನಾಯ್ಕ್, ಪುಷ್ಪಾ, ಸಿಬಂದಿ ಸಹಕಾರದೊಂದಿಗೆ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆ | ಪೊನ್ನಣ್ಣ, ಮಂಥರ್‌ರಲ್ಲಿ ಯಾರಿಗೆ ಮಣೆ?

ಹೊಸ ಸಚಿವ ಸಂಪುಟದತ್ತ ಕೊಡಗಿನ ಚಿತ್ತ

ದಿಗಂತ ವಿಶೇಷ

• **ಮಡಿಕೇರಿ:** ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಕಸರತ್ತು ಮುಂದುವರಿದಿರುವ ಬೆನ್ನಲ್ಲೇ, ಮುಂದಿನ ಸಚಿವ ಸಂಪುಟದಲ್ಲಿ ಕೊಡಗಿನ ಪ್ರತಿನಿಧಿಯೊಬ್ಬರು ಸ್ಥಾನ ಪಡೆಯುವ ನಿರೀಕ್ಷೆಯಲ್ಲಿ ಕೊಡಗಿನ ಮತದಾರರಿದ್ದಾರೆ.

ಸಾಂಪ್ರದಾಯಿಕವಾಗಿ ಭಾರತೀಯ ಜನತಾ ಪಾರ್ಟಿಯ ಭದ್ರಕೋಟೆ ಎಂದೇ ಪರಿಗಣಿಸಲಾಗಿರುವ ಕೊಡಗು ಜಿಲ್ಲೆ, ದೀರ್ಘ ಅಂತರದ ನಂತರ 2023ರ ವಿಧಾನಸಭಾ ಚುನಾವಣೆಯಲ್ಲಿ ಇಬ್ಬರು ಕಾಂಗ್ರೆಸ್ ಶಾಸಕರನ್ನು ನೀಡಿದೆ. ಆದರೆ ಜಿಲ್ಲೆಗೆ ಸಚಿವ ಸ್ಥಾನ ದೊರಕದೆ ಕೊಡಗು ಅನಾಥ ಮಗುವಂತಾಗಿದೆ ಎಂಬ ಕೊರಗು ಕೂಡಾ ಮತದಾರರಲ್ಲಿದೆ.

ಇಬ್ಬರೂ ಕಾಂಗ್ರೆಸ್‌ನ ಪ್ರಭಾವಿಗಳು

ವೀರಾಜಪೇಟೆ ಶಾಸಕರಾಗಿ ಎ.ಎಸ್. ಪೊನ್ನಣ್ಣ ಮತ್ತು ಮಡಿಕೇರಿ ಶಾಸಕರಾಗಿ ಮಂಥರ್ ಗೌಡ ಶಾಸಕರಾದ ಬಳಿಕ ಇಬ್ಬರೂ ಕಾಂಗ್ರೆಸ್‌ನ ಪ್ರಭಾವಿಗಳಾಗಿ ಹೊರಹೊಮ್ಮಿದ್ದಾರೆ. ಅವರ ಪೈಕಿ ಪೊನ್ನಣ್ಣ ಅವರು ಸಿದ್ದರಾಮಯ್ಯ ಅವರಿಗೆ ಆಪ್ತರಾಗಿ ಮತ್ತು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾಗಿ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನದೊಂದಿಗೆ ಸೇವೆ ಸಲ್ಲಿಸುತ್ತಿದ್ದಾರೆ.

ಇತ್ತ ಡಾ. ಮಂಥರ್ ಗೌಡ ಅವರು ರಾಜಕೀಯಕ್ಕೆ ಹೊಸಬರಾದರೂ, ತಮ್ಮ ತಂದೆ ಅರಕಲಗೋಡಿನ ಶಾಸಕ ಎ. ಮಂಜು ಅವರಿಂದ ಸಾಕಷ್ಟು ಮಾರ್ಗದರ್ಶನ ಪಡೆದು ರಾಜಕೀಯವಾಗಿ ತಮ್ಮದೇ ಆದ ಛಾಪು ಮೂಡಿಸುವ ಪ್ರಯತ್ನದಲ್ಲಿದ್ದಾರೆ.







ಸಚಿವರಾದರೇ ಹೆಚ್ಚು ಅನುದಾನ ತರಲು ಸಾಧ್ಯ

ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಪೊನ್ನಣ್ಣ ಅವರು ಹೊಂದಿದ್ದ ಸಾಮೀಪ್ಯವು ಕಳೆದ ಮೂರು ವರ್ಷಗಳಲ್ಲಿ ವೀರಾಜಪೇಟೆ ಕ್ಷೇತ್ರ ಮತ್ತು ಕೊಡಗು ಜಿಲ್ಲೆಗೆ ಒಂದಷ್ಟು ಅನುದಾನ ಪಡೆಯಲು ಸಾಧ್ಯವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಸಚಿವ ಸ್ಥಾನ ದೊರಕಿದ್ದರೆ, ಕೊಡಗಿನವರೇ ಉಸ್ತುವಾರಿ ಸಚಿವರಾಗಿ ಜಿಲ್ಲೆಗೆ ಅಗತ್ಯವಿರುವ ಹೆಚ್ಚು ಅನುದಾನ ತರಲು ಸಾಧ್ಯವಾಗುತ್ತಿತ್ತು ಎಂಬ ಭಾವನೆಯೂ ಇಲ್ಲಿನ ಜನರಲ್ಲಿದೆ.

ಹೊಸ ಸಂಪುಟದಲ್ಲಿ ಕೊಡಗಿಗೆ ಸ್ಥಾನ?

ರಾಜ್ಯದ ಮುಂದಿನ ಮುಖ್ಯಮಂತ್ರಿ ಹುದ್ದೆಗೆ ಡಿ.ಕೆ. ಶಿವಕುಮಾರ್ ಅವರು ಮುಂಚೂಣಿ ಆಕಾಂಕ್ಷಿಯಾಗಿ ಹೊರ ಹೊಮ್ಮುತ್ತಿರುವುದರಿಂದ, ಮುಂದಿನ ಸಂಪುಟದಲ್ಲಿ ಕೊಡಗಿನ ಶಾಸಕರೊಬ್ಬರು ಸ್ಥಾನ ಪಡೆಯುವ ನಿರೀಕ್ಷೆಯಿದೆ ಎಂದು ಕಾಂಗ್ರೆಸ್‌ನ ಮೂಲಗಳು ತಿಳಿಸಿವೆ. ವಿಶೇಷವಾಗಿ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರಾಗಿದ್ದ ಎ.ಎಸ್. ಪೊನ್ನಣ್ಣ ಅವರು ಶಿವಕುಮಾರ್ ಅವರೊಂದಿಗೂ ನಿಕಟವಾದ ಸಂಪರ್ಕವನ್ನು ಹೊಂದಿದ್ದು, ಹೊಸ ನಾಯಕತ್ವದ ವ್ಯವಸ್ಥೆಯಲ್ಲಿಯೂ ಅವರು ಪ್ರಭಾವಶಾಲಿಯಾಗಿ ಉಳಿಯುವ ಸಾಧ್ಯತೆಯಿದೆ. ಕಾಂಗ್ರೆಸ್ ಸರ್ಕಾರದ ಹಲವಾರು ಸೂಕ್ಷ್ಮ ವಿಷಯಗಳನ್ನು ಪೊನ್ನಣ್ಣ ಅವರು ಕಾನೂನು ಮತ್ತು ರಾಜಕೀಯವಾಗಿ ನಿರ್ವಹಿಸುವುದನ್ನು ಶಿವಕುಮಾರ್ ಸೂಕ್ಷ್ಮವಾಗಿ ಗಮನಿಸಿದ್ದಾರೆ ಎನ್ನಲಾಗಿದೆ.

ವಿಶೇಷವಾಗಿ ಸಿದ್ದರಾಮಯ್ಯ ಅವರನ್ನು ಒಳಗೊಂಡ ಮುಡಾ ಪ್ರಕರಣಕ್ಕೆ ಸಂಬಂಧಿಸಿದ ವಿಷಯಗಳು, ರಾಜ್ಯ ನೀತಿಗಳ ಸುತ್ತಲಿನ ವಿವಾದಗಳು ಮತ್ತು ಸರ್ಕಾರ ಎದುರಿಸುತ್ತಿರುವ ವಿವಿಧ ನ್ಯಾಯಾಲಯ ಸಂಬಂಧಿತ ಸವಾಲುಗಳು ಸೇರಿದಂತೆ ಕಾನೂನು ಮತ್ತು ರಾಜಕೀಯ ಬಿಕ್ಕಟ್ಟುಗಳಲ್ಲಿ ಸರ್ಕಾರಕ್ಕೆ ಸಹಾಯ ಮಾಡುವಲ್ಲಿ ಪೊನ್ನಣ್ಣ ಪ್ರಮುಖ ಪಾತ್ರವಹಿಸಿದ್ದಾರೆ. ಆಡಳಿತಕ್ಕಾಗಿ ಸೂಕ್ಷ್ಮ ಸಂದರ್ಭಗಳನ್ನು ನಿರ್ವಹಿಸುವ 'ಉತ್ತಮ ಕಾನೂನು ಜ್ಞಾನ ಹೊಂದಿರುವ ದಕ್ಷ ವಕೀಲ' ಎಂದು ಕಾಂಗ್ರೆಸ್‌ನ ಹಿರಿಯ ನಾಯಕರೂ ಒಪ್ಪಿಕೊಂಡಿದ್ದಾರೆ.

ಕೊಡವ ಜನಾಂಗಕ್ಕೆ ನಿರಾಶೆಗೊಳಿಸಬಹುದೇ?

ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರೆ ಪೊನ್ನಣ್ಣ ಅವರು ಸಚಿವರಾಗುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ ಎಂದು ಕೆಪಿಸಿಸಿ ಮೂಲಗಳು ಹೇಳಿದ್ದು, ಅವರು ಮೊದಲ ಬಾರಿಗೆ ಶಾಸಕರಾಗಿದ್ದಾರೆ ಮತ್ತು ಈಗಾಗಲೇ ಕಾನೂನು ಸಲಹೆಗಾರರಾಗಿ ಕ್ಯಾಬಿನೆಟ್ ಸ್ಥಾನ ಪಡೆದಿರುವುದನ್ನು ಪರಿಗಣಿಸಿದರೆ, ಅವರಿಗೆ ಸಂಪುಟ ಸ್ಥಾನ ಸಿಗುವ ಸಾಧ್ಯತೆ ಕಡಿಮೆ ಎಂದೂ ಪಕ್ಷದ ಒಳಗಿನವರು ಅಭಿಪ್ರಾಯಪಟ್ಟಿದ್ದಾರೆ. ಇದು ಜಿಲ್ಲೆಗೆ ಸಚಿವ ನೀಡಬೇಕೆಂದು ಒತ್ತಾಯಿಸುತ್ತಿರುವ ಕೊಡಗು ಕಾಂಗ್ರೆಸ್ ಕಾರ್ಯಕರ್ತರ ಒಂದು ವರ್ಗವನ್ನು ಹಾಗೂ ಕೊಡಗಿನ ಪ್ರಮುಖ ಜನಾಂಗವಾದ ಕೊಡವರನ್ನು ನಿರಾಶೆಗೊಳಿಸಬಹುದು ಎನ್ನಲಾಗುತ್ತಿದೆ.

ಸಚಿವ ಸ್ಥಾನ ಯಾರಿಗೆ?

ಮಡಿಕೇರಿ ಶಾಸಕ ಮಂಥರ್ ಗೌಡ ಕೂಡಾ ಶಿವಕುಮಾರ್ ಅವರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದು, ಮಂಥರ್ ಕೂಡಾ ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿರುವುದರಿಂದ ಸಂಪುಟದಲ್ಲಿ ಸ್ಥಾನ ಪಡೆದರೂ ಅಚ್ಚರಿಪಡಬೇಕಾಗಿಲ್ಲ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಯ ಕಾನೂನು, ಮಾನವ ಹಕ್ಕುಗಳು ಮತ್ತು ಆರ್‌ಟಿಐ ಸೆಲ್‌ನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪೊನ್ನಣ್ಣ ಅವರು ಶಿವಕುಮಾರ್ ಅವರೊಂದಿಗೆ ನಿಕಟವಾಗಿ ಕೆಲಸ ಮಾಡಿದ್ದರು. ಅಲ್ಲಿಯೇ ಪೊನ್ನಣ್ಣ ಅವರು ಕಾಂಗ್ರೆಸ್ ಸಂಘಟನೆಯೊಳಗೆ ತಮ್ಮ ರಾಜಕೀಯ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದರು.

ಪೊನ್ನಣ್ಣ ಅವರು ಸಿದ್ದರಾಮಯ್ಯ ಅವರಿಗೆ ಬಹಳ ಆಪ್ತರು ಎಂದು ಪರಿಗಣಿಸಲಾಗಿದ್ದರೂ, ಅವರು ಯಾವಾಗಲೂ ಡಿ.ಕೆ. ಶಿವಕುಮಾರ್ ಅವರೊಂದಿಗೆ ಸಮತೋಲಿತ ಸಂಬಂಧವನ್ನು ಉಳಿಸಿಕೊಂಡಿದ್ದಾರೆ ಎಂದು ಕಾಂಗ್ರೆಸ್ ಮೂಲಗಳೇ ಒಪ್ಪಿಕೊಂಡಿವೆ.

ಅಂತಿಮವಾಗಿ ಯಾರು ಮುಖ್ಯಮಂತ್ರಿಯಾದರೂ ಕೊಡಗಿನ ಇಬ್ಬರು ಕಾಂಗ್ರೆಸ್ ಶಾಸಕರಿಗೆ ಸಂಪುಟದಲ್ಲಿ ಸ್ಥಾನ ಲಭ್ಯವಾಗದಿದ್ದರೂ, ಮುಂದಿನ ಅವಧಿಗೂ ಅಧಿಕಾರ ಉಳಿಸಿಕೊಳ್ಳಲು ಜಿಲ್ಲೆಯ ಅಭಿವೃದ್ಧಿಗಾಗಿ ಅನುದಾನ ತರಲು ಲಾಬಿ ನಡೆಸುವುದು ಅನಿವಾರ್ಯವಾಗಲಿದೆ.



ಬಕ್ರೀದ್ ಹಬ್ಬವನ್ನು ಗುರುವಾರ ಮುಸ್ಲಿಮರು ಸಂಭ್ರಮ ಸಡಗರದಿಂದ ಆಚರಿಸಿಕೊಂಡರು. ಗುರುಪುರ ಸಮೀಪದ ಅದ್ಯಪಾಡಿ ಗ್ರಾಮದ ಬೈಲುಪೇಟೆಯ ಐತಿಹಾಸಿಕ ಜಮಾಲಿಯ ಜುಮ್ಮಾ ಮಸೀದಿ ಮತ್ತು ದರ್ಗಾ ಶರೀಫ್‌ನಲ್ಲಿ ನಡೆದ ವಿಶೇಷ ಪ್ರಾರ್ಥನೆಯನ್ನು ಚಿತ್ರದಲ್ಲಿ ಕಾಣಬಹುದು.

ಬೋಟ್ ಮುಳುಗಡೆ: ಎಲ್ಲಾ ಮೀನುಗಾರರ ರಕ್ಷಣೆ

• **ಮಂಗಳೂರು:** ಮೀನುಗಾರಿಕೆ ನಡೆಸಿ ವಾಪಸ್ ಬರುತ್ತಿದ್ದ ಬೋಟೊಂದು ಮುಳುಗಡೆಯಾಗಿದ್ದು, ಅಪಾರ ಪ್ರಮಾಣದ ನಷ್ಟ ಉಂಟಾಗಿದೆ.

ಬ್ರಹ್ಮಾವರ ಮಾಬುಕಳ ಜಯ ಸಾಲ್ಯಾನ್ ಎಂಬವರಿಗೆ ಸೇರಿದ 'ಭಾಗೀರಥಿ' ಹೆಸರಿನ ಬೋಟ್ ಮೇ 24ರಂದು ಮಲ್ಪೆ ಬಂದರಿನಿಂದ ಮೀನುಗಾರಿಕೆಗೆ ತೆರಳಿತ್ತು. ಮಂಗಳೂರಿನಿಂದ ಸುಮಾರು 8–10 ನಾಟಿಕಲ್ ಮೈಲ್ ದೂರದಲ್ಲಿ ಮೀನುಗಾರಿಕೆ ಮಾಡುತ್ತಿದ್ದಾಗ ಬೋಟ್‌ನಲ್ಲಿ ಸಮಸ್ಯೆ ಕಾಣಿಸಿಕೊಂಡು ಮುಳುಗಡೆಯಾಗಿದೆ.

ಈ ಅವಘಡಕ್ಕೆ ಕಾರಣವೇನು?

ಅಳಿವೆ ಬಾಗಿಲಿನ ಮೂಲಕ ನಿರ್ಗಮಿಸಿ, ಸುಮಾರು 5 ನಾಟಿಕಲ್ ಮೈಲು ದೂರದಲ್ಲಿ ಸಾಗಿ ಮೀನುಗಾರಿಕೆ ಮಾಡುತ್ತಿದ್ದಾಗ, ಸಮುದ್ರದ ಅಡಿಯಲ್ಲಿ ಯಾವುದೋ ಮುಳುಗಡೆಯಾಗಿದ್ದ ಬೋಟಿನ ಭಾಗ ತಾಗಿದ್ದು, ಒಳಭಾಗದಲ್ಲಿ ನೀರು ತುಂಬಿಕೊಂಡು ಬೋಟ್ ಸಂಪೂರ್ಣವಾಗಿ ಮುಳುಗಲು ಆರಂಭವಾಗಿದೆ ಎನ್ನಲಾಗಿದೆ.

25 ಲಕ್ಷ ರೂ.ಗಳ ನಷ್ಟ

ಎರಡು ದಿನಗಳ ಕಾಲ ಮೀನುಗಾರಿಕೆ ಮಾಡಿ ಬೋಟ್ ನಲ್ಲಿ ಸಂಗ್ರಹಿಸಿ ಇಡಲಾಗಿದ್ದ ಸುಮಾರು 1 ಲಕ್ಷ ರೂ. ಮೌಲ್ಯದ ಮೀನುಗಳು, ಸುಮಾರು 2,500 ಲೀ. ಡೀಸೆಲ್, ನೇವಿಗೇಷನ್ ಉಪಕರಣಗಳಾದ ಜಿಪಿಎಸ್, ಎಐಎಸ್, ವಯರ್ ಲೆಸ್ ಸೆಟ್, ಫಿಶ್ ಫೈಂಡರ್, ಮೀನುಗಾರಿಕ ಬಲೆಗಳು ನಾಶವಾಗಿವೆ. ಬೋಟ್ ನ ಇಂಜಿನ್ ಒಳಗೆ ನೀರು ಹೋಗಿ ಬೋಟ್ ರಿಪೇರಿ ಮಾಡಲಾಗದ ಸ್ಥಿತಿ ಉಂಟಾಗಿದೆ. ಸುಮಾರು 25 ಲಕ್ಷ ರೂ. ನಷ್ಟ ಸಂಭವಿಸಿದೆ ಎಂದು ಬೋಟ್ ಮಾಲಕರು ದೂರಿನಲ್ಲಿ ತಿಳಿಸಿದ್ದಾರೆ.

ಹತ್ತಿರದ ಬೋಟ್‌ನವರು ಧಾವಿಸಿ ಬಂದರು

ರಾತ್ರಿ ಸುಮಾರು 12.30ರ ವೇಳೆಗೆ ಬೋಟ್ ಸಂಪೂರ್ಣ ಮುಳುಗಡೆ ಹಂತಕ್ಕೆ ತಲುಪಿದಾಗ ಹತ್ತಿರದಲ್ಲಿದ್ದ ನಾಲ್ಕು ಬೋಟಿನವರು ಸಹಾಯಕ್ಕೆ ಬಂದು ಮೀನುಗಾರರನ್ನು ರಕ್ಷಣೆ ಮಾಡಿದ್ದಾರೆ. ಜತೆಗೆ ಮುಳುಗಡೆಯಾಗುತ್ತಿದ್ದ ಬೋಟನ್ನು ಹಗ್ಗ ಕಟ್ಟಿನ ಇತರ ಎರಡು ಬೋಟಿನ ಸಹಾಯದಿಂದ ಎಳೆದು ತಂದು ಹಳೆ ಬಂದರು ದಕ್ಕೆಯ ಹೊಯ್ಗೆ ಬಜಾರ್ ನಲ್ಲಿ ಡಾಕ್ ಮಾಡಿದ್ದಾರೆ.

ಈ ದುರಂತ ಘಟನೆಗೆ ಸಂಬಂಧಿಸಿದಂತೆ ಮಂಗಳೂರಿನ ಕರಾವಳಿ ಕಾವಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇಶದ ಪಾರಂಪರಿಕ ಸಂಸ್ಕೃತಿ ಉಳಿಯಬೇಕು: ಸೋದೆ ಶ್ರೀ

• **ಉಡುಪಿ:** ಒಂದು ಕಾಲದಲ್ಲಿ ಮನುಷ್ಯನ ಜೀವನಕ್ಕೆ ಪ್ರಮುಖ ಆಧಾರವಾಗಿದ್ದ ಕೃಷಿ ಇಂದು ಅಪ್ರಧಾನವಾಗುತ್ತಿದೆ. ಕೃಷಿ ಮತ್ತು ನಮ್ಮ ಮೂಲ ಸಂಸ್ಕೃತಿಯನ್ನು ಬಿಟ್ಟು ಕೇವಲ ದುಡ್ಡು ಗಳಿಸುವುದೇ ಪ್ರಧಾನ ಎಂಬಂತೆ ವಲಸೆ ಹೋಗುತ್ತಿರುವುದರಿಂದ, ನಮ್ಮ ಹೆಮ್ಮೆಯ ಪಾರಂಪರಿಕ ಕೃಷಿ ಪದ್ಧತಿಗಳು ಕಣ್ಮರೆಯಾಗುತ್ತಿವೆ ಎಂದು ಸೋದೆ ಮಠಾಧೀಶರಾದ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು ತೀವ್ರ ಕಳಕಳಿ ವ್ಯಕ್ತಪಡಿಸಿದ್ದಾರೆ.

ಸೋದೆ ವಾದಿರಾಜ ಮಠ ಮತ್ತು ತೀರ್ಥಹಳ್ಳಿಯ ಕೃಷಿ ಪ್ರಯೋಗ ಪರಿವಾರ ಸಂಸ್ಥೆಯ ಜಂಟಿ ಆಶ್ರಯದಲ್ಲಿ ಉಡುಪಿ ರಥಬೀದಿಯ ಸೋದೆ ಮಠದ ಆವರಣದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ವಿಶಿಷ್ಟ 'ಬೊಗಸೆ ಭತ್ತ ಬೀಜ ಪ್ರದಾನ' ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ದೇಶದ ಅಸ್ಮಿತೆಯೇ ಕೃಷಿ

ನಮ್ಮ ದೇಶದ ಅಸ್ಮಿತೆಯೇ ಕೃಷಿಯಾಗಿದೆ ಎಂದು ನೆನಪಿಸಿದ ಶ್ರೀಗಳು, ಹಿಂದೆ ಕೃಷಿ ಜಮೀನಿನ ಮೂಲಕವೇ ಒಬ್ಬ ವ್ಯಕ್ತಿಯ ಸಾಮಾಜಿಕ ಅಂತಸ್ತನ್ನು ಅಳೆಯಲಾಗುತ್ತಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಭತ್ತವನ್ನು ಬೆಳೆಸುವ ಮತ್ತು ಸಾಂಪ್ರದಾಯಿಕ ತಳಿಗಳನ್ನು ಉಳಿಸುವ ಜವಾಬ್ದಾರಿ ಕೇವಲ ರೈತರದ್ದು ಮಾತ್ರವಲ್ಲ, ಬದಲಿಗೆ ಅನ್ನ ತಿನ್ನುವ ಪ್ರತಿಯೊಬ್ಬ ನಾಗರಿಕನದ್ದೂ ಆಗಿದೆ. ಪ್ರಸ್ತುತ ದಿನಗಳಲ್ಲಿ ಕಣ್ಮರೆಯಾಗುತ್ತಿರುವ ಆಹಾರ ವೈವಿಧ್ಯತೆಯನ್ನು ಮರಳಿ ಒಟ್ಟುಗೂಡಿಸುವ ಒಂದು ಸಣ್ಣ ಪ್ರಾಮಾಣಿಕ ಪ್ರಯತ್ನವನ್ನು ಈ ವಿಶಿಷ್ಟ ಕಾರ್ಯಕ್ರಮದ ಮೂಲಕ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ, ಈ ಯೋಜನೆಯಡಿ ಸಾವಯವ ಕೃಷಿ ಮಾಡುವ ರೈತರಿಗೆ ಸೂಕ್ತ ಬೆಂಬಲ ಬೆಲೆ, ಗೌರವಧನ ನೀಡಿ ಶ್ರೀಮಠದಿಂದ ಸತ್ಕರಿಸಲಾಗುವುದು ಎಂದು ಅವರು ಪ್ರಕಟಿಸಿದರು.



ಭಾರತೀಯ ಪರಂಪರೆಯಲ್ಲಿ ಗೋವು ಮತ್ತು ಕೃಷಿ ಒಂದಕ್ಕೊಂದು ಅವಿನಾಭಾವ ಸಂಬಂಧ ಹೊಂದಿವೆ. ಕೃಷಿ ನಮ್ಮಲ್ಲಿ ಎಂದಿಗೂ ಕೇವಲ ಉದ್ಯಮವಾಗಿರಲಿಲ್ಲ, ಅದೊಂದು ಶ್ರೇಷ್ಠ ಸಂಸ್ಕೃತಿಯಾಗಿತ್ತು. ಈ ಕೃಷಿ ಸಂಸ್ಕೃತಿ ಮುಂದಿನ ತಲೆಮಾರಿಗೆ ಉಳಿಯಬೇಕಾದರೆ ಮೊದಲು ನಮ್ಮ ಕುಟುಂಬ ವ್ಯವಸ್ಥೆಗಳು ಗಟ್ಟಿಯಾಗಿ ಉಳಿಯಬೇಕು.

■ **ಶ್ರೀವತ್ಸ, ತೀರ್ಥಹಳ್ಳಿಯ ಕೃಷಿ ಪ್ರಯೋಗ ಪರಿವಾರ ಸಂಸ್ಥೆ**

ಕಾರ್ಯಕ್ರಮದಲ್ಲಿ ಹಾದಿಕಲ್ಲು ಲಕ್ಷ್ಮೀನಾರಾಯಣ, ಆನಂದ ಹಾಗೂ ಕೃಷಿ ಪ್ರಯೋಗ ಪರಿವಾರದ ಅರುಣ್ ಮತ್ತು ದಿನೇಶ್ ಉಪಸ್ಥಿತರಿದ್ದು ಪ್ರಮುಖ ವಿಷಯಗಳ ಕುರಿತು ಮಾತನಾಡಿದರು. ಶ್ರೀನಿವಾಸ ಭಟ್ ಕಾರ್ಯಕ್ರಮದ ಕೊನೆಯಲ್ಲಿ ವಂದಿಸಿದರು.

ಪ್ರಶ್ನಾ ಚಿಂತನೆಯಲ್ಲಿ ಉತ್ತರ ಸಿಕ್ಕಿ ಉರುಳಿಹೋಗಿದೆ ಈಗ ತಿಂಗಳು ಎರಡು

ಇನ್ನೂ ಹಾಳುಕೊಂಪೆಯಲ್ಲೇ 'ಮಹಾದೇವ'!

• **ಪುತ್ತೂರು:** ಇತಿಹಾಸ ಪ್ರಸಿದ್ಧ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದ ಹೊರ ಪ್ರಾಂಗಣದಲ್ಲಿ ಒಂದು ಸಮಯದಲ್ಲಿ ಆಕರ್ಷಣೆಯ ಕೇಂದ್ರವಾಗಿದ್ದ ಶಿವನ ಸುಂದರ ವಿಗ್ರಹ ಈಗ ದೇವರಮಾರು ಗದ್ದೆಯ ತುದಿಯಲ್ಲಿ ಅನಾಥ ಸ್ಥಿತಿಯಲ್ಲಿದೆ!

ದೇವರಮಾರು ಗದ್ದೆಯ ತುದಿಗೆ...

ದೇವಾಲಯದ ಹೊರಾಂಗಣದಲ್ಲಿ ಹಾಲಿ ರಾಜಗೋಪುರ ಇರುವ ಸ್ಥಳದಲ್ಲಿ ಹಸನ್ಮುಖಿ ಶಿವನ ಬೃಹತ್‌ಗಾತ್ರದವಿಗ್ರಹವನ್ನುಹಿಂದೆಸ್ಥಾಪಿಸಲಾಗಿತ್ತು. ಆನಂತರ ಪ್ರಶ್ನಾ ಚಿಂತನೆಯಲ್ಲಿ ಕಂಡುಬಂದಂತೆ ಕಾರಣಗಳಿಗಾಗಿ ತೆರವುಗೊಳಿಸಲಾಗಿತ್ತು. ಬಳಿಕ ದೇವರಮಾರು ಗದ್ದೆಯ ತುತ್ತ ತುದಿಯ ಸ್ಮಶಾನದ ಸನಿಹ ವಿಗ್ರಹವನ್ನು ಸ್ಥಾಪಿಸಿ ಪಾರ್ಕ್ ರೀತಿಯಲ್ಲಿ ಸುಂದರಗೊಳಿಸಲಾಗಿತ್ತು. ಅನಂತರದ ಕೆಲವು ಸಮಯ ಈಶ ಸಂಸ್ಥೆಯಿಂದ ಪಾರ್ಕ್‌ನ ನಿರ್ವಹಣೆ ಮಾಡಲಾಗಿತ್ತು. ಕಾರಂಜಿ, ಹುಲ್ಲು ಹಾಸು



ಇದ್ದು ಭಕ್ತರು ಆಕರ್ಷಣೆಯ ಕೇಂದ್ರವಾಗಿತ್ತು. ಆದಾಗಿ ಕೆಲವು ವರ್ಷಗಳೇ ಕಳೆದಿವೆ. ಈಗ ಕಸ ಕೊಂಪೆಯ ಮಧ್ಯೆ ಹೊಳಪು ಕಳೆದು ಕೊಂಡಿರುವ ಶಿವನ ವಿಗ್ರಹ ಅನಾಥ ಸ್ಥಿತಿಯಲ್ಲಿದೆ.

ದೇವರ ವಿಗ್ರಹದ ಅನಾಥ ಸ್ಥಿತಿಯ ಕುರಿತು ಹಾಲಿ ದೇವಾಲಯದ ವ್ಯವಸ್ಥಾಪನ ಸಮಿತಿಯವರ ಗಮನಸೆಳೆದಾಗ ಶೀಘ್ರ ಪ್ರಶ್ನಾ ಚಿಂತನೆ ಇರಿಸಿ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎನ್ನುವ ಉತ್ತರ ಲಭಿಸಿದೆ. ಈ ಉತ್ತರ ಲಭಿಸಿಯೇ ಎರಡು ತಿಂಗಳು ಕಳೆದಿದೆ.

ಭಕ್ತರ ನಂಬಿಕೆಯ ಪ್ರತೀಕವಾಗಿರುವ ದೇವರ ವಿಗ್ರಹವನ್ನು ಈ ರೀತಿ ಅನಾಥವಾಗಿ ಹಾಳು ಕೊಂಪೆಯಲ್ಲಿ ಬಿಡುವುದು ಎಷ್ಟು ಸರಿ ಎನ್ನುವ ಪ್ರಶ್ನೆ ಈಗ ಕೇಳಿಬಂದಿದೆ.


ಸಿಎಂ ಸಿದ್ದರಾಮಯ್ಯಗೆ ಹೈಕಮಾಂಡ್ ಪ್ರಶಂಸೆ

• ಹೊಸದಿಲ್ಲಿ: ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಿರುವ ಕ್ರಮವನ್ನು ಕಾಂಗ್ರೆಸ್ ನಾಯಕತ್ವ 'ಪಕ್ಷ ಹಿತಕ್ಕಾಗಿ ತೆಗೆದುಕೊಂಡ ನಿಸ್ವಾರ್ಥ ನಿರ್ಧಾರ' ಎಂದು ಶ್ಲಾಘಿಸಿದೆ. ಇದೇ ವೇಳೆ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರಸ್ಪರ ಅಪ್ಪಿಕೊಂಡಿರುವ ಚಿತ್ರಗಳನ್ನು ಪಕ್ಷದ ನಾಯಕರು ಹಂಚಿಕೊಂಡಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿ, ಸ್ವಾರ್ಥಕ್ಕಿಂತ ಪಕ್ಷ ಮೇಲು, ಅಧಿಕಾರಕ್ಕಿಂತ ಜನತೆ ಮೇಲು. ಕಾಂಗ್ರೆಸ್‌ಗೆ ಪಕ್ಷವೇ ಕುಟುಂಬ, ಜನರೇ ಗುರಿ ಎಂದು ಹೇಳಿದ್ದಾರೆ. ಸಿದ್ದರಾಮಯ್ಯ ಕಾಂಗ್ರೆಸ್‌ನ ರಾಜಕೀಯ ಧ್ಯೇಯದಲ್ಲಿ ಬದಲಿ ಇಲ್ಲದ ನಾಯಕ ಎಂದು ಬಣ್ಣಿಸಿದ ಅವರು, ಕರ್ನಾಟಕದ ಸಿಎಂ ಆಗಿ ಅವರ ಆಡಳಿತ ಅವಧಿ ಜನಪರ, ಪರಿವರ್ತನಾ ದಿಶೆಯದ್ದಾಗಿತ್ತು ಎಂದು ಪ್ರಶಂಸಿದರು. ಸಮಾಜದ ಅಂಚಿನಲ್ಲಿದ್ದ ಜನರಿಗೆ ಶಕ್ತಿ ತುಂಬುವ ಕೆಲಸವನ್ನು ಅವರು ಮಾಡಿದ್ದಾರೆ. ರೈತ ಕುಟುಂಬದಿಂದ ಹೊರಹೊಮ್ಮಿ ತತ್ವನಿಷ್ಠೆ, ಜನಸೇವೆ ಹಾಗೂ ಆಡಳಿತ ಜಾಣ್ಮೆಯಿಂದ ರಾಜ್ಯದ ಉನ್ನತ ಹುದ್ದೆಗೇರಿದ ನಾಯಕ ಸಿದ್ದರಾಮಯ್ಯ ಅವರು, ಬಡವರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತ ವರ್ಗಗಳ ಸಬಲೀಕರಣಕ್ಕಾಗಿ ಅವರ ಆಡಳಿತ ಸುವರ್ಣಾಕ್ಷರಗಳಲ್ಲಿ ದಾಖಲಾಗಲಿದೆ ಎಂದು ವೇಣುಗೋಪಾಲ್ ಹೇಳಿದ್ದಾರೆ.

ಪಕ್ಷದ ಹಿತದೃಷ್ಟಿಯಿಂದ ಸಿದ್ದರಾಮಯ್ಯ ತಾಳ್ಮೆ ಹಾಗೂ ಗೌರವದೊಂದಿಗೆ ನಿರ್ಧಾರ ಕೈಗೊಂಡಿರುವುದು ಸಾರ್ವಜನಿಕ ಜೀವನದ ನಾಯಕರಿಗೆ ಮಾದರಿಯಾಗಿದೆ ಎಂದೂ ಅವರು ಹೇಳಿದ್ದಾರೆ. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಕೂಡ ಪ್ರತಿಕ್ರಿಯಿಸಿ, ಕರ್ನಾಟಕಕ್ಕಾಗಿ, ಜನರಿಗಾಗಿ, ಕಾಂಗ್ರೆಸ್‌ಗಾಗಿ ನಾವು ಒಗ್ಗಟ್ಟಾಗಿದ್ದೇವೆ ಎಂದು ಹೇಳಿದ್ದಾರೆ.

ರಾಮ ಬಾಣ



ಡ್ರೋನ್ ಹೊಡೆದುರುಳಿಸಿದ ಅಮೆರಿಕ

ಪುಟ ೧ ➡ ಈ ಹಿನ್ನಲೆ ಅಮೆರಿಕದ ಸೆಂಟ್ರಲ್ ಕಮಾಂಡ್ ಪಡೆಗಳು ತಕ್ಷಣ ಕಾರ್ಯಾಚರಣೆ ನಡೆಸಿ ನಾಲ್ಕು 'ಒನ್-ವೇ ಅಟ್ಯಾಕ್ ಡ್ರೋನ್'ಗಳನ್ನು ಗುರಿಯಾಗಿಸಿ ಹೊಡೆದುರುಳಿಸಿವೆ. ಇವು ಆತ್ಮಹತ್ಯಾ ದಾಳಿ ನಡೆಸುವ ಉದ್ದೇಶದಿಂದ ಈ ಡ್ರೋನ್‌ಗಳು ದಾಳಿ ನಡೆಸಿದೆ ಎಂದು ಅಮೆರಿಕ ಸೇನೆ ತಿಳಿಸಿದೆ.

ಕದನ ವಿರಾಮ ಚರ್ಚೆ: ಅಮೆರಿಕ-ಇರಾನ್ ನಡುವಿನ ಕದನ ವಿರಾಮವನ್ನು 60 ದಿನಗಳವರೆಗೆ ವಿಸ್ತರಿಸಲು ಸಂಧಾನಕಾರರು ಒಪ್ಪಿಕೊಂಡಿದ್ದು, ಇರಾನ್ ಪರಮಾಣು ಯೋಜನೆಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಆದರೆ ಕದನ ವಿರಾಮ ವಿಸ್ತರಣೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಂತಿಮ ಒಪ್ಪಿಗೆ ನೀಡುವುದು ಬಾಕಿಯಿದೆ ಎಂದು ಸಂಧಾನದಲ್ಲಿ ತೊಡಗಿದ್ದ ಕೆಲವು ಅಮೆರಿಕ ಅಧಿಕಾರಿಗಳು ತಿಳಿಸಿದ್ದಾರೆ. ಉಭಯ ರಾಷ್ಟ್ರಗಳ ಸಂಧಾನಕಾರರು 60 ದಿನಗಳ ಕದನ ವಿರಾಮ ಒಪ್ಪಂದಕ್ಕಾಗಿ ಕರಡು ಪ್ರತಿ ಸಿದ್ಧಪಡಿಸಿದ್ದಾರೆಂಬ ಮಾಹಿತಿಯಿದೆ. ಇದರಿಂದ ಅಮೆರಿಕ-ಇರಾನ್ ನಡುವಿನ ತಾತ್ಕಲಿಕ ಕದನ ವಿರಾಮ ಮುಂದುವರಿಯುವ ಸಾಧ್ಯತೆಯಿದೆ. ಅಂದರೆ 60 ದಿನಗಳವರೆಗೆ ಯಾವುದೇ ಸೇನಾ ಕಾರ್ಯಾಚರಣೆ ನಡೆಸುವಂತಿಲ್ಲ. ತಾತ್ಕಾಲಿಕ ಕದನ ವಿರಾಮ ವಿಸ್ತರಣೆಯೊಂದಿಗೆ ಇರಾನ್ ಪರಮಾಣು ಯೋಜನೆಯ ಕುರಿತು ಉಭಯ ರಾಷ್ಟ್ರಗಳ ನಡುವಿನ ಸಂಧಾನ ಅಧಿಕೃತವಾಗಿ ಆರಂಭವಾಗಲಿದೆ. ಕದನ ವಿರಾಮ ವಿಸ್ತರಣೆಯಲ್ಲಿ ಪ್ರಮುಖವಾಗಿ ಹಾರ್ಮುಜ್ ಜಲಸಂಧಿಯ ಮೂಲಕ ಸುರಕ್ಷಿತ ಮತ್ತು ತಡೆರಹಿತ ಹಡಗುಗಳ ಸಂಚಾರಕ್ಕೆ ಅನುವು ಮಾಡಿಕೊಡಲು ಷರತ್ತು ವಿಧಿಸಲಾಗಿದೆ.

ಒಮಾನ್‌ಗೆ ಅಮೆರಿಕ ಹೊಸ ಎಚ್ಚರಿಕೆ: ಹಾರ್ಮುಜ್ ಜಲಸಂಧಿಯ ಮೂಲಕ ಹಾದು ಹೋಗುವ ಹಡಗುಗಳಿಂದ ಟೋಲ್ ಶುಲ್ಕ ವಸೂಲಾತಿ ಮಾಡುವುದನ್ನು ಅಮೆರಿಕ ಸರ್ಕಾರ ಸಹಿಸುವುದಿಲ್ಲ. ಶುಲ್ಕ ಸಂಗ್ರಹಿಸುವಲ್ಲಿ ತೊಡಗಿರುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕಾದೀತು ಎಂಬುದನ್ನು ಒಮಾನ್ ತಿಳಿದುಕೊಳ್ಳಬೇಕು ಎಂದು ಅಮೆರಿಕ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ಎಚ್ಚರಿಕೆ ನೀಡಿದ್ದಾರೆ.

ಕದನ ವಿರಾಮ ವಿಸ್ತರಣೆ ಪರಿಣಾಮ? ಕದನ ವಿರಾಮ ವಿಸ್ತರಣೆಗೆ ಟ್ರಂಪ್ ಒಪ್ಪಿಕೊಂಡರೆ ಇಂಧನ ಮಾರುಕಟ್ಟೆ ಪುನಃ ಸ್ಥಿರವಾಗಲಿದ್ದು, ತೈಲ ಪೂರೈಕೆ ಕೊರತೆ ಇಳಿಕೆಯಾಗುವ ಸಾಧ್ಯತೆಯಿದೆ. ಮಧ್ಯಪ್ರಾಚ್ಯ ಉದ್ವಿಗ್ನತೆ ತಾತ್ಕಾಲಿಕ ನಿಯಂತ್ರಣಕ್ಕೆ ಬರಲಿದೆ. ಸದ್ಯ ಹಣಕಾಸಿನ ಮಾರುಕಟ್ಟೆ ಧನಾತ್ಮಕ ಟ್ರೆಂಡ್ ಪ್ರದರ್ಶಿಸಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಕಳೆದ ಎರಡು ದಶಕಗಳಿಂದ ವಿದ್ಯಾರ್ಥಿಗಳಲ್ಲಿ, ಹಿರಿಯರಲ್ಲಿ ಓದುವ ಹವ್ಯಾಸ ಶೇಕಡಾ ನಲುವತ್ತರಷ್ಟು ಕಡಿಮೆಯಾಗಿದೆ

– ಅಮೇರಿಕಾದಲ್ಲೊಂದು ಅಧ್ಯಯನ ವರದಿ

– ಲಾಭವಿರುವುದನ್ನು ಮಾಡಲಿಕ್ಕೇ ಸಮಯ ಸಾಲುವುದಿಲ್ಲ, ಇನ್ನು ಲಾಭವಿಲ್ಲದ ಓದುವ ಹವ್ಯಾಸ ಯಾರಿಗೆ ಬೇಕು?

ದಿನ ಭವಿಷ್ಯ

ಮೇಷ: ಇಂದು ನಿಮ್ಮ ಕೆಲಸಕ್ಕೆ ಹೆಚ್ಚು ಪ್ರಾಮುಖ್ಯ ನೀಡಬೇಕು. ಆರ್ಥಿಕ ಪ್ರಗತಿ ನಿಧಾನ. ಅನವಶ್ಯ ಚಿಂತನೆಯಿಂದ ಮನಸ್ಸಿಗೆ ಗೊಂದಲ.

ವೃಷಭ: ವೃತ್ತಿಯಲ್ಲಿ ಸುಗಮ ಪ್ರಗತಿ. ಧನಗಳಿಕೆ ಹೆಚ್ಚಳ. ಆತ್ಮೀಯರ ಜತೆ ಹೆಚ್ಚು ಕಾಲ ಕಳೆಯಲು ಯತ್ನಿಸಿ. ಅವರ ಸಂತೋಷಕ್ಕೆ ಅವಕಾಶ ಕಲ್ಪಿಸಿ.

ಮಿಥುನ: ನಿಮ್ಮ ಆಕಾಂಕ್ಷೆ ಈಡೇರುವ ದಿನ. ನಿಮ್ಮ ಸಣ್ಣ ಹೆಜ್ಜೆಯೂ ಮಹತ್ತರ ಪರಿಣಾಮ ಬೀರಲಿದೆ. ಆಪ್ತರಿಂದ ಸಹಕಾರ. ಧನಲಾಭ ಯೋಗ.

ಕಟಕ: ಇತರರ ಮನಸ್ಸು ಅರಿಯುವಲ್ಲಿ ನೀವು ಚತುರರು. ಅದನ್ನು ನಿಮ್ಮ ಕಾರ್ಯಕ್ಕೆ ಬಳಸಿಕೊಳ್ಳಿ. ದಂಪತಿ ಮಧ್ಯೆ ಕಲಹ ಅಧಿಕ. ಸಹನೆ ಮುಖ್ಯ.

ಸಿಂಹ: ವೃತ್ತಿಯಲ್ಲಿ ಮಹತ್ವದ ದಿನ. ಉಜ್ವಲ ಅವಕಾಶ. ಮನೆಯಲ್ಲಿ ಸಾಮರಸ್ಯ. ಬಾಂಧವ್ಯ ವೃದ್ಧಿ. ಅಧಿಕ ಖರ್ಚು ಸ್ವಲ್ಪ ಮಟ್ಟಿನ ಚಿಂತೆಗೆ ಕಾರಣವಾಗಲಿದೆ.

ಕನ್ಯಾ: ನಿಮ್ಮ ಕಾರ್ಯ ಸರಿಯಾಗಿ ನಿರ್ವಹಿಸಿ. ನಿಮ್ಮನ್ನು ಪರಾಮರ್ಶೆಗೆ ಒಡ್ಡುವ ಜನರಿದ್ದಾರೆ. ಕೌಟುಂಬಿಕ ವಾಗ್ವಾದ ನೆಮ್ಮದಿ ಕೆಡಿಸಬಹುದು.

ತುಲಾ: ನಿಮ್ಮ ಸಾಮರ್ಥ್ಯ, ಕೌಶಲ ಪ್ರದರ್ಶನಕ್ಕೆ ಅವಕಾಶ ಸಿಗಲಿದೆ. ನಿಮ್ಮ ಭಾವುಕ ಮನಸ್ಥಿತಿ ಪ್ರದರ್ಶನ ಆಗಲಿದೆ. ಆರ್ಥಿಕ ಒತ್ತಡ ಅಧಿಕ.

ವೃಶ್ಚಿಕ: ನಿಮಗೆ ಪೂರಕ ದಿನ. ಅಲ್ಪ ಪ್ರಯತ್ನದಲ್ಲೂ ಯಶಸ್ಸು ಸಿಗಲಿದೆ. ಮನೆಯ ವಾತಾವರಣ ಹಾಳಾಗಲು ಅವಕಾಶ ಕೊಡಬೇಡಿ.

ಧನು: ಆಕಾಂಕ್ಷೆ ಈಡೇರಿಕೆ. ಉತ್ಸಾಹ ಹೆಚ್ಚಳ. ಆರ್ಥಿಕ ಬಿಕ್ಕಟ್ಟು ಪರಿಹಾರ. ಮನೆಯಲ್ಲಿ ಎಲ್ಲರ ಸಹಕಾರ. ಖಾಸಗಿ ಚಿಂತೆ ಪರಿಹಾರದ ಸಂಕೇತ.

ಮಕರ: ನಿಮ್ಮ ಕಠಿಣ ಶ್ರಮ ಉತ್ತಮ ಫಲ ನೀಡಲಿದೆ. ಆರ್ಥಿಕ ಗಳಿಕೆ ಹೆಚ್ಚಳ. ವ್ಯವಹಾರದಲ್ಲಿ ತಾಳ್ಮೆಯ ಪರೀಕ್ಷೆ ನಡೆಯಲಿದೆ. ಕೋಪ ನಿಗ್ರಹಿಸಿ.

ಕುಂಭ: ಇಂದು ನಿಮ್ಮ ಸುತ್ತ ಹರ್ಷದ ವಾತಾವರಣ. ಕಾರ್ಯ ಸಿದ್ಧಿ. ಧನ ಗಳಿಕೆ. ಉಳಿತಾಯದಲ್ಲಿ ಹೆಚ್ಚಳ. ಆರೋಗ್ಯ ಸಮಸ್ಯೆ ನಿವಾರಣೆಯಾಗಲಿದೆ.

ಮೀನ: ಪ್ರತಿ ವಿಷಯವೂ ಸುಗಮವಾಗಿ ಸಾಗಲಿದೆ. ನಿಮ್ಮ ಕನಸು ನನಸಾಗುವ ಕಾಲ ಬಂದಿದೆ. ಬಿಕ್ಕಟ್ಟು ಒಂದೊಂದಾಗಿ ಪರಿಹಾರ.

ರಾಹುಕಾಲ : 10.30–12.00
ಗುಳಿಕಕಾಲ : 7.30–9.00

ಅದೃಷ್ಟ ಸಂಖ್ಯೆ : 1,9,2,6

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ



ಪುಟ ೧ ➡ **ಸಚಿವ ಸಂತೋಷ್ ಲಾಡ್ ಕಣ್ಣೀರು:** ಸಿಎಂ ಸಿದ್ದರಾಮಯ್ಯ ನಿವಾಸ ಕಾವೇರಿಯಲ್ಲಿ ನಡೆದ ಉಪಾಹಾರ ಸಭೆ ಮುಗಿಸಿ ಕಾರಿನಲ್ಲಿ ವಾಪಸ್ ತೆರಳುತ್ತಿದ್ದ ಸಂದರ್ಭದಲ್ಲಿ ಸಚಿವ ಲಾಡ್ ಭಾವುಕರಾಗಿದ್ದು, ಕಣ್ಣೀರು ಹಾಕಿದ ಪ್ರಸಂಗ ನಡೆದಿದೆ.

ಸಭೆಯಲ್ಲಿ ಸಿದ್ದು ಆರ್ಥಿಕತೆ ಪಾಠ: ಉಪಾಹಾರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಆರ್ಥಿಕತೆಯ ಪಾಠ ಮಾಡಿದ್ದಾರೆ ಎಂಬ ಮಾಹಿತಿ ಇದೆ. ಗ್ಯಾರಂಟಿ ಸಮಸ್ಯೆ ಆಗುತ್ತದೆ ಎಂದು ಯಾವುದೇ ಕಾರಣಕ್ಕಾಗಿ ನಿಲ್ಲಿಸುವುದು ಬೇಡ. ಗ್ಯಾರಂಟಿಗಳು ಕಾಂಗ್ರೆಸ್ ಮಾದರಿ ಆಗಿವೆ ಎಂದು ಸಚಿವರಿಗೆ ಕಿವಿಮಾತು ಹೇಳಿದ್ದಾರೆ.

ಸಿಎಂ ಕಾಲಿಗೆ ಬಿದ್ದು ಆಶೀರ್ವಾದ ಪಡೆದ ಡಿ.ಕೆ.ಶಿವಕುಮಾರ್

ಉಪಾಹಾರ ಸಭೆಯಲ್ಲಿ ಭಾಗಿಯಾಗಲು ಕಾವೇರಿ ನಿವಾಸಕ್ಕೆ ಆಗಮಿಸಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾಲಿಗೆ ಬಿದ್ದು ಆಶೀರ್ವಾದ ಪಡೆದುಕೊಂಡರು. ಮುಖ್ಯಮಂತ್ರಿಗಳೂ ಕೂಡ ಅವರನ್ನು ಆಲಿಂಗಿಸಿ, ಬೆನ್ನು ತಟ್ಟಿದರು.



ಭಿನ್ನಮತಕ್ಕೆ ಅವಕಾಶ ಇಲ್ಲ: ಸಚಿವ ಪಾಟೀಲ್

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವರಿಗೆ ತಾವು ರಾಜೀನಾಮೆ ನೀಡಿದ ಬಳಿಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ಉತ್ತರಾಧಿಕಾರಿಯಾಗಲಿದ್ದಾರೆ ಎಂದು ಹೇಳಿದ್ದಾಗಿ ಕಾನೂನು ಸಚಿವ ಎಚ್.ಕೆ. ಪಾಟೀಲ್ ಅವರು ತಿಳಿಸಿದರು. ಉಪಾಹಾರ ಕೂಟದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಾಯಕತ್ವ ಬದಲಾವಣೆ ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ನಡೆಯುತ್ತಿದೆ ಎಂದು ಸ್ಪಷ್ಟಪಡಿಸಿದರು. ಹೈಕಮಾಂಡ್ ಜತೆ ನಡೆದ ಚರ್ಚೆಗಳ ಉಲ್ಲೇಖಿಸಿದ್ದಾರೆ. ಎಲ್ಲಿಯೂ ಭಿನ್ನಮತಕ್ಕೆ ಅವಕಾಶವೇ ಇಲ್ಲ. ಇದು ಏಕಮತದ ತೀರ್ಮಾನವಾಗಿದ್ದು, ಹೈಕಮಾಂಡ್ ಹೇಳಿರುವುದಕ್ಕೆ ಎಲ್ಲರೂ ಒಪ್ಪಿದ್ದಾರೆ ಎಂದು ಪಾಟೀಲ್ ಹೇಳಿದರು.

ದಿಲ್ಲಿ ಬದಲು ಜೈಪುರದಲ್ಲಿಳಿದ ಸಿಎಂ ಸಿದ್ದರಾಮಯ್ಯ ವಿಮಾನ

• ಬೆಂಗಳೂರು: ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಹೈಕಮಾಂಡ್ ನಾಯಕರನ್ನು ಭೇಟಿಯಾಗಲು ಬೆಂಗಳೂರಿನಿಂದ ದಿಲ್ಲಿಗೆ ಹೊರಟಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಯಾಣಿಸುತ್ತಿದ್ದ ವಿಮಾನ ಹವಾಮಾನ ವೈಪರೀತ್ಯ ಹಿನ್ನೆಲೆಯಲ್ಲಿ ದಿಲ್ಲಿಗೆ ತೆರಳಬೇಕಿದ್ದ ವಿಶೇಷ ವಿಮಾನ ಜೈಪುರದಲ್ಲಿ ಇಳಿದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಯಾಣಿಸುತ್ತಿದ್ದ ವಿಶೇಷ ವಿಮಾನದಲ್ಲಿ ರಾಜ್ಯ ಉಸ್ತುವಾರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಸಚಿವರಾದ ಕೆ.ಜೆ. ಜಾರ್ಜ್, ಬೈರತಿ ಸುರೇಶ್, ಕಾನೂನು ಸಲಹೆಗಾರ ಪೊನ್ನಣ್ಣ, ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ ವಿಮಾನದಲ್ಲಿದ್ದರು. ಮುಖ್ಯಮಂತ್ರಿಗಳು ಪರ್ಯಾಯ ಮಾರ್ಗದ ಮೂಲಕ ದಿಲ್ಲಿಗೆ ತೆರಳಿದರು.

ಅಂದು ಇಂದು ಎಂದೆಂದೂ ಒಗ್ಗಟ್ಟೇ ನಮ್ಮ ಶಕ್ತಿ: ಕಾಂಗ್ರೆಸ್

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಆಲಿಂಗನ ಮಾಡುವ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಕಾಂಗ್ರೆಸ್ ಹಂಚಿಕೊಂಡಿದ್ದು, ಅಂದು, ಇಂದು, ಎಂದೆಂದು... ಒಗ್ಗಟ್ಟೇ ನಮ್ಮ ಶಕ್ತಿ! ಎಂದೆಂದಿಗೂ ಜನಸೇವೆಯೇ ನಮ್ಮ ಬದ್ಧತೆ' ಎಂದು ಬರೆದುಕೊಂಡಿದೆ.

> **ನಾನು ಸ್ವಯಂಪ್ರೇರಿತನಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದೇನೆ. ಮುಂದಿನ ಮುಖ್ಯಮಂತ್ರಿ ಯಾರೆಂದು ಹೈಕಮಾಂಡ್ ಮತ್ತು ಶಾಸಕಾಂಗ ಪಕ್ಷದ ಸಭೆ ತೀರ್ಮಾನಿಸುತ್ತದೆ.**
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ



ಕಣ್ಣೀರಿಟ್ಟ ಸಿಎಂ

ಪುಟ ೧ ➡ **ಸಹೋದ್ಯೋಗಿಗಳ ಜತೆ ಮುಕ್ತ ಮನಸ್ಸಿನಿಂದ ಮಾತನಾಡುತ್ತಾ ಉಪಾಹಾರ ಸವಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಹೈಕಮಾಂಡ್ ಭೇಟಿ, ಅಲ್ಲಿನ ಚರ್ಚೆ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನಿರ್ದೇಶನ ಎಲ್ಲವನ್ನೂ ಸಚಿವರುಗಳ ಮುಂದೆ ಬಿಡಿಸಿಟ್ಟರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಸಹೋದ್ಯೋಗಿಗಳಿಗೆ ತಮ್ಮ ಅಧಿಕೃತ ನಿವಾಸ ಕಾವೇರಿಯಲ್ಲೇ ಉಪಾಹಾರ ತಯಾರಿಸಿ ಉಣಬಡಿಸಿದ್ದು ವಿಶೇಷವಾಗಿತ್ತು. ಎಲ್ಲ ಸಚಿವರಿಗೆ ಇಡ್ಲಿ, ವಡೆ, ದೋಸೆ, ಉಪ್ಪಿಟ್ಟಿನ ಉಪಾಹಾರ ಬಡಿಸಲಾಯಿತು.**

ಮತದಾರರೇ ಅಭಿಮಾನಿ ದೇವರು

ಪುಟ ೧ ➡ ಆದರಂತೆ ಇವತ್ತು ಸ್ವಯಂಪ್ರೇರಿತನಾಗಿ ರಾಜೀನಾಮೆ ಕೊಟ್ಟಿದ್ದೇನೆ. ರಾಜ್ಯಪಾಲರು ಬೆಂಗಳೂರಿನಲ್ಲಿಲ್ಲದೆ ಇರುವುದರಿಂದ ಅವರ ಕಾರ್ಯದರ್ಶಿಯವರಿಗೆ ರಾಜೀನಾಮೆ ಪತ್ರ ಕೊಟ್ಟಿದ್ದೇನೆ. ರಾಜ್ಯಪಾಲರು ವಾಪಸ್ ಬಂದ ಬಳಿಕ ನನ್ನ ರಾಜೀನಾಮೆಯನ್ನು ಅಂಗೀಕರಿಸುತ್ತಾರೆಂಬ ಸಂಪೂರ್ಣ ವಿಶ್ವಾಸವಿದೆ. ಸಂವಿಧಾನದ ಪ್ರಕಾರ ಅಂಗೀಕರಿಸಲೇಬೇಕು ಎಂದು ಹೇಳಿದರು.

ಮತದಾರ ದೇವರು! ಕರ್ನಾಟಕದ ಮೇರುನಟ ರಾಜ್‌ಕುಮಾರ್ ಅಭಿಮಾನಿ ದೇವರೆಂದು ಕರೆಯುತ್ತಿದ್ದರು. ನಾನು ರಾಜಕಾರಣಿ, ನಾನು ಸಂವಿಧಾನವೇ ನನ್ನ ಧರ್ಮ ಎಂದು ತಿಳಿದವನು. ಮತದಾರರೇ ನಮ್ಮ ಅಭಿಮಾನಿ ದೇವರು. ಕನ್ನಡನಾಡಿನ 7 ಕೋಟಿ ಜನರ ಸೇವೆ ಮಾಡುವ ಅವಕಾಶ ಸಿಕ್ಕಿತ್ತು. ಎರಡು ಬಾರಿ ಮುಖ್ಯಮಂತ್ರಿಯಾಗುವ ಮತ್ತು ಎರಡು ಬಾರಿ ಪ್ರತಿಪಕ್ಷ ನಾಯಕನಾಗುವ ಅವಕಾಶ ಸಿಕ್ಕಿತ್ತು. ಈ ಅವಕಾಶ ಕೊಟ್ಟ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಈ ಸಂದರ್ಭದಲ್ಲಿ ಅಪಾರ ಧನ್ಯವಾದ ತಿಳಿಸುತ್ತೇನೆ. ನಾನು ಕಾಂಗ್ರೆಸ್ ಸೇರಿದ್ದು 2006, ಆಗಿನಿಂದಲೂ ಕಾಂಗ್ರೆಸ್ ಕಾರ್ಯಕರ್ತರು, ಶಾಸಕರು, ಸಂಸದರು, ನನಗೆ ಪ್ರೀತಿ ತೋರಿಸಿದ್ದಾರೆ, ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. 2013ರಿಂದ 2018ರವರೆಗೆ ಮತ್ತು 2023ರಿಂದ ಇಲ್ಲಿಯವರೆಗೆ ನನ್ನ ಜತೆ ಕೆಲಸ ಮಾಡಿದ ಸಹೋದ್ಯೋಗಿಗಳು ಎಲ್ಲಾ ರೀತಿಯ ಬೆಂಬಲ, ಸಹಕಾರ, ಪ್ರೀತಿ ವ್ಯಕ್ತಪಡಿಸಿದ್ದಾರೆ. ಅವರಿಗೆ ನಾನು ಋಣಿ ಆಗಿರುತ್ತೇನೆ. ಎಲ್ಲರಿಗೂ ಧನ್ಯವಾದ ಹೇಳುತ್ತೇನೆ ಎಂದರು.

ಆಡಳಿತ ಸಂತೃಪ್ತಿ ನೀಡಿದೆ

ನನ್ನ ಅವಧಿಯಲ್ಲಿ ಜನತೆಗೆ ಕೊಟ್ಟ ಭರವಸೆ, ವಚನಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಇದು ನನಗೆ ಮತ್ತು ನಮ್ಮ ಪಕ್ಷಕ್ಕೆ ಸಂತೃಪ್ತಿ ತಂದಿದೆ. ಮೊದಲ ಬಾರಿ ಮುಖ್ಯಮಂತ್ರಿಯಾದಾಗ ಪ್ರಣಾಳಿಕೆಯಲ್ಲಿ ಹೇಳಿರುವ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೇನೆ. ಎರಡನೇ ಬಾರಿಗೆ ಮುಖ್ಯಮಂತ್ರಿಯಾದಾಗ 550ಕ್ಕೂ ಹೆಚ್ಚಿನ ಭರವಸೆಗಳಲ್ಲಿ 300 ಭರವಸೆಗಳನ್ನು ಈಡೇರಿಸಲಾಗಿದೆ. ಐದು ಗ್ಯಾರಂಟಿ ಯೋಜನೆಗಳನ್ನು ಮೊದಲ ವರ್ಷದಲ್ಲೇ ಅನುಷ್ಠಾನಿಸಲಾಗಿದೆ. ಈವರೆಗೆ 1.40 ಲಕ್ಷ ಕೋಟಿ ರೂ.ಗಳನ್ನು ವಿನಿಯೋಗಿಸಲಾಗಿದೆ. ಕರ್ನಾಟಕ ತಲಾದಾಯದಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಎರಡನೇ ಸ್ಥಾನದಲ್ಲಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ರಾಷ್ಟ್ರ ರಾಜಕಾರಣಕ್ಕೆ ಹೋಗುವುದಿಲ್ಲ

ಪುಟ ೧ ➡ **ಅದರಲ್ಲಿ ಆಸಕ್ತಿ ಇಲ್ಲ. ರಾಜ್ಯ ರಾಜಕಾರಣದಲ್ಲೇ ಇರುತ್ತೇನೆ. ಮತದಾರ ದೇವರು ನನ್ನನ್ನು ಐದು ವರ್ಷಗಳಿಗೆ ಆಯ್ಕೆ ಮಾಡಿದ್ದಾರೆ. ಇನ್ನೂ ಎರಡು ವರ್ಷವಿದೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.**

ರಾಜಕಾರಣಕ್ಕೆ ಬಂದದ್ದು ಆಕಸ್ಮಿಕ

ನಾನು ಹಳ್ಳಿಗಾಡಿನಿಂದ ಬಂದವನು. ನಾನು ಮುಂದೊಂದು ದಿನ ಶಾಸಕ, ಮಂತ್ರಿ, ಮುಖ್ಯಮಂತ್ರಿ, ಪ್ರತಿಪಕ್ಷ ನಾಯಕ ಆಗುತ್ತೇನೆಂದು ಕನಸನ್ನೂ ಕಂಡವನಲ್ಲ. ನಾನು ರಾಜಕಾರಣಕ್ಕೆ ಬಂದದ್ದು ಆಕಸ್ಮಿಕ. ನಮ್ಮ ಕುಟುಂಬದವರು ಯಾರೂ ರಾಜಕಾರಣದಲ್ಲಿ ಇರಲಿಲ್ಲ. ನಾನು ರಾಜಕಾರಣಕ್ಕೆ ಬಂದಾಗಿನಿಂದಲೂ ಬುದ್ಧ, ಬಸವಣ್ಣ, ಬಾಬಾ ಸಾಹೇಬ್ ಅಂಬೇಡ್ಕರ್, ಗಾಂಧೀಜಿ ಅವರ ತತ್ತ್ವಾದರ್ಶಗಳಲ್ಲಿ ನಂಬಿಕೆ ಇಟ್ಟವನು. ಸಂವಿಧಾನದಲ್ಲಿ ಅಪಾರವಾದ ಗೌರವ ಇಟ್ಟುಕೊಂಡವನು. ಆರ್ಥಿಕವಾಗಿ, ಸಾಮಾಜಿಕವಾಗಿ ಈ ದೇಶದ ಸಂಪತ್ತು- ಅಧಿಕಾರ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು ಎಂಬುದರಲ್ಲಿ ನಂಬಿಕೆ ಇರಿಸಿದ್ದೇನೆ. ನನ್ನ ಅಧಿಕಾರಾವಧಿಯಲ್ಲಿ ನಾನು ನಂಬಿರುವ ಮೌಲ್ಯ, ಸಿದ್ಧಾಂತಗಳೊಂದಿಗೆ ರಾಜಿಯಾಗಿಲ್ಲ. ನೆಲ, ಜಲ, ಭಾಷೆ ವಿಚಾರದಲ್ಲಿ ರಾಜಿ ಆಗಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.



ದುಡುಕಿನ ಹೇಳಿಕೆ ಬೇಡ: ಬೆಂಬಲಿಗರಿಗೆ ಡಿಕೆಶಿ ಸೂಚನೆ

ಮುಖ್ಯಮಂತ್ರಿ ವಿಚಾರದಲ್ಲಿ ಯಾವುದೇ ರೀತಿಯ ದುಡುಕಿನ ಹೇಳಿಕೆ ಬೇಡ ಎಂದು ಬೆಂಬಲಿಗರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಖಡಕ್ ಸೂಚನೆ ನೀಡಿದ್ದಾರೆ. ಹೈಕಮಾಂಡ್ ನಾಯಕರು ನನ್ನ ಜತೆಗೆ ಏನೂ ಮಾತನಾಡಿಲ್ಲ, ಎಲ್ಲವನ್ನೂ ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಮಾತನಾಡಿದ್ದಾರೆ ಎಂದು ತಮ್ಮನ್ನು ಭೇಟಿಯಾದ ಸಚಿವರು, ಶಾಸಕರಿಗೆಲ್ಲ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ ಎನ್ನಲಾಗಿದೆ. ಈ ಉಪಾಹಾರ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವರುಗಳಾದ ಡಾ.ಜಿ. ಪರಮೇಶ್ವರ್, ಶಿವಾನಂದ ಪಾಟೀಲ್, ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ್, ರಾಮಲಿಂಗಾರೆಡ್ಡಿ, ಬೈರತಿ ಸುರೇಶ್, ಸಂತೋಷ್ ಲಾಡ್, ಡಾ. ಎಂ.ಸಿ. ಸುಧಾಕರ್, ಪ್ರಿಯಾಂಕ ಖರ್ಗೆ, ಎಸ್.ಎಸ್. ಮಲ್ಲಿಕಾರ್ಜುನ್, ಕೆ. ವೆಂಕಟೇಶ್, ಶಿವರಾಜ ತಂಗಡಗಿ, ಚಲುವರಾಯಸ್ವಾಮಿ, ಲಕ್ಷ್ಮೀ ಹೆಬ್ಬಾಳ್ಕರ್, ಶರಣಬಸಪ್ಪ ದರ್ಶನಾಪುರ, ಮಧು ಬಂಗಾರಪ್ಪ, ಸತೀಶ್ ಜಾರಕಿಹೊಳಿ, ಡಾ.ಎಚ್.ಸಿ. ಮಹದೇವಪ್ಪ, ಮಾಂಕಾಳ ವೈದ್ಯ, ಆರ್.ಬಿ. ತಿಮ್ಮಾಪುರ, ಶರಣಪ್ರಕಾಶ್ ಪಾಟೀಲ್, ಕೆ.ಎಚ್. ಮುನಿಯಪ್ಪ, ಎಚ್.ಕೆ. ಪಾಟೀಲ್, ಈಶ್ವರ ಖಂಡ್ರೆ, ಬೋಸರಾಜು, ದಿನೇಶ್ ಗುಂಡೂರಾವ್, ಜಮೀರ್ ಅಹ್ಮದ್ ಖಾನ್ ಭಾಗಿಯಾಗಿ ಮುಖ್ಯಮಂತ್ರಿಗಳ ಜತೆ ಉಪಾಹಾರ ಸವಿದರು. ಉಪಾಹಾರದ ಜತೆ ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲ ಸಚಿವರಿಗೂ ಧನ್ಯವಾದ ಹೇಳಿ, ದೆಹಲಿ ಬೆಳವಣಿಗೆಗಳ ಬಗ್ಗೆಯೂ ಮಾಹಿತಿಗಳನ್ನು ನೀಡಿದರು.

ಒಂದು ಪುಟದ ರಾಜೀನಾಮೆ ಪತ್ರ

ಪುಟ ೧ ➡ ಆದರೆ, ಇಂದೋರ್‌ನಿಂದ ರಾಜ್ಯಪಾಲರು ಬೆಂಗಳೂರಿಗೆ ಮರಳಿದ ಬಳಿಕವಷ್ಟೇ ಈ ರಾಜೀನಾಮೆಯನ್ನು ಅಧಿಕೃತವಾಗಿ ಅಂಗೀಕರಿಸಲಾಗುವುದು ಎಂದು ಲೋಕಭವನದ ಮೂಲಗಳು ಸ್ಪಷ್ಟಪಡಿಸಿವೆ.

ಒಂದೇ ಕಾರಿನಲ್ಲಿ ಉಭಯ ನಾಯಕರು: ಸಿದ್ದರಾಮಯ್ಯ ಅವರು ತಮ್ಮ ಉತ್ತರಾಧಿಕಾರಿ ಎನ್ನಲಾದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಒಂದೇ ಕಾರಿನಲ್ಲಿ ಲೋಕಭವನಕ್ಕೆ ಒಟ್ಟಿಗೇ ಆಗಮಿಸಿದ್ದು ಎಲ್ಲರ ಗಮನ ಸೆಳೆಯಿತು. ಅವರ ಜತೆ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಡಾ. ಜಿ. ಪರಮೇಶ್ವರ, ಶರಣಪ್ರಕಾಶ್ ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್, ಎಂ.ಸಿ. ಸುಧಾಕರ್ ಹಾಗೂ ಹಲವಾರು ಕಾಂಗ್ರೆಸ್ ಶಾಸಕರು ಸಹ ರಾಜಭವನಕ್ಕೆ ದೌಡಾಯಿಸಿದ್ದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರೂ ಈ ಸಂದರ್ಭದಲ್ಲಿ ಇದ್ದರು.



ಇಂದು ಉಪರಾಷ್ಟ್ರಪತಿ ರಾಧಾಕೃಷ್ಣನ್ ಭೇಟಿ

• ಬೆಂಗಳೂರು: ಮೇ 29ರಂದು ಹಮ್ಮಿಕೊಳ್ಳಲಾಗಿರುವ ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ 45 ವರ್ಷ ಸಂಭ್ರಮಾಚರಣೆಯಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಪಾಲ್ಗೊಳ್ಳಲಿದ್ದಾರೆ. ಬಳಿಕ ಅವರು, ದಾವಣಗೆರೆಯಲ್ಲಿರುವ ವಿಶ್ವವಿದ್ಯಾಲಯ ಬಿಡಿಟಿ ಎಂಜಿನಿಯರಿಂಗ್ ಕಾಲೇಜಿನ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಮೇ 30 ರಂದು ಪಣಜಿಯಲ್ಲಿ ನಡೆಯಲಿರುವ ಗೋವಾ ರಾಜ್ಯ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ಅವರು ಗೋವಾದ ಸಿಎಸ್‌ಐಆರ್ ರಾಷ್ಟ್ರೀಯ ಸಮುದ್ರಶಾಸ್ತ್ರ ಸಂಸ್ಥೆಗೆ ಭೇಟಿ ನೀಡಲಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಾಲಯಕ್ಕೆ ಮೇ 31ರಂದು ಭೇಟಿ ನೀಡಲಿದ್ದಾರೆ. ಬಳಿಕ, ಬೆಳ್ತಂಗಡಿಯಲ್ಲಿ ಸಿರಿ ಕೈಗಾರಿಕಾ ಉದ್ಯಾನವನವನ್ನು ಉದ್ಘಾಟಿಸಲಿದ್ದಾರೆ. ಅದೇ ದಿನ ಕೊಟ್ಟಾಯಂನಲ್ಲಿ ದೀಪಿಕಾ ಮಲಯಾಳಂ ದಿನಪತ್ರಿಕೆಯ 140ನೇ ಸಂಸ್ಥಾಪನಾ ದಿನ ಕಾರ್ಯಕ್ರಮ ಉದ್ಘಾಟನೆಗೆ ಕೇರಳಕ್ಕೆ ತೆರಳಲಿದ್ದಾರೆ. ಸಂಸತ್ ಸದಸ್ಯ ಸಿ. ಸದಾನಂದನ್ ಮಾಸ್ಟರ್ ಅವರು ಆಯೋಜಿಸಿರುವ ಖಾಸಗಿ ಸಮಾರಂಭದಲ್ಲಿ ಭಾಗಿಯಾಗಲು ಅವರು ಕಣ್ಣೂರಿಗೆ ಸಹ ಭೇಟಿ ನೀಡಲಿದ್ದಾರೆ.

ಚಂದ್ರನ ಮೇಲ್ಮೈನಲ್ಲಿ ಮಂಜುಗಡ್ಡೆ

ಪುಟ ೧ ➡ ವಿಜ್ಞಾನಿಗಳು ಚಂದ್ರಯಾನ-2 ನೌಕೆಯ ಡ್ಯುಯಲ್ ಫ್ರೀಕ್ವೆನ್ಸಿ ಸಿಂಥೆಟಿಕ್ ಅಪರ್ಚರ್ ರೇಡಾರ್ (ಡಿಎಫ್‌ಎಸ್‌ಎಆರ್) ಒದಗಿಸಿದ ಮಾಹಿತಿಯನ್ನು ವಿಶ್ಲೇಷಿಸಿದ್ದಾರೆ. ಇದು ಚಂದ್ರನ ಮೇಲ್ಮೈ ಆಳವನ್ನು ಶೋಧಿಸುವ ಮೈಕ್ರೋವೇವ್ ಇಮೇಜಿಂಗ್ ಸಾಧನ. ಫಾಸ್ಟಿನಿ ಎಂಬ ದೊಡ್ಡ ಕುಳಿಯೊಳಗಿನ 1.1 ಕಿಲೋಮೀಟರ್ ಅಗಲದ ಸಣ್ಣ ಕುಳಿಯಲ್ಲಿ ಮಂಜುಗಡ್ಡೆ ಇರುವುದಕ್ಕೆ ಬಲವಾದ ಪುರಾವೆಗಳು ಸಿಕ್ಕಿವೆ ಎನ್ನಲಾಗಿದೆ.

ತಾಂತ್ರಿಕ ಮಿಷನ್ ದತ್ತಾಂಶ ಏನು?: ಚಂದ್ರನನ್ನು ಎಲ್-ಬ್ಯಾಂಡ್ ಮತ್ತು ಎಸ್-ಬ್ಯಾಂಡ್ ತರಂಗಾಂತರಗಳಲ್ಲಿ ಅಧ್ಯಯನ ಮಾಡಿದ ಮೊದಲ ಸಂಪೂರ್ಣ ಪೋಲಾರಿಮೆಟ್ರಿಕ್ ಸಾಧನ ಇದಾಗಿದೆ. ಈ ನೌಕೆ, 2019 ರಲ್ಲಿ ಚಂದ್ರನ ಕಕ್ಷೆಯನ್ನು ಪ್ರವೇಶಿಸಿದಾಗಿನಿಂದ ಧ್ರುವೀಯ ಪ್ರದೇಶದ ಭೂಪ್ರದೇಶದ ನಕ್ಷೆ ರಚಿಸಲು ಸಾವಿರಾರು ದತ್ತಾಂಶಗಳನ್ನು ಸಂಗ್ರಹಿಸಿದೆ. ಈ ಹಿಂದಿನ ಅಧ್ಯಯನಗಳೂ ಸಹ ಚಂದ್ರನ ಮೇಲ್ಮೈ ಭಾಗಗಳಲ್ಲಿ ನೀರಿನ ಅಣುಗಳು ಮತ್ತು ಹೈಡ್ರಾಕ್ಸಿಲ್ ಇರುವಿಕೆಯನ್ನು ಪತ್ತೆಹಚ್ಚಿದ್ದವು.ಪ್ರಸ್ತುತ ಲಭ್ಯವಾಗಿರುವ ದತ್ತಾಂಶಗಳು, ಚಂದ್ರನ ಮೇಲೆ ಮಂಜುಗಡ್ಡೆ ಇರುವ ಪ್ರದೇಶಗಳನ್ನು ಗುರುತಿಸಲು ಉನ್ನತ ರೆಸಲ್ಯೂಶನ್ ಧ್ರುವೀಯ ನಕ್ಷೆಗಳನ್ನು ಒದಗಿಸುತ್ತವೆ.

ಚಂದ್ರನ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಯೋಜಿಸುವ ಭವಿಷ್ಯದ ಬಾಹ್ಯಾಕಾಶ ಯೋಜನೆಗಳಿಗೆ ಈ ಸಂಶೋಧನೆಗಳು ಸಹಕಾರಿಯಾಗಲಿವೆ ಎನ್ನಲಾಗಿದೆ. ಚಂದ್ರನ ಮೇಲ್ಮೈ ಅಡಿಯಲ್ಲಿರುವ ಮಂಜುಗಡ್ಡೆಯನ್ನು ಕುಡಿಯುವ ನೀರು, ಆಮ್ಲಜನಕ ಮತ್ತು ರಾಕೆಟ್ ಇಂಧನವಾಗಿ ಪರಿವರ್ತಿಸಬಹುದು. ಅಲ್ಲದೆ, ದೀರ್ಘಕಾಲದ ಮಾನವ ವಾಸಕ್ಕೆ ಇದು ಅತ್ಯಂತ ನಿರ್ಣಾಯಕ ಎಂದು ಪರಿಗಣಿಸಲಾಗಿದೆ.

ಜಲವಿವಾದಕ್ಕೆ ಸಹಕಾರವೇ ಪರಿಹಾರ

ಪುಟ ೧ ➡ ಗುರುವಾರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ, 'ಪ್ರಗತಿ ಸಭೆಯಲ್ಲಿ ರೈಲು, ವಿದ್ಯುತ್, ರಸ್ತೆ ಸಂಪರ್ಕ ಸೇರಿದಂತೆ ಹಲವು ಪ್ರಮುಖ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಲಾಗಿದೆ. ಬಂದರು, ಸ್ವಚ್ಛ ಭಾರತ್ ಮಿಷನ್ 2.0 ಸೇರಿದಂತೆ ಸಾಮಾಜಿಕ ಕ್ಷೇತ್ರದ ಯೋಜನೆಗಳ ಕುರಿತೂ ಚರ್ಚೆ ನಡೆದಿದೆ' ಎಂದು ತಿಳಿಸಿದ್ದಾರೆ. ಕೆನ್-ಬೆಟ್ವಾ ನದಿ ಜೋಡಣೆ ಯೋಜನೆ ಪರಿಶೀಲನೆ ವೇಳೆ ರಾಜ್ಯಗಳು ಪರಸ್ಪರ ಸಹಕಾರದಿಂದ ಜಲ ವಿವಾದಗಳನ್ನು ಬಗೆಹರಿಸಿಕೊಳ್ಳಬೇಕು ಎಂದು ಪ್ರಧಾನಿ ಸೂಚಿಸಿದರು. ನದಿ ಜೋಡಣೆ, ಜಲ ಸಂರಕ್ಷಣೆ, ಭೂಗರ್ಭಜಲ ಮರುಪೂರೈಕೆ ಮತ್ತು ಪರಿಣಾಮಕಾರಿ ನೀರಾವರಿ ವ್ಯವಸ್ಥೆಗಳನ್ನು ಸಮಗ್ರವಾಗಿ ಜಾರಿಗೆ ತಂದು ದೀರ್ಘಕಾಲಿಕ ಜಲ ಭದ್ರತೆ ಸಾಧಿಸುವಂತೆ ಸಲಹೆ ನೀಡಿದರು.

ಮೇಲ್ಛಾವಣಿ ಸೌರಶಕ್ತಿ ವೇಗಗೊಳಿಸಲು ಸೂಚನೆ: ವಿದ್ಯುತ್ ಕ್ಷೇತ್ರದ ಯೋಜನೆಗಳ ಪರಿಶೀಲನೆ ವೇಳೆ ನಗರ ಪ್ರದೇಶಗಳು, ವಸತಿ ಸಮುಚ್ಚಯಗಳು ಹಾಗೂ ಸಾರ್ವಜನಿಕ ಸಂಸ್ಥೆಗಳಲ್ಲಿ ಮೇಲ್ಛಾವಣಿ ಸೌರಶಕ್ತಿ ಅಳವಡಿಕೆಯನ್ನು ಮಿಷನ್ ಮಾದರಿಯಲ್ಲಿ ಜಾರಿಗೊಳಿಸುವಂತೆ ಪ್ರಧಾನಿ ಸೂಚಿಸಿದರು. ಇದರಿಂದ ವಿದ್ಯುತ್ ವೆಚ್ಚ ಕಡಿಮೆಯಾಗುವ ಜೊತೆಗೆ ಶುದ್ಧ ಇಂಧನ ಬಳಕೆ ಹೆಚ್ಚಲಿದೆ ಎಂದರು.

ಕಾಲುವೆಗಳ ಮೇಲೂ ಸೌರ ಫಲಕ: ಕಾಲುವೆಗಳ ಮೇಲ್ಭಾಗ ಹಾಗೂ ಬದಿಗಳಲ್ಲಿ ಸೌರ ಫಲಕ ಅಳವಡಿಸುವ ನವೀನ ವಿಧಾನಗಳನ್ನು ಅನ್ವೇಷಿಸಬೇಕು ಎಂದು ಪ್ರಧಾನಿ ಸಲಹೆ ನೀಡಿದರು.

ಗಿರಿಬಾಲಾ ಸಿಬಿಐ ವಶಕ್ಕೆ

ಪುಟ ೧ ➡ **ಪ್ರಕರಣದ ವಿವರ:** ಈ ಪ್ರಕರಣ ಭಾರತೀಯ ನ್ಯಾಯ ಸಂಹಿತೆ ಮತ್ತು ವರದಕ್ಷಿಣೆ ನಿಷೇಧ ಕಾಯ್ದೆಯಲ್ಲಿ ಕ್ರೌರ್ಯ ಹಾಗೂ ವರದಕ್ಷಿಣೆ ಕಿರುಕುಳದ ಆರೋಪಗಳನ್ನು ಒಳಗೊಂಡಿದೆ. ಸಿಂಗ್ ಮತ್ತು ಅವರ ಮಗ ಸೇರಿ, ಶರ್ಮಾಗೆ ಕಿರುಕುಳ ನೀಡುತ್ತಿದ್ದರು ಮತ್ತು ಗರ್ಭಪಾತ ಮಾಡಿಸಿಕೊಳ್ಳುವಂತೆ ಒತ್ತಡ ಹೇರುತ್ತಿದ್ದರು ಎಂದು ಮೇ 13ರಂದು ದಾಖಲಾದ ಕುಟುಂಬದ ಹೇಳಿಕೆಗಳು ತಿಳಿಸಿವೆ ಎಂದು ಹೈಕೋರ್ಟ್ ಹೇಳಿದೆ. ಇದರೊಂದಿಗೆ ವಾಟ್ಸ್ಯಾಪ್ ಚಾಟ್‌ಗಳು ಮತ್ತು ಮರಣೋತ್ತರ ಪರೀಕ್ಷೆಯ ವರದಿಯಲ್ಲಿನ ಗಾಯದ ಗುರುತುಗಳನ್ನು ನ್ಯಾಯಾಲಯ ಉಲ್ಲೇಖಿಸಿದೆ.

ತನಿಖೆಯ ಪ್ರಗತಿ: ನೋಟಿಸ್ ನೀಡಿದ್ದರೂ ಸಿಂಗ್ ತನಿಖೆಗೆ ಸಂಪೂರ್ಣವಾಗಿ ಸಹಕರಿಸಿಲ್ಲ ಎಂದು ಪ್ರಾಸಿಕ್ಯೂಷನ್ ಮತ್ತು ತನಿಖಾ ಸಂಸ್ಥೆಗಳು ನ್ಯಾಯಾಲಯಕ್ಕೆ ತಿಳಿಸಿವೆ. ಆರೋಪಗಳ ಗಂಭೀರತೆಯ ಹಿನ್ನೆಲೆಯಲ್ಲಿ ಕಸ್ಟಡಿ ವಿಚಾರಣೆ ಅಗತ್ಯ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ. ಪ್ರಸ್ತುತ ಸಿಂಗ್ ಮತ್ತು ಅವರ ಮಗನನ್ನು ಭೋಪಾಲ್‌ನಲ್ಲಿರುವ ಸಿಬಿಐ ಕಚೇರಿಯಲ್ಲಿ ವಿಚಾರಣೆಗೆ ಒಳಪಡಿಸಲಾಗಿದೆ.

₹25,530 ಕೋಟಿ ಅನುದಾನ ವೆಚ್ಚಕ್ಕೆ ಕೇಂದ್ರ ಅನುಮೋದನೆ

• ಹೊಸದಿಲ್ಲಿ: ಕೇಂದ್ರ ಸರ್ಕಾರ ದೇಶದ ಪ್ರತಿ ನಾಗರಿಕರಿಗೂ ಆಹಾರ ಭದ್ರತೆ ಮತ್ತು ಪಡಿತರ ವಿತರಣೆ ವ್ಯವಸ್ಥೆಯಲ್ಲಿ ಅತ್ಯಂತ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಮತ್ತೊಂದು ಹೊಸ ಹೆಜ್ಜೆ ಇರಿಸಿದ್ದು, ಇದೀಗ "ಸಾರ್ಥಕ್ ಪಿಡಿಎಸ್" ಯೋಜನೆಗೆ ಅನುಮೋದನೆ ನೀಡಿದೆ.

ಪ್ರಧಾನಿ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಈ ಹೊಸ ಯೋಜನೆ ಜಾರಿಗೆ ಸಮ್ಮತಿ ಸೂಚಿಸಿತೆಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ ಜೋಶಿ ಮಾಹಿತಿ ಹಂಚಿಕೊಂಡಿದ್ದಾರೆ. ಕೇಂದ್ರ ಸರ್ಕಾರ, ದೇಶದ ಜನರಿಗೆ ಸಾಮಾಜಿಕ ಮತ್ತು ಕಾನೂನು ಬದ್ಧತೆ ಜತೆಗೆ ಅಗತ್ಯ, ಗುಣಮಟ್ಟದ ಆಹಾರ ಧಾನ್ಯಗಳ ಲಭ್ಯತೆಯನ್ನೂ ಖಚಿತಪಡಿಸಿದೆ. ಅದರಂತೆ NFSA ಅಡಿಯಲ್ಲಿ 81.35 ಕೋಟಿ ಜನರಿಗೆ ಆಹಾರ ಧಾನ್ಯ ಪೂರೈಸುವ ನಿಟ್ಟಿನಲ್ಲಿ "ಸಾರ್ಥಕ್ ಪಿಡಿಎಸ್" ಯೋಜನೆ ಪರಿಣಾಮಕಾರಿಯಾಗಲಿದೆ ಎಂದಿದ್ದಾರೆ.



25,530 ಕೋಟಿ ರೂ. ಅನುದಾನ: 16ನೇ ಹಣಕಾಸು ಆಯೋಗದ ಅವಧಿಯಲ್ಲಿ "ಸಾರ್ಥಕ್ ಪಿಡಿಎಸ್"ಗಾಗಿ ಕೇಂದ್ರ ಸರ್ಕಾರ ತನ್ನ ಪಾಲಿನ ರೂ. 25,530 ಕೋಟಿ ಅನುದಾನ ಒದಗಿಸಿ ಅನುಮೋದನೆ ನೀಡಿದೆ. ದೇಶದ ಪಡಿತರ ವ್ಯವಸ್ಥೆಯಲ್ಲಿ ಇದೊಂದು ಸುಧಾರಿತ ತಂತ್ರಜ್ಞಾನದ ಯೋಜನೆಯಾಗಿ 31.03.2031ರವರೆಗೆ 5 ವರ್ಷಗಳ ಕಾಲ ಮುಂದುವರಿಯಲಿದೆ ಎಂದು ತಿಳಿಸಿದ್ದಾರೆ. ಎಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಪಡಿತರ ಸಾಗಣೆ, ಆಹಾರ ಧಾನ್ಯಗಳ ನಿರ್ವಹಣೆ, DPT ವಿತರಕರ ಮಾರ್ಜಿನ್‌ಗಾಗಿ ಮಾಡುವ ವೆಚ್ಚವನ್ನು ಪೂರೈಸಲು 'ಸಾರ್ಥಕ್ ಪಿಡಿಎಸ್' ಒಂದು ಸಾರ್ಥಕ್ಯದ ಯೋಜನೆಯಾಗಿದ್ದು, ಇದರ ಮೂಲಕ ಕೇಂದ್ರ ನೆರವಿನ ಮಾನದಂಡಗಳನ್ನು ಪರಿಷ್ಕರಿಸಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

ನೀರಾನೆ ಮರಿಗೆ ಸಮೀಕ್ಷಾ ರೆಡ್ಡಿ ಹೆಸರಿಡಲು ಸೂಚನೆ

• **ಬೆಂಗಳೂರು:** ಬನ್ನೇರುಘಟ್ಟ ಮೃಗಾಲಯದಲ್ಲಿ ಬುಧವಾರ ರಾತ್ರಿ ಜನಿಸಿರುವ ನೀರಾನೆ ಮರಿಯ ಆರೋಗ್ಯದ ಬಗ್ಗೆ ತೀವ್ರ ಗಮನ ಹರಿಸಿ, ಈ ನವಜಾತ ನೀರಾನೆ ಮರಿ ಹೆಣ್ಣಾಗಿದ್ದಲ್ಲಿ ಶ್ಯಾವಕೊಪ್ಪ ಮೃಗಾಲಯದಲ್ಲಿ ಕರ್ತವ್ಯನಿರ್ವಹಿಸುವಾಗ ಮೃತಪಟ್ಟ ಡಾ. ಸಮೀಕ್ಷಾ ರೆಡ್ಡಿ ಗೌರವಾರ್ಥ ಸಮೀಕ್ಷಾ ಎಂದು ಹೆಸರಿಡಲು ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಸೂಚಿಸಿದ್ದಾರೆ.



ಬನ್ನೇರುಘಟ್ಟದಲ್ಲಿ 17 ವರ್ಷದ ದಶ್ಯ ನೀರಾನೆಯು ಮರಿಗೆ ಜನ್ಮ ನೀಡಿರುವ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಅವರು, ಕಳೆದ ಬಾರಿ ಇದೇ ನೀರಾನೆ ಜನ್ಮ ಕೊಟ್ಟಿದ್ದ ಮರಿ ಸೋಂಕಿನಿಂದ ಮೃತಪಟ್ಟಿತ್ತು. ಈ ನಿಟ್ಟಿನಲ್ಲಿ ಮರಿಯ ಆರೋಗ್ಯದ ಬಗ್ಗೆ ಸತತ ನಿಗಾ ಇಟ್ಟು, ಯಾವುದೇ ಸೋಂಕು ತಗುಲದಂತೆ ಕಟ್ಟುನಿಟ್ಟಿನ ಪ್ರಮಾಣಿತ ಕಾರ್ಯಾಚರಣೆ ಮಾನದಂಡಗಳನ್ನು ಅನುಸರಿಸಲು ಸಚಿವರು ನಿರ್ದೇಶಿಸಿದ್ದಾರೆ.

ಈ ನವಜಾತ ಮರಿಯ ಆರೋಗ್ಯದ ಖಾತ್ರಿ ಪಡಿಸಿಕೊಂಡು ಜೂನ್ 4ರಿಂದ ದಕ್ಷಿಣ ಆಫ್ರಿಕಾದಿಂದ ತರಲಾಗಿರುವ ಚೀತಾಗಳನ್ನು ಸಾರ್ವಜನಿಕ ವೀಕ್ಷಣಾ ಆವರಣಕ್ಕೆ ಬಿಡುವ ಸಂದರ್ಭದಲ್ಲಿ ಈ ಮರಿಗೆ ಸಮೀಕ್ಷಾ ಎಂದು ನಾಮಕರಣ ಮಾಡಲೂ ಸೂಚಿಸಿದ್ದಾರೆ.

ಶಿವಮೊಗ್ಗ ಬಳಿಯ ಶ್ಯಾವಕೊಪ್ಪ ಸಿಂಹಧಾಮದಲ್ಲಿ ಗರ್ಭಿಣಿಯಾಗಿದ್ದ ಹಂಸಿನಿ ನೀರಾನೆ ಚಿಕಿತ್ಸೆಗೆ ತೆರಳಿದ್ದ ಯುವ ವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಅವರ ಮೇಲೆ ನೀರಾನೆ ದಾಳಿ ಮಾಡಿತ್ತು. ಚಿಕಿತ್ಸೆ ಫಲ ಕಾಣದೆ ಅವರು ಮೃತಪಟ್ಟಿದ್ದರು. ಆ ಸಂದರ್ಭದಲ್ಲಿ ಮೃತ ವೈದ್ಯೆಯ ಕುಟುಂಬದವರಿಗೆ ಸಾಂತ್ವನ ಹೇಳಲು ತೆರಳಿದ್ದ ಈಶ್ವರ ಖಂಡ್ರೆ ಅವರು ಒಂದು ನವಜಾತ ವನ್ಯಜೀವಿಗೆ ಸಮೀಕ್ಷಾ ಹೆಸರಿಡುವ ಪ್ರಸ್ತಾಪ ಮಾಡಿದ್ದರು. ಅದರಂತೆ ಇಂದು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಲಿಖಿತ ಆದೇಶ ನೀಡಿದ್ದಾರೆ.



ಕರ್ನಾಟಕದ ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಸಿಎಂ ಸಿದ್ದರಾಮಯ್ಯ ಅವರು ಗುರುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ರಾಜೀನಾಮೆ ಬಳಿಕ ಸಾಮಾಜಿಕ ತಾಣ ಎಕ್ಸ್‌ನಲ್ಲಿ ರಾಜ್ಯದ ಜನತೆಗೆ ಧನ್ಯವಾದ ತಿಳಿಸುವ ಪೋಸ್ಟ್ ಹಂಚಿಕೊಂಡಿದ್ದು, ನಿಮ್ಮ ಪ್ರೀತಿಗೆ ಧನ್ಯವಾದ ಎಂದು ತಿಳಿಸಿದ್ದಾರೆ.

ಅಧಿಕಾರಿಗಳಿಂದ ಅರಣ್ಯ ಸಂಪತ್ತು ಉಳಿವು: ನೇಗಿ

• **ಬೆಂಗಳೂರು:** ಬೇರೆ ಬೇರೆ ಇಲಾಖೆಗಳ ಭೂಮಿ ನಶಿಸುತ್ತಿದ್ದು, ಹೀಗಿರುವಾಗ ಅರಣ್ಯ ಸಂಪತ್ತು ಉಳಿಸಿದ ಶ್ರೇಯಸ್ಸು ಹಿಂದಿನ ಅಧಿಕಾರಿಗಳಿಗೆ ಸಲ್ಲುತ್ತದೆ ಎಂದು ಅರಣ್ಯ ಇಲಾಖೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮೀನಾಕ್ಷಿ ನೇಗಿ ಹೇಳಿದ್ದಾರೆ.



ಭಾರತೀಯ ಅರಣ್ಯ ಸೇವೆ ಪರೀಕ್ಷೆ 2025–26ರಲ್ಲಿ ಯಶಸ್ಸು ಸಾಧಿಸಿದ ಅಭ್ಯರ್ಥಿಗಳಿಗೆ ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಿಂದ ಅರಣ್ಯ ಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಭಾರತೀಯ ಅರಣ್ಯ ಸೇವೆಗೆ ಸೇರ್ಪಡೆಯಾದ ಹತ್ತು ಸಾಧಕರನ್ನು ಅಭಿನಂದಿಸಿ ಮಾತನಾಡಿದ ಅವರು, ಇಂತಹ ಭವ್ಯವಾದ ನೈಸರ್ಗಿಕ ಅರಣ್ಯ ಸಂಪನ್ಮೂಲ ಉಳಿಸಲು ಅವಿರತವಾಗಿ ಹಿಂದಿನವರು ಶ್ರಮಿಸಿದ್ದಾರೆ. ಪರಿಶ್ರಮ, ಶಿಸ್ತು ಹಾಗೂ ದೃಢ ಸಂಕಲ್ಪದಿಂದ ನಾಗರಿಕ ಸೇವೆಗಳಲ್ಲಿ ಯಶಸ್ಸು ಸಾಧಿಸಬಹುದು ಎಂದು ಕಿವಿ ಮಾತು ಹೇಳಿದರು.

ಸರ್ಕಾರಿ ಹುದ್ದೆ ಎಂದರೆ ಉತ್ತಮ ವೇತನ, ಭತ್ಯೆ ದೊರೆಯುವ ಜೊತೆಗೆ ಆರಾಮವಾಗಿರಬಹುದು ಎನ್ನುವ ಧೋರಣೆ ಹೆಚ್ಚಾಗಿದೆ. ಆದರೆ ಸರ್ಕಾರಿ ಹುದ್ದೆಯಲ್ಲಿ ಕಠಿಣ ಪರಿಶ್ರಮ ಹೊಂದಿರಬೇಕು. ಕರ್ನಾಟಕಕ್ಕೆ ಮೊದಲ ಅರಣ್ಯ ಅಧಿಕಾರಿಯಾಗಿ ನಿಯೋಜನೆಗೊಂಡು ತಾವು ಸವಾಲಿನಿಂದ ಕೆಲಸ ಮಾಡಿರುವುದು ಸಮಾಧಾನ ತಂದಿದೆ.

ಜನರ ನಿರೀಕ್ಷೆಗಳು, ಬೇಡಿಕೆಗಳಿಗೆ ಅನುಗುಣವಾಗಿ ಕೆಲಸ ಮಾಡಬೇಕು. ಅರಣ್ಯ ಪುರಾತನವಾದದ್ದು. ಉಪನಿಷತ್ತಿನಲ್ಲಿ ಅತಿ ಹೆಚ್ಚು ಜ್ಞಾನವಿದ್ದು, ಉಪನಿಷತ್ತಿಗೆ ಮತ್ತೊಂದು ಹೆಸರು ಅರಣ್ಯಕ. ಅರಣ್ಯ ಸಕಲ ಜೀವ ರಾಶಿಗಳಷ್ಟೇ ಅಲ್ಲ ಜ್ಞಾನದ ಬಂಢಾರವಾಗಿದೆ. ಅರಣ್ಯ ಸಂರಕ್ಷಣೆಗೆ ಸಂಪ್ರದಾಯಿಕ ಪದ್ಧತಿ ಮತ್ತು ಅತ್ಯಾಧುನಿಕ ತಂತ್ರಜ್ಞಾನ ಎರಡನ್ನೂ ಬಳಸಬೇಕು ಎಂದು ಕಿವಿ ಮಾತು ಹೇಳಿದರು.

ಇಂಡಿಯಾಫಾರ್ ಐಎಎಸ್ ಅಕಾಡೆಮಿಯ ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಸ್.ಪೇಜಾರ್ ಮಾತನಾಡಿ, ಈ ಬಾರಿ ದಾಖಲೆ ಪ್ರಮಾಣದಲ್ಲಿ ಕರ್ನಾಟಕದಿಂದ ಅರಣ್ಯ ಸೇವೆಗೆ ಸೇರ್ಪಡೆಯಾಗಿದ್ದು, ಇದು ಅತ್ಯುತ್ತಮ ಬೆಳವಣಿಗೆಯಾಗಿದೆ. ಅರಣ್ಯ ಸೇವೆ ಮಾಡಿದರೆ ಮಾನವೀಯ ಸೇವೆ ಮಾಡಿದಂತೆ. ಈ ಉದ್ದೇಶದಿಂದ ನಮ್ಮ ಅಕಾಡೆಮಿಯಲ್ಲಿ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹ ನೀಡುತ್ತಿದ್ದೇವೆ. ಲೋಕಸೇವಾ ಆಯೋಗದಿಂದ ಪ್ರತಿ ವರ್ಷ ರಾಜ್ಯದ ನೂರು ಮಂದಿ ಆಯ್ಕೆಯಾಗಬೇಕು ಎಂಬುದು ನಮ್ಮ ಮಹತ್ವಾಕಾಂಕ್ಷೆ ಗುರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಪಿಸಿಸಿಎಫ್ ಶ್ರೀಧರ್ ಮೂರ್ತಿ, ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯ ಉಪಾಧ್ಯಕ್ಷ ಡಾ.ಜಿ.ಎನ್. ಶ್ರೀಕಂಠಯ್ಯ, ನಿವೃತ್ತ ಐಎಫ್‌ಎಸ್ ಅಧಿಕಾರಿ ಶ್ರೀನಿವಾಸ್ ಉಪಸ್ಥಿತರಿದ್ದರು.

ಕಿರುಸುದ್ದಿ

ಹಿರಿಯರ ಮಾರ್ಗದರ್ಶನ ಅಗತ್ಯ: ಹೆಬ್ಬಾಳ್ಕರ್

• **ಬೆಂಗಳೂರು:** ಸಿದ್ದರಾಮಯ್ಯ ಅವರು ನಮ್ಮ ಪಕ್ಷದ ಪ್ರಶ್ನಾತೀತ ನಾಯಕ. ಅವರ ಮುತ್ಸದ್ದಿತನ, ನಾಯಕತ್ವ, ಮಾರ್ಗದರ್ಶನ ಮುಂದಿಟ್ಟುಕೊಂಡೇ ನಮ್ಮ ಸರ್ಕಾರ ಮುನ್ನಡೆಯುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರತಿಕ್ರಿಯೆ ನೀಡಿದ್ದಾರೆ. ಸಿಎಂ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ವಿಚಾರದಲ್ಲಿ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಪಕ್ಷದ ಹೈಕಮಾಂಡ್ ಹೇಳಿದಂತೆ ಸಿದ್ದರಾಮಯ್ಯ ನಡೆದುಕೊಂಡಿದ್ದಾರೆ. ಅವರು ನಮ್ಮ ನಾಯಕರು, ಪ್ರಶ್ನಾತೀತ ನಾಯಕರು. ಅವರ ನಾಯಕತ್ವ, ಮಾರ್ಗದರ್ಶನ ಮುಂದೆಯೂ ಇರುತ್ತದೆ ಎಂದು ಹೇಳಿದರು. ಮುಂದಿನ ಸಿಎಂ ಯಾರು ಎಂಬ ಪ್ರಶ್ನೆಗೆ, ಪಕ್ಷ ಇದೆ, ಹೈಕಮಾಂಡ್ ನಾಯಕರು ಇದ್ದಾರೆ. ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಂದಿನ ನಾಯಕರ ಆಯ್ಕೆ ನಡೆಯುತ್ತದೆ. ಪಕ್ಷದಲ್ಲಿ ಅದಕ್ಕೊಂದು ವ್ಯವಸ್ಥೆ ಇದೆ, ಅದರಂತೆ ನಡೆಯುತ್ತದೆ ಎಂದು ಹೇಳಿದರು.

ಈಗ ಸ್ಪೀಕರ್, ಮುಂದೆ ಏನಾಗುತ್ತದೆ ಗೊತ್ತಿಲ್ಲ: ಖಾದರ್

• **ಮಂಗಳೂರು:** 'ಈಗ ನಾನು ಸ್ಪೀಕರ್ ಆಗಿ ಇದ್ದೇನೆ. ಮುಂದೆ ಏನಾಗುತ್ತದೆ ಎಂಬ ಮಾಹಿತಿ ನನಗೂ ಇಲ್ಲ. ಸಮಯ ಅದನ್ನು ನಿರ್ಧರಿಸುತ್ತದೆ ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದ್ದಾರೆ. ಗುರುವಾರ ಮಂಗಳೂರಿನಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈಗ ನಾನು ಯಾವುದೇ ರಾಜಕೀಯ ಮಾತನಾಡಲ್ಲ. ಮಾಧ್ಯಮಗಳಲ್ಲಿ ಈ ಬಗ್ಗೆ ಚರ್ಚೆ ಆಗುತ್ತಿದೆ. ಸಮಯ ಬಂದಾಗ ಗೊತ್ತಾಗುತ್ತದೆ. ಸರ್ಕಾರ ಯಾವಾಗ ಅಧಿವೇಶನ ನಡೆಸಲು ತೀರ್ಮಾನಿಸುತ್ತದೆ, ಆಗ ಸುಸೂತ್ರವಾಗಿ ಸದನ ನಡೆಸುತ್ತೇನೆ. ಯಾರು ಯಾರಿಗೆ ಮಂತ್ರಿ ಸ್ಥಾನ ನೀಡಬೇಕೆಂದು ಆಡಳಿತ ಪಕ್ಷದ ಪ್ರಮುಖರು ತೀರ್ಮಾನ ಮಾಡುತ್ತಾರೆ ಎಂದರು.

ನಾನು ಡಿಸಿಎಂ ಆಗಬೇಕೆಂಬ ಪೋಸ್ಟ್ ಅನ್ನು ಯಾರು ಸಹ ಸಾಮಾಜಿಕ ಜಾಲತಾಣದಲ್ಲಿ ಹಾಕಬೇಡಿ. ಈ ಎಲ್ಲಾ ವಿಚಾರಗಳು ಪಕ್ಷಕ್ಕೆ, ಮುಖಂಡರಿಗೆ ಬಿಟ್ಟಿದ್ದು. ಈ ಎಲ್ಲಾ ವಿಚಾರಗಳನ್ನು ನಾನು ಹೇಳಿದರೆ ಗುಟ್ಟು ಉಳಿಯುತ್ತಾ? ಏನು ಬರುತ್ತದೆ ಅಂತಾ ನೋಡೋಣ. ಇವತ್ತು ಸಂತೋಷದಿಂದ ಹಬ್ಬವನ್ನು ಆಚರಿಸೋಣ. ನನಗೆ ನಿಮ್ಮ ಮೂಲಕವೇ ಸಿಹಿ ಸುದ್ದಿ ಬರುವುದು. ಬೆಂಗಳೂರಿಗೆ ಹೋಗುವ ಬಗ್ಗೆ ತೀರ್ಮಾನಿಸಿಲ್ಲ. ಇವತ್ತು ಬಕ್ರಿದ್ ಹಬ್ಬ ಇರುವುದರಿಂದ ಆಚರಿಸುವುದು ಇವತ್ತಿನ ನನ್ನ ಕೆಲಸ ಎಂದರು.

ನಿವೃತ್ತ ಅರಣ್ಯಾಧಿಕಾರಿ ಮನೆಯಲ್ಲಿ ದಂತ ವಶ

• **ಮೈಸೂರು:** ಶಂಕಿತ ದಂತ ಕಳ್ಳಸಾಗಣೆ ಜಾಲದ ಮೇಲೆ ದಾಳಿ ನಡೆಸಿದ ಮಹಾರಾಷ್ಟ್ರ ರಾಜ್ಯದ ನಾಗ್ಪುರ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು(ಡಿಆರ್‌ಐ) 2 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಮೂರು ಆನೆ ದಂತವನ್ನು ವಶಪಡಿಸಿಕೊಂಡು, ನಾಲ್ವರನ್ನು ಬಂಧಿಸಿದ್ದಾರೆ. ಮೈಸೂರಿನ ರಾಮಕೃಷ್ಣನಗರ 'ಐ' ಬ್ಲಾಕ್ ನಿವಾಸಿಗಳಾದ ಹಾಗೂ ಆಂಧ್ರಪ್ರದೇಶ ಸರ್ಕಾರದ ನಿವೃತ್ತ ಅರಣ್ಯಾಧಿಕಾರಿ ಜಮುನಾ ರಾಣಿ ಕಾಕಬುಲ್, ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಸೈಯದ್ ಫಯಾಜ್, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ಮುನೀರ್ ಪಾಷಾ, ಮತ್ತು ಅಜ್ಗರ್ ಖಾನ್ ಎಂಬವರನ್ನು ಬಂಧಿಸಲಾಗಿದೆ. ದಾಳಿಯ ಸಮಯದಲ್ಲಿ ಜಮುನಾ ರಾಣಿ ಕಾಕಬುಲ್ ಮತ್ತು ಅವರ ಪತಿ ವೆಂಕಟೇಶ್ ಕಾಕಬುಲ್ ಇಬ್ಬರು ಮನೆಯಲ್ಲಿದ್ದರು. ಪ್ರಾಥಮಿಕ ತನಿಖೆಯಲ್ಲಿ ಜಮುನಾ ರಾಣಿ ಕಾಕಬುಲ್ ಅಕ್ರಮವಾಗಿ ದಂತ ವ್ಯಾಪಾರಿಗಳೊಂದಿಗೆ ಸಂಪರ್ಕ ಹೊಂದಿದ್ದರು ಎಂದು ತಿಳಿದುಬಂದಿದೆ.

ಸಿದ್ದರಾಮಯ್ಯನವರನ್ನು ನಡೆಸಿಕೊಂಡ ರೀತಿ ಸರಿಯಿಲ್ಲ: ಜೋಶಿ

ಜನಪ್ರಿಯ ನಾಯಕ ಸಿದ್ದು

• **ಮಂಗಳೂರು:** ಕರ್ನಾಟಕದ ಜನಪ್ರಿಯ ನಾಯಕ, ಮುಖ್ಯಮಂತ್ರಿ ಸಿದ್ದರಾಮಯ್ಯ ನವರನ್ನು ಕಾಂಗ್ರೆಸ್ ಹೈಕಮಾಂಡ್ ನಡೆಸಿ ಕೊಂಡ ರೀತಿ ಸರಿಯಿಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಟೀಕಿಸಿದರು.

ಮಂಗಳೂರಿನಲ್ಲಿ ಗುರುವಾರ ಸುದ್ದಿಗಾರ ರೊಂದಿಗೆ ಮಾತನಾಡಿ, ರಾಹುಲ್ ಗಾಂಧಿ ಯವರು ಸಿದ್ದ ರಾಮಯ್ಯನವರನ್ನು ನಡೆಸಿ



ಕೊಂಡ ರೀತಿ ಸರಿಯಿಲ್ಲ. ಕರ್ನಾಟಕದಲ್ಲಿ ಅಸ್ಥಿರತೆ, ಅರಾಜಕತೆ, ಅವಿಶ್ವಾಸ ನಿರ್ಮಾಣವಾಗಿದೆ. ಇಂತಹ ಸ್ಥಿತಿ ಬರಬಾರದಿತ್ತು ಎಂದರು.

ಇದು ಕಾಂಗ್ರೆಸ್ ಪಕ್ಷದ ಆಂತರಿಕ ಗೊಂದಲವಾದರೂ ಕೂಡ ಒಬ್ಬ ಹಿಂದುಳಿದ ವರ್ಗದ ಮುಖ್ಯಮಂತ್ರಿಯನ್ನು ಯಾವ ರೀತಿ ನಡೆಸಿಕೊಂಡರು ಎಂಬುದು ಗಂಭೀರ ವಿಚಾರ. ಯಾವ ರೀತಿ ವೀರೇಂದ್ರ ಪಾಟೀಲ್ ಅವರನ್ನು ರಾಜೀವ್ ಗಾಂಧಿಯವರು ಅಪಮಾನ ಮಾಡಿ ದ್ದರೂ ಅದೇ ರೀತಿ ಮಗ ರಾಹುಲ್ ಗಾಂಧಿ ಸಿದ್ದರಾಮಯ್ಯನವರನ್ನು ನಡೆಸಿಕೊಂಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ಕುರ್ಚಿ ಫೈಟ್ ನಿಂದ ಬಿಜೆಪಿಗೆ ಲಾಭ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಪ್ರಸಕ್ತ ರಾಜ್ಯದಲ್ಲಿ ಇರುವುದು ತುಘಲಕ್ ರಾಜ ಹಾಗೂ ಭ್ರಷ್ಟಾಚಾರ. ಡಿಕೆಶಿ ಬಂದರೂ ಅದು ಮುಂದುವರಿಯುತ್ತದೆ. ಕಾಂಗ್ರೆಸ್ ವಿಫಲಗೊಂಡು ಬಿಜೆಪಿ ಅಧಿಕಾರಕ್ಕೆ ಬರಬೇಕೆಂದಿಲ್ಲ. ಮೋದಿಯವರ ಮಾರ್ಗದರ್ಶನದಲ್ಲಿ, ಸಕಾರಾತ್ಮಕ ಚಿಂತನೆಗಳ ಮೂಲಕ ಅಧಿಕಾರಕ್ಕೆ ಬರುತ್ತೇವೆ ಎಂದರು.

ಪೆಟ್ರೋಲ್ –ಡೀಸೆಲ್ ಬೆಲೆ ಏರಿಕೆ ಕುರಿತು ಕಾಂಗ್ರೆಸ್ ಟೀಕೆಗೆ, ಈ ರೀತಿ ಯ ಜಾಗತಿಕ ಕ್ರೈಸಿಸ್ ಯಾವತ್ತೂ ಎದುರಾಗಲಿಲ್ಲ. ನನ್ನ ಅನುಭವದ ಆಧಾರದಲ್ಲಿ ಈ ಪ್ರಮಾಣದ ಜಾಗತಿಕ ಬಿಕ್ಕಟ್ಟು ಯಾವಾಗಲು ನಿರ್ಮಾಣ ಆಗಲಿಲ್ಲ. ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಕೆಲಸ ಕಾಂಗ್ರೆಸ್ ಮಾಡುತ್ತಿದೆ. ಮನೆಗೆ ಬೆಂಕಿ ಹತ್ತಿದಾಗ ಇದರಲ್ಲಿ ಬೀಡಿ ಹಚ್ಚಿಕೊಳ್ಳುವ ಕೆಲಸವನ್ನು ಕಾಂಗ್ರೆಸ್ ಮಾಡಬಾರದು ಎಂದು ಟೀಕಿಸಿದರು.

ರಾಜೀನಾಮೆ ಚುನಾವಣೆ ಮೇಲೆ ಪರಿಣಾಮ: ಸಂಸದ ಬೊಮ್ಮಾಯಿ

• **ಬೆಂಗಳೂರು:** ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವುದು ಕಾಂಗ್ರೆಸ್ ಪಕ್ಷದ ಮೇಲೆ ಹಾಗೂ ಕರ್ನಾಟಕದ ಚುನಾವಣಾ ರಾಜಕಾರಣದ ಮೇಲೆ



ಪರಿಣಾಮ ಬೀರಲಿದೆ. ಕಾಂಗ್ರೆಸ್ ನಿಂದ ಹಿಂದು ಳಿದವರಿಗೆ ನಂಬಿಕೆ ದ್ರೋಹವಾಗಿದ್ದು, ಹಿಂದುಳಿದ ವರ್ಗ ಕಾಂಗ್ರೆಸ್ ವಿರುದ್ಧ ತಿರುಗಿ ಬೀಳಲಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿ, ಕಾಂಗ್ರೆಸ್ ಪಕ್ಷದಿಂದ ಹಿಂದುಳಿದವರಿಗೆ ನಂಬಿಕೆ ದ್ರೋಹ ಮಾಡಿದಂತಾಗಿದೆ. ವಿಶೇಷವಾಗಿ ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಒಬಿಸಿ ಪರವಾಗಿ ಪ್ರಚಾರ ಮಾಡುತ್ತಾರೆ. ಆದರೆ, ಒಬಿಸಿ ಮುಖ್ಯಮಂತ್ರಿಯನ್ನು ಕಿತ್ತು ಹಾಕಿದ್ದಾರೆ. ಹಿಂದುಳಿದ ವರ್ಗಗಳ ಬಗ್ಗೆ ಅವರು ಮೊಸಳೆ ಕಣ್ಣೀರು ಸುರಿಸುವುದು ಈಗ ಬಹಿರಂಗವಾಗಿದೆ. ಇದರಿಂದ ಹಿಂದುಳಿದ ವರ್ಗದವರು ಬೇಸರಗೊಂಡಿದ್ದು, ಅವರು 2028 ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆ ತಕ್ಕ ಪಾಠ ಕಲಿಸುವುದಾಗಿ ತೀಕ್ಷ್ಣವಾಗಿ ಪ್ರತಿಕ್ರಿಯೆ ಸುತ್ತಿದ್ದಾರೆ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಆಂತರಿಕ ಪಕ್ಷವನ್ನು ಅಶಕ್ತಗೊಳಿಸಿದ್ದು, ಬಿಜೆಪಿ ಇನ್ನಷ್ಟು ಬಲಿಷ್ಠವಾಗಿ ನಮ್ಮದೇ ಆದ ಶಕ್ತಿಯೊಂದಿಗೆ 2028 ಕ್ಕೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳಿದರು.

ಅಭಿವೃದ್ಧಿ ಶೂನ್ಯ: ರಾಜ್ಯದಲ್ಲಿ ಮೂರು ವರ್ಷದಲ್ಲಿ ಅಭಿವೃದ್ಧಿ ಶೂನ್ಯ ಆಗಿದೆ. ಇದು ಅವರು ಸಮರ್ಥನೆ ಮಾಡುವ ಅವಶ್ಯಕತೆ ಇತ್ತು. ರಾಜ್ಯದ ಮೇಲೆ ದೊಡ್ಡ ಸಾಲದ ಹೊರೆ ಇದೆ. ಜನರ ಮೇಲೆ ಸಾಲದ ಹೊರೆ ಇಟ್ಟಿದ್ದಾರೆ.

ಇಂದು ಅದನ್ನು ನಾನು ಹೆಚ್ಚಾಗಿ ಟೀಕಿಸುವುದಿಲ್ಲ. ಕಾಂಗ್ರೆಸ್ ಪಕ್ಷ ಸಂಪೂರ್ಣ ತಮ್ಮ ಜನರ ತೀರ್ಪನ್ನು ದುರುಪಯೋಗ ಮಾಡಿಕೊಂಡಿದೆ. ಜನಪರ ಆಡಳಿತ ಕೊಡಬೇಕಿತ್ತು. ಜನವಿರೋಧಿ ಆಡಳಿತ ಕೊಟ್ಟಿದ್ದಾರೆ. ಜೊತೆಗೆ ರಾಜ್ಯವನ್ನು 20 ವರ್ಷಗಳ ಹಿಂದಕ್ಕೆ ತಳ್ಳಿದ್ದಾರೆ. ರಾಜ್ಯದಲ್ಲಿ ಇಂದೇ ಚುನಾವಣೆ ನಡೆದರೆ ಅವರಿಗೆ ಜನ ಪಾಠ ಕಲಿಸುತ್ತಾರೆ ಎಂದು ಹೇಳಿದರು.

ಸಿದ್ದರಾಮಯ್ಯ ನಂತರ ಸಿಎಂ ಯಾರು?: ಬಿವೈವಿ

• **ವಿಜಯನಗರ:** ಕಳೆದ ಎರಡ್ಮೂರು ದಿನಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿರುವ ಆಂತರಿಕ ವಿದ್ಯಮಾನಗಳನ್ನು ಗಮನಿಸಿದರೆ ಸಿದ್ದರಾಮಯ್ಯ ರಾಜೀನಾಮೆ ಬಳಿಕ ಸಿಎಂ ಯಾರು ಆಗುತ್ತಾರೆ ಎಂಬ ಯಕ್ಷಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.



ಬಿಜೆಪಿ ಜಿಲ್ಲಾ ಘಟಕದಿಂದ ಹೊಸಪೇಟೆಯಲ್ಲಿ ಆಯೋಜಿಸಿರುವ ದೀನ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ವರ್ಗದ ಸಮಾರೋಪದಲ್ಲಿ ಪಾಲ್ಗೊಳ್ಳಲು ಆಗಮಿಸಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ ನಂತರ ಮುಂದಿನ ಸಿಎಂ ಯಾರು ಎಂಬುದು ಅಷ್ಟು ಬೇಗ ಇತ್ಯರ್ಥ ಆಗದು. ಮುಂದಿನ ಮುಖ್ಯಮಂತ್ರಿ ಯಾರು ಎಂಬ ಪ್ರಶ್ನೆಗೆ ತಕ್ಷಣಕ್ಕೆ ಉತ್ತರ ಕಂಡುಕೊಳ್ಳುವಷ್ಟು ಶಕ್ತಿ ಕಾಂಗ್ರೆಸ್ ಪಕ್ಷಕ್ಕಿಲ್ಲ. ಹೀಗಾಗಿ ಈ ಗೊಂದಲ ಇನ್ನೂ ಕೆಲ ದಿನಗಳ ಕಾಲ ಮುಂದುವರಿಯುತ್ತದೆ ಎಂದರು.

ಕಾಂಗ್ರೆಸ್ ಸರ್ಕಾರದಲ್ಲಿರುವ ಆಂತರಿಕ ಕಚ್ಚಾಟದ ಪರಿಣಾಮ ರಾಜ್ಯದಲ್ಲಿ ಆಡಳಿತ, ಆರ್ಥಿಕತೆ ಸಂಪೂರ್ಣ ನೆಲಕಚ್ಚಿದೆ. ಕಳೆದ ಮೂರು ವರ್ಷಗಳಲ್ಲಿ ಉಂಟಾಗಿರುವ ಆರ್ಥಿಕ ಕುಸಿತವನ್ನು ಮುಂದೆ ಯಾರೇ ಮುಖ್ಯಮಂತ್ರಿಯಾದರೂ ಸುಧಾರಿಸಲು ಸಾಧ್ಯವಿಲ್ಲ. ಇಂತಹ ಸಂಕಷ್ಟದ ಸ್ಥಿತಿಯಲ್ಲಿ ರೈತರು, ಬಡವರ ಕಲ್ಯಾಣ ಹಾಗೂ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದು ಹೇಗೆ ಎಂದು ಪ್ರಶ್ನಿಸಿದರು.

ರಾಜ್ಯಪಾಲರ ಭೇಟಿಗೆ ಸಿಎಂ ಸಿದ್ದರಾಮಯ್ಯ ಸಮಯ ಕೇಳಬೇಕಿತ್ತು. ಆದರೆ, ಇಂದಿನ ಟಿಪಿಯಲ್ಲಿ ಆ ಬಗ್ಗೆ ಉಲ್ಲೇಖವಿಲ್ಲ ಮತ್ತು ರಾಜ್ಯಪಾಲರು ದೆಹಲಿಗೆ ತೆರಳಿರುವ ಬಗ್ಗೆ ನನಗೆ ಮಾಹಿತಿಯಿಲ್ಲ. ಕಾಂಗ್ರೆಸ್‌ಗೆ 138 ಶಾಸಕರ ಸ್ಪಷ್ಟ ಬೆಂಬಲ ಇರುವಾಗ ಬಿಜೆಪಿ ಹಸ್ತಕ್ಷೇಪ ಹೇಗೆ ಸಾಧ್ಯ? ರಾಜ್ಯ ಜನರು ಕಾಂಗ್ರೆಸ್‌ಗೆ ಆಶೀರ್ವಾದ ಮಾಡಿದ್ದಾರೆ ಎಂದರು.

ರೈತರ ಸಮಸ್ಯೆ ಕೇಳುವವರಿಲ್ಲ

ರಾಜ್ಯದಲ್ಲಿ ರೈತರ ಸಮಸ್ಯೆ ಕೇಳುವವರಿಲ್ಲ. ವಿವಿಧ ಜಿಲ್ಲೆಗಳಲ್ಲಿ ಕೃತಕ ರಸಗೊಬ್ಬರದ ಸಮಸ್ಯೆ ಸೃಷ್ಟಿಸುವ ಷಡ್ಯಂತ್ರ ನಡೆದಿದೆ. ರಾಜ್ಯದ ಪಾಲಿಗೆ ಕಾಂಗ್ರೆಸ್ ಸರ್ಕಾರ ಶಾಪವಾಗಿದೆ. ಕಾಂಗ್ರೆಸ್ ಸರ್ಕಾರದ ಮೇಲಿನ ವಿಶ್ವಾಸವನ್ನು ರಾಜ್ಯದ ಜನತೆ ಯಾವತ್ತೋ ಕಳೆದುಕೊಂಡಿದ್ದಾರೆ. ಜನಸಾಮಾನ್ಯರ ಪಾಲಿಗೆ ಶಾಪವಾಗಿ ಪರಿಣಮಿಸಿದೆ ಎಂದು ಕಿಡಿಕಾರಿದರು.

ಗೈರು: ಪದಾಧಿಕಾರಿಗಳ ತಲೆದಂಡ

• **ಬೆಂಗಳೂರು:** ಕಾಂಗ್ರೆಸ್ ಈಚೆಗೆ ಹಮ್ಮಿ ಕೊಂಡಿದ್ದ ಎರಡು ದಿನಗಳ ಎಸ್‌ಐಆರ್ ಕುರಿತ ಮಹತ್ವದ ಸಭೆಗೆ ಗೈರು ಹಾಜರಾಗಿದ್ದ ಕೆಪಿಸಿಸಿಯ 32 ಪದಾಧಿಕಾರಿಗಳ ತಲೆದಂಡ ಆಗಿದೆ.



ಕೆ. ಶಿವಮೂರ್ತಿ, ಬಾಬುರಾವ್ ಜಾಗೀರದಾರ, ಎಂ.ಸಿ. ವೇಣುಗೋಪಾಲ್ ಸೇರಿದಂತೆ ಮೂವರು ಕೆಪಿಸಿಸಿ ಉಪಾಧ್ಯಕ್ಷರು ಹಾಗೂ ನಿಕೇತ್‌ರಾಜ್ ಮೌರ್ಯ, ಇಸ್ಮಾಯಿಲ್ ತಮಟಗಾರ ಒಳಗೊಂಡಂತೆ 29 ಪ್ರಧಾನ ಕಾರ್ಯದರ್ಶಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಆಯಾ ಹುದ್ದೆಗಳಿಂದ ಬಿಡುಗಡೆಗೊಳಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

ಕಾಂಗ್ರೆಸ್‌ನಲ್ಲಿ ಕ್ಷಿಪ್ರ ರಾಜಕೀಯ ಬೆಳವಣಿಗೆಗಳು ನಡೆಯುತ್ತಿರುವ ನಡುವೆಯೂ ಪಕ್ಷ ಎಸ್‌ಐಆರ್ ಕುರಿತ ಸಭೆಗೆ ಪದಾಧಿಕಾರಿಗಳು ಗೈರು ಹಾಜರಾಗಿರುವುದನ್ನು ಗಂಭೀರವಾಗಿ ಪರಿಗಣಿಸಿ, ಮುಲಾಜಿಲ್ಲದೆ ಈ ಶಿಸ್ತು ಕ್ರಮ ಕೈಗೊಂಡಿದೆ. ಮೇ 25ರಂದು ಬೆಂಗಳೂರಿನಲ್ಲಿ ಕರೆಯಲಾಗಿದ್ದ ಕೆಪಿಸಿಸಿ ಸಭೆಗೆ ಈ ಪದಾಧಿಕಾರಿಗಳು ಗೈರುಹಾಜರಾಗಿದ್ದರು. ಈ ಹಿನ್ನೆಲೆಯಲ್ಲಿ ಎಐಸಿಸಿ ಸೂಚನೆ ಮೇರೆಗೆ ಶಿಸ್ತು ಕ್ರಮ ಕೈಗೊಳ್ಳಲಾಗಿದ್ದು, ಮುಂಬರುವ ದಿನಗಳಲ್ಲಿ ಪಕ್ಷದಲ್ಲಿ ಸೂಕ್ತ ಜವಾಬ್ದಾರಿಗಳನ್ನು ನೀಡಲಾಗುವುದು ಎಂದು ಡಿ.ಕೆ. ಶಿವಕುಮಾರ್ ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.

ಯಾರ್ಯಾರ ವಿರುದ್ಧ ಕ್ರಮ?

ಕೆ. ಶಿವಮೂರ್ತಿ, ಬಾಬುರಾವ್ ಜಾಗೀರದಾರ ಮತ್ತು ಎಂ.ಸಿ. ವೇಣುಗೋಪಾಲ್ (ಕೆಪಿಸಿಸಿ ಉಪಾಧ್ಯಕ್ಷರು), ಎಸ್.ಐ. ಕೋಡಳ್ಳಿ, ಭಾವನಾ ರಾಮಣ್ಣ, ಕೆ.ಸಿ. ಪ್ರಭಾಕರ ರೆಡ್ಡಿ, ತಿಬ್ಬೇಗೌಡ, ಝುಲ್ಫೀಕರ್ ಅಹಮದ್, ಶಂಕರ ದೊಡ್ಡಿ, ರೇಖಾ ಹುಲಿಯಪ್ಪ, ಎಚ್.ಎ. ಷಣ್ಮುಖಪ್ಪ, ಎಂ. ರಾಮಪ್ಪ, ವಡ್ನಾಳ್ ಜಗದೀಶ್, ಷಣ್ಮುಖಪ್ಪ ಶಿವಳ್ಳಿ, ಮಲ್ಲಿಕಾರ್ಜುನ ಅಕ್ಕಿ, ಸ್ವಾತಿ ಮಳಗಿ, ಅಲ್ತಾಫ್ ನವಾಜ್ ಕಿತ್ತೂರ, ನಾಗೇಶ್ವರರಾವ್, ರಮೇಶ್ ಮರಗೋಳ, ಚಂದ್ರಕಲಾ ಪ್ರಸನ್ನ, ಸಿ.ಆರ್. ಮನೋಹರ, ಎಚ್.ಆರ್. ಶ್ರೀನಾಥ್, ಎಚ್. ತ್ಯಾಗರಾಜ್, ಎಲ್. ಪದ್ಮನಾಭ, ನಿಕೇತ್ ರಾಜ್ ಮೌರ್ಯ, ಸಿ.ಬಿ. ಶಶಿಧರ್, ವೆಂಕಟೇಶ ಹೆಗ್ಡೆ ಹೊಸಬಾಳೆ, ಎ.ವೈ. ಘೋರ್ಪಡೆ, ಮಕ್ಬುಲ್ ಬಾಗವಾನ, ಇಸ್ಮಾಯಿಲ್ ತಮಟಗಾರ, ಬಿ.ಎಚ್. ಬನ್ನಿಕೋಡ್, ಸಂಜಯ್ ಜಾಗಿರದಾರ.

ಕುರ್ಚಿ ಪ್ರಹಸನಕ್ಕೆ ತಾತ್ಕಾಲಿಕ ಅಂತ್ಯ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ರಾಜ್ಯ ಬಿಜೆಪಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, ಇದರಿಂದ ಕನ್ನಡಿಗೆ ನಯಾಪೈಸೆ ಪ್ರಯೋಜನವಿಲ್ಲ ಎಂದು ಹೇಳಿದೆ.

ಸಾಮಾಜಿಕ ಜಾಲತಾಣದಲ್ಲಿ ರಾಜ್ಯ ಬಿಜೆಪಿ ಈ ಕುರಿತು ಪೋಸ್ಟ್ ಮಾಡಿದೆ. ಕರ್ನಾಟಕ ಕಾಂಗ್ರೆಸ್ಸಿನ ಕುರ್ಚಿ ಕಚ್ಚಾಟದ ಪ್ರಹಸನಕ್ಕೆ ತಾತ್ಕಾಲಿಕ ಅಂತ್ಯ ದೊರೆತಿದೆ. ಆದರೆ, ಇದರಿಂದ ಕನ್ನಡಿಗರಿಗೆ ನಯಾಪೈಸೆ ಪ್ರಯೋಜನ ಇಲ್ಲ ಎಂದಿದೆ. ಕಾಂಗ್ರೆಸ್‌ನ 3 ವರ್ಷಗಳ ಸಾಧನೆ ಎಂದರೆ ಅದು ದಲಿತರ ಹಣ ದುರ್ಬಳಕೆ, ವಾಲ್ಮೀಕಿ ನಿಗಮದ ಹಣ ಲೂಟಿ, ಯುವಕರಿಗೆ ಟೋಪಿ, ರೈತರಿಗೆ ನೇಣು ಕುಣಿಕೆ, ಜನಸಾಮಾನ್ಯರಿಗೆ ಬೆಲೆ ಏರಿಕೆ, ಕರ್ನಾಟಕಕ್ಕೆ ಸಾಲದ ಶೂಲ ಹೊದಿಕೆ. ಕರ್ನಾಟಕದ ಅಭಿವೃದ್ಧಿ ಸಂಪೂರ್ಣ ಸ್ತಬ್ಧಗೊಳಿಸಿ, ಕಲೆಕ್ಷನ್–ಕರಪ್ಷನ್–ಕಮಿಷನ್‌ನಲ್ಲಿಯೇ 3 ವರ್ಷ ದೂಡಿ, ಈಗ ರಾಜೀನಾಮೆ ಎಂಬ ಅಲ್ಪ ವಿರಾಮ ಇಟ್ಟಿದ್ದಾರೆ ಎಂದು ಟೀಕಿಸಿದೆ.

ನೂತನವಾಗಿ ಯಾರೇ ಮುಖ್ಯಮಂತ್ರಿ ಆಗಿ ಬಂದರೂ ಕನ್ನಡಿಗರಿಗಾಗಲಿ, ಕರ್ನಾಟಕಕ್ಕಾಗಲಿ ನಯಾಪೈಸೆ ಪ್ರಯೋಜನ ಇಲ್ಲ. ಬಡವರು, ಶ್ರಮಿಕರು, ರೈತರು, ಯುವಕರು, ಮಹಿಳೆಯರು, ದೀನ–ದಲಿತರು, ಹಿಂದುಳಿದವರನ್ನು ಹಿಂಸಿಸಿ, ಶೋಷಿಸಿ ಸರ್ಕಾರ ನಡೆಸುವ ಇವರ ಪ್ರವೃತ್ತಿ ಮುಂದುವರೆಯುತ್ತದೆ ಹೊರತು ಬದಲಾಗುವುದಿಲ್ಲ. ಕರ್ನಾಟಕವನ್ನು ಸಂಪೂರ್ಣ ದಿವಾಳಿ ಮಾಡುವುದು ಹಾಗೂ ಕಾಂಗ್ರೆಸ್ ಹೈಕಮಾಂಡಿಗೆ ಕರ್ನಾಟಕವನ್ನು ಎಟಿಎಂ ಮಾಡುವುದು ಎರಡೇ ಇವರ ಅಜೆಂಡಾ ಎಂದು ಬಿಜೆಪಿ ಹೇಳಿದೆ.

ಸಿಎಂ ಆಪ್ತ ಕಾರ್ಯದರ್ಶಿ ವರ್ಗಾವಣೆ

• **ಬೆಂಗಳೂರು:** ಸಿಎಂ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುತ್ತಿದ್ದಂತೆ ಅವರ ಆಪ್ತ ಕಾರ್ಯದರ್ಶಿ, ವಿಶೇಷ ಕರ್ತವ್ಯಾಧಿಕಾರಿ ಸೇರಿದಂತೆ ಇಬ್ಬರು ಕೆಎಎಸ್ ಅಧಿಕಾರಿಗಳ ವರ್ಗಾವಣೆಯಾಗಿದೆ.

ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಯಾಗಿದ್ದ ಡಾ. ವೆಂಕಟೇಶಯ್ಯ ಅವರನ್ನು ಎಪಿಎಂಸಿ ನಿರ್ದೇಶಕರನ್ನಾಗಿ ವರ್ಗಾಯಿಸಲಾಗಿದೆ. ಇನ್ನು ಸಿಎಂ ಅವರ ವಿಶೇಷ ಕರ್ತವ್ಯಾಧಿಕಾರಿಯಾಗಿದ್ದ ರಮೇಶ್ ಪಿ. ಕೋನರೆಡ್ಡಿ ಅವರು ಕೆಪಿಟಿಸಿಎಲ್ ನಿರ್ದೇಶಕರನ್ನಾಗಿ ವರ್ಗಾಯಿಸಲಾಗಿದೆ.

ಎಸ್‌ಡಿಆರ್‌ಎಫ್ ಸಿಪಿಐ ಶ್ರೀಶೈಲ ಚೌಗಲೆ ಆತ್ಮಹತ್ಯೆ

• **ಬೆಳಗಾವಿ:** ಎಸ್‌ಡಿಆರ್‌ಎಫ್ ಸಿಪಿಐ ಆಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಶೈಲ ಚೌಗಲೆ (37) ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಕುರಿತು ಹಲವು ಅನುಮಾನಗಳು ಹುಟ್ಟಿಕೊಂಡಿವೆ.



ಘಟನೆ ವಿವರ: ಸಿಪಿಐ ಶ್ರೀಶೈಲ ಬುಧವಾರ ರಾತ್ರಿ ವೇಳೆ ತಮ್ಮ ಕೆಲಸ ನಿರ್ವಹಿಸಿ ಚೆನ್ನಮ್ಮ ನಗರದಲ್ಲಿರುವ ಅವರ ನಿವಾಸದಲ್ಲಿ ರಾತ್ರಿ ಮಲಗುವುದಾಗಿ ಹೇಳಿ ಮನೆಯ ಕೊಠಡಿಯ ಬಾಗಿಲು ಹಾಕಿಕೊಂಡಿದ್ದಾರೆ. ಬಳಿಕ ಶ್ರೀಶೈಲ ಅವರು ಬೆಳಗ್ಗೆ ಎಳದಿದ್ದಾಗ ಅನುಮಾನಗೊಂಡ ಅವರ ಪತ್ನಿ ತಕ್ಷಣವೇ ಎಸ್‌ಡಿಆರ್‌ಎಫ್ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಸಿಬ್ಬಂದಿ ಕೊಠಡಿಯ ಬಾಗಿಲು ಮುರಿದಾಗ ನೇಣು ಬಿಗಿದುಕೊಂಡು ಸ್ಥಿತಿಯಲ್ಲಿ ಶ್ರೀಶೈಲ ಅವರ ಶವ ನೇತಾಡುತ್ತಿತ್ತು ಎಂದು ಹೇಳಲಾಗಿದೆ. ನಂತರ ಅವರನ್ನು ಹೊರ ತೆಗೆದು ಆಸ್ಪತ್ರೆಗೆ ದಾಖಲಿಸಿದರೂ, ಅಷ್ಟರಲ್ಲೇ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಹೆಸರುಗಳಿಸಿದ್ದ ಸಿಪಿಐ ಶ್ರೀಶೈಲ: ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಸಿಪಿಐ ಆಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಶೈಲ ಅವರು, ಇದಕ್ಕೂ ಮೊದಲು ಕಂಗ್ರಾಳಿ ಬಳಿ ಇರುವ ಕೆಎಸ್‌ಆರ್‌ಪಿ ಪೊಲೀಸ್ ತರಬೇತಿ ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ನಂತರ ಎಸ್‌ಡಿಆರ್‌ಎಫ್ ಸಿಪಿಐ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಇಲ್ಲಿಯು ಸಹ ಸಾಕಷ್ಟು ಉತ್ತಮ ಕೆಲಸ ನಿರ್ವಹಿಸಿ ಹೆಸರುಗಳಿಸಿದ್ದರು ಎಂದು ಹೇಳಲಾಗಿದೆ.

ಶಾಲಾ ಪ್ರಾರಂಭದ ಮೊದಲ 30 ದಿನ ಸೇತುಬಂಧ ಪ್ರಕ್ರಿಯೆ ಕಡ್ಡಾಯ | ಬೋಧನೆ ಮೂಲಕ ಕಲಿಕೆ

ಶಾಲಾ ಮಕ್ಕಳಿಗಾಗಿ ವಿಭಿನ್ನ ಅವಧಿಯ ಸೇತುಬಂಧ

▸ **ನಂದಿನಿ ಎನ್.**

• **ಬೆಂಗಳೂರು:** ವಿದ್ಯಾರ್ಥಿಗಳ ಕಲಿಕೆಯಲ್ಲಿ ಉಂಟಾಗಿರುವ ಅಂತರವನ್ನು ಕಡಿಮೆ ಮಾಡಿ, ಅವರನ್ನು ಮುಂದಿನ ಹಂತದ ಶಿಕ್ಷಣಕ್ಕೆ ಸಂಪರ್ಕಿಸುವ ವಿಶೇಷ ಶಿಕ್ಷಣದ ವಿಧಾನವಾಗಿರುವ ಸೇತುಬಂಧ ಯೋಜನೆಯನ್ನು ಶಾಲಾ ಶಿಕ್ಷಣ ಇಲಾಖೆ, ವಿವಿಧ ತರಗತಿಗಳ ಮಕ್ಕಳಿಗೆ ವಿಭಿನ್ನ ಅವಧಿಯ ಸೇತುಬಂಧ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ನಿಗದಿಪಡಿಸಿದೆ.



ದಿಗಂತ ವಿಶೇಷ

2026–27ನೇ ಶೈಕ್ಷಣಿಕ ವರ್ಷದ ಆರಂಭದಲ್ಲೇ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಅರಿತು ಅವರಲ್ಲಿರುವ ಕೊರತೆಗಳನ್ನು ಗುರುತಿಸಿ, ಪರಿಹಾರ ಬೋಧನೆಯ ಮೂಲಕ ಸಾಮಾನ್ಯ ಕಲಿಕಾ ಹಂತಕ್ಕೆ ತರಿಸುವ ನಿಟ್ಟಿನಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ಅಡಿಯಲ್ಲಿ ಈ ಸೇತುಬಂಧ ಶಿಕ್ಷಣ ಕಾರ್ಯಕ್ರಮವನ್ನು ರೂಪಿಸಲಾಗಿದೆ.

1ರಿಂದ 3ನೇ ತರಗತಿ ಮಕ್ಕಳಿಗೆ ಶಾಲಾ ಪ್ರಾರಂಭದ ಮೊದಲ 30 ದಿನಗಳು ಹಾಗೂ 4 ರಿಂದ 10ನೇ ತರಗತಿಗಳಿಗೆ 15 ದಿನಗಳ ಕಾಲ ಕಡ್ಡಾಯವಾಗಿ ಸೇತುಬಂಧ ಪ್ರಕ್ರಿಯೆ ನಡೆಯಲಿದೆ. ಜೂ. 6 ರಂದು ಪ್ರತಿಯೊಬ್ಬ ಮಗುವಿನ ಕಲಿಕಾಮಟ್ಟ ಪರಿಶೀಲನೆ ನಡೆಯಲಿದ್ದು, ಮಕ್ಕಳು ಅಕ್ಷರ ಓದು, ಪದ ಗುರುತು, ಸರಳ ಬರವಣಿಗೆ ಹಾಗೂ ಮೂಲಭೂತ ಗಣಿತದಲ್ಲಿ ಎಷ್ಟು ಪ್ರಗತಿ ಸಾಧಿಸಿದ್ದಾರೆ ಎಂಬುದನ್ನು ಶಿಕ್ಷಕರು ದಾಖಲಿಸಿಕೊಳ್ಳಲಿದ್ದಾರೆ.

ಇದರಲ್ಲಿ ಹಿನ್ನಡೆ ಕಂಡುಬಂದ ವಿದ್ಯಾರ್ಥಿಗಳಿಗೆ ವೈಯಕ್ತಿಕ ಪರಿಹಾರ ಬೋಧನೆ ನೀಡಲಾಗುತ್ತದೆ.

> ಪ್ರತಿ ವರ್ಷ ಶಾಲೆಗಳು ಆರಂಭವಾಗುವ ಸಮಯದಲ್ಲಿ ವಿದ್ಯಾರ್ಥಿಗಳ ಕಲಿಕಾ ಹಿನ್ನಡೆ ನಿವಾರಣೆಗಾಗಿ ಹಾಗೂ ಹಿಂದಿನ ತರಗತಿಯ ಪಾಠಗಳನ್ನು ಮತ್ತೊಮ್ಮೆ ಅವಲೋಕನಗೊಳಿಸುವುದರಿಂದ ಸೇತುಬಂಧ ಯೋಜನೆಯನ್ನು ಪ್ರಾರಂಭಿಸಿದ್ದು ಶಿಕ್ಷಕರು, ವಿದ್ಯಾರ್ಥಿಗಳ ದುರ್ಬಲತೆಗಳನ್ನು ಗುರುತಿಸಿ ಚಟುವಟಿಕೆಗಳ ಆಧಾರಿತ, ಬೋಧನೆಯ ಮೂಲಕ ಕಲಿಕೆಯನ್ನು ಸುಗಮಗೊಳಿಸುತ್ತಾರೆ.
>
> ■ **ಗೋಪಾಲಕೃಷ್ಣ ಎಚ್.ಎನ್.,** ನಿರ್ದೇಶಕ, ಡಿಎಸ್‌ಇಆರ್‌ಟಿ

ಸೇತುಬಂಧದ ಅವಧಿ ನಂತರವೂ ಮಗು ಕಲಿಕಾ ಮಟ್ಟದಲ್ಲಿ ಹಿಂದುಳಿದರೆ, ವರ್ಷ ಪೂರ್ತಿ ವಿಶೇಷ ಆದ್ಯತೆ ಹಾಗೂ ಪೋಷಕರ ಸಹಕಾರದೊಂದಿಗೆ ಮಗುವಿನ ಕಲಿಕೆಯನ್ನು ಉತ್ತಮಪಡಿಸಲು ಇಲಾಖೆ ಶಿಕ್ಷಕರಿಗೆ ಸೂಚನೆ ನೀಡಿದೆ.

ಮಕ್ಕಳ ಒಟ್ಟಾರೆ ಕಲಿಕಾ ಸಾಮರ್ಥ್ಯವನ್ನು ಖಚಿತ ಪಡಿಸಿಕೊಳ್ಳಲು, ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನದ ಎಫ್‌ಎಲ್‌ಎನ್ ಪ್ರಗತಿಯನ್ನು ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಪ್ರತಿ ತಿಂಗಳು ಮೌಲ್ಯಾಂಕನ ಮಾಡಬೇಕಾಗುತ್ತದೆ. ಇನ್ನುಳಿದ ಕಲಿಕಾ ಫಲಗಳ ಕೊರತೆಯಿರುವ ಮಕ್ಕಳಿಗೆ ಸೆಪ್ಟೆಂಬರ್, ಡಿಸೆಂಬರ್ ಅಂತ್ಯಕ್ಕೆ ಮರುಮೌಲ್ಯಾಂಕನ ನಡೆಸಲಾಗುತ್ತದೆ. ಶಿಕ್ಷಕರ ಬಳಿ ಕಳೆದ ಸಾಲಿನ ಮೌಲ್ಯಾಂಕನ ವಿಶ್ಲೇಷಣಾ ವರದಿಗಳು ಲಭ್ಯವಿದ್ದು, ಅವುಗಳನ್ನು ಆಧರಿಸಿ ವಿದ್ಯಾರ್ಥಿಗಳಲ್ಲಿ ಯಾವ ವಿಷಯದಲ್ಲಿ ಕೊರತೆ ಇದೆ? ಎಂಬುದನ್ನು ವಿಶ್ಲೇಷಿಸಲಾಗುತ್ತದೆ.

ಇದರ ಜತೆಗೆ ನೈದಾನಿಕ ಪರೀಕ್ಷೆಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳ ಓದು, ಬರಹ, ಗಣಿತ, ಗ್ರಹಿಕೆ ಸಾಮರ್ಥ್ಯವನ್ನು ಪರಿಶೀಲಿಸಲಾಗುತ್ತದೆ. ಮಕ್ಕಳ ವಯೋಮಾನ ಮತ್ತು ತರಗತಿಗೆ ಅನುಗುಣವಾಗಿ, ಮೂಲಭೂತ ಕಲಿಕಾ ಫಲಗಳನ್ನು ಗುರುತಿಸಿ ಅವರನ್ನು ಮುಂದಿನ ಹಂತದ ಕಲಿಕೆಗೆ ಸಜ್ಜುಗೊಳಿಸುವುದು ಈ ಕಾರ್ಯಕ್ರಮದ ಮೂಲ ಆಶಯವಾಗಿದೆ.

ಬಿ ಗ್ರೇಡ್ ಮಕ್ಕಳಿಗೆ ವಿಶೇಷ ಪರಿಹಾರ ಬೋಧನೆ

ಪ್ರಶ್ನೆಪತ್ರಿಕೆಯ 1 ರಿಂದ 4ರಲ್ಲಿ ಬಿ ಗ್ರೇಡ್ ಪಡೆದವರನ್ನು ಎಫ್‌ಎಲ್‌ಎನ್ ಸಾಧಿಸದವರೆಂದೂ, 5 ರಿಂದ 10ನೇ ಪ್ರಶ್ನೆಗಳಲ್ಲಿ ಬಿ ಗ್ರೇಡ್ ಪಡೆದವರನ್ನು ಕಲಿಕಾ ಅಂತರ ಹೊಂದಿರುವ ವಿದ್ಯಾರ್ಥಿಗಳೆಂದು ಗುರುತಿಸಲಾಗುತ್ತದೆ. ಇಂತಹ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಚಟುವಟಿಕೆಯನ್ನು ಹಮ್ಮಿಕೊಂಡು ಪರಿಹಾರ ಬೋಧನೆ ನಡೆಸಲಾಗುತ್ತದೆ. ಇದರ ನಂತರ ಸಾಫಲ್ಯ ಪರೀಕ್ಷೆ ನಡೆಸಿ, ಫಲಿತಾಂಶವನ್ನು ಸ್ಯಾಟ್ಸ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಅಪ್ಲೋಡ್ ಮಾಡಬೇಕಾಗುತ್ತದೆ.

406 ಕ್ವಿಂಟಾಲ್ ಪಡಿತರ ಜಪ್ತಿ: 3 ಪ್ರಕರಣ ದಾಖಲು

• **ಬಳ್ಳಾರಿ:** ಜಿಲ್ಲೆಯಲ್ಲಿ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಂಗ್ರಹಿಸಿ ಸಾಗಾಟ ಮಾಡುತ್ತಿದ್ದ ಜಾಲದ ವಿರುದ್ಧ ತೀವ್ರ ನಿಗಾ ವಹಿಸಿದ ಜಿಲ್ಲಾಡಳಿತ, ಆಹಾರ ಇಲಾಖೆ ಅಧಿಕಾರಿಗಳು, ಪೊಲೀಸ್ ಇಲಾಖೆ ಜಿಲ್ಲೆಯ ವಿವಿಧೆಡೆ ದಾಳಿ ನಡೆಸಿ ಲಕ್ಷಾಂತರ ರೂಪಾಯಿ ಮೌಲ್ಯದ ಅಕ್ಕಿ ಹಾಗೂ ವಾಹನಗಳನ್ನು ವಶಪಡಿಸಿಕೊಂಡಿದೆ.

ಬುಧವಾರ ಜಿಲ್ಲೆಯ ಮೂರು ಪ್ರತ್ಯೇಕ ಕಡೆಗಳಲ್ಲಿ ಅಗತ್ಯ ವಸ್ತುಗಳ ಕಾಯ್ದೆಯಡಿ (ಇಸಿ ಕಾಯ್ದೆ) ಪ್ರಕರಣಗಳನ್ನು ದಾಖಲಾಗಿವೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕ ಕೆ.ಆರ್.ದೇವರಾಜ್ ತಿಳಿಸಿದ್ದಾರೆ. ಕುರುಗೋಡು ತಾಲೂಕಿನ ಬಾದನಹಟ್ಟಿ ಗ್ರಾಮದ ನಂದಿ ಲೇಔಟ್‌ನಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಂಗ್ರಹಿಸಿ ಲಾರಿಗೆ ತುಂಬಿಸುತ್ತಿದ್ದ ವೇಳೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ವೇಳೆ ಲಾರಿಯಲ್ಲಿದ್ದ 226 ಕ್ವಿಂಟಾಲ್ ಅಕ್ಕಿಯನ್ನು ಜಪ್ತಿ ಮಾಡಲಾಗಿದೆ.

ಈ ಕುರಿತು ಕುರುಗೋಡು ನಿವಾಸಿಗಳಾದ ಯರಿಸ್ವಾಮಿ, ಉಮಾಶಂಕರ್, ಮಾನ್ವಿ ತಾಲೂಕಿನ ವೀರಭದ್ರಪ್ಪ, ಚಾಲಕ ವಿನೋದ್ ಹಾಗೂ ಲಾರಿ ಮಾಲೀಕ ಪಂಪನಗೌಡ ಎನ್ನುವವರು ವಿರುದ್ಧ ಕುರುಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಂಪಾದಕೀಯ

ಸುಗಮ, ಗೊಂದಲಗಳಿಲ್ಲದ ಅಧಿಕಾರ ಹಸ್ತಾಂತರ

ಸಾಮಾನ್ಯವಾಗಿ ಅಧಿಕಾರ ಹಸ್ತಾಂತರದ ವೇಳೆಯಲ್ಲಿ ಗದ್ದಲ, ಗಲಾಟೆಗಳು, ಗೊಂದಲಗಳು ಆಗಲೇಬೇಕು. ರಾಜಕಾರಣದಲ್ಲಿ ಅಧಿಕಾರವೇ ಮುಖ್ಯ. ಅಧಿಕಾರವಿಲ್ಲದೆ ರಾಜಕಾರಣ ಮಾಡುವುದು ಒಂದಷ್ಟು ಕಠಿಣ. ಆದರೆ, ಈಗ ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ಅತ್ಯಂತ ಗಂಭೀರ ಮತ್ತು ಪ್ರೌಢಿಮೆಯ ನಡೆ ಕಾಣಿಸಿಕೊಂಡಿದ್ದು, ಕಾಂಗ್ರೆಸ್ ಹೈಕಮಾಂಡ್ ಎಲ್ಲೂ ಗೊಂದಲಕ್ಕೆ ಆಸ್ಪದ ಕೊಡದೆ ಅಧಿಕಾರ ಹಸ್ತಾಂತರದ ಮೊದಲ ಚರಣವನ್ನು ಮುಗಿಸಿದೆ.



ಗುರುವಾರ ಬೆಳಗಿನ ಉಪಹಾರ ಕೂಟದಿಂದ ಹಿಡಿದು, ಮಧ್ಯಾಹ್ನ ರಾಜ್ಯಪಾಲರ ಕಚೇರಿಗೆ ತೆರಳಿ ರಾಜೀನಾಮೆ ಮತ್ತು ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿ ವರೆಗೆ ಎಲ್ಲವೂ ಅತ್ಯಂತ ಸರಳ ಕಾರ್ಯಕ್ರಮದಂತೆ ನಡೆದುಹೋದವು. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ, ಎಲ್ಲೂ ಅಧಿಕಾರ ಕೈತಪ್ಪಿ ಹೋಗುತ್ತಿದೆ ಎಂಬ ಬೇಸರ ವ್ಯಕ್ತಪಡಿಸಲಿಲ್ಲ. ಇದಕ್ಕೆ ಬದಲಾಗಿ ಎಂಟು ವರ್ಷಗಳ ಕಾಲ, ಮುಖ್ಯಮಂತ್ರಿಯಾಗಲು ಅವಕಾಶ ಮಾಡಿಕೊಟ್ಟ ಕಾಂಗ್ರೆಸ್ ಹೈಕಮಾಂಡ್‌ಗೆ ಧನ್ಯವಾದ ಹೇಳುತ್ತಲೇ, ತಮ್ಮ ಆರಂಭದ ರಾಜಕೀಯ ಜೀವನದಿಂದ ಹಿಡಿದು, ಇಲ್ಲಿವರೆಗಿನ ತಮ್ಮ ಹಾದಿಯನ್ನು ಎಲ್ಲರ ಮುಂದೆ ಹೇಳಿ ವಿದಾಯ ಘೋಷಿಸಿದರು. ಜತೆಗೆ, ಸಕ್ರಿಯ ರಾಜಕಾರಣ ಬಿಡದೇ, ರಾಜ್ಯದಲ್ಲೇ ರಾಜಕಾರಣ ಮುಂದುವರಿಸುವುದಾಗಿ ಹೇಳಿ ತಮ್ಮ ಪತ್ರಿಕಾಗೋಷ್ಠಿ ಭಾಷಣ ಮುಗಿಸಿದರು.

ಸದ್ಯ ಮುಂದಿನ ಮುಖ್ಯಮಂತ್ರಿ ಯಾರು ಎಂಬುದನ್ನು ಹೈಕಮಾಂಡ್ ಘೋಷಿಸದಿದ್ದರೂ, ಬೆಳಗಿನ ಉಪಹಾರ ಕೂಟದಲ್ಲೇ ಸ್ವಯಂ ಮುಖ್ಯಮಂತ್ರಿಗಳೇ ಡಿ.ಕೆ.ಶಿವಕುಮಾರ್ ಅವರೇ ಮುಂದಿನ ಸಿಎಂ ಎಂಬ ಸುಳಿವನ್ನೂ ನೀಡಿದರು. ಹಾಗಂತ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೂ, ಅಧಿಕಾರ ಹಸ್ತಾಂತರದ ಈ ಸಂಪೂರ್ಣ ಪ್ರಕ್ರಿಯೆಯಲ್ಲಿ ಎಲ್ಲೂ ಯಾವ ಮಾತನ್ನೂ ಆಡದೇ ಮೌನ ಕಾಪಾಡಿಕೊಂಡು ಅದಕ್ಕೊಂದು ಘನತೆಯನ್ನೂ ತಂದುಕೊಟ್ಟರು.

ಈಗಾಗಲೇ ಬೇರೆ ರಾಜ್ಯಗಳಲ್ಲಿ ನಾವು ಈ ಅಧಿಕಾರ ಹಸ್ತಾಂತರದ ಗೊಂದಲಗಳನ್ನು ನೋಡಿದ್ದವರಿಗೆ ಈಗಿನ ಈ ಪ್ರಕ್ರಿಯೆ ಅಚ್ಚರಿ ತಂದಿರಲೂ ಸಾಕು. ಮೂರು ವರ್ಷದ ಹಿಂದೆ ಮುಖ್ಯಮಂತ್ರಿ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಯಾವ ನಿರ್ಧಾರ ತೆಗೆದುಕೊಂಡಿತ್ತು ಎಂಬುದು ಯಾರಿಗೂ ತಿಳಿದಿಲ್ಲ. ಆದರೂ, ಈಗ ಹೈಕಮಾಂಡ್ ಸೂಚನೆಯಂತೆ ತಾವು ಮುಖ್ಯಮಂತ್ರಿ ಗಾದಿ ತ್ಯಜಿಸುತ್ತಿರುವುದಾಗಿ ಹೇಳುವ ಮೂಲಕ ಆಗ ಇಂಥದ್ದೊಂದು ಒಪ್ಪಂದವಾಗಿರಬಹುದು ಎಂಬುದು ವೇದ್ಯವಾಗುತ್ತದೆ. ಏನೇ ಆಗಲಿ, ಈ ಅಧಿಕಾರ ಹಸ್ತಾಂತರ ವಿಚಾರ ಕರ್ನಾಟಕದ ಪಾಲಿಗಂತೂ ಒಂದು ಮಾದರಿಯೇ ಆಗಿದೆ. ಯಾವುದೇ ನಾಟಕೀಯ ಬೆಳವಣಿಗೆಗಳಿಗೆ ಆಸ್ಪದ ಕೊಡದೇ, ಇಂಥ ಬೆಳವಣಿಗೆಯಾಗಿದ್ದು, ಆರೋಗ್ಯಕರ.

ವೇದಾಭ್ಯಾಸ ಮಾಡಬೇಕು

ವೇದಃ ಶಿವಃ ಶಿವೋ ವೇದಃ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ ಸರ್ವಪ್ರಯತ್ನೇನ ವೇದಮೇವಸದಾಭ್ಯಸೇತ್ ॥ -ಲಿಂಗಪುರಾಣ

ವೇದವೆಂದರೆ ಶಿವನು. ಶಿವನೆಂದರೆ ವೇದವು, ಯಾರೂ ವೇದಾಧ್ಯಯನ ಮಾಡುತ್ತಾನೆ ಅವನು ಸದಾಶಿವ. ಆದ್ದರಿಂದ ಸರ್ವವಿಧದ ಪ್ರಯತ್ನದಿಂದಲೂ ವೇದವನ್ನು ಅಭ್ಯಾಸ ಮಾಡಬೇಕು – ಎಂಬುದು ಶ್ಲೋಕಾರ್ಥ.

ವೇದ ಎಂದರೆ ಜ್ಞಾನ ಎಂದರ್ಥ. 'ವಿದ್ ಜ್ಞಾನೇ' ಎಂಬ ಧಾತುವಿನಿಂದ ಈ ಶಬ್ದ ನಿಷ್ಪನ್ನವಾಗಿದೆ. ಜ್ಞಾನಕ್ಕೆ ಇಂಥವರೇ ವಾರಸುದಾರರು ಎಂಬುದಿಲ್ಲ. ಇಚ್ಛೆಪಟ್ಟು ಪರಿಶ್ರಮದಲ್ಲಿ ತೊಡಗಿಕೊಳ್ಳುವವರೆಲ್ಲರೂ ಜ್ಞಾನಕ್ಕೆ ಅಧಿಕಾರಿಗಳು. ವೇದಾಧ್ಯಯನ ಒಂದಷ್ಟು ನಿಯಮವಿದೆ. ಕಟ್ಟಳೆಗಳಿವೆ. ಇಂಥವರಿಗೆ ಮಾತ್ರ ಎಂಬುದಿಲ್ಲ. ಇದನ್ನು ಮಾಡಿದವರು ನಾವು. ಇದನ್ನೇ ನಂಬಿ ಪ್ರತಿಪಾದಿಸುವವರು ಅಲ್ಪಜ್ಞರು.



ನನಗೆ ತಿಳಿದಂತೆ ಮೂವತ್ತೆರಡಕ್ಕೂ ಹೆಚ್ಚು ಜನ ಮಂತ್ರದ್ರಷ್ಟಾರರು ಬ್ರಾಹ್ಮಣೇತರರು. ಮಂತ್ರಗಳ ರಾಜ ಗಾಯತ್ರಿಯನ್ನು ಕಂಡುಕೊಂಡು ಲೋಕಮುಖಕ್ಕೆ ನೀಡಿದ ವಿಶ್ವಾಮಿತ್ರ ಬ್ರಾಹ್ಮಣನಲ್ಲ. ಇಪ್ಪತ್ತೆಂಟಕ್ಕೂ ಹೆಚ್ಚು ಸ್ತ್ರೀಯರು ವೇದಮಂತ್ರಗಳ ದೃಷ್ಟಾರೆಯರಾಗಿದ್ದಾರೆ. ಆದ್ದರಿಂದ ವೇದಕ್ಕೆ ಬೇಲಿ ಹಾಕುವುದು ಸಾಧುವಲ್ಲ.

'ವಿದ್ಯತೇ ಅನೇನ ಧರ್ಮಾದಿ ಇತಿ ವೇದಃ' 'ವಿಂದಂತಿ ಅನೇನ ಇತಿ ವೇದಃ' 'ವೇದಯತಿ ಇತಿ ವೇದಃ' 'ವಿದ್ಯಾತಿ ಇತಿ ವೇದಃ'– ವೇದದ ಕುರಿತಾದ ಈ ಎಲ್ಲ ನಿರ್ವಚನಗಳೂ ಯಾವುದೇ ಗುಂಪಿಗೆ ಸಂಬಂಧಿಸಿದ್ದು ಎನ್ನುವುದಿಲ್ಲ. ಬದಲಾಗಿ ಜೀವನಧರ್ಮವನ್ನು ತಿಳಿಸಿಕೊಡುವುದು, ಮೋಕ್ಷಾದಿಗಳನ್ನು ಪಡೆಯಲು ಪೂರಕವಾದದ್ದು, ಜ್ಞಾನವನ್ನು ಹಂಚುವಂತದ್ದು ಎಂಬುದನ್ನು ಪ್ರಧಾನವಾಗಿ ಪ್ರತಿಪಾದಿಸುತ್ತೇವೆ. ಯಾವ ಫಲಾಪೇಕ್ಷೆಯಿಲ್ಲದೇ ಕೇವಲ ಜ್ಞಾನಕ್ಕಾಗಿ ಅಪೂರ್ವ ಜ್ಞಾನದ ರಕ್ಷಣೆಗಾಗಿ ವೇದವನ್ನು ಓದಬೇಕು ಎಂಬುದನ್ನು 'ನಿಷ್ಕಾರಣೋ ವೇದಃ ಅಧೀತವ್ಯಃ' ಎಂಬ ಸೂಕ್ತಿ ಪ್ರತಿಪಾದಿಸುತ್ತದೆ. ಸಂಪೂರ್ಣವಾಗಿ ಎಲ್ಲ ವಿಧದ ಜ್ಞಾನವನ್ನೂ ಸಾರ್ವತ್ರಿಕವಾಗಿ, ಸಾರ್ವಕಾಲಿಕವಾಗಿ ವೇದಗಳು ನೀಡುತ್ತವೆ.

ವಸ್ತುತಃ ವೇದವು ಒಂದೇ ಆಗಿದ್ದರೂ ಅವರ ವೈಶಾಲ್ಯ ರಕ್ಷಣೆ ಪ್ರಯೋಜನ... ಇತ್ಯಾದಿಗಳನ್ನು ಗಮನಿಸಿ ನಾಲ್ಕಾಗಿ ವಿಭಾಗಿಸಿದ್ದಾರೆ. 'ವಿಜ್ಞಾನಂ ಬ್ರಹ್ಮ' 'ಪ್ರಜ್ಞಾನಂ ಬ್ರಹ್ಮ' ಎಂದಿರುವುದರಿಂದ ವೇದವೆಂದರೆ ಪರಬ್ರಹ್ಮ ಅಥವಾಗಿ ಶಿವ. ಅಂತೆಯೇ ಶಿವ ಎಂದರೆ ವೇದ. ಇವೆರಡರ ನಡುವೆ ಅಂತರವಿಲ್ಲ. ಯಾರು ನಿರಂತರ ವೇದಾಧ್ಯಯನ ನಡೆಸುತ್ತಾರೋ ಅವನು ಸದಾಶಿವ. ವೇದವನ್ನರಿತರೆ ಶಿವನನ್ನರಿತಂತೆ. ಶಿವನನ್ನು ತಿಳಿದರೆ ವೇದವನ್ನು ತಿಳಿದಂತೆ. ಅವುಗಳ ನಡುವೆ ಬೇಧವಿಲ್ಲ. ಆದ್ದರಿಂದ ಎಲ್ಲ ಬಗೆಯ ಪ್ರಯತ್ನದಿಂದಲೂ ವೇದವನ್ನು ಅರಿತುಕೊಳ್ಳಬೇಕು. ನಿರಂತರ ಅಭ್ಯಸಿಸಬೇಕು.

ವೇದ ಪ್ರಪಂಚದ ಪ್ರಥಮ ಸಾಹಿತ್ಯ, ಗದ್ಯ, ಪದ್ಯ, ಚಂಪೂ ಪ್ರಕಾರಗಳನ್ನು ನಾವಿಲ್ಲಿ ಕಾಣಬಹುದು. ಸ್ತೋತ್ರ ಕಾವ್ಯವನ್ನೂ ನೋಡಬಹುದು. ಇವೆಲ್ಲವೂ ಭಗವಂತನನ್ನೂ ಸಮಾಜ ಸ್ವರೂಪಿ ಭಗವಂತನನ್ನು ತಿಳಿಸಿಕೊಡುವ ಪ್ರಯತ್ನ ಮಾಡುತ್ತವೆ. ಆದ್ದರಿಂದ ಸಮಾಜವನ್ನು ಭಗವಂತನನ್ನು, ಸನಾತನೆಯನ್ನು, ಪ್ರೀತಿಸುವವರು ವೇದವನ್ನು ಪ್ರೀತಿಸಬೇಕು. ಆಗ ಶಿವನನ್ನು ಪ್ರೀತಿಸಿದಂತೆ. ವೇದೋಪಾಸನೆ ಮಾಡಿದರೆ ಶಿವೋಪಾಸನೆ ಮಾಡಿದಂತೆ.

ಮತದಾರರ ತೀರ್ಪು ಪ್ರಶ್ನಿಸುವ ಚಾಳಿ: ಈಗ ಜಿರಳೆಯ ಪಾಳಿ

▸ ಅರುಣ್ ಆನಂದ್

ಭಾರತದಲ್ಲಿ ಈಗ ಒಂದು ಹೊಸ ಬಗೆಯ 'ರಾಜಕೀಯ ವಾತಾವರಣ' ನಿರ್ಮಾಣವಾಗಿದೆ. 2014ರ ಬಳಿಕ ರೂಪುಗೊಂಡ ವಾತಾವರಣವಿದು. ಬಿಜೆಪಿ ಯಾವುದೇ ಚುನಾವಣೆಯಲ್ಲಿ ಜಯ ಗಳಿಸಿದರೆ ಅದನ್ನು ತಿರಸ್ಕರಿಸುವಂತಹ, ಅದು ಸರಿಯಿಲ್ಲವೆಂದು ವಾದಿಸುವಂತಹ ವಾತಾವರಣವಿದು. ಚುನಾವಣಾ ಫಲಿತಾಂಶವನ್ನು ನಿರಾಕರಿಸುವ ಸ್ವರೂಪ ಆಗಾಗ ಬದಲಾಗುತ್ತಾ ಬಂದಿದ್ದರೂ ಅದರ ಮುಖ್ಯ ಅಂಶ ಮಾತ್ರ ಬದಲಾಗಿಲ್ಲ. 2014ರ ಚುನಾವಣೆಯ ಬಳಿಕ ಇಲೆಕ್ಟ್ರಾನಿಕ್ ಮತಯಂತ್ರ(ಇವಿಎಂ)ದ ಕುರಿತಂತೆ ಅನುಮಾನ ವ್ಯಕ್ತಪಡಿಸಲಾಯಿತು. 2019ರ ಚುನಾವಣೆಯ ಬಳಿಕ ಫಲಿತಾಂಶಗಳೆಲ್ಲವೂ ನ್ಯಾಯೋಚಿತವಲ್ಲ, ಅದರಲ್ಲಿ ವಂಚನೆ ನಡೆಯುತ್ತಿದೆ ಎಂದು ಹೇಳಿಕೊಂಡು ಬರಲಾಯಿತು. 2014ರಲ್ಲಿ ಬಿಜೆಪಿ ಕಡಿಮೆ ಸ್ಥಾನಗಳೊಂದಿಗೆ ಅಧಿಕಾರ ಹಿಡಿದ ಬಳಿಕ ಫಲಿತಾಂಶದ ವಿಶ್ಲೇಷಣೆಯ ಧಾಟಿ ಮತ್ತೆ ಬದಲಾಯಿತು. ಇದೀಗ ಹೊಸದಾಗಿ ಜಿರಳೆಯ ಮೀಮ್‌ಗಳೊಂದಿಗೆ ರಾಜಕೀಯವನ್ನು ವಿಶ್ಲೇಷಿಸುವ ಪ್ರಯತ್ನ ನಡೆಯುತ್ತಿದೆ. ಫಲಿತಾಂಶ ನಿರಾಕರಣೆಯ ಇವೆಲ್ಲ ಸ್ವರೂಪಗಳು ಬೇರೆಬೇರೆಯಾದರೂ ಅವುಗಳ ಕಾರ್ಯಾಚರಣೆಯ ರೀತಿ ಮಾತ್ರ ಒಂದೇ ಆಗಿದೆ. ಮತದಾರರು ನೀಡಿದ ತೀರ್ಪಿನ ಕುರಿತಂತೆ ಸದಾಕಾಲ ಸಂಶಯವನ್ನು ವ್ಯಕ್ತಪಡಿಸುವುದೇ ಅದರ ಮುಖ್ಯ ಗುರಿಯಾಗಿದೆ.

ಇವಿಎಂ ಹಂತ: 2014-2019

2014ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಭಾರೀ ಬಹುಮತ ಪಡೆದು ಅಧಿಕಾರಕ್ಕೇರಿದ ಬಳಿಕ ಭಾರತದ ವಿರೋಧ ಪಕ್ಷಗಳು ಮತ್ತು ಅದರೊಂದಿಗೆ ಸಖ್ಯ ಹೊಂದಿರುವ ರಾಜಕೀಯ ವಿಶ್ಲೇಷಣಾಕಾರರು ಇಲೆಕ್ಟ್ರಾನಿಕ್ ಮತಯಂತ್ರದ ಸಾಚಾತನವನ್ನು ಪ್ರಶ್ನಿಸತೊಡಗಿದರು.ತಾಂತ್ರಿಕ ನೆಲೆಯಲ್ಲಿ ಮತಯಂತ್ರ ಸರಿಯಿಲ್ಲ ಎಂದು ವಾದಿಸತೊಡಗಿದರು. ಮತಯಂತ್ರಗಳನ್ನು ಬಿಜೆಪಿ ತನಗೆ ಅನುಕೂಲಕರವಾಗಿ ತಿರುಚುತ್ತಿದೆ ಎಂದರು. ಸುಪ್ರೀಂಕೋರ್ಟ್ ಹಲವಾರು ತೀರ್ಪುಗಳಲ್ಲಿ ಮತಯಂತ್ರದ ಸಾಚಾತನವನ್ನು ಎತ್ತಿ ಹಿಡಿದರೂ ಈ ಮಂದಿಗೆ ಅದರಿಂದ ತೃಪ್ತಿಯಾಗಲಿಲ್ಲ.

ಇವಿಎಂ ಕುರಿತಾದ ಅನುಮಾನವು 2017 ಮತ್ತು 2018ರ ವಿಧಾನಸಭಾ ಚುನಾವಣೆಗಳಲ್ಲೂ ಮುಂದುವರಿಯಿತು. ವಿಪರ್ಯಾಸವೆಂದರೆ ವಿರೋಧ ಪಕ್ಷಗಳು ಗೆದ್ದ ರಾಜ್ಯಗಳಲ್ಲಿ ಇವಿಎಂ ನಿರ್ವಹಣೆಯನ್ನು ಪ್ರಶ್ನಿಸಲಿಲ್ಲ. ತಾವು ಸೋತಾಗ ಮಾತ್ರ ಇವಿಎಂನ ನಿರ್ವಹಣೆಯನ್ನು ವಿರೋಧ ಪಕ್ಷಗಳು ಪ್ರಶ್ನಿಸಿದವು. ನಿಜವಾಗಿ ಚುನಾವಣಾ ಯಂತ್ರದ ಕುರಿತಾಗಿ ಅವರ ಅನುಮಾನವಿರುವುದಲ್ಲ ಎಂಬ ಮೊದಲ ಸಂಕೇತ ಇದರಿಂದ ಲಭಿಸಿತು. ಬಿಜೆಪಿ ಗೆಲುವನ್ನು ಸ್ವೀಕರಿಸದಿರುವುದೇ ಅವರ ಮುಖ್ಯ ಕಾರ್ಯತಂತ್ರ ಎಂದು ತಿಳಿದುಬಂತು. ಮುಂದಿನ ದಶಕದಲ್ಲಿ ಇದೇ ಬಗೆಯ ವರ್ತನೆ ಬೇರೆ ಬೇರೆ ಸ್ವರೂಪಗಳಲ್ಲಿ ಕಂಡು ಬಂದಿತು.

ನಿರಾಕರಣೆಯ ಹಂತ: 2019-2024

2019ರಲ್ಲಿ ಬಿಜೆಪಿ ಹಿಂದಿನ ಚುನಾವಣೆಗಿಂತ ಹೆಚ್ಚು ಸ್ಥಾನ ಗೆದ್ದು ಅಧಿಕಾರಕ್ಕೇರಿತು. ಬಿಜೆಪಿ ವಿರೋಧಿ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ಪಂಡಿತರಿಂದ ಇದೀಗ ಕೇಳಿ ಬಂದುದು ತಾಂತ್ರಿಕ ದೋಷದ ಕುರಿತಂತೆ ಆರೋಪವಲ್ಲ. ಬದಲಾಗಿ ಅವರು ಚುನಾವಣೆಯ ಫಲಿತಾಂಶವನ್ನೇ ಪ್ರಶ್ನಿಸಲಾರಂಭಿಸಿದರು. ಈ ಫಲಿತಾಂಶವು ನಿಜವಾಗಿಯೂ ಮತದಾರರ ಅಭಿಮತವನ್ನು ಪ್ರತಿಫಲಿಸುವುದೇ ಎಂದು ಪ್ರಶ್ನಿಸುವಂತಹ ಲೇಖನಗಳು ಪ್ರಕಟವಾದವು. ಮತದಾರ ಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ, ಮತಗಟ್ಟೆ ವಶೀಕರಣ ನಡೆದಿದೆ ಎಂದೂ ಆರೋಪಿಸಲಾಯಿತು. ಚುನಾವಣಾ ಆಯೋಗವು ಬಿಜೆಪಿ ಜತೆ ಕೈ ಜೋಡಿಸಿದೆ ಎಂದು ದೂರುತ್ತಾ ಚುನಾವಣಾ ಆಯೋಗವನ್ನು ಪಕ್ಷಪಾತಿ ಎಂದು ಬಿಂಬಿಸಲಾಯಿತು. ಆದರೆ ಇವೆಲ್ಲಾ ಆರೋಪಗಳು ನ್ಯಾಯಾಲಯದ ಕಟಕಟೆಯಲ್ಲಿ ಬಿದ್ದುಹೋದವು. ಅವುಗಳಿಗೆ ಯಾವುದೇ ಪುರಾವೆಯಿಲ್ಲ ಎಂಬುದು ಸಾಬೀತಾಯಿತು.

> ಚುನಾವಣಾ ಸೋಲನ್ನು ಗೌರವಯುತವಾಗಿ ಒಪ್ಪಿಕೊಳ್ಳದ ಹೊಸದೊಂದು ರಾಜಕೀಯ ವಾತಾವರಣವು ಈಗ ಭಾರತದಲ್ಲಿ ನಿರ್ಮಾಣಗೊಂಡಿದೆ.

ಈ 'ಹೊಸ ರಾಜಕೀಯ ವ್ಯವಸ್ಥೆ'ಯು 2019ರಿಂದ 2024ರ ಅವಧಿಯಲ್ಲಿ ಚುನಾವಣಾ ಫಲಿತಾಂಶವನ್ನು ತಾನು ಮಾನ್ಯ ಮಾಡುವುದಿಲ್ಲವೆಂದು ಬಿಂಬಿಸಲು ಹಲವಾರು ವಿಧಗಳಲ್ಲಿ ಪ್ರಯತ್ನಿಸಿತು. ಪಾಕಿಸ್ತಾನದಲ್ಲಿ ನಡೆದ ಸರ್ಜಿಕಲ್ ದಾಳಿಗಳು ನಕಲಿ ಎಂದು ಹೇಳಲಾಯಿತು. ನೋಟು ಅಮಾನ್ಯೀಕರಣವು ಒಂದು ಪಿತೂರಿ ಎಂದು ಬಣ್ಣಿಸಲಾಯಿತು. ಸಂವಿಧಾನದ 370ನೇ ವಿಧಿ ರದ್ದತಿಯು ನ್ಯಾಯಬಾಹಿರ ಎಂದೆನ್ನಲಾಯಿತು. ರಾಮಮಂದಿರ ತೀರ್ಪನ್ನು ಕೋಮುವಾದಿ ಎಂದೆನ್ನಲಾಯಿತು. ಸಿಎಎ ಕಾಯ್ದೆಯು ಫ್ಯಾಸಿಸ್ಟ್ ಎಂದು ಜರೆಯಲಾಯಿತು. ಕಾರ್ಯಾಂಗದ ಪ್ರತಿಯೊಂದು ನಿರ್ಧಾರವನ್ನು ಕಾನೂನುಬಾಹಿರವಾದುದೆಂದು ಬಿಂಬಿಸುವ ಪ್ರಯತ್ನ ನಡೆಯಿತು. ಮತದಾರರ ತೀರ್ಪನ್ನು ಗೌಣವಾಗಿಸಿ, ಅದರ ಬದ್ಧತೆಯನ್ನು ಪ್ರಶ್ನಿಸಲಾಯಿತು.

ನಿಜವಾಗಿ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸೋತವನು ತನ್ನ ಸೋಲನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ಯಾರೇ ಗೆದ್ದರೂ ಆತ ಮುಂದಿನ ಅವಧಿಗೆ ನ್ಯಾಯೋಚಿತ ಆಡಳಿತಗಾರನೆಂಬುದನ್ನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಪ್ಪಿಕೊಳ್ಳಬೇಕು. ಆದರೆ ಯಾವಾಗ ವಿರೋಧ ಪಕ್ಷಗಳು ಅಂತಹ ಚುನಾವಣಾ ತೀರ್ಪನ್ನು ಒಪ್ಪಿಕೊಳ್ಳುವುದಿಲ್ಲವೋ ಆಗ ಪ್ರತಿಯೊಂದು ಚುನಾವಣೆ ಕೂಡಾ ಪ್ರಶ್ನಾರ್ಹವೆಂದಾಗುತ್ತದೆ. ಕಾರ್ಯಾಂಗದ ಪ್ರತಿಯೊಂದು ನಿರ್ಧಾರ ಕೂಡಾ ಒತ್ತಡಕ್ಕೆ ಒಳಗಾಗುತ್ತದೆ.

ಮೀಮ್ ಹಂತ : 2024ರ ನಂತರ...

2024ರ ಚುನಾವಣೆಯಲ್ಲಿ ಬಿಜೆಪಿ ಅಧಿಕಾರ ಗಳಿಸಿದರೂ ಅದಕ್ಕೆ ಕೆಲವಷ್ಟು ಸ್ಥಾನಗಳ ನಷ್ಟವಾಯಿತು. ಮಿತ್ರ ಪಕ್ಷಗಳ ಬೆಂಬಲದಿಂದ ಬಿಜೆಪಿ ಸರಕಾರ ರಚಿಸಿತು. ಯಾವುದೇ ಆರೋಗ್ಯಕರ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಇದೊಂದು ಫಲಪ್ರದ ಫಲಿತಾಂಶ ಎಂದು ಭಾವಿಸಬೇಕಾಗುತ್ತದೆ. ಆಡಳಿತ ಪಕ್ಷಕ್ಕೆ ಸೋಲುಣಿಸದಿದ್ದರೂ ಸ್ವಲ್ಪ ಮಟ್ಟಿನ ನಿಯಂತ್ರಣ ಹೇರಲಾಯಿತು. ವಿಪಕ್ಷಗಳ ಬಲವೃದ್ಧಿಗೊಂಡರೂ ಅದು ವಿಜೇತವಾಗಲಿಲ್ಲ. ಇದು ಮತದಾರರ ಪ್ರಬುದ್ಧ ತೀರ್ಪು. ಆದರೆ ಈ 'ಹೊಸ ರಾಜಕೀಯ ವ್ಯವಸ್ಥೆ'ಯು ಈ ಪ್ರಬುದ್ಧ ತೀರ್ಪನ್ನು ಒಪ್ಪಿಕೊಳ್ಳುವ ಮನಸ್ಥಿತಿಯನ್ನೂ ಪ್ರದರ್ಶಿಸಲಿಲ್ಲ. ಕೆಲವೇ ತಿಂಗಳಲ್ಲಿ ಈ ತೀರ್ಪನ್ನು ಮತ್ತೊಂದು ಹೊಸ ವಿಧಾನದಲ್ಲಿ ತಿರಸ್ಕರಿಸುವಂತಹ ಸ್ವರೂಪ ಅನಾವರಣಗೊಂಡಿತು.

ಈ ಹೊಸ ಸ್ವರೂಪವೇ ಮೀಮ್. ಅದಕ್ಕೆ ಈಗ ಹೊಸದಾದ ಸೇರ್ಪಡೆ ಕಾಕ್ರೋಚ್ ಜನತಾ ಪಾರ್ಟಿ. 2024ರ ಚುನಾವಣಾ ಫಲಿತಾಂಶವನ್ನು ತಾಂತ್ರಿಕವಾಗಿ ಅಥವಾ ಕಾನೂನಿನ ಮುಖಾಂತರ ಪ್ರಶ್ನಿಸಲಿಲ್ಲ. ಆದರ ಬದಲಾಗಿ ಸಾಂಸ್ಕೃತಿಕ ಸ್ವರೂಪದೊಂದಿಗೆ ಚುನಾವಣಾ ಫಲಿತಾಂಶವು ನ್ಯಾಯಬಾಹಿರ ಎಂಬಂತೆ ಚಿತ್ರಿಸಲಾಯಿತು. ಮುಖ್ಯ ಚುನಾವಣಾ ಆಯುಕ್ತರನ್ನು ಯುಎಪಿಎ ಕಾಯ್ದೆಯಡಿ ಬಂಧಿಸಬೇಕೆಂದು ಹೇಳಲಾಯಿತು. ಮಾಧ್ಯಮಗಳನ್ನು ನಿಯಂತ್ರಿಸಬೇಕು ಎನ್ನಲಾಯಿತು. ನ್ಯಾಯಾಂಗದ ಸುಧಾರಣೆಯಾಗಬೇಕು ಎಂದು ಒತ್ತಾಯಿಸಲಾಯಿತು. ಸಂಸತ್ತನ್ನು ಪುನರ್‌ರಚಿಸಬೇಕೆನ್ನಲಾಯಿತು. ಆದರೆ ಈಗೆಲ್ಲ ಬೇಡಿಕೆ ಇಡುವ ಮಂದಿಗಳು 2024ರ ಚುನಾವಣೆಯಲ್ಲಿ ತೀರ್ಪು ನೀಡಿದ ಜನರ ಅಭಿಪ್ರಾಯವನ್ನು ಮನ್ನಿಸಬೇಕು ಎಂಬ ಭಾವನೆಯನ್ನು ಮಾತ್ರ ಪ್ರದರ್ಶಿಸಲಿಲ್ಲ. ಅವರ ಪ್ರಕಾರ ಅದು ಜನರು ನೀಡಿದ ತೀರ್ಪಲ್ಲ. ಬೇರಾವುದೋ ಸ್ವರೂಪದಲ್ಲಿ ಚುನಾವಣಾ ಫಲಿತಾಂಶ ರೂಪುಗೊಂಡಿದೆ ಎಂಬುದು ಅವರ ವಾದ. ಇಂತಹ ವಾದವನ್ನು ಮಂಡಿಸುವ ರೀತಿಯಲ್ಲಿ ಮೀಮ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗತೊಡಗಿದವು.

ಈ ಮೀಮ್ ಹಂತದ ಬುದ್ಧಿವಂತಿಕೆಯೆಂದರೆ ಇದಕ್ಕೆ ಯಾವುದೇ ತರ್ಕದ ಅಗತ್ಯವಿಲ್ಲ. ಇವಿಎಂ ಹಂತಕ್ಕೆ ತಾಂತ್ರಿಕ ಪುರಾವೆಯ ಅಗತ್ಯವಿತ್ತು. ಅದನ್ನು ಪರಿಶೋಧನೆಗೆ ಒಳಪಡಿಸುವ ಅವಕಾಶವೂ ಇತ್ತು. ನಿರಾಕರಣೆಯ ಹಂತದಲ್ಲಿ ನೈತಿಕ ಮೌಲ್ಯದ ಪ್ರಶ್ನೆ ಇತ್ತು. ಅದರ ಕುರಿತಾಗಿ ಚರ್ಚೆ ನಡೆಯಬಹುದಾಗಿತ್ತು. ಆದರೆ ಈ ಮೀಮ್ ಹಂತಕ್ಕೆ ಅದಾವುದರ ಅಗತ್ಯವೂ ಇಲ್ಲ. ತಮ್ಮ ಅಸಂತೃಪ್ತಿಯನ್ನು ಹಾಸ್ಯದ ಮೂಲಕ, ವಿಡಂಬನೆಯ ಮೂಲಕ ಮಂಡಿಸಲಾಗುತ್ತದೆ. ಇಲ್ಲಿ ಈ ಮೀಮ್‌ಗಳು ಪ್ರತಿಪಾದಿಸುವ ಸುಳ್ಳುಗಳನ್ನು ಸಾಬೀತುಪಡಿಸಲಾಗುವುದಿಲ್ಲ. ಈಗ ಜಿರಳೆಗಳು ಕೂಡಾ ಯಾವುದೇ ವಾದಗಳನ್ನು ಮಂಡಿಸುತ್ತಿಲ್ಲ. ಜಿರಳೆಗಳು ಕೇವಲ ಜಿರಳೆಗಳಾಗಿವೆ. 2024ರ ಚುನಾವಣಾ ಫಲಿತಾಂಶ ನಡೆದೇ ಇಲ್ಲ ಎಂಬಂತೆ ಬಿಂಬಿಸಲಾಗುತ್ತಿದೆ.

ಈ ಮೂರು ಹಂತಗಳಲ್ಲಿರುವ ಸಮಾನ ಅಂಶಗಳೆಂದರೆ ಭಾರತದ ಮತದಾರರು ನೀಡಿದ ಚುನಾವಣಾ ತೀರ್ಪಿನ ಕುರಿತಂತೆ ನಿರಂತರವಾಗಿ ಅನುಮಾನ ವ್ಯಕ್ತಪಡಿಸುವುದು. ಚುನಾವಣಾ ಫಲಿತಾಂಶವು ಸಂಶಯಾಸ್ಪದವಾಗಿದೆ ಎಂಬಂತೆ ಬಿಂಬಿಸುವುದು. ಇಂಥ ಪರಿಸ್ಥಿತಿಯು ಈ ಹೊಸ ಬಗೆಯ ರಾಜಕೀಯ ವ್ಯವಸ್ಥೆಗೆ ಹೇಗೂ ಅನುಕೂಲಕರವಾಗಿದೆ. ಅವರಿಗೆ ಹಣ ಹರಿದು ಬರುತ್ತಿರುತ್ತದೆ. ಮಾಧ್ಯಮಗಳು ಪ್ರಚಾರ ನೀಡುತ್ತಿರುತ್ತವೆ. ಅಂತಾರಾಷ್ಟ್ರೀಯ ಮಾಧ್ಯಮಗಳೂ ಪ್ರಚಾರ ಒದಗಿಸುತ್ತವೆ.

ಕಾಕ್ರೋಚ್ ಜನತಾ ಪಾರ್ಟಿ ಕೂಡಾ ಈ ವ್ಯವಸ್ಥೆಯಡಿ ಸೂಕ್ತವಾಗಿ ಹೊಂದಿಕೊಳ್ಳುತ್ತದೆ. ಅದು ಕೂಡಾ ನಿರ್ದಿಷ್ಟ ಚುನಾವಣಾ ಫಲಿತಾಂಶವನ್ನು ಒಪ್ಪಿಕೊಳ್ಳುವುದಿಲ್ಲ. ಅದು ಯಾವುದೇ ಚುನಾವಣಾ ಪರಿಹಾರವನ್ನೂ ತಿಳಿಸುವುದಿಲ್ಲ. ಅದು ಕೇವಲ ಶಾಶ್ವತ ವಿಪಕ್ಷ ಶಕ್ತಿಯಾಗಿ ಉಳಿಯುತ್ತದೆ ಅಷ್ಟೆ. ಯಾವುದೇ ಸಮಸ್ಯೆಗೆ ಯಾವುದೇ ಕ್ಷಣದಲ್ಲಿ ಸ್ಪಂದಿಸುವ ಶಕ್ತಿಯಾಗಿ ವರ್ತಿಸುತ್ತದೆ. ಮುಂದಿನ ಚುನಾವಣೆ ಬರುವಾಗ ಅದು ತಾನೇ ಚುನಾವಣಾ ಸಂಘಟನೆಯಾಗಿಯೇನೂ ಬದಲಾಗದು. ಅದು ಕೇವಲ ವಿರೋಧ ಪಕ್ಷಗಳಿಗೆ ಬೆಂಬಲ ನೀಡಬಲ್ಲ ಮೀಮ್ ಶಕ್ತಿಯಾಗಿಯೇ ಉಳಿಯುತ್ತದೆ.

ರಾಜಕೀಯ ಸಿದ್ಧಾಂತಗಳಲ್ಲಿ ಅದಕ್ಕೂ ಒಂದು ಹೆಸರಿದೆ. ಅದನ್ನು 'ನಿರಂತರ ದಂಗೆಯ ರಾಜಕೀಯ' ಎನ್ನುತ್ತಾರೆ. 20ನೇ ಶತಮಾನದಲ್ಲಿ ಮಾರ್ಕ್ಸಿಸ್ಟ್ ಚಿಂತನೆಯಿಂದ ಇದು ಹುಟ್ಟಿಕೊಂಡಿತು. ಅದರ ಪ್ರಕಾರ ದಂಗೆ ಎಂಬುದು ಏಕೈಕ ಘಟನೆಯಲ್ಲ. ಬದಲಾಗಿ ಅದು ಒಂದು ನಿರಂತರ ಪ್ರಕ್ರಿಯೆ. ಪ್ರಜಾತಾಂತ್ರಿಕ ಸಮಾಜದಲ್ಲಿ ಇರುವ ಸಂಸ್ಥೆಗಳು ಈ ನಿರಂತರ ಪ್ರಕ್ರಿಯೆಯಲ್ಲಿರುವ ನಿಲುದಾಣಗಳು ಮಾತ್ರ. ಈ ಪ್ರಕ್ರಿಯೆಗೆ ಯಾವುದೇ ಅಂತಿಮ ಗುರಿಯಿಲ್ಲ. ಮತದಾರರು ತಮಗೆ ಮತ ನೀಡುವ ತನಕ ತಮ್ಮ ಪಾಲಿಗೆ ಉಪಯುಕ್ತರು. ತಮಗೆ ಮತ ನೀಡದಿದ್ದರೆ ಅವರೊಂದು ಅಡ್ಡಿ ಎಂಬಂತೆ ಪರಿಗಣಿಸಲಾಗುತ್ತದೆ.

ಭಾರತವು ಮಾರ್ಕ್ಸಿಸ್ಟ್ ಸಮಾಜವಲ್ಲ. ನಮ್ಮದು ಸಂವಿಧಾನಾತ್ಮಕ ಪ್ರಜಾತಂತ್ರ. ಸೋಲುಗಳನ್ನು ಅರಸಿಗಿಕೊಂಡು ನಿಗದಿತ ಅವಧಿಗಳಲ್ಲಿ ಹೊಸ ಸ್ಪರ್ಧೆಗೆ ಅಣಿಯಾಗುವಂತೆ ನಮ್ಮ ಪ್ರಜಾತಾಂತ್ರಿಕ ಸಂಸ್ಥೆಗಳನ್ನು ರೂಪುಗೊಳಿಸಲಾಗಿದೆ. ಸೋತವರು ಈ ತೀರ್ಪನ್ನು ಒಪ್ಪಿಕೊಳ್ಳುತ್ತಾರೆ. ಗೆದ್ದವರು ತಮ್ಮ ಕಾರ್ಯಸೂಚಿ ಜಾರಿಗೊಳಿಸುತ್ತಾರೆ. ಮುಂದಿನ ಚುನಾವಣೆಯಲ್ಲಿ ಮತ್ತದೇ ಸ್ಪರ್ಧೆ ಏರ್ಪಡುತ್ತದೆ. ಆದರೆ ಕಾಕ್ರೋಚ್ ಜನತಾ ಪಾರ್ಟಿಯಂತಹುದು ಬೇರೆಯೇ ವರ್ಗಕ್ಕೆ ಸೇರಿದುದು. ಅದು 'ಮತ್ತೊಂದು ಬಾರಿ' ನೋಡೋಣ ಎಂಬ ನಿಯಮಕ್ಕೆ ಬದ್ಧವಾಗಿಲ್ಲ. 'ಶಾಶ್ವತವಾಗಿ ಈಗಲೇ' ಎಂಬ ನಿಯಮವನ್ನು ಅದು ಬಯಸುತ್ತಿದೆ. ಅದು ಭಾರತದ ಪಾಲಿಗೆ ಸ್ವೀಕಾರಾರ್ಹವಲ್ಲ.

ಭಾರತದ ತಂತ್ರಜ್ಞಾನ ಅಭಿವೃದ್ಧಿಗೆ ವಿದೇಶಿ ಮೈತ್ರಿಗಳು ಅಗತ್ಯ

▸ ರಾಮ್ ಮಾಧವ್

ಪ್ರಧಾನಿ ನರೇಂದ್ರ ಮೋದಿಯವರು ನಾರ್ಡಿಕ್ ದೇಶಗಳಿಗೆ ನೀಡಿದ ಭೇಟಿಯು ಅಲ್ಲಿನ ಒಬ್ಬ ಪತ್ರಕರ್ತೆಯ ಬೇಜವಾಬ್ದಾರಿಯುತ ವರ್ತನೆಯಿಂದ ಅನವಶ್ಯ ವಿವಾದಕ್ಕೆರವಾಯಿತು. ಪ್ರಧಾನಿ ಮೋದಿಯವರು ನಾರ್ವೆಯ ಪ್ರಧಾನಿ ಜೊನಾಸ್ ಸ್ಟೋರ್ ಅವರೊಂದಿಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದಾಗ ಹೆಲ್ಲೆ ಲಿಂಗ್ ಸ್ವೆಂಡ್ಸನ್ ಎಂಬ ಪತ್ರಕರ್ತೆಯು ಸಭೆಯ ಮಧ್ಯದಿಂದಲೇ ದೊಡ್ಡದಾಗಿ ಕಿರುಚಿ ಪ್ರಧಾನಿಯೆಡೆಗೆ ಪ್ರಶ್ನೆ ಎಸೆದಳು. ಪತ್ರಕರ್ತರಿಗೆ ಮಾಹಿತಿ ನೀಡುವ ಗೋಷ್ಠಿ ಅದಾಗಿತ್ತೇ ಹೊರತು ಪತ್ರಕರ್ತರು ಪ್ರಶ್ನೆ ಕೇಳುವ ಅವಕಾಶ ಅಲ್ಲಿ ಇರಲಿಲ್ಲ. ಆದರೆ ಆಕೆ ತನ್ನ ವರ್ತನೆಯ್ನು ಸಮರ್ಥಿಸಿಕೊಂಡು ಇದು 'ಸಂಘರ್ಷಾನಾತ್ಮಕ ಪತ್ರಿಕೋದ್ಯಮ', ಜಗತ್ತಿನ ಪತ್ರಿಕಾ ಸ್ವಾತಂತ್ರ್ಯವನ್ನು ಪ್ರತಿನಿಧಿಸುವ ತಾನು ಇಂತಹ ವರ್ತನೆಯನ್ನು ತೋರುವುದು ತನ್ನ ಕರ್ತವ್ಯವೆಂದೂ ನುಡಿದಳು. ಎಂತಹ ಹಾಸ್ಯಾಸ್ಪದ ಸಮರ್ಥನೆ!

ನಾರ್ವೆ ಕೇವಲ 50 ಲಕ್ಷ ಜನಸಂಖ್ಯೆಯುಳ್ಳ ಒಂದು ದೇಶ. ಭಾರತದ ಪುಣೆ ಮತ್ತು ಹೈದರಾಬಾದ್‌ನಲ್ಲಿರುವ ಜನಸಂಖ್ಯೆಗಿಂತಲೂ ಇದು ಕಡಿಮೆ. ಹೆಲ್ಲೆ ಲಿಂಗ್ ಪ್ರತಿನಿಧಿಸುತ್ತಿದ್ದ ಪತ್ರಿಕೆಯ ಹೆಸರು ಡಾಗ್ಸವಿಸನ್. ಈ ಪತ್ರಿಕೆಯ ಮಾಲಕ ಮೆಂಟರ್ ಮೀಡಿಯರ್ ಎಂಬಾತ. ಈ ಪತ್ರಿಕೆಯ ಪ್ರಮುಖ ಪಾಲುದಾರರು ನಾರ್ವೆಯ ಕ್ರೈಸ್ತ ಮಿಶನರಿ ಸಂಘಗಳು. ಆಕೆ ಪ್ರತಿನಿಧಿಸುವ ಈ ಪತ್ರಿಕೆಯು ನಾರ್ವೆಯಲ್ಲಿ ಅತ್ಯಂತ ಸಣ್ಣ ಪತ್ರಿಕೆ. ಅದರ ಪ್ರಸರಣ ದಿನಕ್ಕೆ 15 ಸಾವಿರ ಪ್ರತಿಗಳು ಮಾತ್ರ. ಆದರೆ ಈ ಪತ್ರಕರ್ತೆಯ ಅಹಂ ಮಾತ್ರ ಅದನ್ನು ಮೀರಿದ್ದಾಗಿದೆ.

ಭಾರತದಲ್ಲಿ 1.55 ಲಕ್ಷಕ್ಕಿಂತಲೂ ಹೆಚ್ಚು ನೋಂದಾಯಿತ ಪತ್ರಿಕೆಗಳು ಹಾಗೂ ಪತ್ರಿಕಾ ಸಂಸ್ಥೆಗಳಿದ್ದರೆ, ನಾರ್ವೆಯಲ್ಲಿರುವುದು 300ಕ್ಕೂ ಕಡಿಮೆ ಸುದ್ದಿ ಸಂಸ್ಥೆಗಳು. ಭಾರತದ 22 ಭಾಷೆಗಳಲ್ಲಿ 17000 ದಿನಪತ್ರಿಕೆಗಳು ಪ್ರಕಟವಾಗುತ್ತವೆ. ಭಾರತದಲ್ಲಿ 900ಕ್ಕೂ ಅಧಿಕ ಉಪಗ್ರಹಾಧಾರಿತ ಟಿವಿ ಚಾನೆಲ್‌ಗಳಿದ್ದು, ಅವುಗಳಲ್ಲಿ ಸುಮಾರು 400 ಚಾನೆಲ್‌ಗಳು ಕೇವಲ ಸುದ್ದಿ ಪ್ರಸಾರ ಮತ್ತು ಪ್ರಚಲಿತ ವಿದ್ಯಮಾನಗಳಿಗೆ ಮೀಸಲಾಗಿವೆ. ಭಾರತದಲ್ಲಿ 3700ಕ್ಕೂ ಅಧಿಕ ಡಿಜಿಟಲ್ ಮಾಧ್ಯಮಗಳಿವೆ. ಭಾರತದ ಈ ಎಲ್ಲಾ ಮಾಧ್ಯಮ ಗಳೂ ಮುಕ್ತ ಸ್ವಾತಂತ್ರ್ಯವನ್ನು ಅನುಭವಿಸುತ್ತಿವೆ. ಹಲವಾರು ಮಾಧ್ಯಮ ಸಂಸ್ಥೆಗಳಂತೂ ಕೇವಲ ಸರಕಾರವನ್ನು ಟೀಕಿಸಲೆಂದೇ ಮೀಸಲಾಗಿವೆ. ಭಾರತದ ಪತ್ರಿಕಾ ಸ್ವಾತಂತ್ರ್ಯವನ್ನು ಟೀಕಿಸುವ ಮೊದಲು ಪಾಶ್ಚಿಮಾತ್ಯ ದೇಶಗಳ ಈ ಕುಬ್ಜ ಮಾಧ್ಯಮಗಳು ಭಾರತೀಯ ಪತ್ರಿಕೋದ್ಯಮದ ವೈಶಾಲ್ಯ ಮತ್ತು ವೈವಿಧ್ಯತೆಯನ್ನು ಅರ್ಥ ಮಾಡಿಕೊಳ್ಳಬೇಕು.

"ಪ್ರಧಾನಿ ಮೋದಿಯವರು ನಮ್ಮ ಸರಕಾರದ ವಿಶ್ವಾಸವನ್ನು ಗಳಿಸಲು ಅರ್ಹರೇ" ಎಂಬುದಾಗಿ ಹೆಲ್ಲೆ ಲಿಂಗ್ ಪ್ರಶ್ನಿಸಿದ್ದು ಮತ್ತು ಆಕೆ ಪ್ರಶ್ನಿಸಿದ ರೀತಿ ಎರಡೂ ಪಾಶ್ಚಿಮಾತ್ಯ ಲಿಬರಲ್ ಮಾಧ್ಯಮಗಳ ಜನಾಂಗೀಯ ಅಹಂಕಾರದ ಧ್ಯೋತಕವಾಗಿವೆ. ಜನಾಂಗೀಯವಾಗಿ ತಾವು ಶ್ರೇಷ್ಠರು ಎಂಬ ಭಾವನೆಯಿಂದ ಈ ಪಾಶ್ಚಿಮಾತ್ಯ ಲಿಬರಲ್ ಮಾಧ್ಯಮಗಳು ಇನ್ನೂ ಹೊರಬಂದಿಲ್ಲ. 1927ರಲ್ಲಿ ಅಮೆರಿಕದ ಪತ್ರಕರ್ತೆ ಕ್ಯಾಥರಿನ್ ಮಾಯೋ ಎಂಬಾಕೆ ಭಾರತವನ್ನು ಕೆಟ್ಟದಾಗಿ ಚಿತ್ರಿಸಿ ವರದಿ ಮಾಡಿದ್ದಾಗ ಮಹಾತ್ಮಾ ಗಾಂಧಿಯವರು ಅದನ್ನು "ಇದು ಚರಂಡಿ ತಪಾಸಣೆಯವರ ವರದಿ" ಎಂಬುದಾಗಿ ಬಣ್ಣಿಸಿದ್ದರು.ಅದೇ ರೀತಿ ಹೆಲ್ಲೆ ಲಿಂಗ್ ಭಾರತದ ಪತ್ರಿಕಾ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳನ್ನು ಪ್ರಶ್ನಿಸಿದ್ದನ್ನು ಕೂಡಾ ಆಕೆಯ "ಗಟಾರ ಪತ್ರಿಕೋದ್ಯಮ" ಎಂಬುದಾಗಿ ಬಣ್ಣಿಸಬೇಕಾಗುತ್ತದೆ.



ಮಾಧ್ಯಮಗಳೆಲ್ಲಾ ಈ ವಿವಾದಕ್ಕೇ ಹೆಚ್ಚು ಪ್ರಾಮುಖ್ಯತೆ ನೀಡಿದವಾದರೂ ನಿಜವಾಗಿ ನಾರ್ಡಿಕ್ ದೇಶಗಳಿಗೆ ಮತ್ತು ಇಟಲಿ, ನೆದರ್ಲೆಂಡ್‌ಗೆ ಮೋದಿಯವರು ನೀಡಿದ ಭೇಟಿಯು ಅತ್ಯಂತ ಮಹತ್ವದ್ದಾಗಿತ್ತು ಎಂಬುದನ್ನು ಮಾಧ್ಯಮಗಳು ಗಮನಿಸದೆ ಹೋದವು. ಪ್ರಧಾನಿ ಮೋದಿಯವರು ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ ಜತೆಗೂಡಿ ಮಾಧ್ಯಮಗಳಲ್ಲಿ ಲೇಖನವೊಂದನ್ನು ಬರೆದು ವಿವಿಧ ದೇಶಗಳ ಮುಖಂಡರೊಂದಿಗಿನ ತಮ್ಮ ಭೇಟಿಯ ಫಲವನ್ನು ವಿವರಿಸಿದ್ದನ್ನು ಗಮನಿಸಬಹುದು. "ನಮ್ಮ ಸಹಕಾರವು ನಾವು ಹಂಚಿಕೊಂಡಿರುವ ಜಾಗೃತಿಯನ್ನು ಪ್ರತಿಬಿಂಬಿಸುತ್ತದೆ. 21ನೇ ಶತಮಾನದ ಭದ್ರತೆ ಮತ್ತು ಅಭಿವೃದ್ಧಿಯು ವಿವಿಧ ದೇಶಗಳು ನಡೆಸುವ ಆವಿಷ್ಕಾರ, ಇಂಧನ ನಿರ್ವಹಣೆ ಮತ್ತು ಸಾರ್ವಭೌಮತ್ವ ಬಲಪಡಿಸುವ ಪ್ರಕ್ರಿಯೆಯನ್ನು ಅವಲಂಬಿಸಿದೆ" ಎಂಬುದಾಗಿ ಅವರು ಲೇಖನದಲ್ಲಿ ಬರೆದಿದ್ದರು.

ಜಗತ್ತು ಈಗ ವೇಗವಾಗಿ ಬದಲಾಗುತ್ತಿದೆ. ತಂತ್ರಜ್ಞಾನವು ಜಗತ್ತಿನ ಆಗುಹೋಗು ನಿಭಾಯಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಕೃತಕ ಬುದ್ಧಿಮತ್ತೆ, ಸೆಮಿಕಂಡಕ್ಟರ್‌ಗಳು, ಕ್ವಾಂಟಮ್ ವಿಜ್ಞಾನ, ಬಯೋಟೆಕ್ನಾಲಜಿ, ವ್ಯೋಮ ಸಂಶೋಧನೆ, ರೋಬೋಟಿಕ್ಸ್ ಮತ್ತು ಕ್ರಿಪ್ಟೋ ಮುಂತಾದ ಹೊಸಹೊಸ ತಂತ್ರಜ್ಞಾನಗಳು ಜಗತ್ತಿನಲ್ಲಿ ದೇಶವೊಂದರ ಶಕ್ತಿ ಸಾಮರ್ಥ್ಯ ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಭವಿಷ್ಯದಲ್ಲಿ ದೇಶವೊಂದರ ಜಿಡಿಪಿಯನ್ನು ಆ ದೇಶದ 'ಜಿಟಿಪಿ' (gross technological prowess –ಒಟ್ಟು ತಂತ್ರಜ್ಞಾನ ಸಾಮರ್ಥ್ಯ) ನಿರ್ಧರಿಸಲಿದೆ. ಪ್ರಸ್ತುತ 'ಎಐ ತಂತ್ರಜ್ಞಾನ'ವು ಮುಂಚೂಣಿಯಲ್ಲಿದೆ. ಆದರೆ ಅಮೆರಿಕ ಚೀನಾದಂತಹ ಕೆಲವು ರಾಷ್ಟ್ರಗಳು ಅದರ ಮೇಲೆ ಏಕಸ್ವಾಮ್ಯ ಸಾಧಿಸಿರುವುದು ಇತರ ದೇಶಗಳಿಗೆ ಪ್ರತಿಕೂಲವಾಗಿ ಪರಿಣಮಿಸಿದೆ. ಇವುಗಳು ಒಂದು ರೀತಿಯಲ್ಲಿ ತಂತ್ರಜ್ಞಾನ ವಸಾಹತುಶಾಹಿಯನ್ನು ಸ್ಥಾಪಿಸಿರುವುದು ಇನ್ನಿತರ ಹಲವಾರು ದೇಶಗಳ ಪಾಲಿಗೆ ಗಂಭೀರ ಬೆದರಿಕೆಯನ್ನು ಒಡ್ಡಿವೆ.

ತಂತ್ರಜ್ಞಾನ ಗುಲಾಮ ಎಂಬುದು ಈಗ ಕೇವಲ ಕವಿಕಲ್ಪನೆಯಾಗಿ ಉಳಿದಿಲ್ಲ. ಇತ್ತೀಚೆಗೆ ಫ್ರಾನ್ಸ್‌ನ ಪ್ರಮುಖ ಎಐ ಕಂಪೆನಿಯೊಂದರ ಮುಖ್ಯಸ್ಥರಾದ ಆರ್ಥರ್ ಮೆಂಚ್ ಎಂಬವರು ತಮ್ಮ ದೇಶದ ಸಂಸತ್ತಿನಲ್ಲಿ ಮಾತನಾಡುತ್ತಾ, ಯುರೋಪ್ ಎರಡು ವರ್ಷಗಳೊಳಗೆ ಕೃತಕ ಬುದ್ಧಿಮತ್ತೆಯಲ್ಲಿ ಹೆಚ್ಚಿನ ಪರಿಣತಿ ಸಾಧಿಸಬೇಕು. ಇಲ್ಲದಿದ್ದರೆ ಅಮೆರಿಕದಂತಹ ದೇಶಗಳ ಅಡಿಯಾಳಾಗಿ ವರ್ತಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದರು. "ಒಂದು ಬಾರಿ ಅಮೆರಿಕದ ಕಂಪೆನಿಗಳು ಇವುಗಳ ಮೇಲೆ ಏಕಸ್ವಾಮ್ಯ ಸಾಧಿಸಿದರೆ ಹಠಾತ್ತನೆ ನಮಗೆ ಅದರ ಪೂರೈಕೆ ನಿಂತುಹೋಗಬಹುದು. ಅದರಿಂದಾಗಿ ನಾವು ತಂತ್ರಜ್ಞಾನದಲ್ಲಿ ಪ್ರಗತಿ ಸಾಧಿಸುವುದೇ ಸ್ಥಗಿತಗೊಳ್ಳಬಹುದು. ಯುರೋಪ್ ಅಮೆರಿಕದ ಗುಲಾಮ ದೇಶವಾಗಬಹುದು" ಎಂದು ಅವರು ಎಚ್ಚರಿಸಿದ್ದರು. ಪ್ರಧಾನಿ ಮೋದಿಯವರು ಯುರೋಪ್ ಮತ್ತು ಏಷ್ಯಾದ ಹಲವು ದೇಶಗಳ ಜತೆ ಹೆಚ್ಚೆಚ್ಚು ಸೌಹಾರ್ದತೆ ಸಾಧಿಸಲು ಯತ್ನಿಸುತ್ತಿರುವುದು ಕೂಡಾ ಈ ರೀತಿ ಗುಲಾಮ ದೇಶಗಳಾಗುವ ಸಾಧ್ಯತೆಯನ್ನು ತಪ್ಪಿಸುವ ಉದ್ದೇಶಕ್ಕಾಗಿಯೇ. ತಂತ್ರಜ್ಞಾನದಲ್ಲಿ ಯುರೋಪಿನ ದೇಶಗಳೊಂದಿಗೆ ಸಹಕಾರ ವೃದ್ಧಿಸಿಕೊಂಡು ಚೀನಾ, ಅಮೆರಿಕದ ಮೇಲಿನ ಅವಲಂಬನೆಯನ್ನು ತಪ್ಪಿಸುವುದು ಭಾರತದ ಗುರಿಯಾಗಿದೆ.

ಮೋದಿ ನೇತೃತ್ವದಲ್ಲಿ ಕಳೆದೊಂದು ದಶಕದಲ್ಲಿ ಭಾರತವು 'ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ'(ಡಿಪಿಐ)ಗಳ ಅಭಿವೃದ್ಧಿಯಲ್ಲಿ ಉತ್ತಮ ಬೆಳವಣಿಗೆ ಸಾಧಿಸುತ್ತಾ ಬಂದಿದೆ. ಹಲವಾರು ದೇಶಗಳು ಈಗ ಇದರ ಲಾಭ ಪಡೆಯುತ್ತಿವೆ ಕೂಡಾ. ಆದರೆ ಈಗ ಪರಿಸ್ಥಿತಿ ಬದಲಾಗುತ್ತಿದೆ. ಎಐ, ಸೆಮಿಕಂಡಕ್ಟರ್‌ಗಳು, ಕ್ವಾಂಟಮ್ ಮುಂತಾದ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ನಡೆಯಬೇಕಾದ ಅಗತ್ಯ ಕಂಡುಬಂದಿದೆ. ಭಾರತದಲ್ಲಿ ತಂತ್ರಜ್ಞಾನ ಮಾನವ ಸಂಪನ್ಮೂಲವುಸಮೃದ್ಧವಾಗಿವೆ.ತನ್ನಮೂಲ ಡಿಜಿಟಲ್ ಮೂಲಸೌಕರ್ಯವನ್ನು ವಿಶ್ವದರ್ಜೆಗೆ ಏರಿಸಲೂ ಸಮರ್ಥವಾಗಿದೆ. ಆದರೆ ಸಮಸ್ಯೆ ಕಾಣುತ್ತಿರುವುದು ಎಐ ಅಥವಾ ಸೆಮಿಕಂಡಕ್ಟರ್‌ಗಳ ಉತ್ಪಾದನೆಯಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಕೊಳ್ಳುವಲ್ಲಿ. ಮೋದಿಯವರು ಸದ್ಯಕ್ಕೆ ಈ ಕ್ಷೇತ್ರದ ಮೇಲೆಯೇ ಹೆಚ್ಚು ಗಮನ ಕೇಂದ್ರೀಕರಿಸಿದ್ದಾರೆ. ಅದಕ್ಕಾಗಿ ರಾಷ್ಟ್ರೀಯ ಎಐ ಯೋಜನೆ, ರಾಷ್ಟ್ರೀಯ ಕ್ವಾಂಟಮ್ ಯೋಜನೆ ಮತ್ತು ಅನುಸಂಧಾನ ಸಂಶೋಧನೆ ಹಾಗೂ ಅಭಿವೃದ್ಧಿ ಯೋಜನೆ ಮುಂತಾದವುಗಳನ್ನು ಆರಂಭಿಸಿದ್ದಾರೆ. ಆದರೆ ಮುಖ್ಯವಾಗಿ ಇವೆಲ್ಲವೂ ಸರಕಾರಿ ಪ್ರಾಯೋಜಿತ ಯೋಜನೆಗಳಾಗಿವೆ. ಖಾಸಗಿ ಕಂಪೆನಿಗಳು ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ತೋರಿಲ್ಲ. ಇದು ಭಾರತದ ಪಾಲಿಗೆ ಹಿನ್ನಡೆಯಾಗಿದೆ. ಖಾಸಗಿ ಕಂಪೆನಿಗಳು ಕೂಡಾ ಇತ್ತ ಹೆಚ್ಚು ಗಮನಹರಿಸಬೇಕಾಗಿರುವುದು ಅಗತ್ಯವಾಗಿದೆ.

ಕ್ರಿಕೆಟಿನ ಹೊಸ ಕಣ್ಮಣಿ–ಸೂರ್ಯವಂಶಿ

▸ ರಾಧಾಕೃಷ್ಣ ಬಿ.

ಈ ಬಾರಿಯ ಐಪಿಎಲ್‌ನ ಬಹುತೇಕ ಪಂದ್ಯಗಳು ಮುಗಿದಿವೆ. ಕೊನೆಯ ಎರಡು ಪಂದ್ಯಗಳು ಮಾತ್ರ ಬಾಕಿಯುಳಿದಿವೆ. ಪಂದ್ಯಾವಳಿಗೆ ಮುನ್ನ ದೊಡ್ಡ ಸುದ್ದಿ ಮಾಡಿದ್ದ, ಭಾರೀ ಬೆಲೆಗೆ ಖರೀದಿಯಾಗಿದ್ದ ಆಟಗಾರರನೇಕರು ನಿರಾಶಾಜನಕ ಪ್ರದರ್ಶನ ನೀಡಿ ಮೂಲೆ ಸೇರಿಯಾಗಿದೆ. ಕೆಲವು ಆಟಗಾರರು ಮಾತ್ರ ನಿರೀಕ್ಷೆಗೆ ತಕ್ಕಂತೆ ಆಟ ಪ್ರದರ್ಶಿಸಿದ್ದಾರೆ. ಇನ್ನು ಕೆಲವರು ನಿರೀಕ್ಷೆಗಿಂತಲೂ ಉನ್ನತ ಮಟ್ಟದ ಆಟ ಪ್ರದರ್ಶಿಸಿದ್ದಾರೆ. ಅವರೆಲ್ಲರ ಮಧ್ಯೆ ಈಗ ಎಲ್ಲರ ಮನೆಮಾತಾಗಿ ಕಂಗೊಳಿಸುತ್ತಿರುವುದು ವೈಭವ್ ಸೂರ್ಯವಂಶಿ.

ಲೀಗ್ ಹಂತದಲ್ಲೆ ಉತ್ಕೃಷ್ಟ ಪ್ರದರ್ಶನ ನೀಡುತ್ತಾ ಬಂದ ಸೂರ್ಯವಂಶಿ ಎಲಿಮಿನೇಟರ್ ಪಂದ್ಯದಲ್ಲಂತೂ ತನ್ನ ನಿರ್ವಹಣೆಯನ್ನು ಇನ್ನೊಂದು ಹಂತ ಮೇಲಕ್ಕೊಯ್ದಿದ್ದಾನೆ. ಕೇವಲ 29 ಎಸೆತಗಳಲ್ಲೆ 97ರನ್ ಬಾರಿಸಿದ ಆತ, ಅತಿವೇಗದ ಶತಕ ದಾಖಲಿಸುವ ಗೈಲ್‌ರ ದಾಖಲೆಯನ್ನು ಮುರಿಯುವುದರಿಂದ ಒಂದು ಎಸೆತದಲ್ಲಿ ವಂಚಿತನಾದ ಬಗ್ಗೆ ಎಲ್ಲರದು ಬೇಸರದ ಮಾತಾದರೂ, ಸೂರ್ಯವಂಶಿ ತಾನೆದುರಿಸಿದ ಮೊದಲ 28 ಎಸೆತಗಳನ್ನು ಉಡಾಯಿಸಿದ ರೀತಿ ಮಾತ್ರ ಮತ್ತೊಂದು ಸ್ತರದ್ದು ಎಂಬುದರಲ್ಲಿ ಎರಡು ಮಾತಿಲ್ಲ.

ಸನ್‌ರೈಸರ್ಸ್ ತಂಡವು ಸೂರ್ಯವಂಶಿಗೆ ಕಡಿವಾಣ ಹಾಕಲು ತನ್ನದೇ ಆದ ಯೋಜನೆ ರೂಪಿಸಿತ್ತೆಂಬುದು ನಿರ್ವಿವಾದ. ರಾಜಸ್ಥಾನದ ವಿರುದ್ಧದ ಮೊದಲೆರಡು ಪಂದ್ಯಗಳಲ್ಲಿ ಸೂರ್ಯವಂಶಿ ಆಟದ ವೈಖರಿಯನ್ನು ಅದಾಗಲೆ ಸನ್ ರೈಸರ್ಸ್ ಪರಚಿಯಿಸಿಕೊಂಡಿತ್ತು. ಸೂರ್ಯವಂಶಿಯನ್ನು ಬೇಗ ಪೆವಿಲಿಯನ್‌ಗೆ ಮರಳಿಸಿದರೆ ತಮ್ಮ ಗುರಿ ಸಾಧನೆ ಸುಲಭವಾಗಲಿದೆ ಎಂಬುದು ಅವರಿಗೂ ಗೊತ್ತಿತ್ತು. ಆದರೆ ಅವರ ರಣತಂತ್ರವನ್ನು ಪುಡಿಗಟ್ಟಿದ್ದು ಸೂರ್ಯವಂಶಿಯ 'ವೈಭವ'ದ ಸಾಧನೆ.

ಸನ್‌ರೈಸರ್ಸ್‌ನ ನಾಯಕ ಅನುಭವಿ ಬೌಲರ್ ಕಮಿನ್ಸ್ ಸೂರ್ಯವಂಶಿಗೆ ಎಸೆದ ಮೊದಲ ಎರಡೂ ಎಸೆತಗಳು ಯಾರ್ಕರ್ಸ್. ಸೂರ್ಯವಂಶಿ ಆ ಎಸೆತಗಳಿಗೆ ಕೊಡಬೇಕಾದ ಗೌರವ ಕೊಡದಿರಲಿಲ್ಲ. ಕೇವಲ 1 ರನ್ ಮಾತ್ರ ಬಂತು. ಆದರೆ ಕಮಿನ್ಸ್ ತಮ್ಮ ಲೈನ್‌ನಲ್ಲಿ ಕೆಲವೇ ಸೆಂಟಿಮೀಟರ್ ಗಳಷ್ಟು ಎಡವಿದಾಗ ಸೂರ್ಯವಂಶಿ ಆ ಚೆಂಡನ್ನು ಕಳಿಸಿದ್ದು ಸಿಕ್ಸರ್‌ಗೆ. ಅಲ್ಲಿಂದ ಬಳಿಕ ಸೂರ್ಯವಂಶಿ ನಡೆಸಿದ್ದು ವಸ್ತುಶಃ ಬೌಲರುಗಳ ಹತ್ಯಾಕಾಂಡವನ್ನೆ. ಬೌನ್ಸರ್, ಶಾರ್ಟ್ ಪಿಚ್ ಎಸೆತ,



ಲೋ ಫುಟ್‌ಟಾಸ್, ಯಾರ್ಕರ್ ... ಮುಂತಾಗಿ ಬೌಲರುಗಳು ಪ್ರಯೋಗಿಸಿದ ವೈವಿಧ್ಯಮಯ ಎಸೆತಗಳೆಲ್ಲವೂ ವಿಧವಿಧವಾಗಿ ಒಂದೋ ಬೌಂಡರಿಗೆ ಇಲ್ಲವೇ ಸಿಕ್ಸರ್‌ಗೆ ಎಗರಿಹೋದವು. ಹಾಗೆ ಶರವೇಗದಲ್ಲಿ ರನ್ ಗಳಿಕೆ ಸಾಗಿದಂತೆ ಹೊಸ ಹೊಸ ದಾಖಲೆಗಳು ಕೂಡಾ ಸೂರ್ಯವಂಶಿ ಹೆಸರಿಗೆ ವರ್ಗಾವಣೆಗೊಳ್ಳುತ್ತಾ ಸಾಗಿದವು.

ಎಲಿಮಿನೇಟರ್ ಪಂದ್ಯದಲ್ಲಿ ಕ್ರೀಸಿಗಿಳಿಯುವ ಮುನ್ನ ಸೂರ್ಯವಂಶಿ ಈ ಐಪಿಎಲ್‌ನಲ್ಲಿ ಅದಾಗಲೆ 232 ಸ್ಟ್ರೈಕ್‌ರೇಟ್‌ನಲ್ಲಿ 583 ರನ್ ಗಳಿಸಿಯಾಗಿತ್ತು. ಐಪಿಎಲ್ ಋತುವೊಂದರಲ್ಲಿ ಅತ್ಯಧಿಕ ಸಿಕ್ಸರ್‌ಗಳ ಗೈಲ್ (59) ದಾಖಲೆ ಮುರಿಯಲು 7 ಸಿಕ್ಸರ್‌ಗಳ ಅಗತ್ಯವಿದ್ದವು. ಪಂದ್ಯ ಶುರುವಾದ ಮೂರು ಓವರುಗಳೊಳಗೆ ಸೂರ್ಯವಂಶಿ ಗೈಲ್‌ರ ಸಿಕ್ಸರ್ ದಾಖಲೆಯನ್ನು ಮುರಿದಾಗಿತ್ತು. ಆತನ ಇನ್ನಿಂಗ್ಸ್ ಮುಗಿದಾಗ ಆತ ಒಟ್ಟು 12 ಸಿಕ್ಸರ್‌ಗಳನ್ನು ತನ್ನ ಬಗಲಲ್ಲಿ ಸೇರಿಸಿಕೊಂಡಾಗಿತ್ತು. ಐಪಿಎಲ್‌ನಲ್ಲಿ ಈವರೆಗೆ ಒಟ್ಟು 680 ರನ್ ಗಳಿಸಿರುವ ಆತ ಈಗ 'ಆರೆಂಜ್ ಕ್ಯಾಪ್'ಧಾರಿ.

ಆದರೆ ಅತಿವೇಗದ ಶತಕ ಬಾರಿಸುವ ಹಾಗೂ ಆ ಮೂಲಕ ಗೈಲ್‌ರ ದಾಖಲೆ ಮುರಿಯುವ ಸಾಧ್ಯತೆಯನ್ನು ಕೇವಲ 3 ರನ್ ಗಳಿಂದ ಕಳಕೊಳ್ಳುವಂತಾದುದು ಮಾತ್ರ ಕ್ರಿಕೆಟ್ ಪ್ರೇಮಿಗಳ ಪಾಲಿಗೆ ಅತ್ಯಂತ ದುಃಖದ ವಿಷಯವಾಯಿತು. ಸೂರ್ಯವಂಶಿ ಕೂಡಾ ಔಟಾದ ಬಳಿಕ ಕ್ರೀಸ್ ಬಿಡಲೇ ತಯಾರಿಲ್ಲವೆಂಬಂತೆ ವರ್ತಿಸಿದ್ದು, ಪೆವಿಲಿಯನ್‌ನತ್ತ ಅತ್ಯಂತ ನಿರ್ಧಾರ ಹೆಜ್ಜೆ ಹಾಕಿದ್ದು ಆತನಿಗಾದ ನಿರಾಶೆಯನ್ನು ಪ್ರತಿಬಿಂಬಿಸುತ್ತಿತ್ತು.

ಸೂರ್ಯವಂಶಿಯ ಪಾಲಿಗೆ ಇದಿನ್ನೂ ಆರಂಭ. ಹಾಗಾಗಿ ಹೆಚ್ಚಿನ ನಿರಾಶೆ ಬೇಕಾಗಿಲ್ಲ. ಆತ ಸಾಗಬೇಕಾದ ಹಾದಿ ಬಹಳಷ್ಟಿದೆ. ವಯಸ್ಸೂ ಅವನ ಪರವಾಗಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಆತನಿಂದ ಇನ್ನಷ್ಟು ದಾಖಲೆಗಳನ್ನು ಖಂಡಿತಾ ನಿರೀಕ್ಷಿಸಬಹುದು.

ಈ ಐಪಿಎಲ್‌ನಲ್ಲಿ ಸೂರ್ಯವಂಶಿ ಈಗಾಗಲೆ ಎಲ್ಲರ ಮನೆಮಾತಾಗಿದ್ದಾನೆ. ಬಹಳಷ್ಟು ಮಂದಿ ಕ್ರಿಕೆಟ್ ಪ್ರೇಮಿಗಳು ಆತನ ಅಭಿಮಾನಿಗಳಾಗಿ ಬದಲಾಗಿದ್ದಾರೆ. ಭಾರತವಷ್ಟೇ ಅಲ್ಲದೆ ವಿದೇಶಗಳಲ್ಲೂ ಆತನ ಅಭಿಮಾನಿಗಳು ಹೆಚ್ಚುತ್ತಿದ್ದಾರೆ.

ಸೂರ್ಯವಂಶಿ ಯಾವುದೇ ಬೌಲರ್‌ನನ್ನು ಎದುರಿಸಲೂ ಅಂಜಿಕೆ ತೋರಿದವನಲ್ಲ. ಬೂಮ್ರಾ, ಕಮಿನ್ಸ್, ಹೇಜಲ್‌ವುಡ್, ಸ್ಟಾರ್ಕ್ ಮುಂತಾಗಿ ವಿಶ್ವವಿಖ್ಯಾತ ಬೌಲರುಗಳನ್ನೆಲ್ಲಾ ಸಿಕ್ಸರ್‌ಗೆತ್ತುವ ಮೂಲಕ ಎಲ್ಲರನ್ನು ಅಚ್ಚರಿಗೆ ಕೆಡವಿದ್ದಾನೆ. ಕ್ರೀಸಿನಲ್ಲಿದ್ದಾಗ ಆತ ಯಾರು ಬೌಲಿಂಗ್ ನಡೆಸುತ್ತಿದ್ದಾರೆಂಬುದನ್ನು ನೋಡುವುದಿಲ್ಲ. ತನ್ನೆಡೆಗೆ ಧಾವಿಸಿ ಬರುವ ಚೆಂಡನ್ನಷ್ಟೇ ಗಮನಿಸುತ್ತಾನೆ. ಅದನ್ನು ಬೌಂಡರಿ ರೇಖೆಯ ಹೊರಗಡೆ ಕಳಿಸುವುದಕ್ಕಷ್ಟೇ ಗಮನ ಕೇಂದ್ರೀಕರಿಸುತ್ತಾನೆ.

ಒಟ್ಟಿನಲ್ಲಿ ಭಾರತಕ್ಕೊಬ್ಬ ಅಪೂರ್ವ ಪ್ರತಿಭೆ ದೊರಕಿದ್ದಾನೆ. ಮೈದಾನದಲ್ಲಿ ತೋರುತ್ತಿರುವ ಅಪ್ರತಿಮ ಆಟ ಸದ್ಯಕ್ಕಂತೂ ಅವನ ತಲೆಕೆಡಿಸಿಲ್ಲ. ಬಾಲ್ಯ ಸಹಜ ಸಂಕೋಚ, ಮುಗ್ಧತೆ, ವಿನಯ ಅವನಲ್ಲಿ ಇನ್ನೂ ಮಾಸಿಲ್ಲ. ಅವನನ್ನು ಜತನದಿಂದ ನೋಡಿಕೊಳ್ಳುವ, ಅವನ ಪ್ರತಿಭೆಯನ್ನು ಸಮರ್ಥವಾಗಿ ಬಳಸಿಕೊಳ್ಳುವ ಹೊಣೆಗಾರಿಕೆಯನ್ನು ದೇಶದ ಕ್ರೀಡಾ ವ್ಯವಸ್ಥೆ ವಹಿಸಿಕೊಳ್ಳಬೇಕಾಗಿದೆ.

ಕೇಂದ್ರ ನೆರವು: ಜನರ ಖರ್ಚು ಶೇ.21 ಇಳಿಕೆ

ಆರೋಗ್ಯ ವೆಚ್ಚದಲ್ಲಿ ಗಮನಾರ್ಹ ಏರಿಕೆ

• **ಹೊಸದಿಲ್ಲಿ:** ಕೇಂದ್ರ ಸರ್ಕಾರದ ಆರೋಗ್ಯ ಕ್ಷೇತ್ರದ ವೆಚ್ಚ ಹೆಚ್ಚಿದಂತೆ, ಜನರು ತಮ್ಮ ಸ್ವಂತ ಹಣದಿಂದ ಮಾಡುವ ಆರೋಗ್ಯ ವೆಚ್ಚದಲ್ಲೂ ಗಮನಾರ್ಹ ಇಳಿಕೆ ಕಂಡುಬಂದಿದೆ. 2013-14ರಲ್ಲಿ ಒಟ್ಟು ಆರೋಗ್ಯ ವೆಚ್ಚದಲ್ಲಿ ಶೇ.64.2 ಇದ್ದ ಸ್ವಯಂ ಖರ್ಚು ಪ್ರಮಾಣವು 2022-23ರಲ್ಲಿ ಶೇ.43.4ಕ್ಕೆ ಇಳಿದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಬಿಡುಗಡೆ ಮಾಡಿದ ರಾಷ್ಟ್ರೀಯ ಆರೋಗ್ಯ ಲೆಕ್ಕಪತ್ರ ವರದಿ ತಿಳಿಸಿದೆ.

ಸುಮಾರು ಶೇ.21ರಷ್ಟು ಇಳಿಕೆಯಾದ ಈ ಪ್ರವೃತ್ತಿ, ಆರೋಗ್ಯ ಸೇವೆಗಳ ಲಭ್ಯತೆ ಹೆಚ್ಚಿದ್ದು ಜನರ ಮೇಲಿನ ಆರ್ಥಿಕ ಭಾರ ಕಡಿಮೆಯಾಗುತ್ತಿರುವುದನ್ನು ಸೂಚಿಸುತ್ತದೆ ಎಂದು ಸಚಿವಾಲಯ ಅಭಿಪ್ರಾಯಪಟ್ಟಿದೆ.

ದೇಶಾದ್ಯಂತ 1.8 ಲಕ್ಷಕ್ಕೂ ಅಧಿಕ ಆಯುಷ್ಮಾನ್ ಆರೋಗ್ಯ ಮಂದಿರ ವೆಲ್‌ನೆಸ್ ಕೇಂದ್ರಗಳನ್ನು ಕಾರ್ಯಗತಗೊಳಿಸಿರುವುದೇ ಇದಕ್ಕೆ ಪ್ರಮುಖ ಕಾರಣ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಕೇಂದ್ರಗಳಲ್ಲಿ ತಡೆಗಟ್ಟುವ ಮತ್ತು ಚಿಕಿತ್ಸಾ ಸೇವೆಗಳು ಸಮುದಾಯದ ಹತ್ತಿರದಲ್ಲೇ ಉಚಿತವಾಗಿ ದೊರೆಯುತ್ತಿವೆ.

ಪ್ರಸೂತಿ ಮತ್ತು ಶಿಶು ಆರೋಗ್ಯ, ಸಾಂಕ್ರಾಮಿಕ ಹಾಗೂ ಅಸಾಂಕ್ರಾಮಿಕ ರೋಗಗಳ ಚಿಕಿತ್ಸೆ, ಉಚಿತ ಔಷಧಿ, ಪರೀಕ್ಷಾ ಸೇವೆಗಳು, ಟೆಲಿ-ಕನ್ಸಲ್ಟೇಶನ್ ಹಾಗೂ ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು ಒಳಗೊಂಡ 12 ವಿಸ್ತೃತ ಪ್ಯಾಕೇಜ್‌ಗಳ ಸೇವೆಗಳನ್ನು ಈ ಕೇಂದ್ರಗಳು ಒದಗಿಸುತ್ತಿವೆ.

ಆರೋಗ್ಯ ಸಚಿವಾಲಯದ ಪ್ರಕಾರ, ಆರೋಗ್ಯ ಕೇಂದ್ರಗಳಿಂದ ಔಷಧಿ, ವಿಟಮಿನ್, ಪ್ರೋಟೀನ್ ಮತ್ತು ಇತರ ಪೂರಕ ಆಹಾರಗಳ ಖರೀದಿ ಇನ್ನೂ ಸ್ವಯಂ ಖರ್ಚು ಇಳಿಕೆಗೆ ಪ್ರಮುಖ ಕಾರಣವಾಗಿದೆ.

ಜಿಡಿಪಿಯಲ್ಲಿ ಆರೋಗ್ಯ ವೆಚ್ಚ ಹೆಚ್ಚಳ: ವರದಿ ಪ್ರಕಾರ, ದೇಶದ ಒಟ್ಟು ದೇಶೀಯ ಉತ್ಪನ್ನದಲ್ಲಿ ಸರ್ಕಾರದ ಆರೋಗ್ಯ ವೆಚ್ಚದ ಪಾಲು 2013-14ರ ಶೇ.1.15ರಿಂದ 2022-23ರಲ್ಲಿ ಶೇ.1.43ಕ್ಕೆ ಏರಿಕೆಯಾಗಿದೆ. ಇದೇ ಅವಧಿಯಲ್ಲಿ ಒಟ್ಟು ಸರ್ಕಾರಿ ವೆಚ್ಚದಲ್ಲಿ ಆರೋಗ್ಯ ಕ್ಷೇತ್ರದ ಪಾಲು ಶೇ.3.78ರಿಂದ ಶೇ.4.89ಕ್ಕೆ ಹೆಚ್ಚಾಗಿದೆ.

ಪ್ರತಿ ವ್ಯಕ್ತಿಗೆ ಸರ್ಕಾರ ಮಾಡುವ ಆರೋಗ್ಯ ವೆಚ್ಚವೂ 2.7 ಪಟ್ಟು ಏರಿಕೆ ಕಂಡಿದ್ದು, 2013-14ರಲ್ಲಿ 1,042 ರೂ. ಇದ್ದದ್ದು 2022-23ರಲ್ಲಿ 2,786 ರೂ.ಗೆ ತಲುಪಿದೆ.

ಕೋವಿಡ್ ಅವಧಿಯಲ್ಲಿ ಹೆಚ್ಚಿದ ವೆಚ್ಚ: ಕೋವಿಡ್ ಮಹಾಮಾರಿ ಸಂದರ್ಭದಲ್ಲಿಯೂ ಸರ್ಕಾರ ಆರೋಗ್ಯ ಕ್ಷೇತ್ರಕ್ಕೆ ಭಾರೀ ಪ್ರಮಾಣದಲ್ಲಿ ವೆಚ್ಚ ಮಾಡಿತ್ತು. 2021-22ರಲ್ಲಿ ಆರೋಗ್ಯ ವೆಚ್ಚ ಶೇ.1.84ಕ್ಕೆ ಏರಿಕೆಯಾಗಿತ್ತು. ಇದರ ಪರಿಣಾಮವಾಗಿ ಜನರ ಖಾಸಗಿ ವೆಚ್ಚದ ಪ್ರಮಾಣ ಶೇ.39.4ಕ್ಕೆ ಇಳಿದಿತ್ತು ಎಂದು ವರದಿ ಹೇಳಿದೆ.

ಆರೋಗ್ಯ ವಿಮೆ ಬಳಕೆ ಏರಿಕೆ: ಸಾಮಾಜಿಕ ಭದ್ರತಾ ವೆಚ್ಚವೂ 2013-14ರ ಶೇ.6ರಿಂದ 2022-23ರಲ್ಲಿ ಶೇ.9.9ಕ್ಕೆ ಏರಿಕೆಯಾಗಿದೆ. ಖಾಸಗಿ ಆರೋಗ್ಯ ವಿಮೆಯ ಪಾಲು ಸಹ ಶೇ.3.4ರಿಂದ ಶೇ.9.2ಕ್ಕೆ ಏರಿಕೆಯಾಗಿದೆ. ಇದು ಜನರಲ್ಲಿ ಆರೋಗ್ಯ ಜಾಗೃತಿ ಹಾಗೂ ವಿಮೆ ಬಳಕೆಯ ಪ್ರವೃತ್ತಿ ಹೆಚ್ಚುತ್ತಿರುವುದನ್ನು ತೋರಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ.



ಎಎಂಸಿಎ ಬಿಡ್ಡಿಂಗ್‌ಗೆ ಆಯ್ಕೆಯಾದ ಮೂರು ಖಾಸಗಿ ರಕ್ಷಣಾ ಸಂಸ್ಥೆಗಳು

TATA | LARSEN & TOUBRO | BHARAT FORGE

ಸುಮಾರು 15,000 ಕೋಟಿ ರೂ. ಮೌಲ್ಯದ ಅತ್ಯಾಧುನಿಕ ಮಧ್ಯಮ ಯುದ್ಧ ವಿಮಾನಗಳ (ಎಎಂಸಿಎ) ನಿರ್ಮಾಣ ಯೋಜನೆಗಾಗಿ ರಕ್ಷಣಾ ಸಚಿವಾಲಯ ಪ್ರಸ್ತಾವನೆಯ ಮನವಿ(ಆರ್‌ಎಫ್‌ಪಿ)ಯನ್ನು ಬುಧವಾರ ಜಾರಿಗೊಳಿಸಿದ್ದು, ಖಾಸಗಿ ರಕ್ಷಣಾ ಉತ್ಪಾದನಾ ಕ್ಷೇತ್ರದ ಪ್ರಮುಖ ಮೂರು ಕಂಪನಿಗಳು ಬಿಡ್ ಪ್ರಕ್ರಿಯೆಗೆ ಶಾರ್ಟ್‌ಲಿಸ್ಟ್ ಆಗಿವೆಯೆಂದು ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ. ಇದರಿಂದಾಗಿ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ದೇಶೀಯ ತಂತ್ರಜ್ಞಾನದಿಂದ ನಿರ್ಮಿಸುವ ಐದನೇ ತಲೆಮಾರಿನ ಯುದ್ಧ ವಿಮಾನಗಳ ಯೋಜನೆ ಬುಧವಾರ ಒಂದು ಮಹತ್ವದ ಹಂತವನ್ನು ಪ್ರವೇಶಿಸಿದೆ. ಈ ವಿಚಾರ ಬಗ್ಗೆ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಫೈಟರ್ ಜೆಟ್ ನಿರ್ಮಾಣ: ಖಾಸಗಿ ಸಂಸ್ಥೆಗಳ ತೆಕ್ಕೆಗೆ?

ಖಾಸಗಿ ಕಂಪನಿಗಳು ಶಾರ್ಟ್‌ಲಿಸ್ಟ್

ಖಾಸಗಿ ರಕ್ಷಣಾ ಉತ್ಪಾದನೆಗೆ ಉತ್ತೇಜಿಸುವ ಉದ್ದೇಶದಿಂದ ರಕ್ಷಣಾ ಇಲಾಖೆಯು ಖಾಸಗಿ ಕಂಪನಿಗಳಿಗೆ ಬಿಡ್ಡಿಂಗ್ ಅವಕಾಶ ನೀಡಿರುವ ಸಾಧ್ಯತೆಯಿದೆ. ಟಾಟಾ, ಲಾರ್ಸನ್ ಆ್ಯಂಡ್ ಟರ್ಬೊ(ಎಲ್ ಆ್ಯಂಡ್ ಟಿ) ಮತ್ತು ಭಾರತ್ ಫೋರ್ಜ್ (ಬಿಇಎಂಎಲ್ ಜತೆ ಪಾಲುದಾರಿಕೆ) ಬಿಡ್ಡಿಂಗ್ ಪ್ರಕ್ರಿಯೆಗೆ ಶಾರ್ಟ್‌ಲಿಸ್ಟ್ ಆಗಿರುವ ಕಂಪನಿಗಳಾಗಿವೆ. ಜೂ.11ರಿಂದ ಬಿಡ್ಡಿಂಗ್ ಆರಂಭವಾಗಲಿದ್ದು, ಈಗಾಗಲೇ ಆಯ್ಕೆ ಆಗಿರುವ ಟಾಟಾ, ಎಲ್ ಆ್ಯಂಡ್ ಟಿ ಮತ್ತು ಭಾರತ್ ಫೋರ್ಜ್‌ಗಷ್ಟೇ ಅವಕಾಶ ನೀಡಲಾಗುವುದು. ಜು.28ರ ವೇಳೆಗೆ ಬಿಡ್ಡಿಂಗ್ ಕಾಲಾವಕಾಶ ಕೊನೆಗೊಳ್ಳಲಿದೆ. ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಖಾಸಗಿ ಸಂಸ್ಥೆ ರಕ್ಷಣಾ ಸಚಿವಾಲಯದ ಅನ್ವಯ ಕಾರ್ಯಾಚರಿಸುವ ವೈಮಾನಿಕ ಅಭಿವೃದ್ಧಿ ಸಂಸ್ಥೆಯ(ಎಡಿಎ) ಜತೆಗೂಡಿ ಕೆಲಸ ಮಾಡಬೇಕಾಗುತ್ತದೆ. ಯೋಜನೆಗೆ ಸೂಕ್ತ ಖಾಸಗಿ ರಕ್ಷಣಾ ಸಂಸ್ಥೆಯ ಆಯ್ಕೆ ಪ್ರಕ್ರಿಯೆ 4ರಿಂದ 5 ತಿಂಗಳ ಸಮಯ ತೆಗೆದುಕೊಳ್ಳಲಿದೆ. ಖಾಸಗಿ ರಂಗಕ್ಕೂ ಲಭಿಸಿದ ಪಾತ್ರ ಸಮರ ವಿಮಾನಗಳ ನಿರ್ಮಾಣಕ್ಕೆ ಭಾರೀ ವೇಗ ಮತ್ತು ಹೊಸ ಆಯಾಮ ನೀಡಲಿದೆ ಎನ್ನಲಾಗಿದೆ.

ಅತ್ಯಾಧುನಿಕ 5ನೇ ತಲೆಮಾರಿನ ಯುದ್ಧ ವಿಮಾನಗಳು

- ಎಫ್-35 ಲೈಟ್ನಿಂಗ್-2(ಅಮೆರಿಕ): ಗುಪ್ತ ಯುದ್ಧ ವಿಮಾನ ಮತ್ತು ಸೂಪರ್‌ಕ್ರೂಸ್.
- ಎಫ್-22 ರ್‍ಯಾಪ್ಟರ್ (ಅಮೆರಿಕ): ಗುಪ್ತ ಯುದ್ಧ ವಿಮಾನ ಮತ್ತು ಸೂಪರ್‌ಕ್ರೂಸ್.
- ಸುಖೋಯ್ ಎಸ್‌ಯು-57 (ರಷ್ಯಾ): ಗುಪ್ತ ಯುದ್ಧ ವಿಮಾನ ಮತ್ತು ಸೂಪರ್‌ಕ್ರೂಸ್.
- ಚೆಂಗ್ಡು ಜೆ-20 (ಚೀನಾ): ಗುಪ್ತ ಯುದ್ಧ ವಿಮಾನ ಮತ್ತು ಸೂಪರ್ ಕ್ರೂಸ್.
- ಎಎಂಸಿಎ (ಭಾರತ): ಗುಪ್ತ ಯುದ್ಧ ವಿಮಾನ ಮತ್ತು ಸೂಪರ್‌ಕ್ರೂಸ್ ಯುದ್ಧ ವಿಮಾನಗಳ ನಿರ್ಮಾಣ ಯೋಜನೆ ಜಾರಿಯಲ್ಲಿದೆ.

ಸ್ಟೆಲ್‌ಗೂ ಮತ್ತು ಸೂಪರ್‌ಕ್ರೂಸ್‌ಗೂ ಏನು ವ್ಯತ್ಯಾಸ?

ಸ್ಟೆಲ್ತ್ (ಗುಪ್ತ) ಯುದ್ಧ ವಿಮಾನಗಳೂ ಯಾವುದೇ ರಡಾರ್ ವ್ಯೂಹಗಳನ್ನು ಭೇದಿಸಿ ಯಾರಿಗೂ ಕಾಣದಂತೆ ಗುರಿಯನ್ನು ನಾಶ ಮಾಡಿ ಹಿಂದಿರುಗುವ ಸಾಮರ್ಥ್ಯವನ್ನು ಹೊಂದಿದ್ದರೆ, ಸೂಪರ್‌ಕ್ರೂಸ್ ಯುದ್ಧ ವಿಮಾನಗಳು ಸೂಪರ್‌ಸೋನಿಕ್ ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿರುತ್ತವೆ. ಭಾರತದ ಎಎಂಸಿಎ ಎರಡೂ ಸಾಮರ್ಥ್ಯ ಹೊಂದಿರುವ ಸಾಧ್ಯತೆಯಿದೆ.

ಖಾಸಗಿ ರಕ್ಷಣಾ ಉತ್ಪಾದನೆಯಲ್ಲಿ ಇದು ಮಹತ್ವದ ಬೆಳವಣಿಗೆ | 15,000 ಕೋಟಿ ರೂ. ವೆಚ್ಚದಲ್ಲಿ ಎಎಂಸಿಎ ನಿರ್ಮಾಣ ಯೋಜನೆ

ಪ್ರಸ್ತುತ ಐಎಎಫ್ ಯುದ್ಧ ವಿಮಾನಗಳ ಸಮೂಹ

1. **ಸುಖೋಯ್-30ಎಂಕೆಐ:** ಇದು 4+ ತಲೆಮಾರಿನ ಯುದ್ಧ ವಿಮಾನವಾಗಿದೆ. ವಾಯು ಪ್ರಾಧಾನ್ಯತೆ ಮತ್ತು ಪರಿಣಾಮಕಾರಿ ದಾಳಿ ಮಾಡುವುದು ಇದರ ಪ್ರಮುಖ ಪಾತ್ರವಾಗಿದೆ. ದೀರ್ಘ ದೂರವ್ಯಾಪ್ತಿ, ಹೆಚ್ಚು ಪೇಲೋಡ್ ಮತ್ತು ಅಸಾಧಾರಣ ಯುದ್ಧ ಚಲನಶೀಲತೆ ಅಥವಾ ಕಸರತ್ತು ಸಾಮರ್ಥ್ಯ ಹೊಂದಿರುತ್ತದೆ. ಇದು ವಾಯುಪಡೆಯ ಯುದ್ಧ ವಿಮಾನಗಳ ಫ್ಲೀಟ್‌ನ ಬೆನ್ನೆಲುಬಾಗಿದೆ.
2. **ದಸ್ಸಾಲ್ಟ್ ರಾಫೆಲ್:** ಇದು 4.5 ತಲೆಮಾರಿನ ಅತ್ಯಾಧುನಿಕ ಯುದ್ಧ ವಿಮಾನ. ಇದು ಹಲವು ಪಾತ್ರಗಳನ್ನು ನಿರ್ವಹಿಸಬಲ್ಲದು. ಇದರಲ್ಲಿ ಎಇಎಸ್‌ಎ ರಡಾರ್, ಅತ್ಯಾಧುನಿಕ ಇಡಬ್ಲ್ಯು ಸೂಟ್, ಸಂಪರ್ಕಜಾಲ ಆಧಾರಿತ ಯುದ್ಧ ಸಾಮರ್ಥ್ಯ ಹೊಂದಿದೆ. ಸದ್ಯ ಐಎಎಫ್‌ನಲ್ಲಿ ಕಾರ್ಯನಿರ್ವಹಿಸುತ್ತಿದೆ.
3. **ಎಚ್‌ಎಎಲ್ ತೇಜಸ್ ಎಂಕೆ-1/ಎಂಕೆ-1ಎ:** ಇದು 4ನೇ ತಲೆಮಾರಿನ ಯುದ್ಧ ವಿಮಾನಗಳಲ್ಲೊಂದು. ವಾಯು ಪ್ರದೇಶ ರಕ್ಷಣೆ ಸಹಿತ ಹಲವು ಪಾತ್ರಗಳನ್ನು ನಿಭಾಯಿಸಬಲ್ಲ ಸಾಮರ್ಥ್ಯವಿದೆ. ದೇಸಿ ವಿನ್ಯಾಸ, ಆಧುನಿಕ ಏವಿಯೋನಿಕ್ಸ್ ಹೊಂದಿರುವ ಹಗುರವಾದ ಯುದ್ಧ ವಿಮಾನ. ಐಎಎಫ್‌ನಲ್ಲಿ ನಿಯೋಜನೆ ಮಾಡಲಾಗಿದ್ದು, ಎಂಕೆ-1ಎ ಪೂರೈಕೆ ಆಗಬೇಕಿದೆ.
4. **ಮಿಗ್-29 (ಯುಪಿಜಿ):** ಇದು 4ನೇ ತಲೆಮಾರಿನ ಯುದ್ಧ ವಿಮಾನವಾಗಿದೆ. ವಾಯು ರಕ್ಷಣೆ ಇದರ ಪ್ರಮುಖ ಪಾತ್ರ, ಆಧುನಿಕ ರಡಾರ್, ಸುಧಾರಿತ ಏವಿಯೋನಿಕ್ಸ್ ಮತ್ತು ಶಸ್ತ್ರಾಸ್ತ್ರ ವ್ಯವಸ್ಥೆ ಒಳಗೊಂಡಿದೆ. ಮುಂದಿನ ಆವೃತ್ತಿಯ ಮಿಗ್-29 ಶೀಘ್ರ ಐಎಎಫ್‌ನಲ್ಲಿ ಕಾರ್ಯಾಚರಿಸಲಿವೆ.
5. **ಮಿರಾಜ್ 2000 (ಐ/ಟಿಐ):** ಇದು 4ನೇ ತಲೆಮಾರಿನ ಫೈಟರ್ ಜೆಟ್ ಆಗಿದ್ದು, ದಾಳಿ ಸಹಿತ ಒಂದಕ್ಕಿಂತ ಹೆಚ್ಚು ಪಾತ್ರ ನಿಭಾಯಿಸಬಲ್ಲದು. ನಿಖರ ದಾಳಿ ಸಾಮರ್ಥ್ಯ ಹೊಂದಿದ್ದು, ಸದ್ಯ ಐಎಎಫ್‌ನಲ್ಲಿ ಕಾರ್ಯಾಚರಿಸುತ್ತಿದೆ.
6. **ಜಾಗ್ವಾರ್ (ಡಾರಿನ್-3):** ಇದು 3+/4ನೇ ತಲೆಮಾರಿನ ಯುದ್ಧ ವಿಮಾನ. ಆಳವಾದ ಪರಿಣಾಮಕಾರಿ ದಾಳಿ ನಡೆಸುವುದು ಇದರ ಮುಖ್ಯ ಪಾತ್ರವಾಗಿದೆ. ದೀರ್ಘ ದೂರವ್ಯಾಪ್ತಿ ದಾಳಿ, ಆಧುನಿಕ ಕಣ್ಗಾವಲು ವ್ಯವಸ್ಥೆ ಹಾಗೂ ದಾಳಿ ವ್ಯವಸ್ಥೆಯನ್ನು ಹೊಂದಿದೆ. ಸದ್ಯ ಐಎಎಫ್‌ನಲ್ಲಿ ಕಾರ್ಯಾಚರಿಸುತ್ತಿದ್ದು, ಶೀಘ್ರ ಸೇವೆಯಿಂದ ನಿವೃತ್ತಿ ನೀಡುವ ಸಾಧ್ಯತೆಯಿದೆ.



ಸುದ್ದಿ ಸಮಗ್ರ

ಡಿಆರ್‌ಡಿಒ/ಎಡಿಎ ವಿನ್ಯಾಸ ಮತ್ತು ನೈಪುಣ್ಯ

ಅತ್ಯಾಧುನಿಕ ಮಧ್ಯಮ ಯುದ್ಧ ವಿಮಾನಗಳ ಯೋಜನೆಯಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಅನ್ವಯ ಕಾರ್ಯಾಚರಿಸುವ ವೈಮಾನಿಕ ಅಭಿವೃದ್ಧಿ ಸಂಸ್ಥೆಯ (ಎಡಿಎ) ವಿನ್ಯಾಸ ಮತ್ತು ನೈಪುಣ್ಯ ಬಳಸಿಕೊಳ್ಳಲಾಗುವುದು. ಬಿಡ್ ಗೆಲ್ಲುವ ಖಾಸಗಿ ರಕ್ಷಣಾ ಸಂಸ್ಥೆ, ಯುದ್ಧ ವಿಮಾನಗಳ ಹಾರಾಟ ಪರೀಕ್ಷೆ ಮತ್ತು ಪ್ರಮಾಣಪತ್ರ ಇತ್ಯಾದಿ ಚಟುವಟಿಕೆಗಳ ಜವಾಬ್ದಾರಿ ವಹಿಸಿಕೊಳ್ಳಲಿವೆ.

2027ರ ವೇಳೆಗೆ ಮೊದಲ ಮಾದರಿ?

ಎಎಂಸಿಎ ಮೊದಲ ಮಾದರಿ 2027ರಲ್ಲಿ ಪೂರ್ಣಗೊಳ್ಳಲಿದೆ. ಇದರ ಮೊದಲ ಹಾರಾಟ 2028-29ರೊಳಗೆ ನಡೆಯಲಿದೆ. 2030ರ ನಡುವೆ ಇಂತಹಾ ಯುದ್ಧ ವಿಮಾನಗಳ ಸರಣಿ ಉತ್ಪಾದನೆ ಆರಂಭವಾಗಲಿದೆ.

ಎಎಂಸಿಎ ಯುದ್ಧ ವಿಮಾನಗಳ ವಿಶೇಷತೆ

- ತಲೆಮಾರು: 5/5.5ನೇ ತಲೆಮಾರಿನ ಯುದ್ಧ ವಿಮಾನಗಳು
- **ಗರಿಷ್ಠ ವೇಗ:** ಮ್ಯಾಕ್-2
- **ಯುದ್ಧ ಪರಿಧಿ:** 1,000+ ಕಿ.ಮೀ.
- **ಶಸ್ತ್ರಾಸ್ತ್ರಗಳು:** ಕ್ಷಿಪಣಿಗಳು, ಬಾಂಬ್‌ಗಳು
- **ಆಂತರಿಕ ಶಸ್ತ್ರ ಸಾಮರ್ಥ್ಯ:** 1,500 ಕೆ.ಜಿ.
- **ಬಾಹ್ಯ ಶಸ್ತ್ರ ಸಾಮರ್ಥ್ಯ:** 5,500 ಕೆ.ಜಿ.
- **ಆಪರೇಷನಲ್ ಸೀಲಿಂಗ್:** 55,000 ಫೀಟ್

ಸೋರಿಕೆ ವಿವಾದದ ಬಳಿಕ ಕೇಂದ್ರದ ಮಹತ್ವದ ಚಿಂತನೆ

ನೀಟ್ ಪ್ರಶ್ನೆಪತ್ರಿಕೆ ಸಾಗಣೆಗೆ ಸೇನಾ ಲಾಜಿಸ್ಟಿಕ್ಸ್ ಬಳಕೆ?

• **ಹೊಸದಿಲ್ಲಿ:** ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರಕಾರವು ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಪ್ರಶ್ನೆಪತ್ರಿಕೆಗಳ ಸಾಗಣೆಗೆ ಸೇನಾ ಲಾಜಿಸ್ಟಿಕ್ಸ್ ವ್ಯವಸ್ಥೆ ಬಳಸುವ ಬಗ್ಗೆ ಗಂಭೀರ ಚಿಂತನೆ ನಡೆಸುತ್ತಿದೆ ಎಂದು ವರದಿಯಾಗಿದೆ. ಪ್ರಸ್ತುತ ಪ್ರಶ್ನೆಪತ್ರಿಕೆಗಳನ್ನು ಮುದ್ರಣ ಕೇಂದ್ರಗಳಿಂದ ಪರೀಕ್ಷಾ ಕೇಂದ್ರಗಳಿಗೆ ಖಾಸಗಿ ಲಾಜಿಸ್ಟಿಕ್ಸ್ ಜಾಲದ ಮೂಲಕ ರವಾನಿಸಲಾಗುತ್ತದೆ. ಆದರೆ, ನೀಟ್-ಯುಜಿ 2026 ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ನಂತರ ಈ ವ್ಯವಸ್ಥೆಯ ಸುರಕ್ಷತೆ ಕುರಿತು ಪ್ರಶ್ನೆಗಳು ಎದ್ದಿವೆ.

ಇದರಿಂದಾಗಿ ರಕ್ಷಣಾ ಪಡೆಗಳ ನಿಯಂತ್ರಣದಲ್ಲಿರುವ ಭದ್ರ ಸಾಗಣೆ ವ್ಯವಸ್ಥೆಯನ್ನು ಬಳಸುವ ಸಾಧ್ಯತೆಗಳನ್ನು ಕೇಂದ್ರ ಪರಿಶೀಲಿಸುತ್ತಿದೆ ಎನ್ನಲಾಗಿದೆ. ಪ್ರಶ್ನೆಪತ್ರಿಕೆ ಸಾಗಣೆ, ಸಂಗ್ರಹಣೆ ಮತ್ತು ವಿತರಣೆಯ ಪ್ರತಿಯೊಂದು ಹಂತಕ್ಕೂ ಕಠಿಣ ಡಿಜಿಟಲ್ ಟ್ರ್ಯಾಕಿಂಗ್, ಜಿಪಿಎಸ್ ನಿಗಾವ್ಯವಸ್ಥೆ ಹಾಗೂ ಬಹುಪದರ ಭದ್ರತಾ ಕ್ರಮಗಳನ್ನು ಜಾರಿಗೆ ತರುವ ಕುರಿತೂ ಚರ್ಚೆಗಳು ನಡೆದಿವೆ. ಮುಂದಿನ ವರ್ಷದಿಂದ ನೀಟ್ ಪರೀಕ್ಷೆಯನ್ನು ಸಂಪೂರ್ಣ ಕಂಪ್ಯೂಟರ್ ಆಧಾರಿತ ಮಾದರಿಗೆ ಪರಿವರ್ತಿಸುವ ಪ್ರಸ್ತಾವನೆಯೂ ಕೇಂದ್ರದ ಮುಂದಿದೆ ಎಂದು ಮೂಲಗಳು ಹೇಳಿವೆ. ಇತ್ತೀಚೆಗೆ ನಡೆದ ನೀಟ್-ಯುಜಿ 2026 ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ಆರೋಪದ ಹಿನ್ನೆಲೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ತೀವ್ರ ಟೀಕೆಗೆ ಗುರಿಯಾಗಿದೆ. ಪ್ರಕರಣದ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡಿದ್ದು, ಈಗಾಗಲೇ ಹಲವರನ್ನು ಬಂಧಿಸಲಾಗಿದೆ.

ಕಿರುಸುದ್ದಿ

ಇಡಿ ಅಧಿಕಾರಿಗಳ ಮೇಲೆ ದಾಳಿ: 8 ಮಂದಿ ಬಂಧನ

• **ತಿರುವನಂತಪುರಂ:** ಕೇರಳ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ನಿವಾಸದಲ್ಲಿ ಶೋಧ ಕಾರ್ಯ ನಡೆಸಿ ಹಿಂತಿರುಗುವ ವೇಳೆ ಇಡಿ ಅಧಿಕಾರಿಗಳು ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ವಾಹನಗಳ ಮೇಲೆ ಸಿಪಿಎಂ ದುಷ್ಕರ್ಮಿಗಳು ನಡೆಸಿದ ದಾಳಿಗೆ ಸಂಬಂಧಿಸಿ ಈ ವರೆಗೆ ಎಂಟು ಮಂದಿಯನ್ನು ಬಂಧಿಸಲಾಗಿದೆ. ಉಳಿದವರನ್ನೂ ಶೀಘ್ರವೇ ಬಂಧಿಸಲಾಗುವುದು ಎಂದು ಕೇರಳ ಡಿಜಿಪಿ ರಾವಡ ಎ .ಚಂದ್ರಶೇಖರ್ ತಿಳಿಸಿದ್ದಾರೆ. ದುಷ್ಕರ್ಮಿಗಳಿಗೆ ಸೂಕ್ತ ಶಿಕ್ಷೆಯಾಗುವಂತೆ ಮಾಡಲಾಗುವುದು ಎಂದೂ ಅವರು ಹೇಳಿದ್ದಾರೆ. ಈ ದಾಳಿಗೆ ಭದ್ರತಾ ವೈಫಲ್ಯವೇ ಕಾರಣ ಎಂಬುದನ್ನು ನಿರಾಕರಿಸಿದ ಅವರು , ಈ ದಾಳಿ ಬಗ್ಗೆ ಇಡಿಯಿಂದ ಮಾಹಿತಿ ಇರಲಿಲ್ಲ ಎಂದು ಹೇಳಿಕೊಂಡರು. ಆದಾಗ್ಯೂ ಮಾಹಿತಿ ಲಭಿಸಿದ ಕೂಡಲೇ ಸೂಕ್ತ ಭದ್ರತೆ ಒದಗಿಸಿದ್ದು, 300ಮಂದಿ ಪೊಲೀಸರನ್ನು ನಿಯೋಜಿಸಿರುವುದಾಗಿ ನುಡಿದರು.ಈ ದಾಳಿ ತಡೆಯುವಲ್ಲಿ ಕೇರಳ ಪೊಲೀಸ್ ಇಲಾಖೆ ಸೂಕ್ತ ಮುನ್ನೆಚ್ಚರಿಕೆ ವಹಿಸದಿದ್ದುದೇ ಕಾರಣ ಎಂಬ ಆರೋಪ ಕೇಳಿಬಂದಿತ್ತು.

ಹಾರ್ಮುಜ್ ಮೂಲಕ ಸುರಕ್ಷಿತ ವ್ಯಾಪಾರ ಮುಖ್ಯ

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿಯ ಮೂಲಕ ತಡೆರಹಿತ ಹಾಗೂ ಸುರಕ್ಷಿತ ವ್ಯಾಪಾರ ಬಹಳ ಅವಶ್ಯಕ, ಪಶ್ಚಿಮ ಏಷ್ಯಾ ವಿಚಾರದಲ್ಲಿ ವಿಶೇಷ ಗಮನಹರಿಸಬೇಕು ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ದೋವಲ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರಷ್ಯಾ ರಾಜಧಾನಿ ಮಾಸ್ಕೋದಲ್ಲಿ ನಡೆದ ಭದ್ರತೆಯ ಉನ್ನತ ಪ್ರತಿನಿಧಿಗಳ 14ನೇ ಹಾಗೂ ಅಂತಾರಾಷ್ಟ್ರೀಯ ಭದ್ರತಾ ವೇದಿಕೆಯ ಮೊದಲ ಸಭೆಯಲ್ಲಿ ಭಾರತವನ್ನು ಪ್ರತಿನಿಧಿಸಿ ಮಾತನಾಡಿದ ದೋವಲ್, ಹಾರ್ಮುಜ್ ಮತ್ತು ಕೆಂಪು ಸಮುದ್ರ ಸಹಿತ ಅಂತಾರಾಷ್ಟ್ರೀಯ ಜಲಮಾರ್ಗಗಳಲ್ಲಿ ತಡೆರಹಿತ ಮತ್ತು ಸುರಕ್ಷಿತ ವ್ಯಾಪಾರ ಖಚಿತಪಡಿಸುವುದು ಬಹಳ ಅವಶ್ಯಕ ಎಂದು ಹೇಳಿದ್ದಾರೆ. ಅಂತಾರಾಷ್ಟ್ರೀಯ ಅಪಾಯಗಳನ್ನು ಎದುರಿಸುವಲ್ಲಿ ಮತ್ತು ಜಾಗತಿಕ ದಕ್ಷಿಣವನ್ನು ಪ್ರತಿನಿಧಿಸುವಲ್ಲಿ ನಾವು ಇನ್ನಷ್ಟು ಪರಿಣಾಮಕಾರಿ ಆಗಬೇಕು. ದ್ವಿತೀಯ ವಿಶ್ವಯುದ್ಧ ಬಳಿಕ ಜಾಗತಿಕ ಸುಧಾರಣೆಗಾಗಿ ಹಲವು ಸಂಸ್ಥೆಗಳನ್ನು ಕಟ್ಟಲಾಯಿತೆಂದು ದೋವಲ್ ಉಲ್ಲೇಖಿಸಿದ್ದಾರೆ.

ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಇಬ್ಬಗೆಯ ನೀತಿ ಸಲ್ಲದು ಎಂಬ ಭಾರತದ ನಿಲುವನ್ನು ಅಜಿಲ್ ದೋವಲ್ ಅಂತಾರಾಷ್ಟ್ರೀಯ ಭದ್ರತಾ ವೇದಿಕೆಯಲ್ಲಿ ಪುನರುಚ್ಚರಿಸಿದ್ದಾರೆ. ಚೀನಾ ಇಬ್ಬಗೆಯ ನೀತಿ ಮತ್ತು ಭಯೋತ್ಪಾದನೆ ಪೋಷಿಸುವ ಪಾಕಿಸ್ತಾನವನ್ನು ನೇರ ಉಲ್ಲೇಖಿಸದೆ ದೋವಲ್ ಭಾರತದ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಭಯೋತ್ಪಾದನೆಗೆ ಬೆಂಬಲಿಸುವುದೋ ಅಥವಾ ಅದರ ವಿರುದ್ಧ ಹೋರಾಡುವುದೋ ಆ ರಾಷ್ಟ್ರಗಳು ನಿರ್ಧರಿಸಬೇಕು ಎಂದಿದ್ದಾರೆ.

ಭಾರತ, ಚೀನಾ ನಡುವೆ ಎಲ್‌ಒಸಿ ಕುರಿತು ಚರ್ಚೆ

• **ಹೊಸದಿಲ್ಲಿ:** ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯ ಗಡಿ ಪರಿಸ್ಥಿತಿ ಕುರಿತು ಚರ್ಚಿಸಲು ಭಾರತ ಮತ್ತು ಚೀನಾ ಬುಧವಾರ ಬೀಜಿಂಗ್‌ನಲ್ಲಿ ರಾಜತಾಂತ್ರಿಕ ಮಾತುಕತೆ ನಡೆಸಿವೆ.


ವರ್ಕಿಂಗ್ ಮೆಕಾನಿಸಂ ಫಾರ್ ಕನ್ಸಲ್ಟೇಶನ್ ಅಂಡ್ ಕೋಆರ್ಡಿನೇಷನ್ ಸಭೆ, ಗಡಿ ಪ್ರದೇಶಗಳ ಪರಿಶೀಲನೆಯ ಮೇಲೆ ಬೆಳಕು ಚೆಲ್ಲಿತು. ಗಡಿಯಲ್ಲಿ ಶಾಂತಿ ಕಾಪಾಡುವುದು ಒಟ್ಟಾರೆ ಬಾಂಧವ್ಯದ ಸಹಜ ಸ್ಥಿತಿಗೆ ಸಹಕಾರಿ ಎಂದು ಉಭಯ ದೇಶಗಳ ಪ್ರತಿನಿಧಿಗಳು ಅಭಿಪ್ರಾಯಪಟ್ಟಿದ್ದಾರೆ.

ಚೀನಾದಲ್ಲಿ ನಡೆಯಲಿರುವ ಮುಂದಿನ ವಿಶೇಷ ಪ್ರತಿನಿಧಿಗಳ ಸಭೆಗೆ ಸಿದ್ಧತೆ ನಡೆಸಲು ಉಭಯ ದೇಶಗಳು ಒಪ್ಪಿಕೊಂಡಿವೆ. ಈ ಮಾತುಕತೆ, ಗಡಿ ನಿರ್ಣಯ, ಗಡಿ ನಿರ್ವಹಣೆ ಮತ್ತು ಗಡಿಯಾಚೆಗಿನ ಸಹಕಾರವನ್ನು ಒಳಗೊಂಡಿತ್ತು ಎಂದು ತಿಳಿದುಬಂದಿದೆ. ಭಾರತ ಗಡಿಯಾಚೆಗಿನ ನದಿಗಳ ಕುರಿತು ಶೀಘ್ರದಲ್ಲೇ ತಜ್ಞರ ಮಟ್ಟದ ಸಭೆ ನಡೆಸುವಂತೆ ವಿನಂತಿಸಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಿತ್ ಘೋಷ್, ಭಾರತೀಯ ನಿಯೋಗದ ನೇತೃತ್ವ ವಹಿಸಿದ್ದರು. ಚೀನಾದ ಅಧಿಕಾರಿಗಳಾದ ಹೌ ಯಾನ್ಕಿ, ಲಿಯು ಜಿನ್ಸಾ ಂಗ್ ಮತ್ತು ಹಾಂಗ್ ಲೀ ಅವರನ್ನು ನಿಯೋಗ ಭೇಟಿಯಾಯಿತು.

ಈ ಸಭೆ, 2024 ರ ಡೆಪ್ಸಾ ಂಗ್ ಮತ್ತು ಡೆಮ್ಚೋಕ್ ಗಡಿ ವಾಪಸಾತಿ ಒಪ್ಪಂದದ ಮುಂದುವರಿದ ಭಾಗ. 2020 ರ ಗಲ್ವಾನ್ ಕಣಿವೆ ಸಂಘರ್ಷ ಮತ್ತು ನಾಲ್ಕು ವರ್ಷಗಳ ಮಿಲಿಟರಿ ಮುಖಾಮುಖಿಯ ನಂತರ ಹಳಸಿದ್ದ ಬಾಂಧವ್ಯವನ್ನು ಸರಿದಾರಿಗೆ ತರಲು ಪ್ರಯತ್ನ ನಡೆದಿದೆ.

ಗೋ ಹತ್ಯೆ ನಿಷೇಧಕ್ಕೆ ಮದ್ರಾಸ್ ಹೈ ಆದೇಶ

• **ಚೆನ್ನೈ:** ಹಾಲುತ್ಪಾದನೆ ಮತ್ತು ಗ್ರಾಮೀಣ ಆರ್ಥಿಕತೆಯ ಸುಧಾರಣೆ ಹಿನ್ನೆಲೆಯಲ್ಲಿ ಗೋಹತ್ಯೆಯನ್ನು ನಿಷೇಧಿಸಿ ತಮಿಳುನಾಡು ಸರಕಾರ 1976ರ ಆ.30ರಂದು ಹೊರಡಿಸಿರುವ ಆದೇಶವನ್ನು ಅನುಷ್ಠಾನಿಸಬೇಕು. ತನ್ಮೂಲಕ ಬಕ್ರೀದ್ ಮತ್ತಿತರ ಹಬ್ಬದ ದಿನಗಳಲ್ಲಿ ರಾಜ್ಯದಲ್ಲಿ ಗೋವು, ಕರುಗಳ ಹತ್ಯೆಯಾಗದಂತೆ ತಡೆಯಬೇಕೆಂದು ಮದ್ರಾಸ್ ಹೈಕೋರ್ಟ್ ತಮಿಳುನಾಡು ಸರಕಾರಕ್ಕೆ ಮಹತ್ವದ ಆದೇಶವಿತ್ತಿದೆ. ನ್ಯಾಯಾಲಯದ ಆದೇಶ ಯಾವ ಕಾರಣಕ್ಕೂ



ಉಲ್ಲಂಘನೆಯಾಗಕೂಡದು ಮತ್ತು ಈ ನಿಟ್ಟಿನಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಅಗತ್ಯ ನಿರ್ದೇಶ ನೀಡುವಂತೆ, ಹೈಕೋರ್ಟ್‌ನ ನ್ಯಾಯಮೂರ್ತಿ ಜಿ.ಆರ್.ಸ್ವಾಮಿನಾಥನ್ ಮತ್ತು ವಿ.ಲಕ್ಷ್ಮೀನಾರಾಯಣನ್ ಅವರನ್ನು ಒಳಗೊಂಡ ನ್ಯಾಯಪೀಠ ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿ ಹಾಗೂ ಹೆಚ್ಚುವರಿ ಡಿಜಿಪಿ ಅವರಿಗೆ ಆದೇಶಿಸಿದೆ. ಬಕ್ರೀದ್ ಅಥವಾ ಯಾವುದೇ ಇತರ ದಿನಗಳಲ್ಲೂ ಗೋವು ಅಥವಾ ಕರುಗಳ ಹತ್ಯೆಯಾಗಕೂಡದೆಂದು ರಾಜ್ಯ ಸರಕಾರಕ್ಕೆ ನಿರ್ದೇಶ ಹೊರಡಿಸುವುದರೊಂದಿಗೆ, ಈ ಕುರಿತ ಮೇಲ್ಮನವಿಯನ್ನು ನ್ಯಾಯಾಲಯ ವಿಚಾರಣೆಗೆ ಎತ್ತಿಕೊಂಡಿದೆ ಎಂದು ನ್ಯಾಯಪೀಠ ಹೇಳಿದೆ.ಸಾರ್ವಜನಿಕ ಸ್ಥಳಗಳಲ್ಲಿ ಗೋಹತ್ಯೆ ನಿಷೇಧಿಸಿ ಆದೇಶ ಹೊರಡಿಸುವಂತೆ ವಿನಂತಿಸಿ, ಕೊಯಮತ್ತೂರು ಮೂಲದ ಕೆ.ಸೂರ್ಯ ಯಾನೆ ಕೆ. ಸೂರ್ಯ ಪ್ರಶಾಂತ್ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಪಶ್ಚಿಮ ಬಂಗಾಳ: ಬಿಎಸ್‌ಎಫ್‌ಗೆ ಗಡಿ ಭೂಮಿ ಹಸ್ತಾಂತರ

• **ಕೋಲ್ಕತ್ತಾ:** ಭಾರತ ಮತ್ತು ಬಾಂಗ್ಲಾದೇಶ ಗಡಿಯಲ್ಲಿ ಬೇಲಿ ಹಾಗೂ ಹೊರಠಾಣೆಗಳನ್ನು ನಿರ್ಮಿಸಲು ಪಶ್ಚಿಮ ಬಂಗಾಳ ಸರ್ಕಾರ 142.79 ಎಕರೆ ಭೂಮಿಯನ್ನು ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಹಸ್ತಾಂತರಿಸಿದೆ. ಭಾರತ-ಬಾಂಗ್ಲಾದೇಶ ಗಡಿಯುದ್ದಕ್ಕೂ ಭದ್ರತಾ ಮೂಲಸೌಕರ್ಯಗಳನ್ನು ಬಲಪಡಿಸಲು ಈ ಭೂಮಿಯನ್ನು ವರ್ಗಾಯಿಸಲಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ತಿಳಿಸಿದ್ದಾರೆ. ಈ ಭೂಮಿ ಒಂಬತ್ತು ಜಿಲ್ಲೆಗಳಲ್ಲಿ ಹರಡಿಕೊಂಡಿದ್ದು, ಮುರ್ಷಿದಾಬಾದ್‌ನಲ್ಲಿ 38.8 ಎಕರೆ, ಜಲ್ಪೈಗುರಿಯಲ್ಲಿ 35.16 ಎಕರೆ, ಕೂಚ್‌ಬೆಹಾರ್‌ನಲ್ಲಿ 22.92 ಎಕರೆ ಮತ್ತು ದಕ್ಷಿಣ ದಿನಾಜ್‌ಪುರದಲ್ಲಿ 20.17 ಎಕರೆ ಭೂಮಿ ಇದೆ. ಉಳಿದ ಭೂಮಿಯನ್ನು ಮಾಲ್ಡಾ, ಡಾರ್ಜಿಲಿಂಗ್, ಉತ್ತರ ದಿನಾಜ್‌ಪುರ, ಉತ್ತರ 24 ಪರಗಣ ಮತ್ತು ನಾಡಿಯಾ ಜಿಲ್ಲೆಗಳಲ್ಲಿ ವರ್ಗಾಯಿಸಲಾಗಿದೆ.

ಸಚಿವ ಮಲ್ಹೋತ್ರಾಗೆ ದಿಲ್ಲಿ ಅಧ್ಯಕ್ಷತೆ | ಹರ್ಯಾಣಕ್ಕೆ ಅರ್ಚನಾ ಗುಪ್ತಾ | ಪಂಜಾಬ್‌ಗೆ ಧಿಲ್ಲಾನ್

4 ರಾಜ್ಯಗಳಿಗೆ ಬಿಜೆಪಿ ಹೊಸ ರಾಜ್ಯಾಧ್ಯಕ್ಷರು

• **ಹೊಸದಿಲ್ಲಿ:** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಗುರುವಾರ ದಿಲ್ಲಿ ಸಹಿತ ನಾಲ್ಕು ರಾಜ್ಯ ಬಿಜೆಪಿ ಘಟಕಗಳಿಗೆ ಪಕ್ಷಾಧ್ಯಕ್ಷರನ್ನು ನಿಯುಕ್ತಿಗೊಳಿಸಿದ್ದಾರೆ. ಕೇಂದ್ರ ಸಚಿವ ಹರ್ಷ ಮಲ್ಹೋತ್ರಾ ಬಿಜೆಪಿ ದಿಲ್ಲಿ ಘಟಕಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಹರ್ಯಾಣ ಬಿಜೆಪಿ ಘಟಕಾಧ್ಯಕ್ಷರಾಗಿ ಅರ್ಚನಾ ಗುಪ್ತಾ, ಪಂಜಾಬ್ ಘಟಕಕ್ಕೆ ಸರ್ದಾರ್ ಕೇವಲ್ ಸಿಂಗ್ ಧಿಲ್ಲಾನ್ ಹೊಸ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಹೊರಡಿಸಿರುವ ಪ್ರತ್ಯೇಕ ಅಧಿಸೂಚನೆಗಳಲ್ಲಿ ಹೇಳಲಾಗಿದೆ. ತ್ರಿಪುರಾದ ಮಾತಾಬರಿ ವಿಧಾನಸಭಾ ಕ್ಷೇತ್ರ ಶಾಸಕ ಅಭಿಷೇಕ್ ದೇಬ್ರೋಯ್ ತ್ರಿಪುರಾ ಬಿಜೆಪಿ ಘಟಕಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.ಇವೆಲ್ಲ ನೇಮಕಗಳು ತಕ್ಷಣದಿಂದಲೇ ಕಾರ್ಯಾನುಷ್ಠಾನಗೊಳ್ಳಲಿವೆ ಎಂದು ಅರುಣ್ ಸಿಂಗ್ ತಿಳಿಸಿದ್ದಾರೆ.

ಹೊಸತಾಗಿ ಆಯ್ಕೆಯಾಗಿರುವ ಬಿಜೆಪಿ ರಾಜ್ಯ ಘಟಕಾಧ್ಯಕ್ಷರ ಪೈಕಿ ಹರ್ಷ ಮಲ್ಹೋತ್ರಾ ಮಾತ್ರ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟದಲ್ಲಿ ಸಚಿವರಾಗಿರುವವರು. ದಿಲ್ಲಿ ಬಿಜೆಪಿ ಘಟಕಾಧ್ಯಕ್ಷರಾಗಿದ್ದ ವೀರೇಂದ್ರ ಸಚ್‌ದೇವಾ ಅವರ ಕರ್ತವ್ಯಾವಧಿ ಈ ವರ್ಷ ಮಾರ್ಚ್‌ಗೆ ಪೂರ್ತಿಯಾಗಿದ್ದು, ತೆರವಾಗಿದ್ದ ಜಾಗಕ್ಕೆ



ಮಲ್ಹೋತ್ರ ನೇಮಕ ನಡೆದಿದೆ. ಸಚಿವರಾಗೋ ಮುನ್ನ ದಿಲ್ಲಿ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿದ್ದ ಮಲ್ಹೋತ್ರಾ, ಪಕ್ಷದ ಸಂಘಟನಾತ್ಮಕ ವಿಚಾರಗಳು ಮತ್ತು ಸ್ಥಳೀಯಾಡಳಿತ ಸಂಸ್ಥೆಗಳ ಕಾರ್ಯ ಚಟುವಟಿಕೆ ಇತ್ಯಾದಿಗಳಲ್ಲಿ ತಜ್ಞತೆ ಹೊಂದಿದವರು. 2015ರಲ್ಲಿ ನಿಕಟಪೂರ್ವ ದಿಲ್ಲಿ ಮಹಾನಗರಪಾಲಿಕೆಯ ಮೇಯರ್ ಆಗಿ ಆಯ್ಕೆಯಾಗಿದ್ದರು.

ಹರ್ಯಾಣ ಬಿಜೆಪಿ ಅಧ್ಯಕ್ಷ ಮೋಹನ್ ಲಾಲ್ ಬಡೋಲಿ ಅವರ ಕರ್ತವ್ಯಾವಧಿ ಮುಗಿದ ಹಿನ್ನೆಲೆಯಲ್ಲಿ, ಹೊಸ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಅರ್ಚನಾ ಗುಪ್ತಾ ವೃತ್ತಿಯಲ್ಲಿ ವೈದ್ಯೆ ಮತ್ತು ಈ ಮುನ್ನ ಹರ್ಯಾಣ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಹೊಣೆ ನಿಭಾಯಿಸಿದವರು. ಪಾಣಿಪತ್ ಮೂಲದ ಅರ್ಚನಾ ಗುಪ್ತಾ, ಬಿಜೆಪಿ ಪ್ರಮುಖ ನಾಯಕಿ ಖ್ಯಾತ ಕಮಲಾ ವರ್ಮಾ ನಂತರ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನ ವಹಿಸುತ್ತಿರುವ ದ್ವಿತೀಯ ಮಹಿಳೆಯೆನಿಸಿದ್ದಾರೆ.

ಬರ್ನಾಲಾ ಕ್ಷೇತ್ರದಿಂದ ಸತತ ಎರಡು ಬಾರಿ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾಗಿದ್ದ ಸರ್ದಾರ್ ಕೇವಲ್ ಸಿಂಗ್ ಧಿಲ್ಲಾನ್ 2022ರಲ್ಲಿ ಬಿಜೆಪಿ ಸೇರಿದ್ದರು ಮತ್ತು ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷರಾಗಿ ಕರ್ತವ್ಯ ನಿಭಾಯಿಸಿದ್ದರು. ಹರ್ಯಾಣ ಬಿಜೆಪಿ ನೂತನ ಅಧ್ಯಕ್ಷರು ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಕ್ಯಾ. ಅಮರಿಂದರ್ ಸಿಂಗ್ ಅವರ ನಿಕಟ ನಂಬಿಗಸ್ಥರಲ್ಲೋರ್ವರು. ಕ್ಯಾ. ಸಿಂಗ್ ಕೂಡ ಕಾಂಗ್ರೆಸ್‌ನಿಂದಾದ ಸಖಿತ್ ಕಹಿ ಅನುಭವಗಳಿಂದ ರೋಸಿ 2022ರಲ್ಲಿ ಬಿಜೆಪಿ ಸೇರಿದವರು. ಬಿಜೆಪಿ ಪಂಜಾಬ್ ಘಟಕದ ಹೊಸ ಅಧ್ಯಕ್ಷ ಸಿಖ್ ಸಮುದಾಯದ ಧಿಲ್ಲಾನ್ ಕೂಡ ಸಮರ್ಥ ನಾಯಕತ್ವ ಗುಣವುಳ್ಳವರೆಂದು ಹೇಳಲಾಗಿದೆ. 2027ರಲ್ಲಿ ಪಂಜಾಬ್‌ನ ಆಮ್ ಆದ್ಮಿ ಪಾರ್ಟಿ ಸರಕಾರವನ್ನು ಪದಚ್ಯುತಗೊಳಿಸುವುದು ಬಿಜೆಪಿ ಸಂಕಲ್ಪವಾಗಿದೆ.

ಭಾವಿ ಅಳಿಯನ ಬಗ್ಗೆ ಮಾವನ ಫುಲ್ ಚೆಕಪ್

ಸಂಚಾರಿ ಚಲನ್ ಪರಿಶೀಲನೆ!

• **ರಾಯುಡುಪಾಳ್ಯಂ:** ಮದುವೆಗೆ ಮುನ್ನ ಜಾತಕ ನೋಡುವುದೇನೋ ಸರಿ. ಆದರೆ ಕಾಕಿನಾಡ ಜಿಲ್ಲೆಯ ವ್ಯಕ್ತಿಯೊಬ್ಬರು ತಮ್ಮ ಮಗಳ ಮದುವೆ ನಿಶ್ಚಯಿಸುವ ಮುನ್ನ ಭಾವಿ ಅಳಿಯನ ಜನ್ಮ ಜಾಲಾಡಿದ್ದಾರೆ. ಅರ್ಥಾತ್, ಆತನ ವಾಹನಗಳ ಸಂಚಾರಿ ಚಲನ್ ಚೆಕ್ ಮಾಡಲು ಪೊಲೀಸರನ್ನು ಸಂಪರ್ಕಿಸಿದ್ದಾರೆ. ಭಾವಿ ಅಳಿಯನ ಜವಾಬ್ದಾರಿ ಮತ್ತು ಚಾಲನಾ ನಡವಳಿಕೆಯನ್ನು ಪರೀಕ್ಷಿಸುವುದು ಅವರ ಉದ್ದೇಶವಂತೆ!

ಅಪ್‌ಡೇಟ್ ಆಗಿರುವ ಮಾವ!: ಸಾಂಪ್ರದಾಯಿಕ ಆಚರಣೆ ಬದಿಗಿಟ್ಟು ಈ ತಂದೆ, ರಸ್ತೆಯಲ್ಲಿನ ನಡವಳಿಕೆಯ ಮೂಲಕ ವರನ ವಿಚಾರಣೆ ನಡೆಸಲು ಮುಂದಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ. ಭಾವಿ ಅಳಿಯ ಅತಿವೇಗದ ಚಾಲನೆ, ಮದ್ಯಪಾನ ಮಾಡಿ ವಾಹನ ಚಾಲನೆ ಅಥವಾ ಸರಣಿ ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆಯೇ ಎಂದು ಆಮೂಲಾಗ್ರ ಪರಿಶೀಲನೆ ಮಾಡಿದ್ದಾರಂತೆ ಈ ಮಾವ! ಬಯಸಿದ್ದರು.

ಮಗಳೇ ಸರ್ವಸ್ವ: ಹಲವು ವರ್ಷಗಳ ಹಿಂದೆ ಪತ್ನಿಯನ್ನು ಕಳೆದುಕೊಂಡಿದ್ದ ಈ ವ್ಯಕ್ತಿ ಕಷ್ಟಗಳ ನಡುವೆಯೂ



ಮಗಳನ್ನು ಎಂಜಿನಿಯರ್ ಆಗಿ ಬೆಳೆಸಿದ್ದಾರೆ. ಮಗಳಿಗೆ ಸೂಕ್ತ ಸಂಬಂಧ ಬಂದ ನಂತರ, ಅವರು ಮಂಗಳವಾರ ರಾಯುಡುಪಾಳ್ಯಂ ಸಂಚಾರಿ ಪೊಲೀಸರನ್ನು ವರನ ಕಾರು ಮತ್ತು ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆಗಳೊಂದಿಗೆ ಭೇಟಿ ಮಾಡಿದ್ದಾರೆ.

ನಿರಾಕ್ಷೇಪಣಾ ವರದಿ!: ಒಬ್ಬ ವ್ಯಕ್ತಿಯ ಚಾಲನಾ ಶೈಲಿ, ಶಿಸ್ತು, ತಾಳ್ಮೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಪ್ರತಿಫಲಿಸುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು. ಪೊಲೀಸರು ಪರಿಶೀಲಿಸಿದಾಗ ವಾಹನಗಳಿಗೆ ಯಾವುದೇ ಬಾಕಿ ಚಲನ್‌ಗಳು ಅಥವಾ ಗಂಭೀರ ನಿಯಮ ಉಲ್ಲಂಘನೆ ಪತ್ತೆಯಾಗಿಲ್ಲ. ಪೊಲೀಸರು ಈ ಅಪರೂಪದ, ಆದರೆ ಜವಾಬ್ದಾರಿಯುತ ನಡವಳಿಕೆಯನ್ನು ಶ್ಲಾಘಿಸಿದ್ದಾರೆ.

ಕಿರುಸುದ್ದಿ

ಪವರ್ ಪಾಯಿಂಟ್ ಪ್ರೆಸೆಂಟೇಷನ್: ಅಭಿನವ್ ಪ್ರಥಮ

ಪುತ್ತೂರು: ಆಕಾಂಕ್ಷ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಡೆದ ಟೆಕ್ ಸ್ಪಾರ್ಕ್ ಸಮ್ಮರ್ ಕ್ಯಾಂಪ್‌ನಲ್ಲಿ ನಗರದ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯ ಅಭಿನವ್ ಪಿ.ಎನ್. ಪವರ್ ಪಾಯಿಂಟ್ ಪ್ರೆಸೆಂಟೇಷನ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಅವರು ಬೆಂಗಳೂರಿನ ಪ್ರತಿಷ್ಠಿತ ಕಂಪನಿ ಯಮಲೂರುವಿನ ಸಿಜಿಐ ಕ್ಯಾಂಪಸ್‌ಗೆ ಭೇಟಿ ನೀಡುವ ಅವಕಾಶವನ್ನು ಗಳಿಸಿದ್ದಾರೆ.



ಇಂದು ಅಧ್ಯಾಪಕರ ಸಂದರ್ಶನ

ಕಾಸರಗೋಡು: ಅಡ್ಕತ್ತಬೈಲು ಸರಕಾರಿ ಯುಪಿ ಶಾಲೆಯಲ್ಲಿ ಖಾಲಿಯಿರುವ ಯುಪಿಎಸ್‌ಟಿ ಮಲೆಯಾಳ, ಕನ್ನಡ (ಎಚ್‌ಟಿವಿ) ಅಧ್ಯಾಪಕರ ಹುದ್ದೆಗಳನ್ನು ಭರ್ತಿಗೊಳಿಸಲು ಮೇ 29ರಂದು ಬೆಳಗ್ಗೆ 10ಗಂಟೆಗೆ ಶಾಲಾ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ. ಅರ್ಹರು ಮೂಲ ಪ್ರಮಾಣಪತ್ರಗಳ ಸಹಿತ ಸಂದರ್ಶನದಲ್ಲಿ ಹಾಜರಾಗಬೇಕೆಂದು ಮುಖ್ಯೋಪಾಧ್ಯಾಯಿನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಶಿಕ್ಷಕರ ಸಂದರ್ಶನ

ಕಾಸರಗೋಡು: ನೆಲ್ಲಿಕುಂಜೆ ಜಿಡಬ್ಲ್ಯೂಎಲ್‌ಪಿ ಶಾಲೆಯಲ್ಲಿ ಎಲ್‌ಪಿ ವಿಭಾಗದ ಕನ್ನಡ ಅಧ್ಯಾಪಕರ ಎರಡು ಹುದ್ದೆಗಳು ಖಾಲಿಯಿವೆ. ಈ ನಿಟ್ಟಿನಲ್ಲಿ ಮೇ 29ರಂದು ಬೆಳಗ್ಗೆ 11ಗಂಟೆಗೆ ಶಾಲಾ ಕಚೇರಿಯಲ್ಲಿ ಸಂದರ್ಶನವನ್ನು ಏರ್ಪಡಿಸಲಾಗಿದೆ. ಅರ್ಹರು ಮೂಲ ಪ್ರಮಾಣಪತ್ರಗಳೊಂದಿಗೆ ಹಾಜರಾಗಬೇಕೆಂದು ಮುಖ್ಯೋಪಾಧ್ಯಾಯರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ 9746384142 ನಂಬರ್‌ಗೆ ಕರೆ ಮಾಡಬಹುದು.

ಅಂಗನವಾಡಿ ಶಿಕ್ಷಕಿಗೆ ಬೀಳ್ಕೊಡುಗೆ

ಕಾಸರಗೋಡು: 35 ವರ್ಷಗಳ ಸುದೀರ್ಘ ಸೇವೆಯ ನಂತರ ಕೊಳವಯಲ್ ಅಂಗನವಾಡಿಯಿಂದ ನಿವೃತ್ತರಾದ ಶಿಕ್ಷಕಿ ನಿರ್ಮಲಾ ಅವರಿಗೆ ವಿದಾಯ ಸಮಾರಂಭವನ್ನು ಆಯೋಜಿಸಲಾಗಿತ್ತು. ಕವಯತ್ರಿ ಪುಷ್ಪಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕುಂಞಿಕಣ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸುಭಾಷ್ ಕೊಳವಯಲ್, ಅನಿತಾ ಗಂಗಾಧರನ್, ಸುಜಿತ್, ಸತೀಶನ್, ಸರಿತಾ ಮಾತನಾಡಿದರು. ನಿತ್ಯ ಸುಜಿತ್ ಸ್ವಾಗತಿಸಿ, ರಮಣಿ ಜಗದೀಶನ್ ವಂದಿಸಿದರು.

ಮಂಗಳೂರು ನಗರ ಸಿಟಿ ಬಸ್ ಮಾರ್ಗ ವಿಸ್ತರಣೆ | ಸಂಸದ ಕ್ಯಾ. ಚೌಟ ಸಲಹೆ ಪರಿಗಣಿಸಿದ ಜಿಲ್ಲಾಡಳಿತ

ಆರ್‌ಟಿಎ ಸಭೆಯಲ್ಲಿ ಸೂಕ್ತ ಕ್ರಮಕ್ಕೆ ಸೂಚನೆ

ಮಂಗಳೂರು: ಮಂಗಳೂರು ನಗರದ ಕೆಲವು ಪ್ರಮುಖ ಸಿಟಿ ಬಸ್ ಮಾರ್ಗಗಳ ಬದಲಾವಣೆ ಮತ್ತು ವಿಸ್ತರಣೆಯ ಅಗತ್ಯತೆ ಕುರಿತು ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಬರೆದಿರುವ ಪತ್ರವನ್ನು ಜಿಲ್ಲಾಧಿಕಾರಿ ಕಚೇರಿಯು ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಈ ಬಗ್ಗೆ ಮುಂಬರುವ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ (ಆರ್ ಟಿಎ) ಸಭೆಯಲ್ಲಿ ತುರ್ತಾಗಿ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳುವಂತೆ ಕೋರಿ ಅಪರ ಜಿಲ್ಲಾಧಿಕಾರಿ ಅವರು ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ಸಂಸದರು ಜಿಲ್ಲಾಡಳಿತಕ್ಕೆ ಬರೆದಿದ್ದ ಪತ್ರದಲ್ಲಿ ಮಂಗಳೂರು ನಗರದ ಪ್ರಸ್ತುತ ಸಾರಿಗೆ ಸ್ಥಿತಿ–ಗತಿಗಳ ಕುರಿತು ಪ್ರಮುಖ ವಾಗಿ ಪ್ರಸ್ತಾಪಿಸಿದ್ದಾರೆ. ನಗರವು ದಿನದಿಂದ ದಿನಕ್ಕೆ ವೇಗವಾಗಿ ಬೆಳೆಯುತ್ತಿದ್ದು, ಚಾಲ್ತಿಯಲ್ಲಿರುವ ಹಲವು ಸಿಟಿ ಬಸ್ಸುಗಳು ಇನ್ನೂ ಹಳೆಯ ಮತ್ತು ಸಣ್ಣ ಮಾರ್ಗಗಳಲ್ಲೇ ಸಂಚರಿಸುತ್ತಿರುವುದರಿಂದ ಸಾರ್ವಜನಿಕರ ಹೆಚ್ಚುತ್ತಿರುವ ಸಾರಿಗೆ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಇಂತಹ ಹಳೆಯ ಮಾರ್ಗಗಳಿಂದಾಗಿ ಬಸ್ ಆಪರೇಟರ್‌ಗಳಿಗೂ ಆರ್ಥಿಕವಾಗಿ ನಷ್ಟ ಉಂಟಾಗುತ್ತಿದ್ದು, ಬದಲಾಗುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಈ ಮಾರ್ಗಗಳನ್ನು ವಿಸ್ತರಿಸುವುದು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವುದರ ಜೊತೆಗೆ ಸಾರಿಗೆ ವ್ಯವಸ್ಥೆಯನ್ನು ಲಾಭದಾಯಕವಾಗಿ ನಡೆಸಲು ಇರುವ ಏಕೈಕ ತಾರ್ಕಿಕ ಮಾರ್ಗವಾಗಿದೆ ಎಂದು ಸ್ಪಷ್ಟಪಡಿಸಿದ್ದರು.



ಸಾರ್ವಜನಿಕ ವಲಯದಿಂದ ಬಂದಿರುವ ವ್ಯಾಪಕ ಪ್ರತಿಕ್ರಿಯೆಗಳು ಮತ್ತು ಸ್ಥಳೀಯ ಅಗತ್ಯತೆಗಳನ್ನು ಸೂಕ್ಷ್ಮವಾಗಿ ಗಮನಿಸಿರುವ ಸಂಸದರು, ಸದ್ಯ ಮೂರು ಪ್ರಮುಖ ಬಸ್ ಮಾರ್ಗಗಳ ವಿಸ್ತರಣೆಗೆ ಬಲವಾದ ಶಿಫಾರಸು ಮಾಡಿದ್ದಾರೆ. ಮಾರ್ಗ ಸಂಖ್ಯೆ 5 ಅನ್ನು ಮೊರ್ಗನ್ಸ್ ಗೇಟ್‌ನಿಂದ ಜೆಪ್ಪಿನಮೊಗರುವಿನವರೆಗೆ ವಿಸ್ತರಿಸಲು ಕೋರಲಾಗಿದೆ. ಬೈಕಂಪಾಡಿ ಭಾಗದ ಕೈಗಾರಿಕಾ ಕಾರ್ಮಿಕರು ಮತ್ತು ನಿತ್ಯ ಪ್ರಯಾಣಿಕರ ಹಿತದೃಷ್ಟಿಯಿಂದ ಮಾರ್ಗ ಸಂಖ್ಯೆ 7 ಅನ್ನು ಉರ್ವ ಸ್ಟೋರ್‌ನಿಂದ ಬೈಕಂಪಾಡಿ ಕೈಗಾರಿಕಾ ಪ್ರದೇಶದವರೆಗೆ ಹಾಗೂ ದೇಶ–ವಿದೇಶಗಳ ಪ್ರವಾಸಿಗರಿಗೆ ಮತ್ತು ಸ್ಥಳೀಯ ಸಂದರ್ಶಕರಿಗೆ ನೇರ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಮಾರ್ಗ ಸಂಖ್ಯೆ 13 ನ್ನು ಪಣಂಬೂರು ಬೀಚ್‌ನ ಒಳಭಾಗದವರೆಗೆ ವಿಸ್ತರಿಸಲು ಸಂಸದರು ಬರೆದಿದ್ದ ಪತ್ರದಲ್ಲಿ ಕೋರಲಾಗಿದೆ. ಈ ಪ್ರಸ್ತಾವಿತ ಮಾರ್ಗ ವಿಸ್ತರಣೆಗಳು ಕೇವಲ ದೈನಂದಿನ ಪ್ರಯಾಣಿಕರಾದ ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳಿಗೆ ನೆರವಾಗುವುದಷ್ಟೇ ಅಲ್ಲದೆ, ಕರಾವಳಿಯ ಪ್ರಮುಖ ಪ್ರವಾಸಿ ತಾಣಗಳಿಗೆ ನೇರ ಸಂಪರ್ಕ ಒದಗಿಸುವ ಮೂಲಕ ಸ್ಥಳೀಯ ಪ್ರವಾಸೋದ್ಯಮದ ಬೆಳವಣಿಗೆಗೂ ದೊಡ್ಡ ಉತ್ತೇಜನ ನೀಡಲಿವೆ ಎಂದು ಸಂಸದರು ಅಭಿಪ್ರಾಯಪಟ್ಟಿದ್ದಾರೆ.

ಈ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾಧಿಕಾರಿ ಕಚೇರಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಅಧಿಕೃತವಾಗಿ ಪತ್ರ ಬರೆದಿದೆ. ಸಂಸದರು ಪ್ರಸ್ತಾಪಿಸಿರುವ ಈ ಮೂರೂ ಮಾರ್ಗಗಳ ಸಾಧಕ–ಬಾಧಕಗಳು ಮತ್ತು ಕಾರ್ಯಸಾಧ್ಯತೆಯ ಬಗ್ಗೆ ಸಮಗ್ರವಾಗಿ ಪರಿಶೀಲಿಸಬೇಕು ಹಾಗೂ ತುರ್ತಾಗಿ ಅಗತ್ಯ ಶಿಫಾರಸುಗಳೊಂದಿಗೆ ಮುಂಬರುವ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದಿನ ಸಭೆಯಲ್ಲಿ ಸೂಕ್ತ ಪರಿಗಣನೆಗಾಗಿ ಮತ್ತು ತುರ್ತು ನಿರ್ಧಾರಕ್ಕಾಗಿ ಕಡ್ಡಾಯವಾಗಿ ಮಂಡಿಸಬೇಕು ಎಂದು ಜಿಲ್ಲಾಡಳಿತವು ತಮ್ಮ ಪತ್ರದಲ್ಲಿ ಸೂಚನೆ ನೀಡಿದೆ.

ಕಿದೂರು ದೇಗುಲ ಜೀರ್ಣೋದ್ಧಾರ ಕಚೇರಿ ಉದ್ಘಾಟನೆ

ಕುಂಬಳೆ: ಕಿದೂರು ಶ್ರೀ ಮಹಾದೇವ ದೇವಸ್ಥಾನದಲ್ಲಿ ಜೀರ್ಣೋದ್ಧಾರ ಕಾರ್ಯ ಪ್ರಾರಂಭವಾಗಲಿದ್ದು, ದೇವಾಲಯ ಕೆಳಭಾಗದಲ್ಲಿ ನಿರ್ಮಿಸಲಾದ ನೂತನ ಜೀರ್ಣೋದ್ಧಾರ ಕಚೇರಿಯನ್ನು ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಯವರು ದೀಪ ಬೆಳಗಿಸಿ ಉದ್ಘಾಟಿಸಿ ಶುಭಕೋರಿದರು. ಈ ಸಂದರ್ಭದಲ್ಲಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ವಿವೇಕ್ ಶೆಟ್ಟಿ ಕಿದೂರುಗುತ್ತು, ದೇವಸ್ಥಾನದ ಆಡಳಿತ ಸಮಿತಿ ಪದಾಧಿಕಾರಿಗಳು, ಶ್ರೀ ಕ್ಷೇತ್ರದ ಕಾರ್ಯನಿರ್ವಹಣಾಧಿಕಾರಿ, ಜೀರ್ಣೋದ್ಧಾರ ಸಮಿತಿ ಪದಾಧಿಕಾರಿಗಳು, ಸದಸ್ಯರು, ಭಕ್ತರು ಪಾಲ್ಗೊಂಡಿದ್ದರು.



ಮುಲ್ಕಿ: ಬಕ್ರೀದ್ ಹಬ್ಬ ಆಚರಣೆ

ಮುಲ್ಕಿ: ಮುಲ್ಕಿ ಪರಿಸರದಲ್ಲಿ ಬಕ್ರೀದ್ ಹಬ್ಬದ ಆಚರಣೆ ಸಂಭ್ರಮದಿಂದ ನಡೆಯಿತು. ಬೆಳಗಿನಿಂದಲೇ ಮುಸ್ಲಿಂ ಬಾಂಧವರು ಮಸೀದಿಗೆ ತೆರಳಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.



ಮುಲ್ಕಿ ಕೇಂದ್ರ ಜುಮ್ಮಾ ಮಸೀದಿಯಲ್ಲಿ ಮಸೀದಿಯ ಧರ್ಮ ಗುರುಗಳಾದ ಉಸ್ಮಾನ್ ಫೈಝೀ ತೋಡಾರ್ ಹಾಗೂ ಕಾರ್ನಾಡ್ ಮಸೀದಿಯ ಧರ್ಮಗುರುಗಳಾದ ರಿಯಾಜ್ ಫೈಝೀ ವಿಶೇಷ ಉಪನ್ಯಾಸ ನೀಡಿದರು.

ಈ ಸಂದರ್ಭ ಮಸೀದಿಯ ಗೌರವಾಧ್ಯಕ್ಷ ಇನಾಯತ್ ಆಲಿ, ಅಧ್ಯಕ್ಷ ಸೊಹೈಲ್ ಹೈದರ್, ಉಪಾಧ್ಯಕ್ಷ ಪುತ್ತುಭಾವ, ಕೋಶಾಧಿಕಾರಿ , ಪ್ರದಾನ ಕಾರ್ಯದರ್ಶಿ ಫಾರೂಕ್ ಹಾಜಿ ಇಬ್ರಾಹಿಂ,ಸಮಿತಿ ಸದಸ್ಯರಾದ ಇಕ್ಬಾಲ್ ಅಹ್ಮದ್, ಎಂ.ಕೆ. ಹಸೈನ್ ಕಾರ್ನಾಡ್, ಲಿಯಾಕತ್ ಆಲಿ, ಮತ್ತಿತರರು ಉಪಸ್ಥಿತರಿದ್ದರು.

ಬಕ್ರೀದ್: ಗಂಗೊಳ್ಳಿಯಲ್ಲಿ ಸರಳ ಆಚರಣೆ



ಕುಂದಾಪುರ: ಮುಸಲ್ಮಾನ ಬಾಂಧವರ ಪವಿತ್ರ ಹಬ್ಬವಾದ ಬಕ್ರೀದ್ ಹಬ್ಬವನ್ನು ಗಂಗೊಳ್ಳಿಯಲ್ಲಿ ಮುಸಲ್ಮಾನರು ಸರಳವಾಗಿ ಶಾಂತಿಯುತವಾಗಿ ಗುರುವಾರ ಆಚರಿಸಿದರು. ಬೆಳಗಿನಿಂದಲೇ ಮುಸಲ್ಮಾನರು ಮಸೀದಿಗಳಿಗೆ ತೆರಳಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಗಂಗೊಳ್ಳಿ ಜಮಾತ್ ವ್ಯಾಪ್ತಿಯ ಸುಮಾರು 11 ಮಸೀದಿಗಳಲ್ಲಿ ಧರ್ಮಗುರುಗಳ ನೇತೃತ್ವದಲ್ಲಿ ಸಹಸ್ರಾರು ಮುಸಲ್ಮಾನ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಕುಂದಾಪುರ ಪೊಲೀಸ್ ಉಪವಿಭಾಗದ ಉಪಾಧೀಕ್ಷಕ ಎಚ್.ಡಿ.ಕುಲಕರ್ಣಿ ಮತ್ತು ಬೈಂದೂರು ಪೊಲೀಸ್ ವೃತ್ತ ನಿರೀಕ್ಷಕ ಶಿವಕುಮಾರ್ ಮಾರ್ಗದರ್ಶನದಲ್ಲಿ ಗಂಗೊಳ್ಳಿ ಠಾಣೆಯ ಉಪನಿರೀಕ್ಷಕ ಪವನ್ ನಾಯಕ್ ಮತ್ತು ಸುದರ್ಶನ್ ನೇತೃತ್ವದಲ್ಲಿ ಆಯಕಟ್ಟಿನ ಸ್ಥಳಗಳಲ್ಲಿ ಬಿಗು ಪೊಲೀಸ್ ಬಂದೋಬಸ್ತ್ ಮಾಡಿದ್ದರು.

ಕೊಡಗಿನಲ್ಲಿ ಮುಂಗಾರು ಪೂರ್ವ ಮಳೆಯ ಕೊರತೆ: ರೈತರಲ್ಲಿ ಆತಂಕ

ಮಡಿಕೇರಿ: ಪ್ರಸಕ್ತ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಮುಂಗಾರು ಪೂರ್ವ ಮಳೆಯ ತೀವ್ರ ಕೊರತೆ ದಾಖಲಾಗಿದ್ದು, ನೈಋತ್ಯ ಮುಂಗಾರು ಮತ್ತು ಮುಂಬರುವ ಖಾರಿಫ್ ಬಿತ್ತನೆ ಅವಧಿಗೂ ಮುನ್ನ ರೈತರಲ್ಲಿ ಆತಂಕ ಮೂಡಿಸಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ಬುಧವಾರ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ಮಾರ್ಚ್ 1 ರಿಂದ ಮೇ 27 ರವರೆಗಿನ ಮುಂಗಾರು ಪೂರ್ವ ಅವಧಿಯಲ್ಲಿ ಕೊಡಗಿನಲ್ಲಿ ಸಾಮಾನ್ಯ ದಾಖಲಾಗಬೇಕಿದ್ದ 220 ಮಿ.ಮೀ. ಮಳೆಯ ಬದಲಾಗಿ ಕೇವಲ 106 ಮಿ.ಮೀ. ಮಳೆಯಾಗಿದ್ದು, ಇದು ಶೇ. 52 ರಷ್ಟು ತೀವ್ರ ಕೊರತೆಯನ್ನು ದಾಖಲಿಸಿದೆ. ಇದು ದಕ್ಷಿಣ ಕರ್ನಾಟಕದ ಅತಿ ಹೆಚ್ಚು ಮಳೆಯ ಕೊರತೆಗಳಲ್ಲಿ ಒಂದೆಂದು ಹೇಳಲಾಗಿದೆ.

ಜಿಲ್ಲೆಯಲ್ಲಿ ವಿಶೇಷವಾಗಿ ಏಪ್ರಿಲ್‌ನಲ್ಲಿ ಮಳೆಯ ಕೊರತೆ ತೀವ್ರವಾಗಿರುವುದನ್ನು ದತ್ತಾಂಶ ತೋರಿಸಿದೆ. ಕೊಡಗು ಜಿಲ್ಲೆ ಈ ತಿಂಗಳಲ್ಲಿ ಶೇ. 76 ರಷ್ಟು ಮಳೆಯ ಕೊರತೆಯನ್ನು ದಾಖಲಿಸಿದೆ. ಇದು ಜಿಲ್ಲೆಯ ಹಲವಾರು ಭಾಗಗಳಲ್ಲಿ ದುರ್ಬಲ ಗುಡುಗು ಸಹಿತ ಮಳೆ ಮತ್ತು ದೀರ್ಘಕಾಲದ ಒಣ ಹವಾಮಾನ ಪರಿಸ್ಥಿತಿಗಳನ್ನು ಪ್ರತಿಬಿಂಬಿಸಿದೆ.

ಮೇ ತಿಂಗಳಲ್ಲಿ ಮಳೆ ಚಟುವಟಿಕೆ ಸ್ವಲ್ಪ ಸುಧಾರಿಸಿದ್ದರೂ, ಅದು ಸಾಮಾನ್ಯಕ್ಕಿಂತ ಕಡಿಮೆ ಇದೆ. ಮೇ 1 ಮತ್ತು 27 ರ ನಡುವಿನ ಅವಧಿಯಲ್ಲಿ ಕೊಡಗು ಜಿಲ್ಲೆಯಲ್ಲಿ ಸಾಮಾನ್ಯವಾಗಿ 114 ಮಿ.ಮೀ. ಮಳೆಯಾಗಬೇಕಿತ್ತಾದರೂ, ಈ ವರ್ಷ ಕೇವಲ 64 ಮಿ.ಮೀ. ಮಳೆಯಾಗಿದೆ. ಇದು ಶೇ. 44 ರಷ್ಟು ಕೊರತೆಯನ್ನು ದಾಖಲಿಸಿದೆ. ಈ ತಿಂಗಳಿನಲ್ಲಿ ಬಿದ್ದ ಮಳೆಯು, ಈ ಋತುವಿನ ಆರಂಭದಲ್ಲಿ ದಾಖಲಾಗಿದ್ದ ದೊಡ್ಡ ಮಳೆಯ ಕೊರತೆಯನ್ನು ಸರಿದೂಗಿಸಲು ಸಾಲದಾಗಿದೆ.

ತಜ್ಞರ ಅಭಿಪ್ರಾಯ

ಮುಂಬರುವ ದಿನಗಳಲ್ಲಿ ನೈಋತ್ಯ ಮಾನ್ಸೂನ್ ತೀವ್ರಗೊಳ್ಳದಿದ್ದರೆ ನಿರಂತರ ಮಳೆಯ ಕೊರತೆಯು ನೀರಿನ ಲಭ್ಯತೆ, ಅಂತರ್ಜಲ ಮರುಪೂರಣ ಮತ್ತು ಕೃಷಿ ಕಾರ್ಯಾಚರಣೆಗಳ ಮೇಲೆ ಪರಿಣಾಮ ಬೀರಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ಗಮನಾರ್ಹ ಮಳೆಯ ಕೊರತೆಯು ಜಿಲ್ಲೆಯ ಕಾಫಿ ಬೆಳೆಗಾರರು ಮತ್ತು ರೈತರಲ್ಲಿ ಆತಂಕವನ್ನು ಹುಟ್ಟು ಹಾಕಿದೆ. ಜಿಲ್ಲೆಯ ರೈತರು ನೈಋತ್ಯ ಮಾನ್ಸೂನ್ ಆಗಮನದ ಮೊದಲು ಕೃಷಿ ಚಟುವಟಿಕೆಗಳು ಮತ್ತು ಮಣ್ಣಿನ ತೇವಾಂಶಕ್ಕಾಗಿ ಸಕಾಲಿಕ ಪೂರ್ವ ಮಾನ್ಸೂನ್ ಮಳೆಯನ್ನು ಅವಲಂಬಿಸಿದ್ದು, ಕೊಡಗಿನಲ್ಲಿ, ವಿಶೇಷವಾಗಿ ಕಾಫಿ ತೋಟಗಳಿಗೆ ಪೂರ್ವ ಮಾನ್ಸೂನ್ ಮಳೆಯೇ ನಿರ್ಣಾಯಕ ವೆಂದು ಪರಿಗಣಿಸಲಾಗಿದೆ. ಏಕೆಂದರೆ ಅವು ಮುಂದಿನ ಸಾಲಿನ ಫಸಲಿನ ಹೂವು ಅರಳಲು ಸಹಾಯ ಮಾಡುತ್ತವೆ ಮತ್ತು ಆರಂಭಿಕ ಬೆಳೆ ತಯಾರಿಕೆಗೆ ಬೆಂಬಲ ನೀಡುತ್ತವೆ.

ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ಒಟ್ಟಾರೆಯಾಗಿ ಮಾನ್ಸೂನ್ ಪೂರ್ವ ಋತುವಿನಲ್ಲಿ ಶೇ. 16 ರಷ್ಟು ಮಳೆ ಕೊರತೆಯನ್ನು ದಾಖಲಿಸಿದ್ದು,ಇದು ಕೃಷಿ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎನ್ನಲಾಗುತ್ತಿದೆ.

ಕೊಡಗು ಮಾತ್ರವಲ್ಲದೆ, ಮೈಸೂರು ವಿಭಾಗದ ಹಲವಾರು ಜಿಲ್ಲೆಗಳಲ್ಲಿ ಈ ಅವಧಿಯಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಿರುವುದಾಗಿ ಹೇಳಲಾಗಿದೆ.

ಶೇಕಮಲೆ ಜಮಾಅತ್‌ನಿಂದ 'ಮಾನವೀಯತೆ'ಯ ಬಕ್ರೀದ್

ವೈದ್ಯರ ಚಿಕಿತ್ಸೆಗೆ ಆರ್ಥಿಕ ನೆರವು

ಪುತ್ತೂರು: ಬಕ್ರೀದ್ ದಿನದಂದು ಒಳಮೊಗ್ರು ಗ್ರಾಮದ ಶೇಕಮಲೆ ಜಮಾಅತ್‌ನ ಮುಸ್ಲಿಂ ಬಾಂಧವರು ಈ ಬಾರಿ ಸಂಭ್ರಮಕ್ಕೆ ಹೆಚ್ಚು ಒತ್ತು ಕೊಡಲಿಲ್ಲ. ಬದಲಾಗಿ ಕುಂಬ್ರದ ವೈದ್ಯರಾದ ಡಾ. ವಿಘ್ನೇಶ್ವರ ಭಟ್ ಅವರ ಅನಾರೋಗ್ಯದ ಹಿನ್ನೆಲೆಯಲ್ಲಿ ಹಣಕಾಸಿನ ನೆರವು ಸಂಗ್ರಹಿಸಿ ನೀಡುವ ಮೂಲಕ ಮಾದರಿಯಾಗಿದ್ದಾರೆ.

ಕುಂಬ್ರದಲ್ಲಿ ಕಳೆದ ಹಲವು ವರ್ಷಗಳಿಂದ 'ಅಮೃತ ಕ್ಲಿನಿಕ್' ನಡೆಸುತ್ತಿರುವ ಡಾ. ವಿಘ್ನೇಶ್ವರ ಭಟ್ ಅವರಿಗೆ ಇದ್ದಕ್ಕಿದ್ದಂತೆ ತೀವ್ರ ಅನಾರೋಗ್ಯ ಕಾಣಿಸಿಕೊಂಡಿದೆ. ವೈದ್ಯ ವೃತ್ತಿಯನ್ನೇ ನಂಬಿ ಜೀವನ ನಡೆಸುತ್ತಿದ್ದ ಅವರಿಗೆ ಬಾಧಿಸಿದ ಈ ಕಾಯಿಲೆ ಬದುಕಿನ ಬಂಡಿಯನ್ನೇ ಬುಡಮೇಲು ಮಾಡಿದೆ. ಇದ್ದ ಹಣದಿಂದ ಚಿಕಿತ್ಸಾ ವೆಚ್ಚ ಭರಿಸಿದ್ದ ವೈದ್ಯರಿಗೆ ತನ್ನ ಬಳಿ ಇದ್ದ ಹಣ ಖಾಲಿಯಾದಾಗ ತಾವೇ ಸಾಮಾಜಿಕ ತಾಣದಲ್ಲಿ ಹಾಕಿ ಸಹಾಯಕ್ಕಾಗಿ ಕೈ ಚಾಚಿದ್ದರು. ನಮ್ಮೂರಿನ ವೈದ್ಯರು ಸಹಾಯಕ್ಕಾಗಿ ಕೈ ಚಾಚಿದಾಗ ಸುಮ್ಮನಿರದ ಪಕ್ಕದಲ್ಲೇ ಇರುವ ಶೇಕಮಲೆ ಜಮಾಅತ್‌ನಿಂದ ಹಣ ಸಂಗ್ರಹ ಮಾಡಲಾಯಿತು. ಸುಮಾರು ರೂ. 52 ಸಾವಿರದಷ್ಟು ಹಣ ಸಂಗ್ರಹವಾಗಿದ್ದು, ಇದರಲ್ಲಿ ಕುಂಬ್ರದ ಮುಸ್ಲಿಂ ಬಂಧುಗಳೂ ಸೇರಿಕೊಂಡರು. ಚಿಕಿತ್ಸಾ ವೆಚ್ಚಕ್ಕೆ ತಮ್ಮಿಂದಾದ ಸಹಾಯ ನೀಡುತ್ತೇವೆ ಎಂದು ವೈದ್ಯರಿಗೆ ವಿಷಯ ತಿಳಿಸಲಾಯಿತು.

ಬಕ್ರೀದ್ ದಿನ ವಿಶೇಷ ಪ್ರಾರ್ಥನೆ

ಹಣ ಸಂಗ್ರಹ ಮಾಡಿದ್ದು ಮಾತ್ರವಲ್ಲದೆ ವೈದ್ಯರ ರೋಗ ಶಮನಕ್ಕಾಗಿ ಮಸೀದಿಯಲ್ಲಿ ಸಾಮೂಹಿಕ ಪ್ರಾರ್ಥನೆಯನ್ನೂ ನಡೆಸಲಾಯಿತು.



ಸಹಾಯದ ಭರವಸೆ

ನಮ್ಮೂರಿನ ವೈದ್ಯರಾದ ಡಾ. ವಿಘ್ನೇಶ್ವರ ಭಟ್ ಅವರಿಗಾಗಿ ನಾವು ಶುಕ್ರವಾರ ಮತ್ತು ಬಕ್ರೀದ್ ದಿನ ವಿಶೇಷ ಪ್ರಾರ್ಥನೆ ಮಾಡಿದ್ದೇವೆ. ಮನುಷ್ಯ ಸಂಕಷ್ಟದಲ್ಲಿದ್ದಾಗ ಮನುಷ್ಯರಾದ ನಾವು ಸಹಾಯ ಮಾಡಬೇಕಾಗಿದ್ದು ನಮ್ಮ ಧರ್ಮವಾಗಿದೆ, ಅದನ್ನೇ ನಾವು ಮಾಡಿದ್ದೇವೆ. ಹಲವಾರು ಮಂದಿಗೆ ಚಿಕಿತ್ಸೆ ನೀಡಿದ ವೈದ್ಯರು ಬದುಕಿ ಉಳಿಯಬೇಕು, ಅವರ ಕುಟುಂಬ ಸಂತೋಷದಿಂದ ಇರಬೇಕು ಎಂಬುದು ನಮ್ಮ ಉದ್ದೇಶ. ವೈದ್ಯರಿಗೆ ಮುಂದೆ ಸಹಾಯ ಮಾಡುವ ಭರವಸೆ ನೀಡಿದ್ದೇವೆ ಎಂದು ಜಮಾತ್ ಕಾರ್ಯದರ್ಶಿ ಎಸ್.ಪಿ. ಬಶೀರ್ ಹೇಳಿದ್ದಾರೆ.

ಮಸೀದಿಯಲ್ಲಿ ಮತ್ತೆ ಎಲ್ಲವೂ ಒಟ್ಟು ಸೇರಿ ರೂ. 58,013 ಸಂಗ್ರಹವಾಯಿತು. ಸಂಗ್ರಹವಾದ ಹಣವನ್ನು ಒಟ್ಟುಗೂಡಿಸಿದ ಶೇಕಮಲೆ ಜಮಾತ್ ಪ್ರಮುಖರು ನೇರವಾಗಿ ಸಂಪ್ಯದಲ್ಲಿರುವ ಡಾ. ವಿಘ್ನೇಶ್ವರ ಭಟ್ ಅವರ ಮನೆಗೆ ತೆರಳಿ ಹಸ್ತಾಂತರಿಸಲಾಯಿತು.

ಈ ಸಂದರ್ಭ ಶೇಕಮಲೆ ಜಮಾತ್ ಕಮಿಟಿ ಅಧ್ಯಕ್ಷ ಸುಲೈಮಾನ್ ಹಾಜಿ, ಜಮಾತ್ ಸದಸ್ಯರಾದ ಎಸ್.ಎಂ. ಮಹಮ್ಮದ್ ಕುಂಬ್ರ, ಸಲಾಮುದ್ದೀನ್ ಕುಂಬ್ರ, ನಾಸಿರ್ ಕುಂಬ್ರ, ಮಹಮ್ಮದ್ ಬೊಳ್ಳಾಡಿ, ಇಕ್ಬಾಲ್ ಹುಸೇನ್ ಕೌಡಿಚ್ಚಾರ್, ಬಶೀರ್ ಕೌಡಿಚ್ಚಾರ್, ರಿಝ್ವಾನ್ ಕೌಡಿಚ್ಚಾರ್, ಮೊಯಿದಿನ್ ಅಲಂಗೂರು, ಅಝರ್ ಕುಂಬ್ರ, ಹಮೀದ್ ಶೇಕಮಲೆ, ಅಮೀನ್ ಕುಂಬ್ರ, ಯೂಸುಫ್ ಮುಡಾಲ, ಹಾಫಿಲ್ ಮುಹಮ್ಮದ್ ಹಾಶಿರ್ ಮತ್ತಿತರರಿದ್ದರು.

ಮಡಿಕೇರಿಯಲ್ಲಿ ಈಡಿಸ್ ಲಾರ್ವಾ ಸಮೀಕ್ಷೆ



ಮಡಿಕೇರಿ: ನಗರದ ತ್ಯಾಗರಾಜ ಕಾಲೋನಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆರ್‍ಆರ್‌ಟಿ ಲಾರ್ವಾ ಸಮೀಕ್ಷಾ ತಂಡಗಳು ಲಾರ್ವಾ ಸಮೀಕ್ಷೆ ನಡೆಸಿ ಸಾರ್ವಜನಿಕರಿಗೆ ಸಾಂಕ್ರಾಮಿಕ ರೋಗಗಳಾದ ಡೆಂಗ್ಯೂ ಜ್ವರ, ಚಿಕೂನ್ ಗುನ್ಯಾ ಜ್ವರ ಹಾಗೂ ಮಲೇರಿಯಾ ಜ್ವರದ ಬಗ್ಗೆ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಕರಪತ್ರಗಳನ್ನು ಹಂಚುವ ಮೂಲಕ ಆರೋಗ್ಯ ಶಿಕ್ಷಣವನ್ನು ನೀಡಿದವು.

ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳ ಕಚೇರಿಯಿಂದ ಜಿಲ್ಲಾ ಎಂಟಾಮಾಲಜಿಸ್ಟ್ ಮಂಜುನಾಥ್ ಅವರು ಜಿಲ್ಲಾ ಆರೋಗ್ಯ ಮೇಲ್ವಿಚಾರಣಾ ಅಧಿಕಾರಿಗಳು ಹಾಗೂ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವಿಜಯೇಂದ್ರ ಹಾಗೂ ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮುತ್ತು, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಜಿಲ್ಲಾ ಎಪಿಡಮಾಲಜಿಸ್ಟ್, ಕೀಟ ಸಹಾಯಕರುಗಳು ಆರ್‍ಆರ್‌ಟಿ ತಂಡದಲ್ಲಿ ಭಾಗವಹಿಸಿ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ಆರೋಗ್ಯ ಶಿಕ್ಷಣ ನೀಡಿದರು.

ಪುತ್ತೂರು ಮಾರುಕಟ್ಟೆ ಧಾರಣೆ

28-05-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 415 - 450
ಚೋಲ್ ಅಡಿಕೆ	: 510 - 535
ಡಬಲ್ ಚೋಲ್	: 510 - 535
ಹೊಸ ಪಠೋರ	: 340 - 390
ಹಳೆ ಪಠೋರ	: 360 - 390
ಹೊಸ ಉಳ್ಳಿ	: 140 - 290
ಹಳೆ ಉಳ್ಳಿ	: 130 - 290
ಹೊಸ ಕೋಕಾ	: 315 - 335
ಹಳೆ ಕೋಕಾ	: 315 - 335
ಹೊಸ ಕರಿಗೋಟು	: 255 - 285
ಹಳೆ ಕರಿಗೋಟು	: 255 - 285
ಹಸಿ ಕೊಕ್ಕೋ	: 70 - 105
ಒಣ ಕೊಕ್ಕೋ	: 270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	: 450 - 680

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	- 245.00
ಆರ್‌ಎಸ್‌ಎಸ್ 2	- 211.00
ಸ್ಕ್ರಾಪ್ 1	- 142.00
ಸ್ಕ್ರಾಪ್ 2	- 140.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-625) ಡ್ರಾ ಮೇ 28ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
PF 555435 (PUNALUR)

Consolation Prize Rs.5,000/-
PA 555435 PB 555435 PC 555435 PD 555435
PE 555435 PG 555435 PH 555435 PJ 555435
PK 555435 PL 555435 PM 555435

2nd Prize Rs.30,00,000/- [30 Lakhs]
PK 747477 (PATHANAMTHITTA)

3rd Prize Rs.5,00,000/- [5 Lakhs]
PJ 967059 (ADIMALY)

FOR THE TICKETS ENDING WITH THE FOLLOWING NUMBERS

4th Prize Rs.5,000/-
0816 1036 1045 1958 2028 2226 2644 4511 4948 5005
5475 6425 7636 7819 8020 8291 8407 8944 9764

5th Prize Rs.2,000/-
0414 2569 4830 8536 8572 9182

6th Prize Rs.1,000/-
1142 1225 1406 1650 1895 2018 2344 2388 2746 2857
3020 3442 3766 3831 4563 5022 5024 6707 7161 7955
8665 9006 9098 9117 9521

7th Prize Rs.500/-
0075 0118 0122 0172 0252 0372 0515 0730 0932 1038
1077 1203 1220 1335 1398 1509 1567 1791 1796 1946
1981 2011 2517 2617 2956 3097 3395 3444 3479 3612
3737 3793 4507 4546 4588 4616 5228 5317 5411 5629
5867 6007 6104 6256 6401 6478 6566 6630 6643 6761
6936 6978 7018 7298 7334 7352 7397 7479 7503 7665
7755 7899 8062 8271 8388 8474 8612 8879 9000 9059
9206 9365 9485 9731 9918 9945

8th Prize Rs.200/-
0007 0079 0224 0526 0622 0736 0790 0859 0861 0927
0962 0964 1259 1292 1294 1306 1348 1364 1464 1743
1807 1862 1896 1925 1974 2051 2104 2248 2490 2548
2766 2864 2867 3165 3498 3623 4140 4400 4456 4734
4820 4958 5003 5066 5094 5153 5332 5339 5508 5551
5736 5851 5904 5955 5985 6006 6371 6580 6816 6952
7275 7323 7440 7489 7519 7763 7776 7795 7901 8086
8575 8659 8767 8892 8976 9147 9443 9498 9621 9761
9836 9838 9872 9970

9th Prize Rs.100/-
0038 0040 0074 0087 0119 0474 0512 0661 0665 0714
0762 0784 0795 0831 0851 0910 1118 1134 1234 1261
1401 1455 1629 1632 1692 1704 1719 1721 1723 1729
1744 1747 1750 1762 1789 1829 1922 1956 1973 2269
2273 2433 2625 2813 2893 2934 3027 3092 3232 3325
3342 3499 3592 3784 3794 3829 3865 3951 3961 3963
4125 4163 4225 4286 4326 4337 4356 4406 4421 4476
4716 4774 4784 4810 4829 5032 5047 5056 5109 5164
5169 5175 5213 5338 5364 5374 5616 5744 5753 5817
5823 5920 5954 5995 6001 6009 6069 6083 6150 6330
6331 6365 6373 6390 6432 6491 6535 6584 6619 6673
6680 6802 6866 6996 7007 7021 7151 7218 7449 7465
7478 7527 7613 7639 7649 7754 7832 8167 8202 8218
8278 8302 8310 8384 8396 8401 8428 8476 8601 8637
8648 8655 8818 8819 8917 9161 9184 9211 9270 9334
9454 9775 9787 9859 9938 9957

ಕಿರುಸುದ್ದಿ

ಮೇ 30ರಂದು 'ರಿಷಿ ಹೆಜ್ಜೆ ಗೆಜ್ಜೆ ಸಂಭ್ರಮ-2026'

ಮಂಗಳೂರು: ಬೆಳ್ತಂಗಡಿಯ ರಿಷಿ ಸಾಮಾಜಿಕ ಸಾಂಸ್ಕೃತಿಕ ಪ್ರತಿಷ್ಠಾನ ಇವರ ಆಶ್ರಯದಲ್ಲಿ ರಿಷಿ ಕಲಾ ಕೇಂದ್ರ ಇದರ ವಾರ್ಷಿಕೋತ್ಸವ ಹಾಗೂ ಕಲಾ ಕೇಂದ್ರದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳ ರಂಗಪ್ರವೇಶ ಕಾರ್ಯಕ್ರಮ 'ರಿಷಿ ಹೆಜ್ಜೆ ಗೆಜ್ಜೆ ಸಂಭ್ರಮ–2026' ಮೇ 30 ಮಂಗಳೂರಿನ ಉರ್ವಸ್ಟೋರ್‌ನ ತುಳುಭವನದಲ್ಲಿರುವ ಸಿರಿ ಚಾವಡಿ ಸಭಾಂಗಣದಲ್ಲಿ ಸಂಜೆ 6 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ. ಬಳಿಕ ಯಕ್ಷಗುರು ವಿಶ್ವನಾಥ ಪದ್ಮುಂಜ ಇವರ ನಿರ್ದೇಶನದಲ್ಲಿ ಕಲಾ ಕೇಂದ್ರದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಂದ ಮಹಿಷ ವಧೆ ಯಕ್ಷಗಾನ ಪ್ರದರ್ಶನ ನಡೆಯಲಿದೆ. ಕಾರ್ಯಕ್ರಮದಲ್ಲಿ ಖ್ಯಾತ ಯಕ್ಷಗಾನ ಕಲಾವಿದ ಹಾಗೂ ಪ್ರಸ್ತುತ ಗೆಜ್ಜೆಗಿರಿ ಮೇಳ ದಲ್ಲಿ ಸೇವೆ ಸಲ್ಲಿಸುತ್ತಿರುವ ಜನಾರ್ದನ ಗೌಡ ಬೋಳಂತೂರು ಅವರನ್ನು ಸನ್ಮಾನಿಸಲಾಗುವುದು ಎಂದು ಸಂಸ್ಥೆಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಡಿಕೇರಿ ನಗರದಲ್ಲಿ ಆಮ್ ಆದ್ಮಿ ಪಾರ್ಟಿಯ ಕಚೇರಿ ಉದ್ಘಾಟನೆ

ಮಡಿಕೇರಿ: ರಾಜಕೀಯ ಪಕ್ಷಗಳಿಗೆ ಜನಸಾಮಾನ್ಯರ ಒಳಿತಿಗಿಂತ ಅಧಿಕಾರವೇ ಮುಖ್ಯವಾಗಿದೆ. ಜನರ ಜೀವನ ಹಾಳಾದರೂ ಪರವಾಗಿಲ್ಲ, ನಾವು ಅಧಿಕಾರಕ್ಕೆ ಬರಬೇಕೆನ್ನುವುದು ರಾಜಕೀಯ ಪಕ್ಷಗಳ ಹಂಬಲವಾಗಿದೆ ಎಂದು ಆಮ್ ಆದ್ಮಿ ಪಾರ್ಟಿಯ ಕಾನೂನು ಸಲಹೆಗಾರ ಹಾಗೂ ವಕೀಲ ಕೆ.ಪಿ.ಬಾಲಸುಬ್ರಹ್ಮಣ್ಯ ಅವರು ಹೇಳಿದ್ದಾರೆ. ನಗರದ ಮಹದೇವಪೇಟೆಯ ಎ.ವಿ ಶಾಲೆಯ ಬಳಿ ಆಮ್ ಆದ್ಮಿ ಪಾರ್ಟಿಯ ಕೊಡಗು ಜಿಲ್ಲಾ ಕಚೇರಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ಆಮ್ ಆದ್ಮಿ ಪಾರ್ಟಿ' ಹೆಸರೇ ಸೂಚಿಸುವಂತೆ ಈ ಪಕ್ಷಕ್ಕೆ ಸಾಮಾನ್ಯ ಜನರೇ ಮುಖ್ಯವಾಗಿದ್ದಾರೆ. ಇಲ್ಲಿ ಕುಟುಂಬ ರಾಜಕಾರಣವಿಲ್ಲ, ಇದು ಪಾರ್ಟಿಯ ಸಿದ್ಧಾಂತವಾಗಿದೆ ಎಂದು ಹೇಳಿದರು. ಗುಜರಾತ್ ರಾಜ್ಯದ ನರ್ಮದ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ ಅಧಿಕಾರಕ್ಕೇರುವ ಮೂಲಕ ಕಾಂಗ್ರೆಸ್ ಮತ್ತು ಬಿಜೆಪಿ ಹಿಡಿತದಿಂದ ಕ್ಷೇತ್ರವನ್ನು ಮುಕ್ತಗೊಳಿಸಿದೆ. ಚುನಾವಣೆ ಹೊರತಾಗಿಯೂ ಜನ ಸಾಮಾನ್ಯರಿಗೆ ಆಮ್ ಆದ್ಮಿ ಪಾರ್ಟಿ ಸ್ಪಂದಿಸುವ ಮೂಲಕ ಸಾರ್ವಜನಿಕರ ಜೊತೆಯಲ್ಲಿ ನಾವಿದ್ದೇವೆ ಎಂಬ ಸಂದೇಶ ಹೋಗಬೇಕು ಎಂದು ಕೆ.ಪಿ.ಬಾಲಸುಬ್ರಹ್ಮಣ್ಯ ಆಶಯ ವ್ಯಕ್ತಪಡಿಸಿದರು. ಆಮ್ ಆದ್ಮಿ ಪಾರ್ಟಿಯ ಜಿಲ್ಲಾಧ್ಯಕ್ಷ ಎಂ.ಕೆ.ಅಪ್ಪಯ್ಯ ಅವರು ಮಾತನಾಡಿ, ನೂತನ ಕಚೇರಿಯನ್ನು ಆರಂಭಿಸುವ ಮೂಲಕ ಕೊಡಗು ಜಿಲೆಯಲ್ಲೂ ಪಕ್ಷ ಸಂಘಟನೆಗೆ ಆದ್ಯತೆ ನೀಡಲಾಗುತ್ತಿದೆ. ಸಾರ್ವಜನಿಕರು ಪಕ್ಷದ ಕಚೇರಿಗೆ ಆಗಮಿಸಿ ತಮ್ಮ ಕುಂದು ಕೊರತೆಗಳನ್ನು ದಾಖಲಿಸಬಹುದು. ಪಕ್ಷದ ವತಿಯಿಂದ ಜನಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು. ಆಮ್ ಆದ್ಮಿ ಪಾರ್ಟಿಯ ಮೈಸೂರು ಜಿಲ್ಲಾಧ್ಯಕ್ಷ ಎಲ್. ರಂಗಯ್ಯ, ಕೊಡಗು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಬಿ.ವೃಥ್ವಿ, ಪ್ರಮುಖರಾದ ಆಶಿಕ್, ರಿಯಾಝ್, ರಫೀಕ್, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಕಾವೂರು ಗಾಂಧಿನಗರ ಪ್ರದೇಶಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದ ಶಾಸಕ ಭರತ್ ಶೆಟ್ಟಿ

ಮಂಗಳೂರು: ಇಲ್ಲಿನ ಕಾವೂರು ಗಾಂಧಿನಗರ ಹಾಗೂ ಮೈರೋಡಿ ಬೆಟ್ಟು ಪ್ರದೇಶದ ಜನರ ಸಮಸ್ಯೆಯನ್ನು ಶಾಸಕ ಭರತ್ ಶೆಟ್ಟಿ ಆಲಿಸಿದರು. ಇಲ್ಲಿ ಕಳೆದ ಎರಡು ವರ್ಷದಿಂದ ಡ್ರೈನೇಜ್ ಸಮಸ್ಯೆಯಿಂದ ಜನತೆ ತತ್ತರಿಸಿ ಹೋಗಿದ್ದು, ಬಾವಿಗಳು ಡ್ರೈನೇಜ್ ತುಂಬಿ ಹಾಳಾಗಿವೆ.. ಈ ಸಮಸ್ಯೆಯನ್ನು ಅರಿತ ಶಾಸಕರು ಬುಧವಾರ ಪ್ರದೇಶಕ್ಕೆ ಭೇಟಿ ನೀಡಿ ಸ್ಥಳವನ್ನು ಪರಿಶೀಲಿಸಿ ತಕ್ಷಣವೇ ಕೊಳವೆಯನ್ನು ದುರಸ್ತಿ ಪಡಿಸುವ ಕಾಮಗಾರಿಯನ್ನು ಮಾಡಿ ಸಮಸ್ಯೆಯನ್ನು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹಿಂದು ಐಕ್ಯ ವೇದಿಕೆ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆ

ಕಾಸರಗೋಡು: ಹಿಂದು ಐಕ್ಯ ವೇದಿಕೆಯ ಕಾಸರಗೋಡು ಜಿಲ್ಲಾ ನೂತನ ಸಂಘಟನಾ ಕಾರ್ಯದರ್ಶಿಯಾಗಿ ವಿ.ಸುಧಾಕರನ್ ಅವರನ್ನು ಆರಿಸಲಾಗಿದೆ. ಚಾಲಕ್ಕುಡಿಯಲ್ಲಿ ನಡೆದ ಸಂಘಟನೆಯ ಕೇರಳ ರಾಜ್ಯ ಸಮ್ಮೇಳನದಲ್ಲಿ ಕಾಸರಗೋಡು ಸಹಿತ ವಿವಿಧ ಜಿಲ್ಲೆಗಳ ಪದಾಧಿಕಾರಿಗಳನ್ನು ಆರಿಸಲಾಯಿತು. ಹಿಂದು ಐಕ್ಯ ವೇದಿಕೆಯ ಅಜಾನೂರು ಪಂಚಾಯತ್ ಸಮಿತಿ ಅಧ್ಯಕ್ಷ, ಹೊಸದುರ್ಗ ತಾಲೂಕು ಸಮಿತಿಯ ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಕಾರ್ಯದರ್ಶಿಯಾಗಿ ವಿ.ಸುಧಾಕರನ್ ಸೇವೆ ಸಲ್ಲಿಸಿದ್ದರು. ಮಾವುಂಗಾಲ್ ಪುದಿಯಕಂಡ ನಿವಾಸಿಯಾದ ಅವರು 2024ರಲ್ಲಿ ಜಿಲ್ಲಾ ಕಾರ್ಯದರ್ಶಿ ಎಂಬ ನೆಲೆಯಲ್ಲಿ ಪೂರ್ಣಾವಧಿ ಕಾರ್ಯಕರ್ತರಾಗಿದ್ದರು.



ರಾಜ್ಯ ಸರ್ಕಾರದಲ್ಲಿ ಹೊಸ ಸಂಪುಟ ರಚನೆಯ ಸಂದರ್ಭ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರಿಗೆ ಸಚಿವ ಸ್ಥಾನ ಲಭಿಸುವಂತೆ ಪುತ್ತೂರು ತಾಲೂಕು ಅಕ್ರಮ-ಸಕ್ರಮ ಸಮಿತಿ ಸದಸ್ಯ ರಾಮಣ್ಣ ಪಿಲಿಂಜ ಅವರು ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಜಾಲತಾಣಗಳಲ್ಲಿ ಅಪಪ್ರಚಾರ: ಖಾರ್ವಿ

ಬೈಂದೂರು: ನಮ್ಮ ಸಹಕಾರಿ ಸಂಸ್ಥೆಯ ಬೆಳವಣಿಗೆಯನ್ನು ಸಹಿಸದೆ ಈ ಹಿಂದೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದ ಸಿಬ್ಬಂದಿಗಳಾದ ಸುಭಾಷ್ಚಂದ್ರ ಮತ್ತು ದೀಪಕ್ ನಮ್ಮ ಮೇಲೆ ಸುಳ್ಳು ಆರೋಪಗಳನ್ನು ಮಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಹಾಕುತ್ತಿದ್ದು, ಇದು ಸತ್ಯಕ್ಕೆ ದೂರವಾದ ವಿಚಾರವಾಗಿದೆ ಎಂದು ಕರಾವಳಿ ಸಾಂಪ್ರದಾಯಿಕ ನಾಡದೋಣಿ ಮೀನುಗಾರರ ಸಹಕಾರ ಸಂಘದ ಅಧ್ಯಕ್ಷ ನಾಗೇಶ ಖಾರ್ವಿ ಅಳಿವೆಕೋಡಿ ಹೇಳಿದರು.

ಈ ಹಿಂದಿನ ಸಿಇಓ ಆಗಿರುವ ಸುಭಾಷ್ಚಂದ್ರ ತನ್ನ ಅಧಿಕಾರ ದುರುಪಯೋಗ ಪಡಿಸಿಕೊಂಡು ಮತ್ತು ಆಗಿನ ಅಧಕ್ಷ ಮೋಹನಚಂದ್ರ ಅವರ ಹಾಗೂ ಆಡಳಿತ ಮಂಡಳಿಯ ಗಮನಕ್ಕೆ ತಾರದೆ ರೂ.1.10 ಕೋಟಿ ಮೊತ್ತವನ್ನು ಕುಂದಾಪುರ ಸೌಹಾರ್ದ ಸಹಕಾರಿಯಲ್ಲಿ ಠೇವಣಿಯಾಗಿ ಇಟ್ಟಿದ್ದು ಆ ಸಹಕಾರಿಯ ನಷ್ಟದಿಂದಾಗಿ ನಮ್ಮ ಠೇವಣಿ ವಾಪಸ್ಸು ಬಂದಿಲ್ಲ, ಈ ಕುರಿತು ಸಿಐಡಿ ತನಿಖೆ ನಡೆಯುತ್ತಿದೆ. ಇವರು ಸುಮಾರು ರೂ.40ಲಕ್ಷ ಮೊತ್ತವನ್ನು ಸಹಕಾರಿಯಿಂದ ದುರುಪಯೋಗಪಡಿಸಿಕೊಂಡಿರುವುದು ನಮ್ಮ ಪರಿಶೀಲನೆಯಿಂದ ತಿಳಿದುಬಂದಿದ್ದು, ಇದರ ವಸೂಲಿಗಾಗಿ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ. ದೀಪಕ್ ಮತ್ತು ಸುಭಾಷ್ಚಂದ್ರ ಅವರನ್ನು ಸಂಸ್ಥೆಯ ಕೆಲಸದಿಂದ ವಜಾಗೊಳಿಸಿರುವುದರಿಂದ ಮತ್ತು ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳುವ ಉದ್ದೇಶದಿಂದ ಈಗಿನ ಆಡಳಿತ ಮಂಡಳಿಯ ಮೇಲೆ ಸುಳ್ಳು ಆರೋಪಗಳನ್ನು ಮಾಡುತ್ತಿರುವುದು ಸರಿಯಲ್ಲ ಎಂದು ಸಂಘದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಅವರ ಮೇಲೆ ಬೈಂದೂರು ನ್ಯಾಯಾಲಯದಲ್ಲಿ ಹಾಗೂ ಕುಂದಾಪುರ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯಲ್ಲಿ ಕೇಸು ದಾಖಲಾಗಿ ತನಿಖಾ ಹಂತದಲ್ಲಿದ್ದು, ಅದನ್ನು ತಪ್ಪಿಸಿಕೊಳ್ಳಲು ಸಂಸ್ಥೆಯ ಅಧ್ಯಕ್ಷನಾದ ನನ್ನ ಹಾಗೂ ನಿರ್ದೇಶಕ ಮಂಡಳಿ ಮತ್ತು ನಿವೃತ್ತ ಸಹಾಯಕ ನಿಬಂಧಕ ಅರುಣಕುಮಾರ್ ಎಸ್.ವಿ. ಇವರ ಮೇಲೆ ಆರೋಪ ಮಾಡಿರುತ್ತಾರೆ ಎಂದರು.

ಸಂಘದ ಉಪಾಧ್ಯಕ್ಷ ಶಂಕರ ಖಾರ್ವಿ, ನಿರ್ದೇಶಕರಾದ ಮಂಜುನಾಥ ಜಿ. ಖಾರ್ವಿ, ನಾಗೇಶ ಮಡಿಕಲ್, ಮೋಹನದಾಸ್ ಖಾರ್ವಿ, ರಾಜೇಂದ್ರ ಖಾರ್ವಿ, ಮಂಜುನಾಥ, ಮಹೇಶ್ ಕೆ., ಜ್ಯೋತಿ ಖಾರ್ವಿ, ಲಕ್ಷ್ಮೀ ಸಂಸ್ಥೆಯ ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸ ಕೆ. ಇದ್ದರು.

ಮಳೆಗಾಲದ ಪೂರ್ವ ತಯಾರಿ ವೈಫಲ್ಯ | ಉಡುಪಿ ನಗರ ಬಿಜೆಪಿ ತೀವ್ರ ಅಸಮಾಧಾನ

ನಗರಸಭೆಗೆ 'ಮುತ್ತಿಗೆ' ಎಚ್ಚರಿಕೆ

ಉಡುಪಿ: ಉಡುಪಿ ನಗರಸಭೆಯು ಮಳೆಗಾಲದ ಮುನ್ನೆಚ್ಚರಿಕೆ ಹಾಗೂ ಪೂರ್ವ ತಯಾರಿ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಉಡುಪಿ ನಗರ ಬಿಜೆಪಿ ಅಧ್ಯಕ್ಷ ದಿನೇಶ್ ಅಮೀನ್ ಆರೋಪಿಸಿದ್ದಾರೆ.

ಉಡುಪಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಪ್ರಮುಖ ರಾಜಕಾಲುವೆಗಳು, ಸಣ್ಣ ತೋಡುಗಳು ಹಾಗೂ ಚರಂಡಿಗಳ ಹೂಳೆತ್ತುವ ಕಾಮಗಾರಿಯನ್ನು ನಗರಸಭೆ ಇದುವರೆಗೆ ಆರಂಭಿಸಿಲ್ಲ. ಬನ್ನಂಜೆ ಸೇರಿದಂತೆ ನಗರದ ಬಹುತೇಕ ವಲಯಗಳಲ್ಲಿ ಚರಂಡಿ ಸ್ವಚ್ಛತಾ ಕಾರ್ಯ ನನೆಗುದಿಗೆ ಬಿದ್ದಿರುವುದರಿಂದ, ಮುಂಗಾರು ಮಳೆ ಆರಂಭವಾದರೆ ನಗರದಲ್ಲಿ ಕೃತಕ ನೆರೆ ಸೃಷ್ಟಿಯಾಗುವ ಭೀತಿ ಎದುರಾಗಿದೆ. ನಗರಸಭೆಯು ಒಂದು ವಾರದೊಳಗೆ ಹೂಳೆತ್ತುವ ಕಾಮಗಾರಿಯನ್ನು ಮುಗಿಸದಿದ್ದರೆ ನಗರಸಭೆಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದರು. ಇದೇ ವೇಳೆ ಉದ್ದಿಮೆ ಪರವಾನಿಗೆ ಶುಲ್ಕವನ್ನು ಅನ್ಯಾಯವಾಗಿ ಹೆಚ್ಚಿಸಲಾಗಿದೆ ಎಂದು ಕಿಡಿಕಾರಿದರು.

ಟೆಂಡರ್ ಆಗಿದ್ದರೂ ಆರಂಭವಾಗದ ಕಾಮಗಾರಿ

ನಗರಸಭೆಯ ಮಾಜಿ ಅಧ್ಯಕ್ಷ ಪ್ರಭಾಕರ್ ಪೂಜಾರಿ ಮಾತನಾಡಿ, ನಗರಸಭೆಯ ಕೌನ್ಸಿಲ್ ಅವಧಿ ಕಳೆದ ಅಕ್ಟೋಬರ್‌ನಲ್ಲೇ ಮುಕ್ತಾಯಗೊಂಡಿದೆ. ತದನಂತರ ಶಾಸಕರ ನೇತೃತ್ವದಲ್ಲಿ ಮಳೆಗಾಲದ ಪೂರ್ವಭಾವಿ ಸಿದ್ಧತೆಗಳ ಕುರಿತು ವಿಶೇಷ ಸಭೆ ನಡೆಸಿ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಅಧಿಕಾರಿಗಳು ಒಪ್ಪಿಗೆ ಸೂಚಿಸಿದ್ದರಾದರೂ, ಪ್ರಸ್ತುತ ಕಾರ್ಮಿಕರನ್ನು ನೇಮಿಸಲು ಕೇವಲ ಟೆಂಡರ್ ಕರೆಯಲಾಗಿದೆಯೇ ವಿನಃ ಕೆಲಸ ಪ್ರಾರಂಭಿಸಲು ಇನ್ನೂ ಕಾರ್ಯಾದೇಶ ನೀಡಿಲ್ಲ ಎಂದು ದೂರಿದರು.



ಉಡುಪಿ ಜಿಲ್ಲಾಡಳಿತದ ಅಸಡ್ಡೆಗೆ ತೀವ್ರ ಆಕ್ರೋಶ

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಕಿರಣ್ ಕುಮಾರ್ ಬೈಲೂರು ಮಾತನಾಡಿ, ಜಿಲ್ಲಾಧಿಕಾರಿಗಳ ಅಸಡ್ಡೆ ನೀತಿಯೇ ನಗರಸಭೆಯ ಈ ಅವ್ಯವಸ್ಥೆಗಳಿಗೆ ಕಾರಣವಾಗಿದೆ. ಸಂಪನ್ಮೂಲ ಕ್ರೋಡೀಕರಣದಲ್ಲಿ ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದೆ. ನಗರದ ಕಸ ವಿಲೇವಾರಿ ವಿಷಯದಲ್ಲಿಯೂ ನಗರಸಭೆ ಘೋರ ನಿರ್ಲಕ್ಷ್ಯ ವಹಿಸಿದೆ. ಟೆಂಡರ್ ಪಡೆದ ಕಾಮಗಾರಿಗಳನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸುತ್ತಿಲ್ಲ ಎಂದು ಆರೋಪಿಸಿದರು.

ಈಗಾಗಲೇ ನಗರದ ಬಹುತೇಕ ಚರಂಡಿಗಳು ಮುಚ್ಚಿಹೋಗಿದ್ದು, ಮಳೆ ನೀರು ರಸ್ತೆಯಲ್ಲೇ ಹರಿಯುತ್ತಿದೆ. ಇದರೊಂದಿಗೆ ನಗರಸಭೆಯು ಕಾನೂನು ಮೀರಿ ಉದ್ದಿಮೆ ಪರವಾನಿಗೆ ಶುಲ್ಕವನ್ನು ದುಬಾರಿಗೊಳಿಸಿದೆ. ಸಾರ್ವಜನಿಕರ ಕೆಲಸಗಳಿಗೆ ಸ್ಪಂದಿಸಬೇಕಾದ ಕಚೇರಿಯಲ್ಲಿ ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಲಭ್ಯವಿರುವುದಿಲ್ಲ, ಕಚೇರಿ ಬಹುತೇಕ ಖಾಲಿ ಇರುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಗರಸಭೆ ಹಾಗೂ ಜಿಲ್ಲಾಡಳಿತ ಎರಡೂ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಸೋತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ವಾರದೊಳಗೆ ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸದಿದ್ದರೆ ತೀವ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಜಗದೀಶ್ ಆಚಾರ್ ಮತ್ತು ರಶ್ಮಿಕಾ ಶೆಟ್ಟಿ ಉಪಸ್ಥಿತರಿದ್ದರು.

ಸಿರಿ ಮಾತೃಶ್ರೀ ಕೈಗಾರಿಕಾ ಪಾರ್ಕ್‌ನಲ್ಲಿ ಜಿಯೋ ಮೊಬೈಲ್ ಟವರ್ ಉದ್ಘಾಟಿಸಿದ ಡಾ.ಹೆಗ್ಗಡೆ



ಮಂಗಳೂರು: ಧರ್ಮಸ್ಥಳದ ಪ್ರತಿಷ್ಠಿತ ಗ್ರಾಮೋದ್ಯೋಗ ಸಂಸ್ಥೆಯಾಗಿರುವ, ಬೆಳ್ತಂಗಡಿಯಲ್ಲಿರುವ ಸಿರಿ ಮಾತೃಶ್ರೀ ಕೈಗಾರಿಕಾ ಪಾರ್ಕ್ ಸಂಸ್ಥೆಯಲ್ಲಿ ರಿಲಯನ್ಸ್ ಜಿಯೊದ ಹೊಸ ಮೊಬೈಲ್ ಟವರ್‌ನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು. ಈ ವೇಳೆ, ಸಿರಿ ಗ್ರಾಮೋದ್ಯೋಗ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಜನಾರ್ದನ, ರಿಲಯನ್ಸ್ ಜಿಯೊ ಸಂಸ್ಥೆಯ ರಾಜ್ಯ ವ್ಯವಹಾರ ಮುಖ್ಯಸ್ಥ ರಾಜೇಶ್ ಎಚ್ ವಿ ಉಪಸ್ಥಿತರಿದ್ದರು.

ಹೊಸದಾಗಿ ಉದ್ಘಾಟಿಸಲಾದ ಜಿಯೊ ಮೊಬೈಲ್ ಟವರ್‌ನಿಂದಾಗಿ ಈ ಕೈಗಾರಿಕಾ ಪಾರ್ಕ್ ಮತ್ತು ಹತ್ತಿರದ ಪ್ರದೇಶಗಳಲ್ಲಿ ಡಿಜಿಟಲ್ ಸಂಪರ್ಕವು ಗಮನಾರ್ಹವಾಗಿ ವೃದ್ಧಿಸಲಿದೆ. ಇದು ಉದ್ಯಮಿಗಳು, ಮಹಿಳಾ ಸ್ವಸಹಾಯ ಗುಂಪುಗಳು, ಉದ್ಯೋಗಿಗಳು, ಸ್ಥಳೀಯ ನಿವಾಸಿಗಳು, ವಿದ್ಯಾರ್ಥಿಗಳು ಮತ್ತು ಸಂದರ್ಶಕರಿಗೆ ಪ್ರಯೋಜನಕಾರಿಯಾಗಲಿದೆ. ಉದ್ಯಮಗಳಿಗೆ ತಡೆರಹಿತ ಸಂವಹನ, ಡಿಜಿಟಲ್ ಸೌಕರ್ಯ, ಆನ್‌ಲೈನ್ ಕಲಿಕೆ, ವ್ಯಾಪಾರ ಕಾರ್ಯಾಚರಣೆಗಳು ಮತ್ತು ಸುಧಾರಿತ ಗ್ರಾಹಕ ಸೇವೆಗೆ ಸಹಕರಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾಮಾಜಿಕ ಜಾಲತಾಣದ ಆರೋಗ್ಯ ಮಾಹಿತಿಗಳು ಅಪಕ್ವ: ಡಾ. ರಾಜಶ್ರೀ

ಮಡಿಕೇರಿ: ಸಾಮಾಜಿಕ ಜಾಲತಾಣಗಳಲ್ಲಿ ಆರೋಗ್ಯ ಸಂರಕ್ಷಣೆಯ ಪ್ರಚಾರದ ಮೂಲಕ ಮಾರುಕಟ್ಟೆ ವ್ಯಾಪಿಸುತ್ತಿರುವ ಈ ದಿನಗಳಲ್ಲಿ ಎಲ್ಲಾ ರೀತಿಯ ಪ್ರಚಾರವನ್ನೂ ನಂಬುವ ಬದಲಿಗೆ ಸೂಕ್ತ ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆಯಬೇಕೆಂದು ಕೊಡಗು ವೈದ್ಯಕೀಯ ವಿಜ್ಞಾನಗಳ ಮಹಾಸಂಸ್ಥೆಯ ವೈದ್ಯೆ ಡಾ ಕೆ.ಟಿ.ರಾಜಶ್ರೀ ಸಲಹೆ ನೀಡಿದ್ದಾರೆ.



ನಗರದ ರೋಟರಿ ಸಭಾಂಗಣದಲ್ಲಿ ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ಆಯೋಜಿತ ಆರೋಗ್ಯ ಚಿಕಿತ್ಸಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಡಾ.ರಾಜಶ್ರೀ, ಹಿಂದಿನ ಕಾಲದಲ್ಲಿ ನೀಡಲಾಗುತ್ತಿದ್ದ ಚಿಕಿತ್ಸೆ ಮತ್ತು ಹಳೇ ಆರೋಗ್ಯ ಪದ್ಧತಿಯನ್ನೇ ನಂಬಿಕೊಂಡಿರಬಾರದು. ಆರೋಗ್ಯ ಪದ್ಧತಿ ಕೂಡ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ ಎಂದರು. ಇಂದಿನ ನವ ತಂತ್ರಜ್ಞಾನದ ಕಾಲದಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಆರೋಗ್ಯ ಚಿಕಿತ್ಸೆ ಸಂಬಂಧಿತ ಪ್ರಚಾರ ನಡೆಯುತ್ತಿದೆ ಆದರೆ ಇಂಥ ಪ್ರಚಾರವನ್ನು ನಂಬುವ ಬದಲಿಗೆ ಸೂಕ್ತ ವೈದ್ಯರನ್ನು ಮುಖತ ಭೇಟಿಯಾಗಿ ಚಿಕತ್ಸೆ ಪಡೆಯುವುದು ಅಗತ್ಯ ಎಂದೂ ಅವರು ಹೇಳಿದರು.

ರೋಟರಿ ಜಿಲ್ಲೆ 3181 ನ ಪಬ್ಲಿಕ್ ಇಮೇಜ್ ಸಮಿತಿ ಉಪಾಧ್ಯಕ್ಷ ಅನಿಲ್ ಹೆಚ್.ಟಿ. ಮಾತನಾಡಿ, ರೋಟರಿ ಸಂಸ್ಥೆಯಿಂದ ಶ್ರವಣ ಸಮಸ್ಯೆಯಿರುವವರಿಗೆ ದಿ ಗಿಫ್ಟ್ ಆಫ್ ಸೌಂಡ್ ಎಂಬ .ಯೋಜನೆ ಜಾರಿಗೊಳಿಸಲಾಗುತ್ತಿದೆ. ಈ ಮೂಲಕ ಶ್ರವ್ಯ ಸಲಕರಣೆಯನ್ನು ದಾನಿಗಳ ಸಹಾಯದಿಂದ ನೀಡಲಾಗುತ್ತದೆ. ಅಂತೆಯೇ, ದೇಶದಲ್ಲಿ ಹೆಚ್ಚಾಗುತ್ತಿರುವ ಮಕ್ಕಳಲ್ಲಿನ ಹೃದ್ರೋಗ ಸಮಸ್ಯೆಯನ್ನು ಗಮನದಲ್ಲಿರಿಸಿಕೊಂಡು ಟಚ್ಚಿಂಗ್ ದಿ ಲಿಟಲ್ ಹಾರ್ಟ್ಸ್ ಎಂಬ ಯೋಜನೆ ಜಾರಿಗೊಳ್ಳಲಿದೆ. ಅಗತ್ಯವುಳ್ಳ ಮಕ್ಕಳಿಗೆ ರೋಟರಿ ವತಿಯಿಂದ ಉಚಿತವಾಗಿ ಹೃದ್ರೋಗ ಶಸ್ತ್ರಚಿಕಿತ್ಸೆ ನೆರವೇರಿಸಲಾಗುತ್ತದೆ ಎಂದರು. ರೋಟರಿ ಸಂಸ್ಥೆಯ ಪ್ರಯತ್ನದಿಂದಾಗಿಯೇ ಜಾಗತಿಕವಾಗಿ ಪೋಲಿಯೋ ನಿರ್ಮೂಲನೆ ಸಾಧ್ಯವಾಗಿದೆ. ಪ್ರಸ್ತುತ ಪಾಕಿಸ್ತಾನದಲ್ಲಿ ಪೋಲಿಯೋದ 1 ಪ್ರಕರಣ ಹೊರತುಪಡಿಸಿದಂತೆ ಪ್ರಪಂಚ ಪೋಲಿಯೋ ಮುಕ್ತವಾಗಿದೆ ಎಂದೂ ಅನಿಲ್ ಹೇಳಿದರು.

ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ರತ್ನಾಕರ್ ರೈ ಮಾತನಾಡಿ, ಪ್ರತೀ ವರ್ಷ ರೋಟರಿ ಹಿಲ್ಸ್ ವತಿಯಿಂದ ಆರೋಗ್ಯ ಚಿಕಿತ್ಸಾ ಶಿಬಿರ ಆಯೋಜಿಸಲಾಗುತ್ತಿದ್ದು,, ಈ ಬಾರಿಯೂ ಮಡಿಕೇರಿ, ರೋಟರಿ ವುಡ್ಸ್ ಮತ್ತು ಇನ್ನರ್ ವೀಲ್ ಸಂಸ್ಥೆಗಳ ಸದಸ್ಯರು ಮತ್ತು ಕುಟುಂಬ ವರ್ಗದವರಿಗೆ ಆರೋಗ್ಯ ತಪಾಸಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ರೋಟರಿ ಮಿಸ್ಟಿ ಹಿಲ್ಸ್ ಕಾರ್ಯದರ್ಶಿ ಬಿ.ಕೆ. ಕಾರ್ಯಪ್ಪ ವಂದಿಸಿದ ಕಾರ್ಯಕ್ರಮದಲ್ಲಿ ಮಿಸ್ಟಿ ಹಿಲ್ಸ್ ಮುಂದಿನ ಸಾಲಿನ ಅಧ್ಯಕ್ಷ ಪಿ.ಆರ್.ರಾಜೇಶ್, ಕಾರ್ಯದರ್ಶಿ ಡಾ.ಚೇತನ್ ಶೆಟ್ಟಿ ಇನ್ನರ್ ವೀಲ್ ಸಂಸ್ಥೆಯ ಕಾರ್ಯದರ್ಶಿ ನಮಿತಾ ರೈ, ರೋಟರಿ ವುಡ್ಸ್ ಅಧ್ಯಕ್ಷ ಕಿರಣ್ ಕುಂದರ್, ಕಾರ್ಯದರ್ಶಿ ಪ್ರಮೀಳಾ ಶೆಟ್ಟಿ ಹಾಜರಿದ್ದರು. ತಜ್ಞ ವೈದ್ಯರಾದ ಡಾ. ಸಿ.ಆರ್. ಪ್ರಶಾಂತ್, ಡಾ.ರಾಜೇಶ್ವರಿ, ಡಾ. ಚಂದ್ರಶೇಖರ್, ಡಾ. ರಾಕೇಶ್, ಡಾ.ಶುಭಾ ಕೆ.ಜಿ. ಎಸ್.ಎಂ., ಚೇತನ್, ಡಾ.ರಾಜಶ್ರೀ ಡಾ. ನವೀನ್, ಡಾ.ಜಿಶ್ನಾ ತಪಾಸಣೆ ಕೈಗೊಂಡರು.

ನಿಷೇಧಿತ ಮಾದಕವಸ್ತು ಎಂಡಿಎಂಎ ಸಾಗಾಟ ಪ್ರಕರಣ

ಇಬ್ಬರು ಆರೋಪಿಗಳ ಬಂಧನ

ಬೆಳ್ತಂಗಡಿ: ಗುರುವಾಯನ ಕೆರೆಯಿಂದ ಮೂಡಬಿದಿರೆ ಕಡೆಗೆ ಕಾರಿನಲ್ಲಿ ಮಾರಾಟ ಮಾಡಲು ನಿಷೇಧಿತ ಮಾದಕವಸ್ತು ಎಂಡಿಎಂಎ ಸಾಗಾಟ ಮಾಡಲು ಯತ್ನಿಸುತ್ತಿದ್ದಾಗ ವೇಣೂರು ಪೊಲೀಸರಿಗೆ ಬಂದ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ಮಾದಕವಸ್ತು ಸಮೇತ ಪತ್ತೆ ಹಚ್ಚಿ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.



ನಿಷೇಧಿತ ಎಂಡಿಎಂಎ ಮಾದಕ ವಸ್ತು ಸಾಗಾಟ ಮಾಡುತ್ತಿರುವ ಬಗ್ಗೆ ವೇಣೂರು ಪೊಲೀಸ್ ಠಾಣಾ ಸಬ್ ಇನ್ಸ್‌ಪೆಕ್ಟರ್ ಅಕ್ಷಯ್ ಡವಗಿ ರವರಿಗೆ ಬಂದ ಖಚಿತ ಮಾಹಿತಿಯ ಮೇರೆಗೆ ಮೇ 27ರಂದು ಸಂಜೆ 3 ಗಂಟೆಗೆ ಸಿಬ್ಬಂದಿಗಳಾದ ಕೃಷ್ಣ ಕೆ.ಬಿ, ವಸಂತ್ ಕುಮಾರ್, ಮೋಹನ್ ಕುಮಾರ್ ರವರನ್ನು ಜೊತೆಯಲ್ಲಿ ಕರೆದುಕೊಂಡು ವೇಣೂರು ಠಾಣಾ ವ್ಯಾಪ್ತಿಯ ಕಂಬಳದಡ್ಡ ಎಂಬಲ್ಲಿ ಗುರುವಾಯನಕೆರೆ–ಮೂಡಬಿದ್ರೆ ಸಾರ್ವಜನಿಕ ರಸ್ತೆಯಲ್ಲಿ ನಾಖಾಬಂದಿ ಹಾಕಿ ವಾಹನ ತಪಾಸಣೆ ನಡೆಸುತ್ತಿದ್ದಾಗ ಮಧ್ಯಾಹ್ನ ಸುಮಾರು 3.20 ಗಂಟೆಗೆ ಗುರುವಾಯನಕೆರೆ ಕಡೆಯಿಂದ ವೇಣೂರು ಕಡೆಗೆ ಸಾಗುತ್ತಿದ್ದ ಕಾರನ್ನು ತಡೆದು ನಿಲ್ಲಿಸಿ ತಪಾಸಣೆ ನಡೆಸಿದಾಗ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದ 40 ಸಾವಿರ ಮೌಲ್ಯದ 4 ಗ್ರಾಂ ಎಂಡಿಎಂಎ ನಿಷೇಧಿತ ಮಾದಕವಸ್ತುವನ್ನು ಪತ್ತೆ ಹಚ್ಚಿದ್ದಾರೆ.

- ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ಮಾದಕವಸ್ತು ಸಮೇತ ಪತ್ತೆ ಹಚ್ಚಿ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿ
- 40 ಸಾವಿರ ಮೌಲ್ಯದ 4 ಗ್ರಾಂ ಎಂಡಿಎಂಎ ನಿಷೇಧಿತ ಮಾದಕವಸ್ತು ಪತ್ತೆ
- ನ್ಯಾಯಾಧೀಶರು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಗೆ

ಕಾರಿನಲ್ಲಿದ್ದ ಇಬ್ಬರು ಆರೋಪಿತರಾದ ಮಂಗಳೂರು ತಾಲೂಕಿನ ಪುತ್ತಿಗೆ ಗ್ರಾಮದ ಹಂಡೇಲು ನಿವಾಸಿ ಹೆಚ್.ಹುಸೇನ್ ಮಗ ತಸ್ಲೀರ್(27) ಮತ್ತು ಮಂಗಳೂರು ತಾಲೂಕಿನ ಮೂಡಬಿದಿರೆಯ ಕಲ್ಲಬೆಟ್ಟು ನಿವಾಸಿ ಅಬ್ದುಲ್ ಖಾದರ್ ಮಗ ಮಹಮ್ಮದ್ ಸಲ್ವಾನ್(22) ಎಂಬವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಈ ಮಾದಕವಸ್ತುವನ್ನು ಬೆಳ್ತಂಗಡಿ ತಾಲೂಕಿನ ಕುವೆಟ್ಟು ಗ್ರಾಮದ ಸುನ್ನತ್ ಕೆರೆ ನಿವಾಸಿ ಹಂಝುತ್ ಕರಾರ್ ಎಂಬಾತ ಮಾರಾಟ ಮಾಡಲು ನೀಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ.

4 ಗ್ರಾಂ ಎಂಡಿಎಂಎ ನಿಷೇಧಿತ ಮಾದಕ ವಸ್ತುವಿನ ಅಂದಾಜು ಮೌಲ್ಯ ಸುಮಾರು 40 ಸಾವಿರ ಹಾಗೂ ಸಾಗಾಟ ಮತ್ತು ಮಾರಾಟಕ್ಕೆ ಉಪಯೋಗಿಸಿದ ಕಾರಿನ ಮೌಲ್ಯಸುಮಾರು 2 ಲಕ್ಷ ಆಗಿದೆ. ಬಂಧಿತ ಮಹಮ್ಮದ್ ತಸ್ಲೀರ್ ಮತ್ತು ಮಹಮ್ಮದ್ ಸಲ್ವಾನ್ ಬಂಧಿಸಿ ಮೇ.28 ರಂದು ಮಂಗಳೂರು ನ್ಯಾಯಾಧೀಶರ ಮನೆಗೆ ಹಾಜರುಪಡಿಸಿದ್ದು. ನ್ಯಾಯಾಧೀಶರು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಇನ್ನೂ ಮೂರನೇ ಆರೋಪಿ ಕುವೆಟ್ಟು ಗ್ರಾಮದ ಸುನ್ನತ್ ಕೆರೆ ನಿವಾಸಿ ಹಂಝುತ್ ಕರಾರ್ ಪ್ರಕರಣದ ಬಳಿಕ ಪರಾರಿಯಾಗಿದ್ದು ಆತನ ಬಂಧನಕ್ಕೆ ವೇಣೂರು ಪೊಲೀಸರು ಬಲೆ ಬೀಸಿದ್ದಾರೆ.

ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಹೆಚ್ಚುತ್ತಿದೆ ರಾಶಿ ರಾಶಿ ಕಸದ ಸಮಸ್ಯೆ | ಇನ್ನು ಮಳೆಗಾಲ ಆರಂಭವಾದರೆ ಇನ್ನಷ್ಟು ಅವಾಂತರ ಸೃಷ್ಟಿಯ ಆತಂಕ

ಸಂಗ್ರಹವಾದ ಎಲ್ಲಾ ತ್ಯಾಜ್ಯ ಮುಂದಿನ ಮೂರು ತಿಂಗಳಲ್ಲಿ ವಿಲೇ ಖಚಿತ: ಆಡಳಿತ ಭರವಸೆ

ಕಿನ್ನಿಗೋಳಿ: ಇಲ್ಲಿನ ಪಟ್ಟಣ ಪಂಚಾಯತ್ ತ್ಯಾಜ್ಯ ಘಟಕದಲ್ಲಿ ಲೋಡುಗಟ್ಟಲೆ ಸಂಗ್ರಹಿತ ತ್ಯಾಜ್ಯ ರಾಶಿ ಬಿದ್ದಿದ್ದು ಹಂತಹಂತವಾಗಿ ವಿಲೇಗೆ ಮುಂದಾಗಿದ್ದೇವೆ ಎಂದು ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ ತಿಳಿಸಿದ್ದಾರೆ.

ಐದು ವರ್ಷಗಳ ಹಿಂದೆ ಕಿನ್ನಿಗೋಳಿ, ಕಟೀಲು ಮೆನ್ನಬೆಟ್ಟು ಪಂಚಾಯತ್‌ಗಳು ಒಂದಾಗಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ಆಗಿ ಮೇಲ್ದರ್ಜೆಗೆ ಏರಿದ್ದು ಚುನಾವಣೆ ಆಗದೆ, ಅಧಿಕಾರಿಗಳ ಆಡಳಿತವೇ ಇತ್ತು. ಸಾಯೀಶ್ ಚೌಟ ಮುಖ್ಯಾಧಿಕಾರಿಯಾಗಿದ್ದಾಗ, ತ್ಯಾಜ್ಯದಿಂದ ಗೊಬ್ಬರವನ್ನು ತಯಾರಿಸಿ ಕಿನ್ನಿಗೋಳಿ ಗೋಲ್ಡ್ ಹೆಸರಿನಲ್ಲಿ ಮಾರಾಟವಾಗುತ್ತಿತ್ತು, ಈ ಮೂಲಕ ತ್ಯಾಜ್ಯ ವಿಲೇವಾರಿಯಾಗುತ್ತಿತ್ತು. ಅವರ ವರ್ಗಾವಣೆ ಬಳಿಕ ಗೊಬ್ಬರ ತಯಾರಿಕೆ ನಿಂತು ಹೋಯಿತು. ತ್ಯಾಜ್ಯ ಘಟಕದಲ್ಲಿ ಸಂಗ್ರಹಣೆ ಕೂಡ ಹೆಚ್ಚಾಯಿತು. ಕಳೆದ 6 ತಿಂಗಳ ಹಿಂದೆ ಗೊಬ್ಬರ ತಯಾರಿಕೆ ಮತ್ತೆ ಪ್ರಾರಂಭವಾದರೂ ಸಂಗ್ರಹವಾದ ತ್ಯಾಜ್ಯ ಮಾತ್ರ ಕಡಿಮೆಯಾಗಿಲ್ಲ. ಇದೀಗ ನಾಲ್ಕು ತಿಂಗಳ ಹಿಂದೆ ಪಟ್ಟಣ ಪಂಚಾಯತ್‌ಗೆ ಚುನಾವಣೆ ನಡೆದು ಚುನಾಯಿತ ಪ್ರತಿನಿಧಿಗಳು ಬಂದ ನಂತರ, ಪಟ್ಟಣ ಪಂಚಾಯತ್‌ನ್ನು ಕಾಡುತ್ತಿರುವ ಸಮಸ್ಯೆಗಳನ್ನು ಹಂತಹಂತವಾಗಿ ಪರಿಹರಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.





ಸಮಸ್ಯೆ ಇರುವುದು ನಿಜ ಆದರೆ...

ಸಮಸ್ಯೆ ಇರುವುದು ನಿಜ. ತ್ಯಾಜ್ಯ ವಿಲೇವಾರಿಗೆ ಕೇರಳ ಸಂಸ್ಥೆಯೊಂದು ಗುತ್ತಿಗೆ ಪಡೆದಿದೆ. ಸುಮಾರು 30 ಟನ್ ಕಸ ಸಾಗಾಟ ಮಾಡಲಾಗಿದೆ. ತಾತ್ಕಾಲಿಕ ನೆಲೆಯಲ್ಲಿ ದಿನಕ್ಕೆ 2 ಲೋಡ್ ಕಸ ಮಂಗಳೂರು ಘಟಕಕ್ಕೆ ಸಾಗಿಸಲಾಗುತ್ತಿದ್ದು, ಮುಂದಿನ 3 ತಿಂಗಳಲ್ಲಿ ಸಂಗ್ರಹವಾದ ತ್ಯಾಜ್ಯ ವಿಲೇವಾರಿಯಾಗಲಿದೆ. ಕಿನ್ನಿಗೋಳಿ ಪಟ್ಟಣ ಪಂಚಾಯತ್ 18 ವಾರ್ಡ್‌ಗಳಿದ್ದು 4 ವಾಹನ ಮೂಲಕ ಎಲ್ಲಾ ವಾರ್ಡ್‌ಗಳಿಂದ ತ್ಯಾಜ್ಯ ಸಂಗ್ರಹಿಸಲಾಗುತ್ತಿದೆ. ಖಾಯಂ ಹಾಗೂ ಹೊರ ಗುತ್ತಿಗೆ ಆಧಾರದಲ್ಲಿ 25 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಸಿ ಕಸ ಹಾಗೂ ಒಣ ಕಸ ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿದ್ದು ಇದಕ್ಕೆ ಪ್ರತೀ ಮನೆಗಳಿಗೆ ಎರಡು ಬುಟ್ಟಿಗಳನ್ನು ನೀಡಲಾಗಿದೆ. ಕಸವನ್ನು ಪ್ರತ್ಯೇಕಿಸಲು ಎಂ.ಆರ್. ಎಫ್ ಘಟಕವಿದ್ದು ಯಂತ್ರದ ಮೂಲಕ 8 ಬಗೆಗಳಲ್ಲಿ ತ್ಯಾಜ್ಯವನ್ನು ವಿಗಂಡನೆ ಮಾಡಿ ಶೇಖರಣೆ ಮಾಡಿ ಪ್ಲಾಸ್ಟಿಕ್, ಬಟ್ಟೆ, ಕಾಗದ ರಟ್ಟು, ತೆಳು ಪ್ಲಾಸ್ಟಿಕ್, ಬಾಟಲ್ ಮುಂತಾದುವುಗಳನ್ನು ಯಂತ್ರದ ಮೂಲಕ ಪ್ರೆಸಿಂಗ್ ಮಾಡಿ ಪ್ಯಾಕ್ ಮಾಡಿ ಸಾಗಾಟ ಮಾಡಲಾಗುತ್ತಿದೆ. ಮನೆಗಳು ಹಾಗೂ ದೊಡ್ಡ ಮಟ್ಟದ ವಸತಿ ಸಮುಚ್ಚಯಗಳ ಸಂಖ್ಯೆ ಹೆಚ್ಚಾಗುತ್ತಿದ್ದು ಇದರಿಂದ ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನ ವ್ಯಾಪ್ತಿಯಲ್ಲಿ ದಿನ ನಿತ್ಯ ಸುಮಾರು 6 ಟನ್ ನಷ್ಟು ತ್ಯಾಜ್ಯ ಸಂಗ್ರಹವಾಗುತ್ತಿದೆ. ತ್ಯಾಜ್ಯ ವಿಲೇವಾರಿಗೆ ವಿವಿಧ ಯೋಜನೆಗಳನ್ನು ಅಳವಡಿಸಿಕೊಂಡಿದ್ದು, ಸದ್ಯ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಸಂಗ್ರಹವಾದ ಹಸಿ ಕಸವನ್ನು ಎರಡು ಹಂತದಲ್ಲಿ ಯಂತ್ರದ ಮೂಲಕ ಪುಡಿ ಮಾಡಿ ಗೊಬ್ಬರ ತಯಾರಿಸಲಾಗುತ್ತದೆ. ಮತ್ತು ಮಾರಾಟ ಮಾಡಲಾಗುತ್ತಿದೆ ಎಂದು ಪಟ್ಟಣ ಪಂಚಾಯತ್ ಮೂಲಗಳು ತಿಳಿಸಿವೆ.

ಸರಿಯಾದ ರೀತಿಯಲ್ಲಿ ವಿಲೇವಾರಿಯಾಗುತ್ತಿದೆ

ಗ್ರಾಮ ಪಂಚಾಯತ್ ಇದ್ದಾಗಿನ ಹಳೆ ತ್ಯಾಜ್ಯ ವಿಲೇವಾರಿಗೆ ಸುಮಾರು ರೂ. 53 ಲಕ್ಷದ ಟೆಂಡರು ಕರೆಯಲಾಗಿದ್ದು , ಜಿಲ್ಲಾ ಮಟ್ಟದಲ್ಲಿ ತಾಂತ್ರಿಕ ತೊಂದರೆಯಿಂದ ಟೆಂಡರು ವಿಳಂಬವಾಗಿದೆ, ಪ್ರತೀ ದಿನ ಎರಡು ಲೋಡ್‌ನಂತೆ ತ್ಯಾಜ್ಯವನ್ನು ಮಂಗಳೂರಿಗೆ ವಿಲೇವಾರಿ ಮಾಡಲಾಗುತ್ತಿದೆ. ಘಟಕಕ್ಕೆ ಬರುವ ರಸ್ತೆ ಅಗಲ ಕಿರಿದಾಗಿರುವ ಕಾರಣ ದೊಡ್ಡ ಗಾತ್ರದ ವಾಹನ ಬರಲು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ವಿಲೇವಾರಿಗೆ ಸ್ವಲ್ಪ ಸಮಸ್ಯೆಯಾಗಿದೆ. ಪ್ರಸ್ತುತ ಸಂಗ್ರಹವಾಗುವ ತ್ಯಾಜ್ಯ 8 ಬಗೆಗಳಲ್ಲಿ ವಿಂಗಡಿಸಿ ಸರಿಯಾದ ರೀತಿಯಲ್ಲಿ ವಿಲೇವಾರಿಯಾಗುತ್ತಿದೆ, ಹಸಿ ಕಸದಿಂದ ಗೊಬ್ಬರ ತಯಾರಿಸಲಾಗುತ್ತಿದೆ, ಹಳೆಯ ತ್ಯಾಜ್ಯವನ್ನು ಇನ್ನೂ ಮೂರು ತಿಂಗಳ ಒಳಗೆ ವಿಲೇವಾರಿ ಮಾಡಲಾಗುತ್ತದೆ

■ ಗುರುರಾಜ ಮಲ್ಲಿಗೆಯಂಗಡಿ , ಅಧ್ಯಕ್ಷರು ಕಿನ್ನಿಗೋಳಿ ಪಟ್ಟಣ ಪಂಚಾಯತ್

ಪರಿಸರ ಸಮಸ್ಯೆಯ ಆತಂಕ

ಈ ಮಧ್ಯೆ ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನ ಕಾಂಗ್ರೆಸ್ ಸದಸ್ಯರು ತ್ಯಾಜ್ಯ ಘಟಕಕ್ಕೆ ಭೇಟಿ ನೀಡಿ, ಮುಖ್ಯಾಧಿಕಾರಿ ಜಯಶಂಕರ್ ಪ್ರಸಾದ್ ಅವರಿಂದ ತ್ಯಾಜ್ಯ ವಿಲೇವಾರಿಯಾಗದಿರುವ ಬಗ್ಗೆ ವಿಚಾರಿಸಿದರು. ಮಳೆಗಾಲ ಆರಂಭವಾದರೆ ತ್ಯಾಜ್ಯ ಘಟಕದಿಂದ ಪರಿಸರದಲ್ಲಿ ಸಮಸ್ಯೆಗಳಾಗಬಹುದು ಎಂದು ಅಭಿಪ್ರಾಯಿಸಿದರು.

ಕಿರುಸುದ್ದಿ

ಘಾಟ್ ವಿಭಾಗದಲ್ಲಿ ಸುರಕ್ಷತೆ, ಕಾರ್ಯಾಚರಣೆ ಕುರಿತು ಸಭೆ

• **ಸುಬ್ರಹ್ಮಣ್ಯ:** ಮುಖ್ಯ ರೈಲು ಸುರಕ್ಷತಾ ಆಯುಕ್ತ ಮುದಿತ್ ಮಿತ್ತಲ್ ಗುರುವಾರ ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿಗೆ ಭೇಟಿ ನೀಡಿದರು. ರೈಲ್ವೆ ವ್ಯವಸ್ಥಾಪಕರೊಂದಿಗೆ ಹಾಗೂ ಇತರ ವಿಭಾಗೀಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಸಕಲೇಶಪುರ-ಸುಬ್ರಹ್ಮಣ್ಯ ರಸ್ತೆ ಘಾಟ್ ವಿಭಾಗದಲ್ಲಿ ಅರಬೆಟ್ಟ ಪ್ರದೇಶದಲ್ಲಿ ಹೊಸ ಬ್ಲಾಕ್ ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆ ಕುರಿತು ಪ್ರಮುಖವಾಗಿ ಚರ್ಚಿಸಲಾಯಿತು. ಘಾಟ್ ಪ್ರದೇಶದ ಸವಾಲಿನ ಭೌಗೋಳಿಕ ಪರಿಸ್ಥಿತಿಯಲ್ಲಿ ರೈಲು ಸಂಚಾರವನ್ನು ಸುಗಮಗೊಳಿಸಲು ಹಾಗೂ ಕಾರ್ಯಾಚರಣಾ ದಕ್ಷತೆಯನ್ನು ಹೆಚ್ಚಿಸಲು ಬೇಕಾದ ವಿಷಯಗಳನ್ನು ಚರ್ಚೆ ಮಾಡಲಾಯಿತು. ಘಾಟ್ ವಿಭಾಗದಲ್ಲಿ ರೈಲು ಸಂಚಾರಕ್ಕೆ ಅನ್ವಯಿಸುವ ಕಾರ್ಯಪದ್ಧತಿ ನಿಯಮಗಳ ಕುರಿತು, ಸುರಕ್ಷತಾ ಮಾನದಂಡಗಳನ್ನು ಕಾಪಾಡುವುದು, ಕಾರ್ಯಾಚರಣಾ ಶಿಸ್ತು ಪಾಲನೆಗೆ, ರೈಲು ಸುರಕ್ಷತೆ ಮತ್ತು ಸುರಕ್ಷಿತ ರೈಲು ಸಂಚಾರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಕಡಬ ತಹಶೀಲ್ದಾರ್ ಪ್ರಭಾಕರ ಖಜೂರೆ ವರ್ಗಾವಣೆ



• **ಕಡಬ:** ರಾಜ್ಯ ಕಂದಾಯ ಇಲಾಖೆಯಲ್ಲಿ ಮಹತ್ವದ ಆಡಳಿತಾತ್ಮಕ ಬದಲಾವಣೆ ನಡೆದಿದ್ದು, ರಾಜ್ಯದ ವಿವಿಧ ಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಒಟ್ಟು 27 ತಹಶೀಲ್ದಾರ್ ಗ್ರೇಡ್-1 ಹಾಗೂ ಗ್ರೇಡ್-2 ಅಧಿಕಾರಿಗಳನ್ನು ತತ್ ಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಸರಕಾರ ವರ್ಗಾವಣೆಗೊಳಿಸಿದೆ. ಈ ಸಂಬಂಧ ಬುಧವಾರ ರಾತ್ರಿ ಸರ್ಕಾರ ಅಸೂಚನೆ ಹೊರಡಿಸಿದ್ದು, ಕಡಬ ತಾಲೂಕಿನ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಭಾಕರ ಖಜೂರೆ ಅವರನ್ನು ಕಲಬುರಗಿ ಜಿಲ್ಲೆಯ ಕಮಲಾಪುರ ತಾಲೂಕಿಗೆ ವರ್ಗಾಯಿಸಲಾಗಿದೆ. ಕಮಲಾಪುರ ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮೊಹ್ಮದ್ ಮೊಹಸೀನ್ ಅವರ ಸ್ಥಾನಕ್ಕೆ ಪ್ರಭಾಕರ ಖಜೂರೆ ಅವರನ್ನು ನಿಯೋಜಿಸಲಾಗಿದೆ. ಮೂಲತಃ ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲೂಕಿನವರಾಗಿರುವ ಪ್ರಭಾಕರ ಖಜೂರೆ ಅವರು ಈ ಹಿಂದೆ ಮಂಗಳೂರಿನ ಉಳ್ಳಾಲದಲ್ಲಿ ಹತ್ತು ತಿಂಗಳು ಕರ್ತವ್ಯ ನಿರ್ವಸಿದ್ದು, ಕಡಬದಲ್ಲಿ ಕಳೆದ ಎರಡೂವರೆ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಕಡಬ ತಾಲೂಕಿನ ತಹಶೀಲ್ದಾರ್ ಹುದ್ದೆಗೆ ಸದ್ಯ ಯಾರನ್ನೂ ನಿಯೋಜಿಸಲಾಗಿಲ್ಲ.

ಮುಲ್ಕಿ : ನೂತನ ತಹಶೀಲ್ದಾರ್ ಆಗಿ ಪೃಥ್ವಿ ಸಾನಿಕಂ ನೇಮಕ



ಮುಲ್ಕಿ: ತಾಲೂಕಿಗೆ ನೂತನ ತಹಶೀಲ್ದಾರ್ ಆಗಿ ಪೃಥ್ವಿ ಸಾನಿಕಂ ಅವರನ್ನು ಸರಕಾರ ನೇಮಕ ಮಾಡಿದೆ. ಈ ಹಿಂದೆ ಮುಲ್ಕಿ ಪ್ರಭಾರ ತಹಶೀಲ್ದಾರ್ ಆಗಿ ಶ್ರೀಧರ ಮುಂದಲಮನಿ ಕಾರ್ಯನಿರ್ವಹಿಸುತ್ತಿದ್ದರು. ನೂತನ ತಹಶೀಲ್ದಾರ್ ಪೃಥ್ವಿ ಸಾನಿಕಂ ಈ ಹಿಂದೆ ಬೆಳ್ತಂಗಡಿಯಲ್ಲಿ ತಹಶೀಲ್ದಾರ್ ಕರ್ತವ್ಯ ನಿರ್ವಹಿಸುತ್ತಿದ್ದರು.


ನಿಧನ ಸುದ್ದಿ

ಸ್ವರ್ಣಶಿಲ್ಪಿ ವೈ.ರಾಘವೇಂದ್ರ ಆಚಾರ್ಯ



ಕಟಪಾಡಿ: ಹೆಸರಾಂತ ಸ್ವರ್ಣಶಿಲ್ಪಿ ವೈ. ರಾಘವೇಂದ್ರ ಆಚಾರ್ಯ (90) ಅಲ್ಪಕಾಲದ ಅಸೌಖ್ಯದಿಂದ ಮೇ 27 ರಂದು ಪಣಿಯೂರಿನ ಮನೆಯಲ್ಲಿ ನಿಧನ ಹೊಂದಿದರು. ಮೃತರು ವೈದ್ಯರಾದ ಡಾ. ವೈ. ಯಶವಂತ ಆಚಾರ್ಯ ದಾವಣಗೆರೆ ಸಹಿತ ಮೂವರು ಪುತ್ರರು, ಓರ್ವ ಪುತ್ರಿಯನ್ನು ಅಗಲಿರುತ್ತಾರೆ. ಸುಮಾರು 6 ದಶಕಗಳಿಗೂ ಹೆಚ್ಚಿನ ಕಾಲ ಉಚ್ಚಿಲದಲ್ಲಿ ಚಿನ್ನಾಭರಣ ತಯಾರಿಯ ಜ್ಯುವೆಲ್ಲರ್ಸ್ ಹೊಂದಿದ್ದರು. ಬೆಳಪು ಸಿ. ಎ. ಬ್ಯಾಂಕ್‌ನಲ್ಲಿ ಜ್ಯುವೆಲ್ ಅಪ್ರೈಸರ್ ಆಗಿದ್ದರು. ವಿಶ್ವಕರ್ಮ ಸಮಾಜ ಸೇವಾ ಸಂಘ ಎಲ್ಲೂರು ಇದರ ಮಾಜಿ ಅಧ್ಯಕ್ಷರಾಗಿ, ಹಾಲಿ ಗೌರವಾಧ್ಯಕ್ಷರಾಗಿ ಸಮಾಜ ಸೇವೆಯಲ್ಲಿಯೂ ತೊಡಗಿಸಿಕೊಂಡಿದ್ದರು. ಯಕ್ಷಗಾನ ಪೋಷಕರಾಗಿದ್ದರು. ಉಡುಪಿ ಜಿಲ್ಲಾ ವಿಶ್ವಕರ್ಮ ಸಮ್ಮೇಳನ ಸಹಿತ ಹಲವೆಡೆ ಸ್ವರ್ಣಶಿಲ್ಪಿಯಾಗಿ ಸಮ್ಮಾನಿತರಾಗಿದ್ದರು. ಉಡುಪಿ ಜಿಲ್ಲಾ ಚಿನ್ನ ಬೆಳ್ಳಿ ಕೆಲಸಗಾರರ ಸಂಘದಲ್ಲಿ ಸಕ್ರಿಯರಾಗಿದ್ದರು.

ಯು.ಕೆ. ಇಬ್ರಾಹಿಂ



ಉಪ್ಪಿನಂಗಡಿ: ಹಿರಿಯ ಕಾಂಗ್ರೆಸ್ ಕಾರ್ಯಕರ್ತ, ನಿರಂತರ ಆರು ಬಾರಿ ಉಪ್ಪಿನಂಗಡಿ ಗ್ರಾ.ಪಂ.ನ ಸದಸ್ಯರಾಗಿದ್ದ ಇಲ್ಲಿನ ಹಳೆಗೇಟು ಬಳಿಯ ಕುಕ್ಕುಜೆ ನಿವಾಸಿ ಯು. ಕೆ. ಇಬ್ರಾಹಿಂ (68) ಹೃದಯಾಘಾತದಿಂದ ಮೇ 27ರಂದು ತನ್ನ ಸ್ವಗೃಹದಲ್ಲಿ ನಿಧನರಾದರು. ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತರಾಗಿದ್ದ ಇಬ್ರಾಹೀಂ ಅವರು ಒಂದು ಅವಧಿಗೆ ಉಪ್ಪಿನಂಗಡಿ ಸಹಕಾರಿ ವ್ಯವಸಾಯಿಕ ಸಂಘದ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ವೃತ್ತಿಯಲ್ಲಿ ಟೈಲರ್ ಆಗಿದ್ದ ಇವರು ಜನಸ್ನೇಹಿಯಾಗಿ ಕಾರ್ಯನಿರ್ವಹಿಸಿ ಪಂಚಾಯತ್ ಚುನಾವಣೆಯಲ್ಲಿ ನಿರಂತರ ಗೆಲುವು ಸಾಧಿಸುತ್ತಿದ್ದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಐವರು ಪುತ್ರರನ್ನು ಅಗಲಿದ್ದಾರೆ.

ಕಾಸನಗುಂದು ಶೀನ ಮೇಷ್ಟ್ರು



ಕೋಟ: ಇಲ್ಲಿನ ಕೋಟದ ನಿವಾಸಿ ನಿವೃತ್ತ ಶಿಕ್ಷಕ ಶ್ರೀನಿವಾಸ ದೇವಾಡಿಗ,(ಶೀನ ಮೇಷ್ಟ್ರು) 79ವ. ನಿಧನರಾದರು. ಕೃಷಿಕ, ಹೈನುಗಾರಿಕೆ,ಧಾರ್ಮಿಕ ಕಾರ್ಯಗಳಲ್ಲಿ ಗುರುತಿಸಿಕೊಂಡಿದ್ದರು. ಇರ್ವರು ಪುತ್ರಿ,ಓರ್ವ ಪುತ್ರರನ್ನು ಅಗಲಿದ್ದಾರೆ.

ಪಾಂಡುರಂಗ ಮೆಹೆಂದಳೆ



• **ಬೆಳ್ತಂಗಡಿ:** ಮೂಲತಃ ಸೂಳಬೆಟ್ಟಿನವರಾಗಿದ್ದು, ಪ್ರಸ್ತುತ ಅಳದಂಗಡಿ ಉಂಗಿಲಬೈಲು ನಿವಾಸಿಯಾಗಿದ್ದ ಪಾಂಡುರಂಗ ಮೆಹೆಂದಳೆ (75) (ದಿ. ಮಹದೇವ ಮೆಹೆಂದಳೆ ಸೂಳಬೆಟ್ಟು ಇವರ ಪುತ್ರ)ಅಲ್ಪಕಾಲದ ಅನಾರೋಗ್ಯದಿಂದ ಸ್ವಗೃಹದಲ್ಲಿ ಗುರುವಾರ ಮಧ್ಯಾಹ್ನ ನಿಧನ ಹೊಂದಿದರು. ಇವರು ಬರಯ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಮಾಜಿ ಆಡಳಿತದಾರರಾಗಿದ್ದರು. ಮೃತರು ಪತ್ನಿ, ಪುತ್ರರನ್ನು ಅಗಲಿದ್ದಾರೆ.

ಅಯ್ಯಪ್ಪ ಮಣಿಯಾಣಿ

ಮುಳ್ಳೇರಿಯ: ಬೆಳ್ಳೂರು ಕಿನ್ನಿಂಗಾರು ಜವನಿಗುಡ್ಡೆ ನಿವಾಸಿ ಅಪ್ಪಯ್ಯ ಮಣಿಯಾಣಿ (67) ಮಂಗಳವಾರ ಸಂಜೆ ನಿಧನ ಹೊಂದಿದರು. ಮೃತರು ಪತ್ನಿ, ಪುತ್ರ, ಪುತ್ರಿಯನ್ನು ಅಗಲಿದ್ದಾರೆ.



ಪುತ್ತೂರು ಸವಣೂರಿನ ಶಿಕ್ಷಣ ಕ್ರಾಂತಿಯ ಹರಿಕಾರ, ಸಹಕಾರ ರತ್ನ, ರೊಟೇರಿಯನ್ ಸವಣೂರು ಕೆ. ಸೀತಾರಾಮ ರೈ ಮತ್ತು ಕಸ್ತೂರಿಕಲಾ ಎಸ್. ರೈ ದಂಪತಿಯು ವೈವಾಹಿಕ ಜೀವನದ 50ರ ಸಂಭ್ರಮ ಆಚರಿಸುತ್ತಿರುವ ಸಂದರ್ಭದಲ್ಲಿ ದ.ಕ. ಜಿಲ್ಲಾ ಹಾಲು ಒಕ್ಕೂಟದ ವತಿಯಿಂದ ಅಧ್ಯಕ್ಷ ರವಿರಾಜ್ ಹೆಗ್ಡೆ ನೇತೃತ್ವದಲ್ಲಿ ಭೇಟಿ ಮಾಡಿ ಅಭಿನಂದಿಸಿದರು.

ಮಂಜುನಾಥ ಭಂಡಾರಿಗೆ ಸಚಿವ ಸ್ಥಾನ: ಕಾಂಗ್ರೆಸ್ ಅಧ್ಯಕ್ಷ ಇಚ್ಛಿತಾರ್ಥ್ ಒತ್ತಾಯ



• **ಉಡುಪಿ:** ರಾಜ್ಯ ಸರ್ಕಾರದಲ್ಲಿ ಶೀಘ್ರದಲ್ಲೇ ನಡೆಯಲಿರುವ ಸಚಿವ ಸಂಪುಟ ಪುನರ್ ರಚನೆ ವೇಳೆ, ಹಿರಿಯ ಮುಖಂಡ , ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕೆಂದು ಕುಂದಾಪುರ ವಿಧಾನಸಭಾ ಕ್ಷೇತ್ರ ಯುವ ಕಾಂಗ್ರೆಸ್ ಅಧ್ಯಕ್ಷ ಇಚ್ಛಿತಾರ್ಥ್ ಶೆಟ್ಟಿ ಒತ್ತಾಯಿಸಿದ್ದಾರೆ.

ಉಡುಪಿಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 40 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿಯಾಗಿ ದುಡಿಯುತ್ತಿರುವ ಮಂಜುನಾಥ ಭಂಡಾರಿ ಅವರ ಕೊಡುಗೆ ಅಪಾರ. 1982 ರಲ್ಲಿ ಎನ್‌ಎಸ್‌ಯುಐ (KTWM) ಜಿಲ್ಲಾ ಅಧ್ಯಕ್ಷರಾಗಿ ರಾಜಕೀಯ ಜೀವನ ಆರಂಭಿಸಿದ ಅವರು ಯುವ ಕಾಂಗ್ರೆಸ್, ಕೆಪಿಸಿಸಿ ಹಾಗೂ ಎಐಸಿಸಿಯಲ್ಲಿ ತಮಗೆ ನೀಡಿದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಹಿಂದೆ ಪಕ್ಷದ ಆದೇಶದಂತೆ ಮಾಜಿ ಸಿಎಂ ಯಡಿಯೂರಪ್ಪ ಅವರ ವಿರುದ್ಧ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಪಕ್ಷ ಸಂಘಟನೆಗಾಗಿ ಶ್ರಮಿಸಿದ್ದರು ಎಂದು ನೆನಪಿಸಿಕೊಂಡರು.

ಉಡುಪಿ ಜಿಲ್ಲೆಯ ಐದೂ ಕ್ಷೇತ್ರಗಳಲ್ಲಿ ಸದ್ಯ ಕಾಂಗ್ರೆಸ್ ಸೋತಿರುವುದರಿಂದ, ಮಂಜುನಾಥ ಭಂಡಾರಿ ಅವರು ಸಚಿವರಾಗಿ ಜಿಲ್ಲಾ ಉಸ್ತುವಾರಿ ವಹಿಸಿಕೊಂಡರೆ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ತುಂಬಿದಂತಾಗುತ್ತದೆ. ದ.ಕ.ಜಿಲ್ಲೆಯಿಂದ ಯು.ಟಿ. ಖಾದರ್ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ಸಿಗುವ ಸಾಧ್ಯತೆ ಇದ್ದು, ಉಡುಪಿ ಜಿಲ್ಲೆಯ ಕೋಟಾದಲ್ಲಿ ಮಂಜುನಾಥ ಭಂಡಾರಿ ಅವರನ್ನು ಸಚಿವ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಆಗ್ರಹಿಸಿದರು.

ಬ್ರಹ್ಮಾವರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಘವೇಂದ್ರ ಶೆಟ್ಟಿ ಕರ್ಜೆ, ಮಹಮ್ಮದ್ ಸಲಾಂ, ನಟರಾಜ್ ಹೊಳ್ಳ, ರಕ್ಷಿತ್ ಶೆಟ್ಟಿ, ಕುಂದಾಪುರ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಅಭಿಜಿತ್ ಪೂಜಾರಿ ಹೇರಿಕುದ್ರು , ಮುನಾಫ್ ಕೋಡಿ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪೆಟ್ರೋಲ್, ಡಿಸೇಲ್ ಆಧಾರಿತ ಯಂತ್ರೋಪಕರಣ ಹೊಂದಿರುವ ಕೃಷಿಕರಿಗೆ ತೀವ್ರ ಸಮಸ್ಯೆ

ಕೃಷಿಗೆ ಬಿಸಿ ಮುಟ್ಟಿಸಿದೆ ಬಾಟ್ಲಿ ಬ್ಯಾನ್

• **ಕುಂದಾಪುರ:** ಜಾಗತಿಕ ಮಟ್ಟದಲ್ಲಿ ಕವಿದಿರುವ ಯುದ್ಧದ ಕಾರ್ಮೋಡದ ಪರಿಣಾಮ ಇಂಧನ ಸರಬರಾಜುವಿನಲ್ಲಿ ವ್ಯತ್ಯಯವಾಗುತ್ತಿದ್ದು, ಕಳೆದ ಒಂದು ತಿಂಗಳಿಂದ ಕೃಷಿಕರಿಗೆ ಇದರ ನೇರ ಬಿಸಿ ತಟ್ಟಿದೆ. ಈಗ ಬಂಕ್‌ಗಳಲ್ಲಿ ಪೆಟ್ರೋಲ್, ಡಿಸೇಲ್ ಕ್ಯಾನು, ಬಾಟೆಲ್‌ಗಳಲ್ಲಿ ಕೊಡುತ್ತಿಲ್ಲ. ಹಾಗಾಗಿ ಪೆಟ್ರೋಲ್, ಡಿಸೇಲ್ ಆಧಾರಿತ ಕೃಷಿ ಯಂತ್ರೋಪಕರಣ ಹೊಂದಿರುವ ಕೃಷಿಕರಿಗೆ ತೀವ್ರ ಸಮಸ್ಯೆ ಉಂಟಾಗಿದೆ.

ಈಗ ಬಂಕ್‌ಗಳಲ್ಲಿ ವಾಹನಗಳಿಗೆ ಹೊರತುಪಡಿಸಿ ಪೆಟ್ರೋಲ್, ಡಿಸೇಲ್ ಕೊಡುತ್ತಿಲ್ಲ. ಇಂಧನ ಅಕ್ರಮ ಮಾರಾಟ, ಇಂಧನ ಮಿತವ್ಯಯಕ್ಕೆ ಒತ್ತು ನೀಡುವ ಸಲುವಾಗಿ ಕೆಲವು ನಿರ್ಬಂಧಗಳನ್ನು ಹಾಕಲಾಗಿದೆ. ಬಂಕ್‌ಗಳಿಗೆ ಬೇಡಿಕೆ ಪ್ರಮಾಣದಲ್ಲಿ ಇಂಧನ ಸರಬರಾಜು ಆಗದ ಹಿನ್ನೆಲೆಯಲ್ಲಿಯೂ ವಾಹನಗಳಿಗೆ ಮಾತ್ರ ಇಂಧನ ತುಂಬಿಸಲಾಗುತ್ತಿದೆ ಇದರಿಂದ ಕೃಷಿ ಚಟುವಟಿಕೆ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ.

ಬಹುತೇಕ ಕೃಷಿ ಯಂತ್ರೋಪಕರಣಗಳು ಪೆಟ್ರೋಲ್, ಡಿಸೇಲ್ ಆಧರಿತವಾಗಿದ್ದು, ಈಗ ಇಂಧನ ಲಭ್ಯವಾಗದ ಕಾರಣ ಕೃಷಿಕರು ಚಿಂತಾಕ್ರಾಂತರಾಗಿದ್ದಾರೆ. ಮುಖ್ಯವಾಗಿ ಹಳ್ಳಿಗಳಲ್ಲಿ ಈಗಲೂ ಕೂಡಾ ಡಿಸೇಲ್ ಆಧರಿತ ಪಂಪ್ ಸೆಟ್ ಬಳಸುವ ರೈತರಿದ್ದಾರೆ. ವಿದ್ಯುತ್ ಆಧರಿತ ಪಂಪ್ ಸೆಟ್‌ಗಳನ್ನು ಬಳಸಲು ತಾಂತ್ರಿಕ ಸಮಸ್ಯೆ ಇರುವ ಕಾರಣ ಗ್ರಾಮೀಣ ಪ್ರದೇಶದ ಬಹುತೇಕ ರೈತರು



ಡಿಸೇಲ್ ಪಂಪ್ ಸೆಟ್ ಬಳಕೆ ಮಾಡುತ್ತಿದ್ದಾರೆ. ಅಲ್ಲದೆ ಪೆಟ್ರೋಲ್ ಆಧರಿತ ಕೀಟನಾಶಕ ಸಿಂಪರಣೆ ಯಂತ್ರ, ಕಳೆ ಕತ್ತರಿಸುವ ಯಂತ್ರ ಮೊದಲಾದ ಯಂತ್ರಗಳು ಪೆಟ್ರೋಲ್ ಹಾಗೂ ಡಿಸೇಲ್ ಆಧರಿತವಾಗಿದೆ. ಈಗ ಬಂಕ್‌ಗಳಲ್ಲಿ ವಾಹನ ಹೊರತುಪಡಿಸಿ ಅನ್ಯ ಉದ್ದೇಶಗಳಿಗೆ ಇಂಧನ ದೊರೆಯದೆ ಇರುವುದರಿಂದ ರೈತರಿಗೆ ಸಮಸ್ಯೆಯಾಗಿದೆ.

ಕೃಷಿಕರು ಪೆಟ್ರೋಲ್ ಬಂಕ್‌ಗಳಲ್ಲಿ ನಮಗೆ ಕೃಷಿ ಉಪಯೋಗಕ್ಕೆ, ಸೂಕ್ತ ಕಾರಣ ನೀಡಿದರೂ ಕೂಡಾ ಡಿಸೇಲ್, ಪೆಟ್ರೋಲ್ ಕೊಡುತ್ತಿಲ್ಲ. ಕನಿಷ್ಠ ಒಂದೆರಡು ಲೀಟರ್ ಕೂಡಾ ಕೊಡುತ್ತಿಲ್ಲ. ಕೃಷಿಕರ ಪ್ರಮಾಣ ಪತ್ರ ನೀಡಿದರೂ ಡಿಸೇಲ್ ಪೆಟ್ರೋಲ್ ಸಿಗುತ್ತಿಲ್ಲ. ರೈತರು ಎಷ್ಟು ದುಂಬಾಲು ಬಿದ್ದರೂ ಕೂಡಾ ಇಂಧನ ಪಡೆಯಲು ಆಗುತ್ತಿಲ್ಲ. ಹಾಗಾಗಿ ಕೃಷಿಕರು ಸಮಸ್ಯೆಗೆ ಸಿಲುಕಿದ್ದಾರೆ. ಯಂತ್ರೋಪಕರಣಗಳ ಬಳಸುವ ತುರ್ತು ಅವಶ್ಯಕತೆ ಇರುತ್ತದೆ. ಆದರೆ ಅದಕ್ಕೆ ಇಂಧನ ಸಿಗದೆ ರೈತರು ಆತಂತ್ರರಾಗಿದ್ದಾರೆ.

ಏಪ್ರಿಲ್ ಮೇ ತಿಂಗಳಲ್ಲಿ ಕೃಷಿಗೆ ಹೆಚ್ಚಿನ ಪ್ರಮಾಣದ ನೀರು ಬೇಕಾಗುತ್ತದೆ. ಡಿಸೇಲ್, ಪೆಟ್ರೋಲ್ ಆಧರಿತ ಪಂಪ್ ಸೆಟ್ ಹೊಂದಿರುವ ರೈತರಿಗೆ ಪ್ರತೀ ವಾರಕ್ಕೆ ಸಾಕಷ್ಟು ಲೀಟರ್ ಇಂಧನ ಬೇಕಾಗುತ್ತದೆ. ಡಿಸೇಲ್ ಪಂಪ್‌ಸೆಟ್ ಹೊಂದಿರುವ ಅಡಿಕೆ ತೆಂಗು ಕೃಷಿಕರು ಈ ಬಾರಿ ದೊಡ್ಡ ಮಟ್ಟದ ಬೆಳೆ ನಷ್ಟ ಎದುರಿಸಲಿದ್ದಾರೆ. ಕೆಲವು ರೈತರು ಹೇಳುವ ಪ್ರಕಾರ ಔಷಧ ಸಿಂಪರಣೆ ಮಾಡಲು ಕೂಡಾ ಪೆಟ್ರೋಲ್ ಸಿಗುತ್ತಿಲ್ಲ. ಕನಿಷ್ಠ ಎರಡು ಮೂರು ಲೀಟರ್ ಪೆಟ್ರೋಲ್‌ನ್ನು ಕೂಡಾ ತಗೆದುಕೊಳ್ಳಲು ಆಗುತ್ತಿಲ್ಲ ಎನ್ನುತ್ತಾರೆ.

> **ರೈತಾಪಿ ವರ್ಗದ ಜನರು ಕೃಷಿ ಚಟುವಟಿಕೆಗಳಗಾಗಿ ಬಳಸುವ ಟ್ರ್ಯಾಕ್ಟರ್‌ಗಳು, ನೀರಾವರಿ ಪಂಪ್‌ಸೆಟ್‌ಗಳು, ಜನರೇಟರ್‌ಗಳು ಹಾಗೂ ಇತರೆ ಕೃಷಿ ಯಂತ್ರೋಪಕರಣಗಳಿಗೆ ಅಗತ್ಯವಿರುವ ಡೀಸೆಲ್ ಮತ್ತು ಪೆಟ್ರೋಲ್‌ನ್ನು ಈ ಹಿಂದಿನಿಂದಲೂ ಪೆಟ್ರೋಲ್ ಬಂಕ್‌ಗಳಲ್ಲಿ ಕ್ಯಾನ್‌ಗಳ ಮೂಲಕ ಪಡೆದುಕೊಂಡು ಬರುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಇಂಧನ ಕೊರತೆಯನ್ನು ನೆಪವನ್ನಾಗಿ ಮಾಡಿಕೊಂಡು ಹಲವಾರು ಪೆಟ್ರೋಲ್ ಬಂಕ್‌ಗಳು ರೈತರಿಗೆ ಕ್ಯಾನ್‌ಗಳಲ್ಲಿ ಡಿಸೆಲ್ ಮತ್ತು ಪೆಟ್ರೋಲ್ ನೀಡುವುದನ್ನು ನಿಲ್ಲಿಸಿದ್ದು, ಜಿಲ್ಲೆಯ ರೈತಾಪಿ ವರ್ಗದ ಜನರ ಕೃಷಿ ಆವಶ್ಯಕತೆಗಳನ್ನು ಪರಿಗಣಿಸಿ, ಪೆಟ್ರೋಲ್ ಮತ್ತು ಡಿಸೇಲ್‌ನ್ನು ಕ್ಯಾನ್‌ನಲ್ಲಿ ನೀಡಲು ಜಿಲ್ಲೆಯ ಎಲ್ಲಾ ಪೆಟ್ರೋಲ್ ಬಂಕ್ ಮಾಲಕರಿಗೆ ಸೂಕ್ತ ನಿರ್ದೇಶನ ನೀಡಬೇಕು**
>
> ■ **ಎ.ಕಿರಣ್ ಕುಮಾರ್ ಕೊಡ್ಗಿ,** ಶಾಸಕರು, ಕುಂದಾಪುರ

> **ಇನ್ನು ಮುಂಗಾರು ಸಮೀಪಿಸುತ್ತಿದೆ. ಭತ್ತದ ಬೇಸಾಯ ಆರಂಭವಾಗುತ್ತದೆ. ಟಿಲ್ಲರ್, ಟ್ರ್ಯಾಕ್ಟರ್, ನಾಟಿ ಯಂತ್ರಗಳಿಗೆ ಇಂಧನ ಬೇಕಾಗುತ್ತದೆ. ಇದೇ ರೀತಿ ಬಂಕ್‌ಗಳಲ್ಲಿ ಹಠ ಮುಂದುವರಿದರೆ ರೈತರು ಏನು ಮಾಡುವುದು? ಸರಕಾರ ಕೂಡಲೇ ಕೃಷಿ ಉಪಕರಣಗಳಿಗೆ ಡಿಸೇಲ್, ಪೆಟ್ರೋಲ್ ಕೊಡಲು ಸೂಚನೆ ನೀಡಬೇಕು**
>
> ■ **ನಾಗರಾಜ್ ವಂಡ್ಸೆ,** ಕೃಷಿಕರು.

ಇದು ಅವೈಜ್ಞಾನಿಕ ಕ್ರಮ

ಪೆಟ್ರೋಲ್, ಡಿಸೇಲ್ ಕೇವಲ ವಾಹನಗಳಿಗೆ ಮಾತ್ರ ಬಳಸುವುದಲ್ಲ. ವಾಹನಗಳಿಂತ ಹೆಚ್ಚು ಜೀವನಾವಶ್ಯಕ ಉದ್ದೇಶಗಳಿಗೆ ಬಳಸಲಾಗುತ್ತದೆ. ಇದನ್ನು ಸರಕಾರ, ಚುನಾಯಿತ ಪ್ರತಿನಿಧಿಗಳು ಅರ್ಥ ಮಾಡಿಕೊಳ್ಳಬೇಕು. ರೈತ ಸಂಘಟನೆಗಳು ರೈತರ ಹಿತಾಸಕ್ತಿಯ ವಿಚಾರದಲ್ಲಿ ಮುತುವರ್ಜಿ ವಹಿಸಬೇಕಾಗುತ್ತದೆ. ಸಂಬಂಧಪಟ್ಟವರ ಗಮನಕ್ಕೆ ತರುವ ಆವಶ್ಯಕತೆ ಇದೆ.

ಮುಳ್ಳೇರಿಯದಲ್ಲಿ ಜಗನ್ಮಾತಾ ಹಾಸ್ಪಿಟಲ್ ಶುಭಾರಂಭ

ಎಡನೀರುಶ್ರೀಗಳಿಂದ ಶುಭ ಹಾರೈಕೆ



• **ಮುಳ್ಳೇರಿಯ:** ರೋಗಿಗಳಿಗೆ ಉತ್ತಮ ರೀತಿಯಲ್ಲಿ ಚಿಕಿತ್ಸೆ ನೀಡಿ ಸಂಪೂರ್ಣವಾಗಿ ಗುಣಮುಖರಾದಾಗ ಆಸ್ಪತ್ರೆಯೊಂದಿಗಿನ ವಿಶ್ವಾಸ ಹೆಚ್ಚಾಗುತ್ತದೆ. ಈ ಮೂಲಕ ಸಂಸ್ಥೆಯು ಮತ್ತಷ್ಟು ಬೆಳಗುತ್ತದೆ ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಹೇಳಿದ್ದಾರೆ.

ಮುಳ್ಳೇರಿಯ ಪೇಟೆಯ ಹೃದಯ ಭಾಗದಲ್ಲಿ ಈ ಹಿಂದೆ ಕಾರ್ಯಾಚರಿಸುತ್ತಿದ್ದ ಕೃಷ್ಣ ಕ್ಲಿನಿಕ್ ಮತ್ತು ಹೆರಿಗೆ ಆಸ್ಪತ್ರೆಯು ವೈ.ಯು.ಜೆ. ಹೆಲ್ತ್‌ಕೇರ್ ಎಲ್.ಎಲ್.ಪಿ. ಇದರ ಅಂಗಸಂಸ್ಥೆಯಾಗಿ ಬದಲಾವಣೆಗೊಂಡು ಜಗನ್ಮಾತಾ ಹಾಸ್ಪಿಟಲ್ ಎಂಬ ಹೆಸರಿನೊಂದಿಗೆ ಜನರ ಸೇವೆಗೆ ಸಿದ್ಧವಾಗಿದ್ದು, ಈ ಸಂಸ್ಥೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಆಶೀರ್ವಚನ ನೀಡಿದರು.

ಈ ಹಿಂದೆ ಸಂಸ್ಥೆಯ ಮೇಲೆ ಜನರು ಇಟ್ಟಿರುವ ವಿಶ್ವಾಸದಿಂದಾಗಿ ಇದೀಗ ಉತ್ತಮ ಸುಸಜ್ಜಿತ ವ್ಯವಸ್ಥೆಯೊಂದಿಗೆ ಈ ಆಸ್ಪತ್ರೆಯು ಶುಭಾರಂಭಗೊಂಡಿದೆ. ಅತ್ಯಾಧುನಿಕ ಸೌಕರ್ಯಗಳ ಈ ಆಸ್ಪತ್ರೆಯು ಇನ್ನು ಮುಂದೆಯೂ ಉತ್ತಮ ರೀತಿಯಲ್ಲಿ ಇನ್ನಷ್ಟು ವಿಶ್ವಾಸಕ್ಕೆ ಅರ್ಹವಾದ ಶ್ರೇಷ್ಠ ಸಂಸ್ಥೆಯಾಗಿ ಅಭಿವೃದ್ಧಿ ಹೊಂದಲಿ ಎಂದು ಅವರು ಅನುಗ್ರಹಿಸಿದರು.

ಮಂಗಳೂರು ತೇಜಸ್ವಿನಿ ಆಸ್ಪತ್ರೆಯ ಮುಖ್ಯಸ್ಥ, ಖ್ಯಾತ ಎಲುಬು ತಜ್ಞ ಡಾ.ಎಂ.ಶಾಂತಾರಾಮ ಶೆಟ್ಟಿ ಉದ್ಘಾಟಿಸಿ ಶುಭಹಾರೈಸಿದರು. ಕಾರಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷೆ ಜನನಿ ಎಂ. ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್, ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ, ಉದುಮ ಶಾಸಕ ಕೆ.ನೀಲಕಂಠನ್, ಕ್ಯಾಂಪ್ಕೋ ಅಧ್ಯಕ್ಷ ಎಸ್.ಆರ್.ಸತೀಶ್ಚಂದ್ರ, ಆರ್‌ಎಸ್‌ಎಸ್ ಪ್ರಮುಖರಾದ ಕಜಂಪಾಡಿ ಸುಬ್ರಹ್ಮಣ್ಯ ಭಟ್, ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಮುಂತಾದವರು ಪಾಲ್ಗೊಂಡು ಶುಭಕೋರಿದರು.

ಕಾರಡ್ಕ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸಿ.ಬಾಲನ್, ಕಾರಡ್ಕ ಗ್ರಾಮ ಪಂಚಾಯತ್ ಸದಸ್ಯೆ ವಸಂತಿ, ಕೆವಿವಿಇಎಸ್ ಮುಳ್ಳೇರಿಯ ಘಟಕದ ಅಧ್ಯಕ್ಷ ಗಣೇಶ ವತ್ಸ ಮೊದಲಾದವರು ಅತಿಥಿಗಳಾಗಿ ಉಪಸ್ಥಿತರಿದ್ದರು.

ಮುಳಿಯಸ್ ಟೈಮ್ ಝೋನ್ ವಾಚ್ ಕೌಂಟರ್ ಶುಭಾರಂಭ

ಹೆಮ್ಮೆಯ ಬ್ರ್ಯಾಂಡ್‌ನ ಹೊಸ ಹೆಜ್ಜೆ



• **ಪುತ್ತೂರು:** ಪ್ರತಿಷ್ಠಿತ ಚಿನ್ನಾಭರಣ ಮಳಿಗೆ ಮುಳಿಯ ಗೋಲ್ಡ್ ಅಂಡ್ ಡೈಮಂಡ್ಸ್ ಪುತ್ತೂರು ಕೋರ್ಟ್‌ರೋಡ್‌ನಲ್ಲಿ ನೂತನವಾಗಿ ಆರಂಭಗೊಂಡ ಮುಳಿಯಾಸ್ ಟೈಮ್ ಝೋನ್ ವಾಚ್ ಕೌಂಟರ್ ಮೇ 28 ರಂದು ಶುಭಾರಂಭಗೊಂಡಿತು.

ಮುಖ್ಯ ಅತಿಥಿಯಾಗಿದ್ದ ಪುತ್ತೂರು ಕೋಟಿ-ಚೆನ್ನಯ ಜೋಡುಕರೆ ಕಂಬಳ ಸಮಿತಿ ಅಧ್ಯಕ್ಷ ಎನ್. ಚಂದ್ರಹಾಸ ಶೆಟ್ಟಿ ಮಾತನಾಡಿ, ಮುಳಿಯ ಚಿನ್ನಾಭರಣ ಮಳಿಗೆಯು ನಮ್ಮೆಲ್ಲರ ಹೆಮ್ಮೆಯ ಬ್ರಾಂಡ್ ಆಗಿದ್ದು, ಪುತ್ತೂರು ಕಂಬಳದ ಪ್ರಾರಂಭದಿಂದಲೂ ಬಹುಮಾನವಾಗಿ 1 ಪವನ್ ಚಿನ್ನ ನೀಡುತ್ತಾ ಕಂಬಳ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡುವ ಜತೆಗೆ ಪುತ್ತೂರಿನ ಎಲ್ಲಾ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮುಳಿಯ ಸಂಸ್ಥೆ ಕೊಡುಗೆ ಅಪಾರವಾಗಿದೆ. ಹೀಗಾಗಿ ಪುತ್ತೂರಿನ ಜನತೆಗೆ ಸಂಸ್ಥೆಯ ಮೇಲೆ ವಿಶೇಷ ಅಭಿಮಾನವಿದ್ದು, ಸಂಸ್ಥೆಯು ಕರ್ನಾಟಕದ ಜತೆಗೆ ಹೊರರಾಜ್ಯಗಳಿಗೂ ವಿಸ್ತರಿಸುವಂತಾಗಲಿ ಎಂದರು.

ಪುತ್ತೂರು ಮಹಾವೀರ ಮೆಡಿಕಲ್ ಸೆಂಟರ್‌ನ ಕಣ್ಣಿನ ತಜ್ಞೆ ಡಾ. ಆಶಾ ಪುತ್ತೂರಾಯ ಮಾತನಾಡಿ, ಪ್ರತಿಯೊಬ್ಬರ ಜೀವನದಲ್ಲಿಸಮಯದಮೌಲ್ಯದಅರಿವು ಅಗತ್ಯವಾಗಿದ್ದು, ಅಂತಹ ಸಮಯವನ್ನು ತೋರಿಸುವ ಕಾರ್ಯವನ್ನು ವಾಚ್ ಮಾಡುತ್ತಿರುವುದರಿಂದ ಪ್ರತಿಯೊಬ್ಬರೂ ಅದನ್ನು ಇಷ್ಟಪಡುತ್ತಾರೆ. ಅಂತಹ ವಾಚ್‌ಗಳ ಕೌಂಟರ್ ಮುಳಿಯ ಸಂಸ್ಥೆ ತೆರೆಯುತ್ತಿರುವುದು ಸಂತೋಷದ ವಿಚಾರವಾಗಿದೆ ಎಂದರು.

ಸಂಸ್ಥೆಯ ಆಡಳಿತ ನಿರ್ದೇಶಕ ಕೃಷ್ಣನಾರಾಯಣ ಮುಳಿಯ ಪ್ರಸ್ತಾವನೆಗೈದು, ಗ್ರಾಹಕರ ವಿಶ್ವಸನೀಯ ಆಭರಣ ಮಳಿಗೆಯಾಗಿರುವ ಮುಳಿಯವು 82 ವರ್ಷಗಳ ಸುದೀರ್ಘ ಅನುಭವದೊಂದಿಗೆ ಕರಾರುವಕ್ಕಾದ ಶುದ್ಧತೆ, ವಿನ್ಯಾಸ, ಗ್ರಾಹಕ ಸ್ನೇಹಿ ಮಳಿಗೆಯ ಮೂಲಕ ಎಲ್ಲರ ಪ್ರೀತಿ-ವಿಶ್ವಾಸವನ್ನು ಗಳಿಸಿಕೊಂಡಿದೆ. ಪುತ್ತೂರು ಮಳಿಗೆಯಲ್ಲಿ ಪ್ರಸ್ತುತ ಹೊಸದಾಗಿ ವಾಚ್ ಕೌಂಟರ್ ಪ್ರಾರಂಭಿಸಲಾಗುತ್ತಿದ್ದು, ಪ್ರತಿಷ್ಠಿತ ಟೈಟಾನ್ ಬ್ರಾಂಡ್ ಜತೆಗೆ ನೆಬುಲಾ ಗೋಲ್ಡ್ ವಾಚ್‌ಗಳು ಕೂಡ ಗ್ರಾಹಕರಿಗೆ ಲಭ್ಯವಾಗಲಿದೆ ಎಂದರು.

ಅತಿಥಿಗಳು ನೆಬುಲಾ ಗೋಲ್ಡ್ ವಾಚ್ ಅನಾವರಣ ಗೊಳಿಸಿದರು. ಸಂಸ್ಥೆಯ ನಿರ್ದೇಶಕಿ ಅಶ್ವಿನಿ ಕೃಷ್ಣನಾರಾಯಣ ಮುಳಿಯ, ಪುತ್ತೂರು ಶಾಖಾ ಪ್ರಬಂಧಕ ರಾಘವೇಂದ್ರ ಪಾಟೀಲ್ ವೇದಿಕೆಯಲ್ಲಿದ್ದರು. ಪುತ್ತೂರು ಮಾನಸ ಟೈಮ್ಸ್‌ನ ಕೇಶವಮೂರ್ತಿ ಅವರನ್ನು ಸನ್ಮಾನಿಸಲಾಯಿತು.

ಪುತ್ತೂರು ಮಳಿಗೆಯ ಸಿಬಂದಿ ಹರೀಶ್ ಸ್ವಾಗತಿಸಿ, ರಾಜೇಶ್ ಜಿ. ವಂದಿಸಿದರು. ಮೃದುಲಾ ನಿರೂಪಿಸಿದರು.

ಉಡುಪಿಯ ಆಂಡ್ರೆಡ್ ಆರ್ಕೇಡ್‌ನ ಮೊದಲ ಮಹಡಿಯಲ್ಲಿ ಮೆಡಿಕ್ವೆಸ್ಟ್ ಹೆಲ್ತ್ ಕೇರ್ ಪ್ರಯೋಗಾಲಯ ಲೋಕಾರ್ಪಣೆ

ಆರೋಗ್ಯ ಕ್ಷೇತ್ರದಲ್ಲೂ ಈಗ ಅತ್ಯುತ್ತಮ ಖ್ಯಾತಿ: ಪೇಜಾವರ ಶ್ರೀ

• **ಉಡುಪಿ:** ಉಡುಪಿ ಈಗಾಗಲೇ ಬ್ಯಾಂಕಿಂಗ್, ಕಲೆ, ಆಧ್ಯಾತ್ಮಿಕ, ಶೈಕ್ಷಣಿಕ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ತನ್ನದೇ ಛಾಪು ಮೂಡಿಸಿದೆ. ಆರೋಗ್ಯ ಕ್ಷೇತ್ರದಲ್ಲೂ ಅತ್ಯುತ್ತಮ ಖ್ಯಾತಿ ಗಳಿಸಿದ್ದು, ಆ ಸಾಲಿನಲ್ಲಿ ಮೆಡಿಕ್ವೆಸ್ಟ್ ಹೆಲ್ತ್ ಕೇರ್ ಕೂಡ ಸೇರುವಂತಾಗಲಿ ಎಂದು ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟರು.

ಉಡುಪಿಯ ಕೆಎಂ ಮಾರ್ಗದ ಆಂಡ್ರೆಡ್ ಆರ್ಕೇಡ್‌ನ ಮೊದಲ ಮಹಡಿಯಲ್ಲಿ ನೂತನವಾಗಿ ಆರಂಭವಾದ ಮೆಡಿಕ್ವೆಸ್ಟ್ ಹೆಲ್ತ್ ಕೇರ್ ಪ್ರಯೋಗಾಲಯವನ್ನು ಲೋಕಾರ್ಪಣೆಗೊಳಿಸಿ ಆಶೀರ್ವಚನ ನೀಡಿದರು.

ಕೆಲ ವರ್ಷಗಳ ಹಿಂದೆ ರೋಗದ ಮೂಲ ತಿಳಿಯಲು ನೆಲ್ಲೂರು, ಮುಂಬೈ, ಬೆಂಗಳೂರು ಮೊದಲಾದೆಡೆಗೆ ಹೋಗಬೇಕಿತ್ತು. ಆದರೆ ಇಂದು ಆ ಪರಿಸ್ಥಿತಿ ಇಲ್ಲ ಎಂದರು. ಇಂದು ಆರಂಭವಾದ ಈ ಪ್ರಯೋಗಾಲಯದ ಬೆಳವಣಿಗೆಯಲ್ಲಿ ಕೃಷ್ಣಾನುಗ್ರಹವಿರಲಿ ಎಂದು ಹಾರೈಸಿದರು.



ಈ ಸಂದರ್ಭದಲ್ಲಿ ಶಾಸಕರಾದ ಯಶ್‌ಪಾಲ್ ಸುವರ್ಣ, ಗುರ್ಮೆ ಸುರೇಶ್ ಶೆಟ್ಟಿ, ನಗರಸಭೆ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ಜ್ಯೋತಿಷಿ ವಿದ್ವಾನ್ ಕಬ್ಯಾಡಿ ಜಯರಾಮ ಆಚಾರ್ಯ ಶುಭಕೋರಿದರು.

ಪ್ರಸಾದ್ ನೇತ್ರಾಲಯದ ಎಂಡಿ ನಾಡೋಜ ಕೃಷ್ಣಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಮೆಡಿಕ್ವೆಸ್ಟ್ ಹೆಲ್ತ್ ಕೇರ್ ಎಂಡಿ ರಾಘವೇಂದ್ರ ಗಂಗೊಳ್ಳಿ, ವಕೀಲ ಉಮೇಶ್ ಶೆಟ್ಟಿ ಕಳತ್ತೂರು, ಕಾಂಗ್ರೆಸ್ ಮುಖಂಡ ಪ್ರಕಾಶ್, ನಿವೃತ್ತ ಡಿಎಫ್ ಒ ರಘುರಾಮ್, ಕಟ್ಟಡದ ಮಾಲಕ ಡೊಮಿನಿಕ್ ಮಸ್ಕರೇನಸ್ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು. ಐಸಿರಿ, ರಾಧಿಕ ಪ್ರಾರ್ಥಿಸಿದರು. ಎಂಡಿ ರೀನಾ ಟಿ.ಬಿ ಸ್ವಾಗತಿಸಿದರು. ಪ್ರೊ. ಬಾಲಕೃಷ್ಣಮದ್ದೋಡಿ ಕಾರ್ಯಕ್ರಮ ನಿರೂಪಿಸಿದರು. ಪ್ರಸಾದ್ ನೇತ್ರಾಲಯದ ಆಡಳಿತಾಧಿಕಾರಿ ಮಧ್ವವಲ್ಲಭ ಆಚಾರ್ಯ ವಂದಿಸಿದರು.

ವಿಶೇಷತೆಗಳು

ಮೆಡಿಕ್ವೆಸ್ಟ್ ಹೆಲ್ತ್ ಕೇರ್ ನವೆಂಬರ್ 2020 ರಲ್ಲಿ ಒಂದು ಪ್ರಯೋಗಾಲಯವಾಗಿ ಆರಂಭಗೊಂಡಿದೆ. 9 ಮಧ್ಯಮ ಗಾತ್ರದ ಪ್ರಯೋಗಾಲಯ ಮತ್ತು 16 ಸಂಗ್ರಹಣಾ ಕೇಂದ್ರಗಳನ್ನು ಹೊಂದಿದ್ದು, ಒಟ್ಟು 25 ಶಾಖೆಗಳನ್ನು ಹೊಂದಿದೆ. ಮೆಡಿಕ್ವೆಸ್ಟ್ ಹೆಲ್ತ್‌ಕೇರ್ ಮಂಗಳೂರು ಎನ್‌ಎಬಿಎಲ್ ಪ್ರಮಾಣೀಕೃತ ಪ್ರಯೋಗಾಲಯವಾಗಿದ್ದು, ಭಾರತಾದ್ಯಂತ ವಿಸ್ತರಣಾ ಯೋಜನೆಯನ್ನು ಹೊಂದಿದೆ.

ಈ ಪ್ರಯೋಗಾಲಯವು ರೋಚೆ, ಮೆರಿಲ್ ಮತ್ತು ಮೈಂಡ್ರೆಯಂತಹ ವಿಶ್ವದರ್ಜೆಯ ವಿಶ್ಲೇಷಕಗಳನ್ನು ಹೊಂದಿದೆ. ಎಲ್ಲಾ ಪರೀಕ್ಷಾ ವರದಿಗಳನ್ನು ಎಂ.ಡಿ ಪೆಥಾಲಜಿ, ಬಯೋಕೆಮಿಸ್ಟ್, ಮೈಕ್ರೋಬಯಾಲಜಿಸ್ಟ್ ವೈದ್ಯರು ವಿಶ್ಲೇಷಿಸುತ್ತಾರೆ. ನೂತನ ಪ್ರಯೋಗಾಲಯವು ಅರ್ಹ, ತರಬೇತಿ ಪಡೆದ ತಂತಜ್ಞರಿಂದ ಕೂಡಿರುತ್ತದೆ. ಎಲ್ಲಾ ವರದಿಗಳು ಯಂತ್ರಗಳಿಂದ ಸ್ವಯಂ ಚಾಲಿತವಾಗಿ ಕನಿಷ್ಠ ಮಾನವ ಹಸ್ತಕ್ಷೇಪದಿಂದ ಕೂಡಿರುತ್ತದೆ.



ಕಿರುಸುದ್ದಿ

ಕರ್ನಾಟಕಕ್ಕೆ ಮತ್ತೆ 3 ಪದಕ



• **ಬೆಂಗಳೂರು:** ಮೂರುದಿನಗಳ ಕಾಲ ನಡೆದ ಇಂಡಿಯನ್ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಕೂಟದ ಕೊನೆ ದಿನ ಕರ್ನಾಟಕ ಮತ್ತೆ ಮೂರುಪದಕ ಗೆದ್ದಿತು. ಇದರೊಂದಿಗೆ ಕೂಟದಲ್ಲಿ ಒಟ್ಟು 21 ಪದಕ ಗೆದ್ದಿರುವ ಕರ್ನಾಟಕ ಅಥ್ಲೆಟಿಕ್ಸ್ ಕೂಟದಲ್ಲಿ ಪ್ರಾಬಲ್ಯ ಸಾಧಿಸಿದೆ. ಪ್ರತಿಷ್ಠಿತ 8ನೇ ಅಂತಾರಾಷ್ಟ್ರೀಯ ಅಥ್ಲೆಟಿಕ್ಸ್ ಕೂಟಕ್ಕೆ ಆತಿಥ್ಯ ವಹಿಸಿದ ಕರ್ನಾಟಕ ಆಟದಲ್ಲಿ ಮತ್ತು ಅಚ್ಚುಕಟ್ಟಾದ ಆಯೋಜನೆಯಲ್ಲಿ ಗೆದ್ದಿದೆ. ಮೊದಲನೇ ದಿನ 9 ಪದಕ ಗೆದ್ದಿದ್ದ ಕನ್ನಡಿಗರು, ಎರಡನೇ ದಿನವೂ 9 ಪದಕಗಳನ್ನು ಗೆದ್ದಿದ್ದರು, ಮೂರನೇ ದಿನ ಅಂದರೆ ಗುರುವಾರದಂದು ಮತ್ತೆ 3 ಪದಕಗಳನ್ನು ಗೆದ್ದಿದ್ದಾರೆ. ಪುರುಷರ 500ಮೀ. ಟಿ12 ಓಟದಲ್ಲಿ ಶರತ್ ಮಕನಹಳ್ಳಿ ಬೆಳ್ಳಿ ಪದಕ ಗೆದ್ದರು. 16:12.60 ಸಮಯದಲ್ಲಿ ಗುರಿ ಕ್ರಮಿಸಿದ ಅವರು, ಸೌರಭ್ ಶರ್ಮ ಅವರ ಹಿಂದಿದ್ದರು. ಮೂರನೇ ಸ್ಥಾನವನ್ನು ನಾಗೇಂದ್ರ ಸಿಂಗ್ ಅವರು ಪಡೆದುಕೊಂಡರು. ಪುರುಷರ ಟಿ–63 ಲಾಂಗ್ ಜಂಪ್ ವಿಭಾಗದಲ್ಲಿ ರಕ್ಷಿತ್ ಸೋಮಶೇಖರ ಕಂಚಿನ ಪದಕ ಗೆದ್ದುಕೊಂಡರು. 5.01 ಮೀ. ದೂರ ಜಿಗಿದ ಅವರು, ಕಾಂತಿನಾನ್ 5.32, ಮಹೇಂದ್ರ 5.74ಮೀ. ಹಿಂದಿದ್ದರು.

ಬ್ಯಾಡ್ಮಿಂಟನ್: ಕ್ವಾರ್ಟರ್ ಫೈನಲ್‌ಗೆ ಸಿಂಧು

• **ಸಿಂಗಾಪುರ:** ಇಲ್ಲಿ ನಡೆಯುತ್ತಿರುವ ಸಿಂಗಾಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಮೆಂಟ್‌ನ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಅವಳಿ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ನೇರ ಗೇಮ್‌ಗಳ ಗೆಲುವಿನೊಂದಿಗೆ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದರು. ಸಿಂಧು ಕೇವಲ 37 ನಿಮಿಷಗಳಲ್ಲಿ ಜಪಾನ್‌ನ ರಿಕೊ ಗುಂಜಿ ಅವರನ್ನು ಎರಡನೇ ಸುತ್ತಿನ ಪಂದ್ಯದಲ್ಲಿ 21–9, 21–12 ಅಂತರದಿಂದ ಸೋಲಿಸಿದರು. ಆದರೆ ಕೊನೆಯ ಎಂಟನೇ ಸುತ್ತಿನಲ್ಲಿ ಅಗ್ರ ಶ್ರೇಯಾಂಕಿತ ಕೊರಿಯಾದ ಆನ್ ಸೆ ಯಂಗ್ ವಿರುದ್ಧ ಸಿಂಧು ಸೆಣಸಲಿದ್ದಾರೆ. ನಾಲ್ಕನೇ ಶ್ರೇಯಾಂಕಿತ ಭಾರತೀಯ ಪುರುಷರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಕೂಡ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದರು. ತೈವಾನ್ ಜೋಡಿಯಾದ ಲೀ ಜೆ–ಹುಯಿ ಮತ್ತು ಯಾಂಗ್ ಪೊ–ಹ್ಸುವಾನ್ ಅವರನ್ನು 21–15, 11–21, 21–18 ಅಂತರದಿಂದ ಸೋಲಿಸಿದರು. ಸಾತ್ವಿಕ್ ಮತ್ತು ಚಿರಾಗ್ ಮುಂದಿನ ಸುತ್ತಿನಲ್ಲಿ ಮಲೇಷ್ಯಾದ ಖೈ ಕ್ಸಿಂಗ್ ಕಾಂಗ್ ಮತ್ತು ಆರನ್ ಟೈ ಅವರನ್ನು ಎದುರಿಸಲಿದ್ದಾರೆ. ಭಾರತದ ಮಿಶ್ರ ಡಬಲ್ಸ್ ಜೋಡಿ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಕೂಡ ಜಪಾನಿನ ಯುಟಾ ವಟನಾಬೆ ಮತ್ತು ಮಾಯಾ ಟಾಗುಚಿ ಅವರನ್ನು 8–21, 21–17, 21–16 ಸೆಟ್‌ಗಳಿಂದ ಸೋಲಿಸಿ ಕ್ವಾರ್ಟರ್ ಫೈನಲ್‌ಗೆ ತಲುಪಿದ್ದಾರೆ.

ಮಹಿಳಾ ವಿಶ್ವಕಪ್‌ಗೆ 4 ಭಾರತೀಯ ನಿರ್ಣಾಯಕರು

• **ಲಂಡನ್:** ಭಾರತದ ಜಿ. ಎಸ್. ಲಕ್ಷ್ಮಿ ರೆಫ್ರಿಯಾಗಿ ಮತ್ತು ಇನ್ನೂ ಮೂರು ಜನ ಅಂಪೈರ್‌ಗಳನ್ನಾಗಿ ಒಟ್ಟು ನಾಲ್ವರು ಭಾರತೀಯರನ್ನು ಮುಂದಿನ ತಿಂಗಳಿನಿಂದ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್ ಪಂದ್ಯಾವಳಿಯ ಮ್ಯಾಚ್ ಆಫಿಷಿಯಲ್‌ಗಳಾಗಿ ನೇಮಿಸಲಾಗಿದೆ. ಇಂಗ್ಲೆಂಡಿನಲ್ಲಿ ನಡೆಯಲಿರುವ ಪಂದ್ಯಾವಳಿಯ ನಿರ್ಣಾಯಕರ ಮತ್ತು ರೆಫ್ರಿಗಳ 18 ಜನರ ಪಟ್ಟಿಯನ್ನು ಐಸಿಸಿ ಬಿಡುಗಡೆ ಮಾಡಿದೆ. ಇದರಲ್ಲಿ 4 ಭಾರತೀಯರು ಇರಲಿದ್ದಾರೆ. ಈ ಹಿಂದೆ ಎಲ್ಲಾ ಮಹಿಳಾ ಪಂದ್ಯಗಳಿಗೆ ಮಹಿಳೆಯರೇ ಮ್ಯಾಚ್ ಆಫಿಷಿಯಲ್‌ಗಳಾಗಬೇಕೆಂಬ ಘೋಷಣೆಯೂ ಆಗಿದೆ. ಕ್ಯಾಂಡೇಸ್ ಲಾ ಬೋರ್ಡೆ, ಗಾಯತ್ರಿ ವೇಣುಗೋಪಾಲನ್, ಕೆರ್ರಿನ್ ಕ್ಲಾಸ್ಟೆ ಮತ್ತು ಶಥಿರಾ ಜಾಕಿರ್ ಜೆಸಿ ಅವರು ಟೂರ್ನಮೆಂಟ್‌ಗೆ ಪಾದಾರ್ಪಣೆ ಮಾಡಲಿದ್ದಾರೆ. ವೃಂದಾ ರಾಥಿ ಮತ್ತು ಜನನಿ ಎನ್. ಫೀಲ್ಡ್ ನಿರ್ಣಾಯಕರಾಗಿ ಆಯ್ಕೆಯಾಗಿದ್ದಾರೆ. 33 ಪಂದ್ಯಗಳಿಗಾಗಿ 14 ಅಂಪೈರ್‌ಗಳು, 4 ಮ್ಯಾಚ್ ರೆಫ್ರಿಗಳ ಪಟ್ಟಿಯನ್ನು ನಾವು ಬಿಡುಗಡೆ ಮಾಡುತ್ತೇವೆ. ಪಂದ್ಯಾವಳಿ ಸ್ಪಷ್ಟ ಮತ್ತು ಸುಗಮವಾಗಿ ನಡೆಯಲೆಂದು ನಾವು ಆಶಿಸುತ್ತೇವೆ ಎಂದು ಐಸಿಸಿ ತಿಳಿಸಿದೆ.

ಕ್ವಾಲಿಫೈಯರ್–2 | ಗುಜರಾತ್–ರಾಜಸ್ಥಾನ ಮುಖಾಮುಖಿ | ಸೋತವರು ಮನೆಗೆ

ಫೈನಲ್‌ನಲ್ಲಿ ಬೆಂಗಳೂರು VS ?



• **ಚಂಡೀಗಢ:** ಇಂಡಿಯನ್ ಪ್ರೀಮಿಯರ್ ಲೀಗ್ ಕೊನೆ ಹಂತಕ್ಕೆ ಬಂದಿದ್ದು, ಫೈನಲಿಸ್ಟ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಸೆಣಸುವವರಾರು ಎಂಬ ಪ್ರಶ್ನೆಗೆ ಶುಕ್ರವಾರ ಉತ್ತರ ಸಿಗಲಿದೆ.

ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮಣಿಸಿರುವ ರಾಜಸ್ಥಾನ ಮತ್ತು ಬೆಂಗಳೂರು ತಂಡದೊಂದಿಗೆ ಸೋತಿರುವ ಗುಜರಾತ್ ತಂಡಗಳು ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಗೆದ್ದವರು ಫೈನಲ್ ಗೇರಲಿದ್ದರೆ ಸೋತವರ ಅಭಿಯಾನಕ್ಕೆ ಶುಕ್ರವಾರ ತೆರೆ ಬೀಳಲಿದೆ. ಐಪಿಎಲ್ ಮಾದರಿಯ ಪ್ರಕಾರ ಮೊದಲೆರಡು ಸ್ಥಾನಗಳನ್ನು ಬೆಂಗಳೂರು ಮತ್ತು ಗುಜರಾತ್ ತಂಡಗಳು ಪಡೆದುಕೊಂಡರೆ, ಎರಡನೇ ಹಾಗೂ ಮೂರನೇ ಸ್ಥಾನಗಳನ್ನು ಹೈದರಾಬಾದ್ ಮತ್ತು ರಾಜಸ್ಥಾನ ತಂಡಗಳು ಪಡೆದಿದ್ದವು. ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಆರ್‌ಸಿಬಿ ಮತ್ತು ಗುಜರಾತ್ ಎದುರಾಗಿದ್ದವು. ಆ ಪಂದ್ಯದಲ್ಲಿ ಪಾಟಿದಾರ್ ಪಡೆ ಗೆಲುವು ಸಾಧಿಸಿ ಫೈನಲ್‌ಗೇರಿದೆ. ಮೂರು ಮತ್ತು ನಾಲ್ಕನೇ ಸ್ಥಾನಗಳಲ್ಲಿದ್ದ ಹೈದರಾಬಾದ್ ಮತ್ತು ರಾಜಸ್ಥಾನ ತಂಡಗಳು ಕ್ವಾಲಿಫೈಯರ್ 2 ಅರ್ಹತೆಗಾಗಿ ಬುಧವಾರದ ಪಂದ್ಯದಲ್ಲಿ ಎದುರಾಗಿದ್ದವು. ಈ ಪಂದ್ಯದಲ್ಲಿ ಗೆಲುವು ಸಾಧಿಸಿರುವ ರಾಜಸ್ಥಾನ ಮತ್ತು ಕ್ವಾಲಿಫೈಯರ್‌ನಲ್ಲಿ ಸೋತಿರುವ ಗುಜರಾತ್ ತಂಡಗಳು ಶುಕ್ರವಾರ ಎದುರಾಗಲಿವೆ.

ಮಳೆ ಸಾಧ್ಯತೆ

ಹೊಸ ಚಂಡೀಗಢದಲ್ಲಿ ಪಂದ್ಯ ನಡೆಯಲಿದೆ. ಹಾಲಿ ರನ್ನರ್–ಅಪ್ ಪಂಜಾಬ್ ಕಿಂಗ್ಸ್ ತಂಡದ ತವರಾಗಿದ್ದು ಬ್ಯಾಟಿಂಗ್ ಪಿಚ್ ಅನ್ನುವ ಹೆಸರೂ ಪಡೆದಿದೆ. ಹೆಚ್ಚಿನ ಬೌನ್ಸ್, ಫ್ಲಾಟ್ ಪಿಚ್ ಮತ್ತು ಹತ್ತಿರದ ಬೌಂಡರಿ ಬ್ಯಾಟರ್‌ಗಳಿಗೆ ಲಾಭ ತಂದಿವೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಕೂಡ ಇರಬಹುದು. ಹವಾಮಾನ ಇಲಾಖೆ ಆಲಿಕಲ್ಲು ಮಳೆಯಾಗುವ ಸಾಧ್ಯತೆ ಇದೆ ಎಂದು ಹೇಳಿದೆ. ಒಂದು ವೇಳೆ ರದ್ದಾದರೆ ಗುಜರಾತ್ ಫೈನಲ್ ತಲುಪಲಿದೆ.



ಮುಖಾಮುಖಿ

ಎದುರು	ಗುಜರಾತ್	ರಾಜಸ್ಥಾನ
10	7	3

ಪಂದ್ಯದ ವಿವರ

ಯಾವಾಗ: ಶುಕ್ರವಾರ, ಎಲ್ಲಿ: ಚಂಡೀಗಢ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಗುಜರಾತ್ ಆಟ

ಇತ್ತ ಶುಭಮನ್ ಗಿಲ್ ನೇತೃತ್ವದ ಗುಜರಾತ್ ಟೈಟಾನ್ಸ್ ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡುತ್ತಾ ಬಂದಿದೆ. ಹಿಂದಿನ ಪಂದ್ಯದಲ್ಲಿ ಬೆಂಗಳೂರು ವಿರುದ್ಧ ಸೋತಿದ್ದಾದರೂ, ಗೆಲುವಿನ ನಾಗಾಲೋಟದ ಹಿನ್ನೆಲೆ ತಂಡ ಹೊಂದಿದೆ. ಸಾಯಿ ಸುದರ್ಶನ್ ಅವರ ಕನ್ಸಿಸ್ಟನ್ಸಿ, ಗಿಲ್ ಅವರ ಸಮಯೋಚಿತ ಬ್ಯಾಟಿಂಗ್ ಮತ್ತು ಬಟ್ಲರ್ ಅವರ ಆಕ್ರಮಣಕಾರಿ ಮನಸ್ಥಿತಿ ತಂಡಕ್ಕೆ ದೊಡ್ಡ ಬಲ ನೀಡಿದೆ. ವಾಷಿಂಗ್ಟನ್ ಸುಂದರ್ ಅಂತಹ ಆಲ್‌ರೌಂಡರ್‌ಗಳು ತಂಡದಲ್ಲಿದ್ದಾರೆ. ಹೊಸ ಆಟಗಾರನಾದ ನಿಶಾಂತ್ ಸಿಂಧು ಕೂಡ ತಂಡದಲ್ಲಿ ನಿರಂತರವಾಗಿ ಕಾಣಿಸಿಕೊಂಡಿದ್ದಾರೆ. ಕಳೆದ ಪಂದ್ಯದಲ್ಲಿ ಹೀನಾಯ ಸೋಲು ಕಂಡರೂ, ಮಧ್ಯಮ ಕ್ರಮಾಂಕಿತ ಬ್ಯಾಟರ್ ರಾಹುಲ್ ಟೇವಾಟಿಯ ಮಿಂಚಿರುವುದು ತಂಡಕ್ಕಿರುವ ಮತ್ತೊಂದು ಬಲ. ಬೌಲಿಂಗ್ ವಿಚಾರದಲ್ಲಿ ಗುಜರಾತ್ ಶಕ್ತಿಶಾಲಿ ಪಡೆಯನ್ನು ಹೊಂದಿದೆ. ಹಿಂದಿನ ಪಂದ್ಯದಲ್ಲಿ ಎಲ್ಲರೂ ದುಬಾರಿಯಾದರೂ ತಂಡದಲ್ಲಿ ಅನುಭವವಿದೆ. ಹೋಲ್ಡರ್, ರಬಾಡ, ಸಿರಾಜ್, ಕೃಷ್ಣ ಮತ್ತು ರಶೀದ್ ತಂಡದಲ್ಲಿದ್ದಾರೆ. ಹೆಚ್ಚುವರಿ ಸ್ಪಿನ್ನರ್ ಆಗಿ ವಾಷಿ ಕೂಡ ಬೌಲಿಂಗ್ ಮಾಡುವ ಸಾಮರ್ಥ್ಯ ಹೊಂದಿದ್ದಾರೆ.

ಕೀ ಪ್ಲೇಯರ್ಸ್

ಬ್ಯಾಟಿಂಗ್
- ಸಾಯಿ ಸುದರ್ಶನ್: 652
- ಶುಭಮನ್ ಗಿಲ್: 618 ರನ್
- ಜಾಸ್ ಬಟ್ಲರ್: 498 ರನ್
- ವಾಷಿಂಗ್ಟನ್ ಸುಂದರ್: 311 ರನ್

ಬೌಲಿಂಗ್
- ಕಾಗಿಸೋ ರಬಾಡ: 26 ವಿಕೆಟ್
- ರಶೀದ್ ಖಾನ್: 19 ವಿಕೆಟ್
- ಮೊಹ್ಮದ್ ಸಿರಾಜ್: 17 ವಿಕೆಟ್
- ಜೇಸನ್ ಹೋಲ್ಡರ್: 15 ವಿಕೆಟ್

ಕೂಟದಲ್ಲಿ ಪ್ರದರ್ಶನ

ಪಂದ್ಯ	ಗೆಲುವು	ಸೋಲು
15	9	6

ಕಡೆ ಪಂದ್ಯದ ಫಲಿತಾಂಶ: ಬೆಂಗಳೂರು ವಿರುದ್ಧ 92 ರನ್‌ಗಳ ಸೋಲು

ರಾಜಸ್ಥಾನ ಗೆಲುವಿನೋಟ

ಪಂದ್ಯಾವಳಿಯ ಆರಂಭಕ್ಕೂ ಮುನ್ನ ಸಂಜು ಸ್ಯಾಮ್ಸನ್ ಅಂಥ ಪ್ರಮುಖ ಆಟಗಾರರನ್ನು ಬಿಟ್ಟುಕೊಟ್ಟಿದ್ದ ರಾಜಸ್ಥಾನ ರಾಯಲ್ಸ್ ಜಡೇಜಾ ಅವರನ್ನು ಟ್ರೇಡ್ ಮಾಡಿಕೊಂಡಿತ್ತು. ವೈಭವ್ ಸೂರ್ಯವಂಶಿ, ಯಶಸ್ವಿ ಜೈಸ್ವಾಲ್, ರವೀಂದ್ರ ಜಡೇಜಾ ಅವರೊಂದಿಗೆ ಮಿಂಚಬೇಕಿತ್ತು. ಈ ಸಮಯದಲ್ಲಿ ನಾಯಕತ್ವದ ಬದಲಾವಣೆ, ಇದೇ ಮೊದಲ ಬಾರಿಗೆ ರಿಯಾನ್ ಪರಾಗ್ ಅವರಿಗೆ ಸಂಪೂರ್ಣ ನಾಯಕತ್ವ ನೀಡಲಾಗಿತ್ತು. ಆರಂಭಿಕ ಪಂದ್ಯದಲ್ಲಿ ಚೆನ್ನೈ ತಂಡವನ್ನು ಎದುರಿಸಿದ ಆರ್‌ಆರ್ ಗೆಲುವಿನ ಆರಂಭ ಮಾಡಿತು. ಮುಂದೆ ಗೆಲುವಿನ ಹಾದಿಯಲ್ಲೇ ನಡೆಯಿತು. 15 ವರ್ಷದ ವೈಭವ್ ಸೂರ್ಯವಂಶಿ ತಮ್ಮ ಬ್ಯಾಟಿಂಗ್‌ನೊಂದಿಗೆ ಇತಿಹಾಸವನ್ನೇ ಬದಲಿಸುತ್ತಿದ್ದಾರೆ. ಬೇಕಾದಾಗೆಲ್ಲಾ ಜೈಸ್ವಾಲ್ ತಮ್ಮ ಕರಾರುವಾಕ್ ಬ್ಯಾಟಿಂಗ್‌ನೊಂದಿಗೆ ಮಿಂಚುತ್ತಾರೆ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ಧ್ರುವ್ ಜುರೇಲ್ ಕೂಡ ಅಷ್ಟೇ ಪರಿಣಾಮಕಾರಿ ಪ್ರದರ್ಶನ ನೀಡುತ್ತಿರುವುದು ತಂಡಕ್ಕೆ ದೊಡ್ಡ ಬಲ. ರಿಯಾನ್ ಪರಾಗ್ ಹೇಳಿಕೊಳ್ಳುವ ಇನ್ನಿಂಗ್ಸ್ ಆಡದಿದ್ದರೂ ನಾಯಕತ್ವದಲ್ಲಿ ಪಾಸ್ ಆಗಿದ್ದಾರೆ. ಈ ನಡುವೆ ಆಲ್‌ರೌಂಡರ್‌ಗಳಾದ ಜೋಫ್ರಾ ಆರ್ಚರ್, ಜಡೇಜಾ ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದಾರೆ.

ಕೀ ಪ್ಲೇಯರ್ಸ್

ಬ್ಯಾಟಿಂಗ್
- ಸೂರ್ಯವಂಶಿ: 680 ರನ್
- ಧ್ರುವ್ ಜುರೇಲ್: 508 ರನ್
- ಯಶಸ್ವಿ ಜೈಸ್ವಾಲ್: 426 ರನ್
- ರಿಯಾನ್ ಪರಾಗ್: 298 ರನ್

ಬೌಲಿಂಗ್
- ಜಡೇಜಾ: 221 ರನ್, 10 ವಿಕೆಟ್
- ಆರ್ಚರ್: 24 ವಿಕೆಟ್
- ಬ್ರಿಜೇಶ್ ಶರ್ಮ: 13 ವಿಕೆಟ್
- ರವಿ ಬಿಷ್ಣೋಯ್: 11 ವಿಕೆಟ್

ಕೂಟದಲ್ಲಿ ಪ್ರದರ್ಶನ

ಪಂದ್ಯ	ಗೆಲುವು	ಸೋಲು
15	9	6

ಕಡೆ ಪಂದ್ಯದ ಫಲಿತಾಂಶ: ಹೈದರಾಬಾದ್ ವಿರುದ್ಧ 47 ರನ್‌ಗಳ ಗೆಲುವು

ಅಂಡರ್–23 ಏಷ್ಯನ್ ಕುಸ್ತಿ: ಭಾರತೀಯರಿಗೆ 27 ಪದಕ!



• **ಹೊಸದಿಲ್ಲಿ:** ವಿಯೆಟ್ನಾಂನ ಡಾ ನಾಂಗ್‌ನಲ್ಲಿ ನಡೆದ ಅಂಡರ್–23 ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯರು ಒಟ್ಟು 27 ಪದಕಗಳನ್ನು ಬಾಚಿಕೊಂಡರೆ, ಕೇವಲ ಭಾರತೀಯ ಪುರುಷರ ಫ್ರೀಸ್ಟೈಲ್ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಫ್ರೀಸ್ಟೈಲ್ ವಿಭಾಗದಲ್ಲಿ ಅಗ್ರಸ್ಥಾನ ಪಡೆದು ಭಾರತ ತಂಡ ಪ್ರಶಸ್ತಿ ತನ್ನದಾಗಿಸಿಕೊಂಡಿದ್ದು, ಕಿರ್ಗಿಸ್ತಾನ್ ಹಾಗೂ ಕಜಕಿಸ್ತಾನ್ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದವು.

ಭಾರತೀಯ ತಂಡ ಟೂರ್ನಿಯಲ್ಲಿ ಒಟ್ಟು 27 ಪದಕಗಳನ್ನು ಗೆದ್ದು ಸಾಧನೆ ಮಾಡಿತು. ಇದರಲ್ಲಿ 11 ಚಿನ್ನ, 7 ಬೆಳ್ಳಿ ಹಾಗೂ 9 ಕಂಚಿನ ಪದಕಗಳು ಸೇರಿವೆ. ಫ್ರೀಸ್ಟೈಲ್ ವಿಭಾಗದಲ್ಲಿ ಭಾರತ 9 ಪದಕಗಳನ್ನು ಗೆದ್ದಿದ್ದು, ಅಕ್ಷಯ್ ಟಿ. ಥೆರೆ (57 ಕೆ.ಜಿ.), ವಿಕ್ಕಿ (97 ಕೆ.ಜಿ.), ಕುಮಾರ್ ಮೋಹಿತ್ (65 ಕೆ.ಜಿ.) ಹಾಗೂ ಚಂದರ್‌ಮೋಹನ್ (79 ಕೆ.ಜಿ.) ಚಿನ್ನದ ಪದಕ ಜಯಿಸಿದರು. ದೀಪಕ್ ರಾಠಿ, ಪುನೀತ್ ಕುಮಾರ್ ಹಾಗೂ ಲಕ್ಕಿ ಬೆಳ್ಳಿ ಪದಕ ಪಡೆದರೆ, ದೀಪಕ್ ಬೆರ್ವಾಲ್ ಮತ್ತು ಮೋರ್ ಸಚಿನ್ ಕಂಚಿನ ಪದಕ ಗೆದ್ದರು.

ಮಹಿಳೆಯರಿಂದಲೂ ಪರಕಾಕ್ರಮ: ಮಹಿಳಾ ವಿಭಾಗದಲ್ಲೂ ಭಾರತೀಯರು ಮಿಂಚಿದ್ದು, 10 ಪದಕಗಳನ್ನು



ತಮ್ಮದಾಗಿಸಿಕೊಂಡರು. ಮುಸ್ಕಾನ್, ತಪಸ್ಯಾ, ಭಾಗ್ಯಶ್ರೀ, ಪುಲ್ಕಿತ್, ಮಾನ್ಸಿ ಹಾಗೂ ಕಾಜಲ್ ಚಿನ್ನದ ಪದಕ ಗೆದ್ದರು. ನೇಹಾ ಮತ್ತು ಸ್ವೀಟಿ ಬೆಳ್ಳಿ ಪದಕ ಜಯಿಸಿದರೆ, ಅಮೃತಾ ಹಾಗೂ ಅಹಿಲ್ಯಾ ಕಂಚಿನ ಪದಕ ಪಡೆದುಕೊಂಡರು.


ಪ್ರಧಾನಿ ಮೋದಿ ಅಭಿನಂದನೆ: ಈ ಸಾಧನೆಗಾಗಿ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ. ಈ ಬಗ್ಗೆ ತಮ್ಮ ಎಕ್ಸ್(ಟ್ವಿಟ್ಟರ್) ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಕುಸ್ತಿಪಟುಗಳ ಪ್ರದರ್ಶನ ಅತ್ಯುತ್ತಮವಾಗಿತ್ತು. ಗೆಲುವಿಗಾಗಿ ನನ್ನ ಅಭಿನಂದನೆಗಳು ಮತ್ತು ಮುಂದಿನ ಸ್ಪರ್ಧೆಗಳಿಗೆ ಶುಭಹಾರೈಸುತ್ತೇನೆ ಎಂದಿದ್ದಾರೆ.

ಫ್ರೆಂಚ್ ಓಪನ್‌ನಿಂದ ಔಟ್ | ರಬಕಿನಾಗೂ ಸೋಲು

ಪ್ಯಾರಿಸ್ ಬಿಸಿಲಿಗೆ ಬಿದ್ದ ಸಿನ್ನರ್

• **ಪ್ಯಾರಿಸ್:** ವಿಶ್ವದ ನಂಬರ್ 1 ಟೆನಿಸ್ ಆಟಗಾರ, ಫ್ರೆಂಚ್ ಓಪನ್ ಗೆಲುವಿನ ಫೇವರಿಟ್ ಯಾನಿಕ್ ಸಿನ್ನರ್ ತಮ್ಮ ಎರಡನೇ ಸುತ್ತಿನ ಪಂದ್ಯದ ವೇಳೆ ಅಸ್ವಸ್ಥರಾಗಿದ ಪರಿಣಾಮ ಸೋತು ರೋಲ್ಯಾಂಡ್ ಗ್ಯಾರೋಸ್‌ನಿಂದ ಹೊರಬಿದ್ದಿದ್ದಾರೆ. ಮಹಿಳೆಯರ ವಿಭಾಗದಲ್ಲಿ ರೈಬೇಕಿನಾ ಸೋತ ನಂತರ ಆಸ್ಟ್ರೇಲಿಯನ್ ಓಪನ್ ವಿಜೇತರು ಎರಡನೇ ಸುತ್ತಿನ ಪಂದ್ಯದಲ್ಲೇ ಸೋತು ಹೊರನಡೆದರು. ಮಂಗಳವಾರ ನಡೆದಿದ್ದ ಮೊದಲ ಪಂದ್ಯದಲ್ಲಿ ಗೆದ್ದು ಎರಡನೇ ಸುತ್ತಿನ ಪಂದ್ಯದಲ್ಲಿ ಅವರು ಜುವಾನ್ ಮಾನ್ಯುಲ್ ಅವರೊಂದಿಗೆ ಆಡಿದ್ದರು. ಗೆಲುವಿನ ಹಾದಿಯಲ್ಲೇ ಇದ್ದ ಇಟಲಿ ಸ್ಟಾರ್ ಸಿನ್ನರ್ ಪಂದ್ಯದ ವೇಳೆ ಬಿಸಿಲಿನಿಂದಾಗಿ ಅಸ್ವಸ್ಥರಾದರು. ಎರಡು ಸೆಟ್ ಮುಂದಿದ್ದ ಅವರು, ದಿಢೀರ್ ಹಿನ್ನಡೆಯಲ್ಲಿ ಮೂರು ಸೆಟ್‌ಗಳನ್ನು ಬಿಟ್ಟುಕೊಟ್ಟು ಹೊರಬಿದ್ದರು. ಪಂದ್ಯ 6–3, 6–2, 5–7, 1–6, 1–6ರಿಂದ ಸೋತ ಸಿನ್ನರ್ ಫ್ರೆಂಚ್ ಓಪನ್ ಗೆಲ್ಲುವ ಅವಕಾಶ ಕಳೆದುಕೊಂಡಿದ್ದಾರೆ.

ಗುರುವಾರ ನಡೆದ ಪಂದ್ಯದಲ್ಲಿ ಮೊದಲನೇ ಸೆಟ್‌ನಲ್ಲಿ 6–3ರಿಂದ, ಎರಡನೇ ಸೆಟ್‌ನಲ್ಲಿ 6–2ರಿಂದ ಮುನ್ನಡೆ ಸಾಧಿಸಿದ್ದ ಸಿನ್ನರ್ ಗೆಲುವಿನ ಹಾದಿಯಲ್ಲಿದ್ದರು. ಏಸ್ ಪಾಯಿಂಟ್‌ಗಳನ್ನು ಬಳಸುತ್ತಾ, ಸರ್ವ್ ಪಾಯಿಂಟ್‌ಗಳ ಲಾಭ ಪಡೆಯುತ್ತಾ ಗೆಲುವಿನತ್ತ ಹೆಜ್ಜೆ ಹಾಕುತ್ತಿದ್ದರು. ಇದೇ ವೇಳೆ ದೊಡ್ಡ ಆಘಾತ ಎದುರಿಸಿದ ಅವರು, ಬಿಸಿಲಿನ ತಾಪಮಾನಕ್ಕೆ ಸುಸ್ತಾದರು. ಐಸ್ ಪ್ಯಾಕ್ ಬಳಸಿ



ಚೇತರಿಸಿಕೊಂಡರಾದರೂ, ಮೂರನೇ ಸೆಟ್ 5–7ರಲ್ಲಿ ಬಿಟ್ಟುಕೊಟ್ಟರು. ನಾಲ್ಕನೇ ಸೆಟ್‌ನಲ್ಲಿ ಅರ್ಜೆಂಟಿನಾದ ಮ್ಯಾನ್ಯುಲ್ ಮುನ್ನಡೆ ಸಾಧಿಸುತ್ತಿದ್ದಂತೆ ಸಿನ್ನರ್ ಆಡಲೂ ಆಗದೆ ಸುಸ್ತಾದರು. ಕಡೆ ಕಡೆಗೆ ಸರ್ವ್ ಪಿಕ್ ಮಾಡುವುದಕ್ಕೂ ಪರದಾಟ ನಡೆಸಿದರು. ಅಂತಿಮದಲ್ಲಿ ಎರಡು ಸೆಟ್‌ಗಳನ್ನು ಸೋತ ಸಿನ್ನರ್ ಪಂದ್ಯವನ್ನು ಬಿಟ್ಟರು. ಇದು ಜುವಾನ್ ಅವರಿಗೆ ಅತಿ ದೊಡ್ಡ ಗೆಲುವಾಗಿದೆ.

ರಬಕಿನಾ ಔಟ್: ಆಸ್ಟ್ರೇಲಿಯನ್ ಓಪನ್ ಪಂದ್ಯಾವಳಿಯ ವಿಜೇತೆ ರಬಕಿನಾ ತಮ್ಮ ಎರಡನೇ ಸುತ್ತಿನ ಪಂದ್ಯದಲ್ಲೇ ಸೋತು ಹೊರಬಿದ್ದರು. ಯುಲಿಯಾ ಅವರೊಂದಿಗೆ ಆಡಿದ ಅವರು, ಮೂರು ಸೆಟ್‌ಗಳ ಕಠಿಣ ಹೋರಾಟದಲ್ಲಿ ಸೋತು ಹೊರಬಿದ್ದರು. ಮೊದಲಿನ ಸೆಟ್ 6–3ರಿಂದ ಗೆದ್ದಿದ್ದ ರಬಕಿನಾ ಮುಂದಿನ 2 ಸೆಟ್‌ಗಳಲ್ಲಿ 1–6, 6(4)–7(10) ರಿಂದ ಸೋತರು.

ಮ್ಯಾಗ್ನಸ್ ಕಾರ್ಲ್ಸೆನ್ ಮಣಿಸಿದ ಪ್ರಜ್ಞಾನಂದ!

• **ಓಸ್ಲೊ(ನಾರ್ವೆ):** ಇಲ್ಲಿ ನಡೆಯುತ್ತಿರುವ ಪ್ರತಿಷ್ಠಿತ ನಾರ್ವೆ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ವಿಶ್ವ ನಂ.1 ಆಟಗಾರ ಮ್ಯಾಗ್ನಸ್ ಕಾರ್ಲ್ಸೆನ್ ಅವರನ್ನು ಕ್ಲಾಸಿಕಲ್ ವಿಭಾಗದಲ್ಲಿ ಮಣಿಸಿ ದಾಖಲೆ ಬರೆದಿದ್ದಾರೆ.

ಇನ್ನೊಂದು ಪ್ರಮುಖ ಪಂದ್ಯದಲ್ಲಿ ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಹಾಗೂ ಟೂರ್ನಿಯ ಅಗ್ರಸ್ಥಾನದಲ್ಲಿರುವ ಅಲಿರೆಜಾ ಫಿರೌಜಾ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ನಡೆದ ಆರ್ಮಗೆಡ್ಡನ್ ಪಂದ್ಯದಲ್ಲಿ ಫಿರೌಜಾ ಗೆದ್ದು ಹೆಚ್ಚುವರಿ ಅಂಕಗಳನ್ನು ತಮ್ಮದಾಗಿಸಿಕೊಂಡು ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡರು.

ದಿವ್ಯಾಗೆ ಆರ್ಮಗೆಡ್ಡನ್ ಜಯ: ಭಾರತದ ದಿವ್ಯಾ ದೇಶಮುಖ್ ನಡುವಿನ ಕ್ಲಾಸಿಕಲ್ ಕದನ ಡ್ರಾದಲ್ಲಿ ಅಂತ್ಯಗೊಂಡಿತು. ಆದರೆ ಆರ್ಮಗೆಡ್ಡನ್‌ನಲ್ಲಿ ದಿವ್ಯಾ ಗೆದ್ದು ಅಮೂಲ್ಯ ಹೆಚ್ಚುವರಿ ಅಂಕಗಳನ್ನು ಕಲೆಹಾಕಿದರು.

ಸೂರ್ಯವಂಶಿ ಆಟಕ್ಕೆ ಬಹುಪರಾಕ್

• **ಚಂಡೀಗಢ:** ಪ್ಯಾಟ್ ಕಮ್ಮಿನ್ಸ್ ಅಂಥ ವಿಶ್ವದರ್ಜೆ ಬೌಲರ್‌ನಿಂದ ಹಿಡಿದು ಸಾಕೀಬ್ ಹುಸೈನ್ ಅಂಥ ದೇಶಿ ಪ್ರತಿಭೆಗಳವರೆಗೂ ವೈಭವ್ ಸೂರ್ಯವಂಶಿ ಕಂಡರೆ ಒತ್ತಡ, ಸಿಕ್ಸ್ ಹೊಡೆಸಿಕೊಳ್ಳುವ ಆತಂಕ. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ, ಸಿಕ್ಸರ್‌ಗಳ ಸಪ್ತಸ್ವರ ಮೂಡಿಸುತ್ತಾ ವೈಭವ್ ದಾಖಲೆಗಳನ್ನು ಗೀಚಿದರು. ಐಪಿಎಲ್ ಎಲಿಮಿನೇಟರ್ ಪಂದ್ಯದಲ್ಲಿ ಅಸಾಮಾನ್ಯ ಇನ್ನಿಂಗ್ಸ್ ಒಂದನ್ನು ಕಟ್ಟಿರುವ 15 ವರ್ಷದ ಹುಡುಗ ವಿಶ್ವ ಕ್ರಿಕೆಟ್ ಅಭಿಮಾನಿಗಳ ಹುಬ್ಬೇರುವಂತೆ ಮಾಡಿದರು. ಕ್ರಿಕೆಟಿಗರನ್ನು ನಿಬ್ಬೆರಗಾಗುವಂತೆ ಮಾಡಿದ್ದಲ್ಲದೆ, ಹಿರಿಯ ಮತ್ತು ನಿವೃತ್ತ ಕ್ರಿಕೆಟಿಗರಿಂದ ಬಹುಪರಾಕ್ ಅನ್ನಿಸಿಕೊಂಡರು.

ಎಲಿಮಿನೇಟರ್ ಪಂದ್ಯ ಕೇವಲ ಪಂದ್ಯಾವಾಗಿರಲಿಲ್ಲ. ಭಾರತದ ಉಜ್ವಲ ಭವಿಷ್ಯದ ಪ್ರಮಾಣವಾಗಿತ್ತು. ದೇಶದ ಕ್ರಿಕೆಟ್ ಯಾವ ಮಟ್ಟಕ್ಕೆ ಹೋಗಲಿದೆ ಎಂಬ ವಿಚಾರದ ಜಲಖ್ ಆಗಿತ್ತು. ಇದಕ್ಕೆ ದಿಗ್ಗಜರಾದ ಸಚಿನ್ ತೆಂಡೂಲ್ಕರ್, ಕ್ರಿಸ್ ಗೇಲ್ ಅಂಥವರು ಮೆಚ್ಚುಗೆ ವ್ಯಕ್ತಪಡಿಸಿದರು.



ಅತ್ಯುತ್ತಮ ಬ್ಯಾಟ್ ಸ್ವಿಂಗ್: ಸಚಿನ್: ಸಚಿನ್ ತೆಂಡೂಲ್ಕರ್ ವೈಭವ್ ಸೂರ್ಯವಂಶಿಯ ಬ್ಯಾಟ್ ಸ್ವಿಂಗ್ ಬಗ್ಗೆ ಉಲ್ಲೇಖಿಸಿದರು. ಇನ್ನಿಂಗ್ಸ್ ಬಗ್ಗೆ ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ವೈಭವ್ ಸೂರ್ಯವಂಶಿ ಬ್ಯಾಟ್ ಸ್ವಿಂಗ್ ನಿಜಕ್ಕೂ ಮೆಚ್ಚುವಂಥದ್ದು. ಅದಕ್ಕೂ ಹೆಚ್ಚಾಗಿ ಬ್ಯಾಟಿಂಗ್ ಸೌಂದರ್ಯತೆ ಹೆಚ್ಚಿಸಿದ್ದು ಅವರ ಫುಟ್‌ವರ್ಕ್. ಬೌಂಡರಿ ಬಾರಿಸಲು ಜಾಗ ಮಾಡಿಕೊಳ್ಳುವ ಅವರ ಕಾರ್ಯವೈಖರಿಯೇ ವಿಶೇಷ. ಇದೊಂದು ಅದ್ಭುತ ಇನ್ನಿಂಗ್ಸ್ ಎಂದು ಹೇಳಿದ್ದಾರೆ.


ಸ್ವಂತ ದಾಖಲೆ ಉಡೀಸ್: ಗೇಲ್ ಸಂಭ್ರಮ: ಕ್ರಿಕೆಟ್ ಲೋಕದ ಸಿಕ್ಸ್ ಹಿಟ್ಟರ್, ವಿಂಡೀಸ್ ದಿಗ್ಗಜ ಕ್ರಿಸ್ ಗೇಲ್ ತಮ್ಮದೇ ದಾಖಲೆ ಮುರಿಯುವುದನ್ನು ನೋಡಿ ಆನಂದಿಸಿದರು. 65 ಸಿಕ್ಸರ್‌ಗಳನ್ನು ಬಾರಿಸಿರುವ ವೈಭವ್ ಗೇಲ್ ಅವರ ಒಂದೇ ಸೀಸನ್‌ನಲ್ಲಿ ಅತಿ ಹೆಚ್ಚು ಸಿಕ್ಸರ್ ದಾಖಲೆ ಮುರಿದಿದ್ದಾರೆ. ವೈಭವ್ ಬಾರಿಸಿದ ಸಿಕ್ಸರ್‌ಗಳು ನಿಜಕ್ಕೂ ಆಕರ್ಷಕ. ಅವರು ಯುನಿವರ್ಸಲ್ ಬಾಸ್ ಎಂದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಪೋಸ್ಟ್‌ನಲ್ಲಿ ಗೇಲ್ ಅಭಿಪ್ರಾಯಪಟ್ಟಿದ್ದಾರೆ. ಇವರಿಬ್ಬರಲ್ಲದೆ ಕ್ರಿಕೆಟ್ ಲೋಕದ ದಿಗ್ಗಜರು, ವೈಭವ್ ಅವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ 20 ಓವರ್‌ಗಳಲ್ಲಿ 243/8: ವೈಭವ್ 97, ಧ್ರುವ್ 50; ಪ್ರಫುಲ್ 54/3
ಹೈದರಾಬಾದ್ 19.2 ಓವರ್‌ಗಳಲ್ಲಿ 196/10: ನಿತಿಶ್‌ಕುಮಾರ್ 38, ಸಲೀಲ್ 35; ಆರ್ಚರ್ 58/3

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ



5998

ಎಡದಿಂದ ಬಲಕ್ಕೆ
3. ಉರಿಯುತ್ತ ಹೆಚ್ಚು ಪ್ರಕಾಶಿಸುತ್ತಿರುವುದು (5)
5. ಹಗುರವಾಗಿಲ್ಲದ ಜಲಸಾರಿಗೆಯಿದು (3)
6. ಊರ್ಮಿಳೆಯ ಪತಿ–ಶ್ರೀರಾಮ ಸಹೋದರ (3)
8. ಮನೆಯ ಎರಡು ಕಂಬಗಳ ನಡುವಿನ ಪ್ರದೇಶ (3)
9. ಅರ್ಥಪೂರ್ಣವಾಗಿ ಜೋಡಿಸಿದ ಪದಸಮೂಹ (2)
10. ಭಯವನ್ನುಂಟು ಮಾಡುವಂಥಾದ್ದು (2)
13. ಮಿತಿಯನ್ನು ಕಡೆಯಲ್ಲಿಟ್ಟುಕೊಂಡ ರೇಖಾಗಣಿತ (3)
15. ವ್ಯಕ್ತಿಗೆ ನೀಡುವ ಅಧಿಕೃತ ಹುದ್ದೆ (3)
17. ಮಲಗುವಾಗ ಹೊದ್ದುಕೊಳ್ಳುವ ಬಟ್ಟೆ (3)
18. ಪ್ರತಿನಿತ್ಯ ಉಪಯೋಗಿಸುವಂಥಾದ್ದು (5)

ಮೇಲಿನಿಂದ ಕೆಳಕ್ಕೆ
1. ಹಿತ–ಹಸು ಒಳಗೊಂಡ ಆತುರಪಡು (5)
2. ಬೆರಳು ಬಳಸುವ ಅಳತೆಯ ಪ್ರಮಾಣ (3)
4. ಮಾಲಿಕೆಯ ಬಗ್ಗೆ ತಿಳಿದುಕೊಂಡ ಒಡೆಯ (3)
7. ಶಿವನ ಪ್ರಮಥರ ಸಮೂಹ ತಲೆಕೆಳಗಾಗಿದೆ (2)
8. ಪೌಷ್ಟಿಕ–ಔಷಧೀಯ ಗುಣವುಳ್ಳ ಹಣ್ಣು (3)
9. ಮಾತಿನ ಒಡೆಯ–ವಾಗ್ಮಿ (3)
11. ಅತಿಯಾದ ಮಾತು (5)
12. ಧರ್ಮಕ್ಕೆ ವಿರುದ್ಧವಾದ ಕರ್ಮ (2)
14. ಜೋಡಿ ಎಂಬರ್ಥದ ಹನ್ನೆರಡು ರಾಶಿಗಳಲ್ಲೊಂದು (3)
16. ಪರ್ಯಾಲೋಚನೆಯ ಸಮಾನಪದ (3)

5997 ಉತ್ತರ

ಎಡದಿಂದ ಬಲಕ್ಕೆ:
1. ಗರತಿ 3. ಕೊಂಕುನುಡಿ
5. ತಮಿಂಗಿಲ 7. ಗೋರಸ
8. ಅಂಕಿತ 10. ರಹಿತ
12. ರಂಗೋಲಿ
16. ದಾರಿತಪ್ಪು
17. ವಿದಳನ 18. ಗೆಬರು

ಮೇಲಿನಿಂದ ಕೆಳಕ್ಕೆ:
1 ಗಡಿಗೆ 2. ತಿತಿಕ್ಷೆ
4. ಕುಮಾರ 6. ಗಿರಕಿ
7. ಗೋಪುರ 9. ತಬ್ಬಲಿ
11. ಹಿಜರಿ 13. ಗೋಮಾಳ
14. ಅಪ್ಪುಗೆ 15. ನವಿರು

ಕಿರುಸುದ್ದಿ

ಇಂದು, ನಾಳೆ ಬಿ.ವೈ. ರಾಘವೇಂದ್ರ ಪ್ರವಾಸ



• **ಕುಂದಾಪುರ:** ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಂಸದ ಬಿ.ವೈ. ರಾಘವೇಂದ್ರ ಅವರು ಮೇ 29 ಮತ್ತು 30ರಂದು ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಮೇ 29ರಂದು ಬೆಳಿಗ್ಗೆ 10 ಗಂಟೆಗೆ ಬೈಂದೂರು– ರಾಣೆಬೆನ್ನೂರು ಎನ್. ಎಚ್. 766ಸಿ ಹೆದ್ದಾರಿ ಕಾಮಗಾರಿ ವೀಕ್ಷಣೆ ನಡೆಸಿ, 10.30ಕ್ಕೆ ಉಪ್ಪುಂದದಲ್ಲಿ ಪಿಎಂಎಂಎಸ್‌ವೈ ಯೋಜನೆಯಲ್ಲಿ ವಿವಿಧೋದ್ದೇಶ ಮೀನುಗಾರಿಕಾ ಕೇಂದ್ರದ ಭೂಮಿ ಪೂಜೆ ನಡೆಸಲಿದ್ದಾರೆ. 11 ಗಂಟೆಯಿಂದ ಮಧ್ಯಾಹ್ನ 2.30ರವರೆಗೆ ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಅವರೊಂದಿಗೆ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಸಿದ್ದಾಪುರ ಏತ ನೀರಾವರಿ ಯೋಜನೆ ಸ್ಥಳ ಪರಿಶೀಲನೆ ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. 30ರಂದು ಬೆಳಿಗ್ಗೆ ಹೆಮ್ಮಾಡಿಯಲ್ಲಿ ಎಸ್‌ಸಿ– ಎಸ್‌ಟಿ ಯುವ ಉದ್ಯಮಶೀಲತಾ ಸಮಾವೇಶ 'ಭೀಮೋದ್ಯಮಟಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಶಿವಮೊಗ್ಗಕ್ಕೆ ಪ್ರಯಾಣ ಬೆಳೆಸಲಿದ್ದಾರೆ.

ಮಾದಕ ವಸ್ತು ಮಾರಾಟ: ಆರೋಪಿಯ ಸೆರೆ

• **ಮಂಗಳೂರು:** ಮಾದಕ ವಸ್ತು ಮಾರಾಟ ಪ್ರಕರಣಕ್ಕೆ ಸಂಬಂಧಿಸಿ ಚೇತನ್ ಕುಮಾರ್ ಎಂಬಾತನನ್ನು ಬಂದರು ಠಾಣಾ ಪೊಲೀಸರು ಬಂಧಿಸಿದ್ದಾರೆ. ಆರೋಪಿಯು ಮೇ 27ರಂದು ಪೂರ್ವಾಹ್ನ 11–45 ರ ವೇಳೆಗೆ ನಗರದ ಉತ್ತರ ದಕ್ಕೆಯ ಆಜಾದ್ ಗೋಡಾನ್ ಬಳಿ ಇರುವ ಸಾರ್ವಜನಿಕ ಸ್ಥಳದಲ್ಲಿ ಮಾದಕ ವಸ್ತು ಗಾಂಜಾವನ್ನು ಅಕ್ರಮವಾಗಿ ವಶದಲ್ಲಿ ಇಟ್ಟುಕೊಂಡು ಮಾರಾಟ ಮಾಡಲು ಬಂದಿರುತ್ತಾನೆಂದು ಖಚಿತ ಮಾಹಿತಿ ಮೇರೆಗೆ ಬಂದರು ಪೊಲೀಸರು ದಾಳಿ ನಡೆಸಿದ್ದಾರೆ. ಆರೋಪಿಯನ್ನು ಚೇತನ್‌ನನ್ನು ವಶಕ್ಕೆ ಪಡೆದು ಆತನ ವಶದಿಂದ 71 ಗ್ರಾಮ್ ತೂಕದ ಮಾದಕ ಹೊಂದಿದ್ದ ಪ್ಲಾಸ್ಟಿಕ್ ಚೀಲ–1, ಪ್ಲಾಸ್ಟಿಕ್ ಕವರುಗಳು–9, ಮೊಬೈಲ್ ಫೋನ್–1 ವಶಪಡಿಸಿಕೊಂಡಿದ್ದಾರೆ. ಆರೋಪಿ ಚೇತನ್ ಕುಮಾರ್ ಮತ್ತು ಈತನಿಗೆ ಮಾದಕ ವಸ್ತು ಗಾಂಜಾವನ್ನು ಒದಗಿಸಿದ ಮಂಗಳೂರು ಮುಲ್ಲಕಾಡ್ ನಿವಾಸಿ ಕುಶಾಲ್ ಕುಮಾರ್ ಎಂಬಾತನಿಗೆ ಶೋಧ ಮುಂದುವರಿದಿದೆ.

ಕುಸಿದು ಬಿದ್ದು ಸಾವು

• **ಉಡುಪಿ:** ಮೂಡನಿಡಂಬೂರು ಗ್ರಾಮದ ತ್ರಿವೇಣಿ ಜಂಕ್ಷನ್ ಬಳಿಯ ಸಂಗಮ್ ಹೊಟೇಲ್‌ನಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದ ಉತ್ತರಖಂಡ ಮೂಲದ ಧರ್ಮಿಯನ್ ಸಿಂಗ್ (54) ಎಂಬುವವರು ಗುರುವಾರ ಬೆಳಿಗ್ಗೆ ಶೌಚಾಲಯದಲ್ಲಿ ಕುಸಿದು ಬಿದ್ದು ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ. ಮೃತ ಧರ್ಮಿಯನ್ ಸಿಂಗ್ ಕಳೆದ ಕೆಲವು ಸಮಯದಿಂದ ಮಧುಮೇಹ ಹಾಗೂ ರಕ್ತದೊತ್ತಡ (ಬಿಪಿ) ಕಾಯಿಲೆಯಿಂದ ಬಳಲುತ್ತಿದ್ದರು. ಮೇ 28ರಂದು ಬೆಳಿಗ್ಗೆ ಹೊಟೇಲ್ ರೂಮಿನ ಶೌಚಾಲಯಕ್ಕೆ ತೆರಳಿದ್ದರು. ಆದರೆ ಅರ್ಧ ಗಂಟೆಯಾದರೂ ಹೊರಗೆ ಬಾರದೇ ಇದ್ದಾಗ, ಅವರ ತಮ್ಮ ಬಾಗಿಲು ಬಡಿದಿದ್ದಾರೆ. ಒಳಗಿನಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ ಗಾಬರಿಗೊಂಡು ಬಾಗಿಲನ್ನು ದೂಡಿ ಒಳಗೆ ಹೋಗಿ ನೋಡಿದ್ದಾರೆ. ಈ ವೇಳೆ ಧರ್ಮಿಯನ್ ಸಿಂಗ್ ಶೌಚಾಲಯದ ನೆಲದ ಮೇಲೆ ಕುಸಿದು ಬಿದ್ದಿರುವುದು ಬೆಳಕಿಗೆ ಬಂದಿದೆ. ಕೂಡಲೇ ಅವರನ್ನು ಆ್ಯಂಬುಲೆನ್ಸ್ ಮೂಲಕ ಅಜ್ಜರಕಾಡಿನ ಉಡುಪಿ ಸರ್ಕಾರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ವೈದ್ಯರು ತುರ್ತು ಚಿಕಿತ್ಸೆ ನೀಡಿದರೂ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವುದಾಗಿ ವೈದ್ಯಾಧಿಕಾರಿಗಳು ದೃಢೀಕರಿಸಿದ್ದಾರೆ. ಈ ಕುರಿತು ಮೃತರ ತಮ್ಮ ಶೂರ್ ವೀರ್ ಸಿಂಗ್ ನೀಡಿದ ದೂರಿನ ಮೇರೆಗೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೃದಯಾಘಾತದಿಂದ ಚಿನ್ನದ ಕಾರ್ಮಿಕ ಸಾವು

• **ಉಡುಪಿ:** ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಕಡಿಯಾಳಿಯಲ್ಲಿ ಚಿನ್ನದ ಕೆಲಸ ಮಾಡಿಕೊಂಡಿದ್ದ ಪಶ್ಚಿಮ ಬಂಗಾಳ ಮೂಲದ ಸುಕುಮಾರ್ ಪತ್ರ (49) ಎಂಬುವವರು ತೀವ್ರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಸುಕುಮಾರ್ ಪತ್ರ ಕಳೆದ 3–4 ವರ್ಷಗಳಿಂದ ಕಡಿಯಾಳಿಯಲ್ಲಿ ತರುಣ್ ಎಂಬುವವರ ಜೊತೆ ಚಿನ್ನದ ಕೆಲಸ ಮಾಡಿಕೊಂಡಿದ್ದು, ಅಲ್ಲಿಯೇ ವಾಸ್ತವ್ಯ ಹೊಂದಿದ್ದರು. ರಕ್ತದೊತ್ತಡ ಹಾಗೂ ಗ್ಯಾಸ್ಟ್ರಿಕ್ ಸಮಸ್ಯೆಯಿಂದ ಬಳಲುತ್ತಿದ್ದರು. ಮೇ 26 ರಂದು ಬೆಳಿಗ್ಗೆ 11 ಗಂಟೆಗೆ ಅವರಿಗೆ ಮೊದಲ ಬಾರಿಗೆ ಎದೆನೋವು ಕಾಣಿಸಿಕೊಂಡಿದ್ದು, ಸ್ಥಳೀಯ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆದು ವಿಶ್ರಾಂತಿ ಪಡೆಯುತ್ತಿದ್ದರು. ಆದರೆ, ಅದೇ ದಿನ ರಾತ್ರಿ ಅವರಿಗೆ ಮತ್ತೆ ತೀವ್ರ ಎದೆನೋವು ಕಾಣಿಸಿಕೊಂಡಿದೆ. ತಕ್ಷಣ ಮೇ 27ರಂದು ಮುಂಜಾನೆ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಉಡುಪಿ ಸಿಟಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಪರೀಕ್ಷಿಸಿದ ವೈದ್ಯಾಧಿಕಾರಿಗಳು ಆದಾಗಲೇ ಅವರು ಮೃತಪಟ್ಟಿರುವುದಾಗಿ ದೃಢೀಕರಿಸಿದ್ದಾರೆ.

ಕಡಲತಡಿಗೆ ತಂಪೆರೆದ ಮಮತೆಯ ಅಲೆ | ಅಮೃತಾನಂದಮಯಿ ಮಠದಲ್ಲಿ ಅಮೃತ ಸಂಗಮ ಸಂಭ್ರಮ

ಅಮ್ಮ ಜಗತ್ತಿಗೆ ಜ್ಞಾನ ನೀಡುವ ಜ್ಞಾನೇಶ್ವರಿ

ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಳ್‌ಬಾಗ್









• **ಮಂಗಳೂರು:** ಇಲ್ಲಿನ ಬೋಳೂರಿನಲ್ಲಿರುವ ಮಾತಾ ಅಮೃತಾನಂದಮಯಿ ಮಠದಲ್ಲಿ ಶ್ರೀ ಬ್ರಹ್ಮಸ್ಥಾನಮಹೋತ್ಸವ'ಅಮೃತಸಂಗಮ–2026' ಗುರುವಾರ ಅದ್ದೂರಿಯಾಗಿ ಆರಂಭಗೊಂಡಿದೆ.

ಸಹಸ್ರಾರು ಭಕ್ತರ ಮಾತೆ, ವಿಶ್ವದ ಅಗ್ರಗಣ್ಯ ಆಧ್ಯಾತ್ಮಿಕ ನಾಯಕಿ ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ದೇವಿಯವರು ಸತ್ಸಂಗ, ಪ್ರವಚನ ನಡೆಸಿಕೊಡುವುದರೊಂದಿಗೆ ಭಕ್ತರನ್ನು ದಿವ್ಯ ಆಲಿಂಗನದ ಮೂಲಕ ಹರಸುತ್ತಿದ್ದಾರೆ. ಮೊದಲ ದಿನವಾದ ಗುರುವಾರ ಸಾವಿರಾರು ಭಕ್ತರು ಅಮ್ಮನ ದರ್ಶನ ಪಡೆದಿದ್ದಾರೆ. ಬೆಳಗ್ಗಿನಿಂದ ರಾತ್ರಿಯವರೆಗೆ ವಿವಿಧ ಕಾರ್ಯಕ್ರಮ ನಡೆದವು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಭಾಗಿ

ಬೆಳಗ್ಗೆ ಪ್ರವಚನ ಕಾರ್ಯಕ್ರಮಕ್ಕೆ ಮುನ್ನ ನಡೆದ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸರ್ಕಾರವೊಂದು ಮಾಡಬೇಕಾದ ಮತ್ತು ಮಾಡಲಾಗದ ಕೆಲಸವನ್ನು ಅಮ್ಮನವರು ಅತ್ಯಂತ ಶ್ರದ್ಧೆಯಿಂದ ಯಾವುದೇ ಫಲಾಪೇಕ್ಷೆಯಿಲ್ಲದೆ ಮಾಡುತ್ತಾ ಬಂದಿದ್ದಾರೆ. ಆದ್ದರಿಂದಲೇ ವಿಶ್ವವೇ ಅವರನ್ನು 'ಅಮ್ಮಾ' ಎಂದು ಕೊಂಡಾಡುತ್ತಿದೆ. ಅವರು ಮಹಿಳಾ ಸಬಲೀಕರಣದ ಶಕ್ತಿಯೂ ಹೌದು ಎಂದು ಶ್ಲಾಘಿಸಿದರು.

4 ಕೋಟಿ ಜನರಿಗೆ ಅಪ್ಪುಗೆಯ ಆಶೀರ್ವಾದ

ಅಮ್ಮನವರು ಜಗತ್ತಿಗೆ ಜ್ಞಾನ ಕೊಡುವ ಜ್ಞಾನೇಶ್ವರಿಯಾಗಿದ್ದಾರೆ. ಬಡವರು, ದೀನರು, ದಲಿತರ ಸೇವೆ ಮೂಲಕ ದೇವರನ್ನು ಕಂಡರು. 4 ಕೋಟಿ ಜನರಿಗೆ ಅಪ್ಪುಗೆಯ ಆಶೀರ್ವಾದ ನೀಡಿ ಧಾರ್ಮಿಕ ಜ್ಞಾನ ಮೂಡಿಸಿದ್ದಾರೆ. ಆಧ್ಯಾತ್ಮ ಶಿಕ್ಷಣ, ಜ್ಞಾನ ಶಿಕ್ಷಣ, ಸಾಮಾಜಿಕ ಶಿಕ್ಷಣವನ್ನು ಸಮಾಜಕ್ಕೆ ಬೋಧಿಸಿದ ಮಾಹಾಮಾತೆ ಎಂದವರು ಹೇಳಿದರು. ಆಧ್ಯಾತ್ಮಿಕ ಮೌಲ್ಯಗಳೊಂದಿಗೆ ವೈಜ್ಞಾನಿಕ ಮನೋಭಾವ, ವಿಶ್ವದ ನ್ಯಾನೋ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವೈದ್ಯಕೀಯ ವಿಜ್ಞಾನ, ವೈರ್‌ಲೆಸ್ ತಂತ್ರಜ್ಞಾನದಲ್ಲಿ ಸೇವೆ ಕೊಟ್ಟವರು. ಮಾತೆಯವರು ಸ್ಥಾಪಿಸಿದ ಮೆಡಿಕಲ್ ಕಾಲೇಜುಗಳು ಸದಾ ಜನಸೇವೆಯಲ್ಲಿ ತೊಡಗಿದೆ. ದಿಲ್ಲಿ, ಜಾರ್ಖಂಡ್‌ನಲ್ಲಿ ಬಡವರಿಗೆ ಆರೋಗ್ಯ ಸೇವೆ ನೀಡಿದ ದೇವತೆ. ಬಡವರಿಗೆ 47ಸಾವಿರ ಮನೆ ನಿರ್ಮಿಸಿಕೊಟ್ಟಿದ್ದಾರೆ ಎಂದು ಜೋಶಿ ಹೇಳಿದರು.

ವಿಶ್ವಕ್ಕೆ ಸಿಗುತ್ತಿದೆ ನಿಸ್ವಾರ್ಥವಾದ ಸೇವೆ

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ಅಮ್ಮನವರ ನಿಸ್ವಾರ್ಥವಾದ ಸಮಾಜ ಸೇವೆ ವಿಶ್ವಕ್ಕೆ ದೊರೆಯುತ್ತಿದೆ. ಅವರು ಎಲ್ಲರ ಮಹಾಮಾತೆ. ಇಂತಹ ಧಾರ್ಮಿಕ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯಬೇಕು. ಧಾರ್ಮಿಕ ನಂಬಿಕೆಗಳು ಈ ಮಣ್ಣಿನ ಶಕ್ತಿ ಎಂದರು. ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸ್ಪೀಕರ್ ಯು.ಟಿ. ಖಾದರ್, ರಾಮಕೃಷ್ಣ ಮಠದ ಸ್ವಾಮಿ ಜಿತಕಾಮಾನಂದಜಿ ಮಹಾರಾಜ್, ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ, ಉಡುಪಿ ಶಾಸಕ ಯಶಪಾಲ್ ಸುವರ್ಣ, ಮಾಜಿ ಸಚಿವ ಪ್ರಮೋದ್ ಮಧ್ವರಾಜ್, ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್, ಅದಾನಿ ಸಂಸ್ಥೆಯ ಕಿಶೋರ್ ಆಳ್ವ, ಪ್ರಮುಖರಾದ ಪ್ರಕಾಶ್ ಪೈ ವೆರಾಜೆ, ವೇದಪ್ರಕಾಶ್ ಶ್ರೀಯಾನ್, ಮಾತಾ ಅಮೃತಾನಂದಮಯಿ ಸೇವಾ ಸಮಿತಿಯ ಗೌರವಾಧ್ಯಕ್ಷರಾದ ಡಾ.ಜೀವರಾಜ್ ಸೊರಕೆ, ಸಿಎ ವಾಮನ್ ಕಾಮತ್, ಶ್ರುತಿ ಹೆಗ್ಡೆ, ಡಾ.ವಸಂತ ಕುಮಾರ್ ಪೆರ್ಲ, ಡಾ. ದೇವದಾಸ್ ಪುತ್ರನ್, ಸ್ವಾಗತ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಸೇವಾಸಮಿತಿಯ ಅಧ್ಯಕ್ಷ ಸುರೇಶ್ ಅಮೀನ್ ಸ್ವಾಗತಿಸಿದರು. ಡಾ. ಅಶೋಕ್ ಶೆಣೈ ಮತ್ತು ಡಾ ನಂದಿತಾ ಶೆಣೈ ಕಾರ್ಯಕ್ರಮ ನಿರೂಪಿಸಿದರು. ಸೇವಾ ಸಮಿತಿಯ ಕಾರ್ಯದರ್ಶಿ ಸಿಎ ರಾಮನಾಥ್ ವಂದಿಸಿದರು.

- 'ಅಮ್ಮ'ನ ದರ್ಶನಕ್ಕಾಗಿ ದೇಶ ವಿದೇಶಗಳಿಂದ ಆಗಮಿಸಿದ ಭಕ್ತರು
- ಅಮ್ಮನ ಕಾಣಲು ಬಂದ ಅತಿಥಿಗಳಿಗೆ ಶ್ರೀಮಠದಿಂದ ಅಚ್ಚುಕಟ್ಟಾದ ವ್ಯವಸ್ಥೆ
- ಎಲ್ಲೆಡೆ ಅಚ್ಚುಕಟ್ಟಾದ ಏರ್ಪಾಡು, ಕಾರ್ಯಕ್ರಮದುದ್ದಕ್ಕೂ ಶಿಸ್ತು

ನೆರವು, ಕಲ್ಯಾಣ ಯೋಜನೆಗಳಿಗೆ ಚಾಲನೆ

ಈ ಮಹೋತ್ಸವದ ಅಂಗವಾಗಿ ಮಠದ ವತಿಯಿಂದ ಹಲವಾರು ಕಲ್ಯಾಣ ಯೋಜನೆಗಳಿಗೆ ಚಾಲನೆ ಮತ್ತು ನೆರವು ನೀಡಲಾಯಿತು. ಹೃದ್ರೋಗ ಶಸ್ತ್ರಚಿಕಿತ್ಸೆಗೆ ಒಳಗಾಗುವ ಮಕ್ಕಳಿಗೆ ನೆರವು, ಅಮೃತ ಶ್ರೀ ಸ್ವ ಸಹಾಯ ಗುಂಪಿನ 1,200 ಸದಸ್ಯರಿಗೆ ಆರ್ಥಿಕ ಸಾಲ-ಸಹಾಯ, ಕರಾವಳಿ ಜನರ ಜೀವನೋಪಾಯಕ್ಕಾಗಿ ಕಡಲ ಕಳೆ ಕೃಷಿ ಯೋಜನೆ ಮತ್ತು ಆಯುಧ್ ಮಂಗಳೂರು ನೇತೃತ್ವದಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಅಭಿಯಾನಗಳು ಸೇರಿವೆ. ಉತ್ಸವದ ಭಾಗವಾಗಿ ವಿಶೇಷ ಪೂಜೆಗಳು, ದರ್ಶನ, ಸ್ವಯಂಸೇವಕರಿಂದ ಸೇವಾ ಚಟುವಟಿಕೆಗಳು, ಉಚಿತ ವೈದ್ಯಕೀಯ ಶಿಬಿರ, ಅನ್ನದಾನ ಹಾಗೂ ಕರ್ನಾಟಕ ಮತ್ತು ನೆರೆಯ ರಾಜ್ಯಗಳಿಂದ ಆಗಮಿಸಿದ್ದ ಭಕ್ತಾದಿಗಳಿಗೆ ಸೂಕ್ತ ಸೌಕರ್ಯಗಳನ್ನು ಕಲ್ಪಿಸಲಾಗಿತ್ತು.

ನೊಂದವರ ಪಾಲಿನ ಧ್ವನಿಯಾಗಿ: ಅಮ್ಮ



ಮಂಗಳೂರು: ಬಾಹ್ಯ ಶುದ್ಧತೆಗಿಂತ ಆಂತರಿಕ ಶುದ್ಧತೆ ಅತಿಮುಖ್ಯ. ಮುಖವಾಡ ತೊಟ್ಟು ಬದುಕುವುದರಲ್ಲಿ ಅರ್ಥವಿಲ್ಲ. ಸುಖ ಭೋಗದಲ್ಲಿಯೇ ಮಗ್ನರಾಗದೆ ಸಮಾಜದಲ್ಲಿ ನೊಂದವರ ಕಷ್ಟಗಳಿಗೆ ಸ್ಪಂದಿಸಿದಾಗ ಭಗವಂತನಿಗೆ ಹತ್ತಿರವಾಗಲು ಸಾಧ್ಯವಿದೆ ಎಂದು ವಿಶ್ವದ ಅಗ್ರಗಣ್ಯ ಆಧ್ಯಾತ್ಮಿಕ ನಾಯಕಿ ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ದೇವಿ ಹೇಳಿದರು.

ಇಲ್ಲಿನ ಬೋಳೂರು ಮಠದ ಆವರಣದಲ್ಲಿ ಅಮೃತಾನಂದಮಯಿ ಸೇವಾ ಸಮಿತಿಯ ನೇತೃತ್ವದಲ್ಲಿ ಎರಡು ದಿನಗಳ ಕಾಲ ಆಯೋಜಿಸಿರುವ ಬ್ರಹ್ಮಸ್ಥಾನ ಮಹೋತ್ಸವ 'ಅಮೃತ ಸಂಗಮ 2026' ಕಾರ್ಯಕ್ರಮದಲ್ಲಿ ಪ್ರವಚನ ನೀಡಿದ ಅವರು, ಬದುಕಿನಲ್ಲಿ ತಾಳ್ಮೆ ಅತೀ ಮುಖ್ಯ. ಎಷ್ಟೇ ಕಠಿಣ ಪರಿಸ್ಥಿತಿ ಎದುರಾದರೂ ಸಮಚಿತ್ತದಿಂದ ಎದುರಿಸಬೇಕು. ಪರಿಸ್ಥಿತಿಗೆ ಹೊಂದಿಕೊಂಡು ಬದುಕುವುದುಕನ್ನು ಕಲಿಯಬೇಕು. ಸನಾತನ ಧರ್ಮ ಇಂತಹ ಜೀವನ ಮೌಲ್ಯವನ್ನು ಸಾರುತ್ತದೆ ಎಂದರು.

ದೌರ್ಜನ್ಯ ಹೆಚ್ಚಾಗುತ್ತಿದೆ

ಪ್ರಸ್ತುತ ಪ್ರಕೃತಿಯ ಮೇಲೆ ಮಾನವನ ದೌರ್ಜನ್ಯ ಹೆಚ್ಚಾಗುತ್ತಿದೆ. ಇದಕ್ಕೆ ಕಡಿವಾಣ ಬೀಳಲೇಬೇಕು. ಇಲ್ಲವಾದಲ್ಲಿ ಭವಿಷ್ಯದ ದಿನಗಳು ಗಂಭೀರವಾಗಿರಲಿವೆ. ಪ್ರತಿಯೊಬ್ಬರೂ ಪರಿಸರವನ್ನು ಪ್ರೀತಿಸಬೇಕು. ಸಾಂಕ್ರಾಮಿಕ ರೋಗಗಳು, ನೈಸರ್ಗಿಕ ವಿಕೋಪಗಳು ಮತ್ತು ಹವಾಮಾನ ವೈಪರೀತ್ಯಗಳು ಪ್ರಕೃತಿಯೊಂದಿಗಿನ ನಮ್ಮ ಸಂಬಂಧವನ್ನು ಮರುಚಿಂತನೆ ಮಾಡಲು ಮಾನವಕುಲಕ್ಕೆ ನೀಡುತ್ತಿರುವ ಎಚ್ಚರಿಕೆಯ ಕರೆಗಳಾಗಿವೆ. ನಾವು ಸಮುದಾಯಗಳು ಮತ್ತು ರಾಷ್ಟ್ರಗಳ ನಡುವಿನ ಸಂಘರ್ಷಗಳಲ್ಲಿ ಸಂಧಾನ ಹಾಗೂ ರಾಜಿ ಸೂತ್ರಗಳು ಕೆಲಸ ಮಾಡಬಹುದು, ಆದರೆ ಪ್ರಕೃತಿಯೊಂದಿಗೆ ಇವುಗಳು ನಡೆಯುವುದಿಲ್ಲ. ಆ ಎಚ್ಚರ ನಮ್ಮಲ್ಲಿರಬೇಕು ಎಂದು ಅಮ್ಮ ನುಡಿದರು. ಸ್ವಾರ್ಥ ಬದುಕಿನಿಂದ ದೂರವಿದ್ದು, ಸೇವಾ ಮನೋಭಾವನೆಯನ್ನು ಬೆಳೆಸಿಕೊಂಡಾಗ ಬದುಕಿನಲ್ಲಿ ನೆಮ್ಮದಿ ಕಾಣಲು ಸಾಧ್ಯವಿದೆ. ಒಳ್ಳೆಯ ಕೆಲಸಗಳನ್ನು ಮಾಡಿದರೆ ಪ್ರತಿಫಲ ಸಿಕ್ಕೇ ಸಿಗುತ್ತದೆಎಂದು ಮಾತಾ ಅಮೃತಾನಂದಮಯಿ ಇದೇ ಸಂದರ್ಭದಲ್ಲಿ ಹೇಳಿದರು.


ಪ್ರವಾಸ ಆಸಕ್ತರಿಗೆ ಸಿಕ್ಕಿತು ಅರಣ್ಯ ಇಲಾಖೆಯಿಂದ ಸಿಹಿ ಸುದ್ದಿ

ಚಾರಣ, ಜಲಪಾತ ಭೇಟಿಗೆ ಮುಕ್ತ

• **ಬೆಳ್ತಂಗಡಿ:** ತಾಲೂಕಿನ ಪ್ರಮುಖ ಚಾರಣ, ಜಲಪಾತಗಳ ವೀಕ್ಷಣೆಗೆ ಕಾಡ್ಗಿಚ್ಚು ಇತ್ಯಾದಿ ಅನಾಹುತಗಳು ನಡೆಯದಂತೆ ಹಾಗೂ ಹುಲಿಗಣತಿ ಹಿನ್ನಲೆಯಲ್ಲಿ ಹೇರಿದ್ದ ನಿರ್ಬಂಧವನ್ನು ಜೂ 1ರಿಂದ ತೆರೆದುಕೊಳ್ಳಲಿದೆ. ಈ ಮೂಲಕ ಪ್ರವಾಸಿಗರಿಗೆ ವನ್ಯಜೀವಿ ಅರಣ್ಯ ಇಲಾಖೆ ಸಿಹಿ ಸುದ್ದಿ ನೀಡಿದೆ.

ಕಳೆದ ಜನವರಿ ತಿಂಗಳಲ್ಲಿ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದಿಂದ ನೇತ್ರಾವತಿ ಪೀಕ್, ಬಂಡಾಜೆ ಜಲಪಾತ, ಗಡಾಯಿಕಲ್ಲು ಮೊದಲಾದ ಸ್ಥಳಗಳಿಗೆ ಪ್ರವಾಸಿಗರಿಗೆ ನಿಷೇಧ ಹೇರಿತ್ತು. ಬೇಸಿಗೆ ಕಾಲದಲ್ಲಿ ಬೆಂಕಿ ಪ್ರಕರಣ, ಕಾಡ್ಗಿಚ್ಚು ಇತ್ಯಾದಿ ಅನಾಹುತಗಳು ನಡೆಯದಂತೆ ಹಾಗೂ ಹುಲಿಗಣತಿ ಹಿನ್ನೆಲೆಯಲ್ಲಿ ಈ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಇದೀಗ ಬೆಳ್ತಂಗಡಿ ವನ್ಯಜೀವಿ ವಿಭಾಗ ನಿಷೇಧ ಹಿಂಪಡೆದಿದ್ದು ಜೂ.1 ರಿಂದ ಪ್ರವಾಸಿಗರ ವೀಕ್ಷಣೆಗೆ ಮುಕ್ತವಾಗಲಿದೆ.

ಪ್ರಮುಖ ಚಾರಣ ಸ್ಥಳವಾದ ನಡ–ಲ್ಯಾಲ ಗ್ರಾಮದ ನರಸಿಂಹ ಗಡಕ್ಕೆ (ಗಡಾಯಿಕಲ್ಲು) ಜೂ.1ರಿಂದ ಚಾರಣ ಮಾಡಬಹುದಾಗಿದೆ. ಇಲ್ಲಿ ಕಳೆದ ಫೆಬ್ರವರಿಯಲ್ಲಿ ಬೆಂಕಿ ಪ್ರಕರಣದ ಎಚ್ಚರಿಕೆ ಹಾಗೂ ಹುಲಿಗಣತಿ ಅಂಗವಾಗಿ ಪ್ರವೇಶ ನಿಷೇಧ ಹೇರಲಾಗಿತ್ತು. ಸಮುದ್ರ ಮಟ್ಟದಿಂದ 1700 ಅಡಿ ಎತ್ತರದಲ್ಲಿರುವ ಗಡಾಯಿಕಲ್ಲು ಚಾರಣಿಗರಿಗೆ ಆಕರ್ಷಕ ಕೇಂದ್ರವಾಗಿದೆ. ಹೆಚ್ಚಿನ ಮಳೆ ಉಂಟಾದರೆ ಕಲ್ಲುಗಳು ಜಾರುವ ಕಾರಣ ಇಲ್ಲಿ ಮಳೆಗಾಲದ ಯಾವುದೇ ಸಮಯ ಪ್ರವೇಶ ನಿಷೇಧ ಹೇರುವ ಸಾಧ್ಯತೆ ಇದೆ.



ಗುರುತಿನ ಪತ್ರ ಮಾತ್ರ ಕಡ್ಡಾಯ

ಇಲ್ಲಿ ಸ್ವಚ್ಛತೆ ಕಾಪಾಡಲು ಪ್ರವಾಸಿಗರು, ಚಾರಣಿಗರು ಆದ್ಯತೆ ನೀಡಿ, ಇಲಾಖೆಯ ನಿಯಮಗಳನ್ನು ಪಾಲಿಸಿ ಪ್ರವೇಶಿಸಬೇಕು. ಇಲಾಖೆ ನಿಗದಿಪಡಿಸಿದ ಸ್ಥಳಗಳ ಹೊರತು ಇತರೆಡೆ ಪ್ರವೇಶಾವಕಾಶ ಇರುವುದಿಲ್ಲ. ಪ್ರತಿಯೊಬ್ಬ ಪ್ರವಾಸಿಗ ಕಡ್ಡಾಯವಾಗಿ ಮೂಲ ಗುರುತಿನ ಪತ್ರದೊಂದಿಗೆ ಆಗಮಿಸಬೇಕು. ಗುರುತು ಪತ್ರ ಇಲ್ಲದವರಿಗೆ ಪ್ರವೇಶಾವಕಾಶ ಇರುವುದಿಲ್ಲ.

ನಿಷೇಧ ಹೇರಿಕೆ ಏಕೆ?

ತಾಲೂಕಿನ ಮಲವಂತಿಗೆ ಗ್ರಾಮ ಅತಿ ಹೆಚ್ಚು ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿದೆ. ಇದು ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿದೆ. ಅರಣ್ಯ ಪ್ರದೇಶವಾದ ಇಲ್ಲಿಗೆ ಚಾರಣಿಗರು, ಜಲಪಾತ ವೀಕ್ಷಕರು ಆಗಮಿಸುತ್ತಾರೆ. ಆದರೆ ಬೇಸಿಗೆಯಲ್ಲಿ ಈ ಅರಣ್ಯ ಪ್ರದೇಶಗಳಲ್ಲಿ ಬೆಂಕಿ ಪ್ರಕರಣಗಳ ಭಯ ಸಾಕಷ್ಟಿದೆ. ಇಲ್ಲಿ ಒಂದು ಕಿಡಿ ಬೆಂಕಿ ಬಿದ್ದರೂ ಅದು ತಕ್ಷಣ ಇಡೀ ಪರಿಸರವನ್ನು ವ್ಯಾಪಿಸುತ್ತದೆ. ಪ್ರವಾಸಿಗರಿಗೆ ಎಷ್ಟೇ ಎಚ್ಚರಿಕೆ ನೀಡಿದರು ಅದನ್ನು ಗಣನೆಗೆ ತೆಗೆದುಕೊಳ್ಳದೆ ಮುಂದುವರಿಯುವ ಕಾರಣ ಅನಾಹುತಗಳು ಉಂಟಾಗುತ್ತವೆ. ಈ ಕಾರಣದಿಂದ ಮುನ್ನೆಚ್ಚರಿಕೆ ಕ್ರಮವಾ ಇಲಾಖೆ ನಿಷೇಧ ಹೇರಿತ್ತು. ಕಡಮಗುಂಡಿ ಹಾಗೂ ಬೊಳ್ಳೆ ಜಲಪಾತಗಳು ಈಗಾಗಲೇ ಸಾರ್ವಜನಿಕರ ವೀಕ್ಷಣೆಗೆ ತೆರೆದುಕೊಂಡಿವೆ. ಖಾಸಗಿ ಸ್ಥಳದಲ್ಲಿರುವ ಎರ್ಮಾಯಿ ಜಲಪಾತ ವೀಕ್ಷಣೆಗೆ ಯಾವುದೇ ನಿರ್ಬಂಧ ಇರಲಿಲ್ಲ.

ಶಬರಿಮಲೆ ಶ್ರೀಕ್ಷೇತ್ರ ಸಂರಕ್ಷಣೆಗೆ ಸಶಸ್ತ್ರ ಸೇನೆಯ ನೇಮಕ: ಐಕ್ಯ ವೇದಿಕೆ ಆಗ್ರಹ

• **ಕಾಸರಗೋಡು:** ಶಬರಿಮಲೆ ಶ್ರೀ ಧರ್ಮಶಾಸ್ತಾ ಸನ್ನಿಧಾನದ ಸುರಕ್ಷತೆ ವಿಷಯದಲ್ಲಿ ಆತಂಕ ಹುಟ್ಟುತ್ತಿದೆ. ಆದ್ದರಿಂದ ಹಿಂದುಗಳ ಪರಮ ಪವಿತ್ರ ಕ್ಷೇತ್ರಗಳಲ್ಲಿ ಒಂದಾದ ಶಬರಿಮಲೆಯ ಸಂರಕ್ಷಣೆಗೆ ಸಶಸ್ತ್ರ ಮೀಸಲು ಪಡೆಯನ್ನು ನೇಮಿಸಬೇಕು ಎಂದು ಚಾಲಕ್ಕುಡಿಯಲ್ಲಿ ನಡೆದ ಹಿಂದು ಐಕ್ಯ ವೇದಿಕೆಯ ಕೇರಳ ರಾಜ್ಯ ಸಮ್ಮೇಳನ ಅಂಗೀಕರಿಸಿದ ಠರಾವಿನಲ್ಲಿ ಒತ್ತಾಯಿಸಲಾಗಿದೆ.

ಭದ್ರತಾ ವೈಫಲ್ಯ ಕಾಡುತ್ತಿದೆ

ಶಬರಿಮಲೆ ಕ್ಷೇತ್ರದಲ್ಲಿ ಭಾರೀ ಭದ್ರತಾ ಲೋಪ ನಿರಂತರ ಉಂಟಾಗುತ್ತಿದೆ. ಕೋಸ್ಟ್ ಗಾರ್ಡ್‌ನ ಹೆಲಿಕಾಪ್ಟರ್ ಶಬರಿಮಲೆ ಕ್ಷೇತ್ರದ ಮೇಲ್ಭಾಗದಲ್ಲಿ ಹಲವು ಬಾರಿ ಹಾರಾಡಿರುವುದು, ಕ್ಷೇತ್ರದ ಬಾಗಿಲು ಮುಚ್ಚಿದ ಹೊತ್ತಿನಲ್ಲಿ ಭದ್ರತಾ ಸಿಬ್ಬಂದಿ ಅರಿವಿಗೆ ಬಾರದೆ ಓರ್ವ ಯೂಟ್ಯೂಬರ್ ಹದಿನೆಂಟು ಮೆಟ್ಟಿಲು' ತಲುಪಿ ಚಿತ್ರೀಕರಣ ನಡೆಸಿರುವುದು ಭಾರೀ ಭದ್ರತಾ ವೈಫಲ್ಯವಾಗಿದೆ.

ಶಬರಿಮಲೆಯ ಸಮೀಪ ಕೋನ್ನಿಪಾಡಂ ಅರಣ್ಯ ಪ್ರದೇಶದಲ್ಲಿ ಪ್ರಬಲ ಸ್ಫೋಟ ಶಕ್ತಿಯ ಜಿಲೆಟಿನ್ ಸ್ಟಿಕ್‌ಗಳು ಪತ್ತೆಯಾಗಿದ್ದರೂ ಆರೋಪಿಯನ್ನು ಪತ್ತೆಹಚ್ಚಲಾಗಿಲ್ಲ. ಎರಡು ವರ್ಷಗಳ ಹಿಂದೆ ತಿರುವಾಭರಣ ದಾರಿಯಲ್ಲಿ ವಡಕ್ಕೇಕರ ಸಾರಕ್ಕಡವು ಸೇತುವೆ



ಕಂಬದ ಕೆಳಗೆ ಜಿಲೆಟಿನ್ ಸ್ಟಿಕ್‌ಗಳು ಪತ್ತೆಯಾಗಿದ್ದವು. ಈ ಬಗ್ಗೆ ಕೇಸು ದಾಖಲಾಗಿದ್ದರೂ ಆರೋಪಿಗಳನ್ನು ಬಂಧಿಸದಿರುವುದು ಅಚ್ಚರಿಗೆ ಕಾರಣವಾಗಿದೆ. ಹೀಗೆ ಭಾರೀ ಭದ್ರತಾ ಬೆದರಿಕೆ ಎದುರಿಸುತ್ತಿರುವ ಶಬರಿಮಲೆ ಕ್ಷೇತ್ರದ ಸುರಕ್ಷತೆಗೆ ಸಶಸ್ತ್ರ ಸೇನೆಯನ್ನು ಕೂಡಲೇ ನೇಮಿಸಬೇಕೆಂದು ಹಿಂದು ಐಕ್ಯ ವೇದಿಕೆಯ ರಾಜ್ಯ ಸಮಾವೇಶದಲ್ಲಿ ಆಗ್ರಹಿಸಲಾಗಿದೆ.

ಶಬರಿಮಲೆ ಕ್ಷೇತ್ರದಿಂದ ಚಿನ್ನ ಕಳವುಗೈದ ಪ್ರಕರಣದಲ್ಲಿ ಎಸ್‌ಐಟಿ ಇದುವರೆಗೆ ಆರೋಪಪಟ್ಟಿ ಸಲ್ಲಿಸಿಲ್ಲ. ಅದೇ ರೀತಿ ಎಲ್ಲಾ ಆರೋಪಿಗಳನ್ನು ಬಂಧಿಸಿಲ್ಲ. ಈ ಹಿನ್ನೆಲೆಯಲ್ಲಿ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು. ಈ ಮೂಲಕ ಸಮಗ್ರ ಹಾಗೂ ನ್ಯಾಯಯುತ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಸೆರೆಹಿಡಿಯಬೇಕು ಎಂದು ಹಿಂದು ಐಕ್ಯ ವೇದಿಕೆ ಒತ್ತಾಯಿಸಿದೆ. ಯುವತಿ ಪ್ರವೇಶವನ್ನು ಪ್ರತಿಭಟಿಸಿ ಕೇರಳದ ಮಾತೆಯರು ಸಹಿತ ಅಯ್ಯಪ್ಪ ಭಕ್ತರು ಶಾಂತ ರೀತಿಯಲ್ಲಿ ನಡೆಸಿದ ನಾಮಜಪ ಚಳವಳಿಯ ಹೆಸರಿನಲ್ಲಿ ಈ ಹಿಂದಿನ ಪಿಣರಾಯಿ ವಿಜಯನ್ ಸರಕಾರವು ದಾಖಲಿಸಿದ ಸುಳ್ಳು ಕೇಸುಗಳನ್ನು ಹಿಂತೆಗೆಯಬೇಕೆಂದು ಹಿಂದು ಐಕ್ಯ ವೇದಿಕೆಯ ಸಮ್ಮೇಳನವು ಆಗ್ರಹಿಸಿದೆ.

ಯಾಕೆ ಅಗತ್ಯ?

- ಕ್ಷೇತ್ರದ ಮೇಲ್ಭಾಗದಲ್ಲೇ ಹಾರಾಡಿದೆ ಕೋಸ್ಟ್ ಗಾಡ್ ಗೆ ಸೇರದಹೆಲಿಕಾಪ್ಟರ್
- ಕ್ಷೇತ್ರದ ಬಾಗಿಲು ಮುಚ್ಚಿದ ಹೊತ್ತಿನಲ್ಲಿ ಯೂಟ್ಯೂಬರ್‌ನಿಂದ ಚಿತ್ರೀಕರಣ ನಡೆದಿದೆ
- ಶಬರಿಮಲೆಯ ಸಮೀಪ ಕೋನ್ನಿಪಾಡಂ ಅರಣ್ಯ ಪ್ರದೇಶದಲ್ಲಿ ಪ್ರಬಲ ಸ್ಫೋಟ ಶಕ್ತಿಯ ಜಿಲೆಟಿನ್ ಸ್ಟಿಕ್ ಪತ್ತೆಯಾಗಿವೆ

ಭಕ್ತರಿಗೆ ಸಮಸ್ಯೆ ಒಡ್ಡುವ ಬೀಡಾಡಿ ಜಾನುವಾರುಗಳಿಗಾಗಿ ಕುಕ್ಕೆ ಕ್ಷೇತ್ರದ ವತಿಯಿಂದ ನಿರ್ಮಾಣವಾಗುತ್ತಿದೆ 92 ಲಕ್ಷ ರೂ. ವೆಚ್ಚದಲ್ಲಿ ನೂತನ ಗೋಶಾಲೆ

ಅನಾಥ ಗೋವುಗಳಿಗೆ ಸಿಗಲಿದೆ ಮೇವು, ನೀರು, ಅತ್ಯಾಧುನಿಕ ವಸತಿ ವ್ಯವಸ್ಥೆ

• **ಸುಬ್ರಹ್ಮಣ್ಯ:** ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವತಿಯಿಂದ ಶ್ರೀ ದೇವಳದ ನಕ್ಷತ್ರ ವನದಲ್ಲಿ ನೂತನ ಗೋಶಾಲೆ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು, ಶೀಘ್ರದಲ್ಲೇ ಉದ್ಘಾಟನೆಗೊಳ್ಳಲಿದೆ. ಇದರಿಂದಾಗಿ ಬೀಡಾಡಿ ಗೋವುಗಳ ಸಮಸ್ಯೆಯಿಂದ ಭಕ್ತರಿಗೆ ಮತ್ತು ಸಾರ್ವಜನಿಕರಿಗೆ ಮುಕ್ತಿ ಸಿಗಲಿದೆ.

ಉಪಟಳದಿಂದ ಸಮಸ್ಯೆ

ಸುಬ್ರಹ್ಮಣ್ಯದ ಪೇಟೆಯೂ ದೊಡ್ಡದು ಭಕ್ತರೂ ಹೆಚ್ಚು ಆದ್ದರಿಂದ ಇಲ್ಲಿ ಬೀಡಾಡಿ ಗೋವುಗಳಿಂದ ಆಗುವ ಉಪದ್ರವೂ ಹೆಚ್ಚಾಗಿತ್ತು, ಇಲ್ಲಿ ಸಾಧಾರಣವಾಗಿ ಬೇರೆ ಬೇರೆ ಊರಿಂದು ಬಂದು ಗೋವುಗಳನ್ನು ಬಿಟ್ಟು ಹೋಗುವುದರಿಂದಲೇ ಬೀಡಾಡಿ ಗೋವುಗಳು ಅತೀ ಹೆಚ್ಚು ಇವೆ. ಇದರಿಂದ ಭಕ್ತರಿಗಾದ ತೊಂದರೆ ಅಷ್ಟಿಷ್ಟಲ್ಲ. ಭಕ್ತರ ಮೇಲೆ ಹರಿ ಹಾಯುವುದು, ರಸ್ತೆಯಲ್ಲೇ ಮಲಗುವುದು



ಇತ್ಯಾದಿ ನಡೆದಿತ್ತು. ಇದರಿಂದ ವಾಹನಗಳು ಅಪಘಾತವಾಗಿರುವ ಘಟನೆಗಳೂ ನಡೆದಿತ್ತು.

ಸುಮಾರು 200 ಗೋವುಗಳಿಗೆ ಅವಕಾಶ

ಸುಬ್ರಹ್ಮಣ್ಯದಲ್ಲಿ ಈಗ ನಿರ್ಮಿಸುತ್ತಿರುವ ಗೋಶಾಲೆ 1.5 ಎಕರೆ ಜಾಗ ಹೊಂದಿರುವ ನಕ್ಷತ್ರ ವನದೊಳಗಿದೆ. ಒಂದು ದೊಡ್ಡ ಹಟ್ಟಿ, ಉಗ್ರಾಣ, ಕುಡಿಯುವ ನೀರಿನ ವ್ಯವಸ್ಥೆಗೆ ಅಲ್ಲಲ್ಲಿ ಸಣ್ಣ ಸಣ್ಣ ಕೊಳಗಳು, ಮೇವು ಒದಗಿಸುವ ಶೆಡ್‌ಗಳಿವೆ. ಇಲ್ಲಿ ಗೋವುಗಳು ಸ್ವಚ್ಛಂದವಾಗಿ 1.5 ಎಕರೆಯೊಳಗೆ ಎಲ್ಲೆಂದರಲ್ಲಿ ಓಡಾಡಬಹುದಾಗಿದೆ. ಸುತ್ತಲೂ ತಡೆಬೇಲಿ ಇರಲಿದೆ. ಗೋ ಶಾಲೆಯ ಸುತ್ತಲೂ ವಾಕಿಂಗ್ ಹೋಗುವವರಿಗೆ ವಾಕಿಂಗ್ ಪಾಥ್ ಇರಲಿದೆ. ಮುಖ್ಯ ರಸ್ತೆಯಿಂದಲೇ ಮೆಟ್ಟಿಲುಗಳನ್ನು ನಿರ್ಮಿಸಿ ಜನತೆ ವೀಕ್ಷಿಸಲು ಬರುವ ವ್ಯವಸ್ಥೆ ಮಾಡ ಲಾಗುವುದು. ಸುಮಾರು 150, 200 ಗೋವುಗಳಿಗೆ ಸ್ವಚ್ಛಂದವಾಗಿ ಇರಲು ಇಲ್ಲಿ ಇನ್ನು ಅವಕಾಶಗಳನ್ನು ನಿರ್ಮಿಸಲಾಗಿದೆ.

- ಸುಮಾರು ಒಂದೂವರೆ ಎಕರೆ ಜಾಗದಲ್ಲಿ ಸ್ವಚ್ಛಂದ ಓಡಾಟ ಅವಕಾಶ
- ಇಲ್ಲಿರಲಿದೆ ದೊಡ್ಡ ಹಟ್ಟಿ, ಉಗ್ರಾಣ, ಕುಡಿಯುವ ನೀರಿನ ವ್ಯವಸ್ಥೆ
- ಭಕ್ತರು, ಸಾರ್ವಜನಿಕರು ಎದುರಿಸುವ ಸಮಸ್ಯೆಗಳಿಗೆ ಶೀಘ್ರವೇ ಮುಕ್ತಿ

ಶಾಶ್ವತ ಪರಿಹಾರದ ಯೋಜನೆ

ನಾನು ಇದೇ ಊರಿನವನಾಗಿದ್ದು ಇಲ್ಲಿ ಬೀಡಾಡಿ ಗೋವುಗಳಿಂದಾಗುವ ಸಮಸ್ಯೆಯನ್ನು ಬಹಳ ಹತ್ತಿರದಿಂದ ನೋಡಿದವನು. ಸಾರ್ವಜನಿಕ ಸ್ಥಳದಲ್ಲಿ ಗೋವನ್ನು ಬಿಟ್ಟು ಹೋಗುವ ಬೇಜವಾಬ್ದಾರಿ ಮನೋಸ್ಥಿತಿಯವರಿಂದ ಇಂತಹ ಸ್ಥಿತಿ ಉಂಟಾಗಿದೆ. ನಾವು ಭಾಷಣದಲ್ಲಿ ಮಾತ್ರ ಹೇಳುವುದಿಲ್ಲ. ಸಮಸ್ಯೆ ಪರಿಹರಿಸಲು ಪಯತ್ನಿಸುತ್ತೇವೆ.

■ ಹರೀಶ್ ಇಂಜಾಡಿ, ಅಧ್ಯಕ್ಷರು ವ್ಯವಸ್ಥಾಪನಾ ಸಮಿತಿ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

ನಕ್ಷತ್ರ ವನದಲ್ಲಿ ನಿರ್ಮಾಣ

ಬೀಡಾಡಿ ಗೋವುಗಳಿಂದ ಉಂಟಾಗುತ್ತಿದ್ದ ತೊಂದರೆಗಳು ಸುಬ್ರಹ್ಮಣ್ಯ ಗ್ರಾ.ಪಂ. ಮತ್ತು ದೇವಾಲಯದ ಆಡಳಿತಕ್ಕೂ ಬಗೆಹರಿಸಲಾಗದ ಸಮಸ್ಯೆ ಆಗಿ ಪರಿಣಮಿಸಿತ್ತು. ಆದರೀಗ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದ ವತಿಯಿಂದ ವಲ್ಲೀಶ ಸಭಾಭವನದ ಎದುರು ಭಾಗದ ನಕ್ಷತ್ರ ವನದಲ್ಲಿ ಗೋಶಾಲೆ ನಿರ್ಮಿಸುತ್ತಿದ್ದು, ಇನ್ನು ಕೆಲವೇ ತಿಂಗಳುಗಳಲ್ಲಿ ಇದು ಲೋಕಾರ್ಪಣೆ ಆಗಲಿದೆ. ಈ ಮೂಲಕ ಈ ಸಮಸ್ಯೆ ಬಗೆಹರಿಯಲಿದೆ. ಈಗಾಗಲೇ ರೂ.92 ಲಕ್ಷ ವೆಚ್ಚದಲ್ಲಿ ಕೆಲಸಗಳು ನಡೆಯುತ್ತಿದ್ದು, ಎಲ್ಲವೂ ಅಂದುಕೊಂಡಂತೆ ನಡೆದರೆ ಷಷ್ಠಿ ಸಂದರ್ಭ ಅಥವಾ ಇತರೇ ದಿನಗಳಲ್ಲಿ ಬಹು ದೊಡ್ಡ ಸಮಸ್ಯೆಯಾಗಿ ಕಾಡುತ್ತಿದ್ದ ಬೀಡಾಡಿ ಗೋವುಗಳ ಸಮಸ್ಯೆ ಶಾಶ್ವತವಾಗಿ ಬಗೆಹರಿಯಲಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 33° 27° | ಉಡುಪಿ 33° 28°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 29, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2
ತ್ಯಾಜ್ಯ ರಾಶಿಯ ಕೊಂಪೆಯಾದ ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲ



ಪುಟ 5
ಅಪಾಯ ಭೀತಿಯಲ್ಲಿದೆ ಮುಳಿಗದ್ದೆಯ ಅಂಗನವಾಡಿ ಕಟ್ಟಡ!

ಅಮ್ಮನ ಕಾಣಲು ಬಂದರುನಗರಿ ಮಂಗಳೂರಿಗೆ ದೇಶ ವಿದೇಶಗಳಿಂದ ಹರಿದುಬಂತು ಭಕ್ತಪ್ರವಾಹ



ಮಂಗಳೂರು ನಗರದ ಬೋಳೂರಿನಲ್ಲಿರುವ ಮಾತಾ ಅಮೃತಾನಂದಮಯಿ ಮಠದಲ್ಲಿ ಗುರುವಾರ ಶ್ರೀ ಬಗರಹಸ್ಥಾನ ಮಹೋತ್ಸವ 'ಅಮೃತ ಸಂಗಮ 2026' ಕಾರ್ಯಕ್ರಮಕ್ಕೆ ಅದ್ದೂರಿಯ ಚಾಲನೆ ಸಿಕ್ಕಿತು. ಈ ಸಂದರ್ಭ ಮಾತಾ ಅಮೃತಾನಂದಮಯಿ ಅಮ್ಮನವರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಊರ ಪರವೂರ, ದೇಶ ವಿದೇಶಗಳ ಭಕ್ತರನ್ನು ಆಶೀರ್ವದಿಸಿದರು. ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಳ್‌ಬಾಗ್

ಸುತ್ತ ಮುತ್ತ

ಕರಾವಳಿಗೆ ಜೂನ್ ಮೊದಲ ವಾರ ಮುಂಗಾರು ಪ್ರವೇಶ?

ಮಂಗಳೂರು: ಕರಾವಳಿ ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ಮಳೆಯ ವಾತಾವರಣ ಕಡಿಮೆಯಾಗಿದ್ದು, ಮೋಡ ಹಾಗೂ ಬಿಸಿಲ ವಾತಾವರಣ ಕಂಡು ಬರುತ್ತಿದೆ. ಗ್ರಾಮೀಣ ಪ್ರದೇಶಗಳ ಅಲ್ಲಲ್ಲಿ ಒಂದೆರಡು ಮಳೆಯಾಗುತ್ತಿದ್ದು, ಮುಂಗಾರು ಮಾರುತಗಳು ದುರ್ಬಲವಾದ ಕಾರಣ ಈ ಬಾರಿ ನಿಗದಿತ ಸಮಯಕ್ಕಿಂತ ತಡವಾಗಿ ಕರಾವಳಿ ಜಿಲ್ಲೆಗೆ ಮುಂಗಾರು ಪ್ರವೇಶ ಮಾಡಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಅಲ್ಲದೇ ತಿಂಗಳ ಅಂತ್ಯಕ್ಕೆ ಕೇರಳಕ್ಕೆ ಮುಂಗಾರು ಮಾರುತ ಪ್ರವೇಶಿಸುವ ಸಾಧ್ಯತೆಯಿದ್ದು, ಜೂನ್ ಮೊದಲ ವಾರ ಕರಾವಳಿಗೆ ಮುಂಗಾರು ಪ್ರವೇಶಿಸಲಿದೆ ಎಂದು ಅಂದಾಜಿಸಲಾಗಿದೆ. ಅಲ್ಲದೇ ಮುಂದಿನ 4–5 ದಿನ ಕರಾವಳಿಯಲ್ಲಿ ಅಲ್ಲಲ್ಲಿ ಸಾಮಾನ್ಯ ಮಳೆಯ ಸಾಧ್ಯತೆ ಇದ್ದು, ಉತ್ತಮ ಮಳೆಯ ಸಾಧ್ಯತೆ ಕ್ಷೀಣಿಸುತ್ತಿದೆ. ಮಳೆ ಇಳಿಕೆ ಹಿನ್ನಲೆಯಲ್ಲಿ ಕರಾವಳಿಯಲ್ಲಿ ಸೆಕೆಯ ವಾತಾವರಣ ಹೆಚ್ಚಿದೆ.

ಏರಿಕೆ ಕಾಣದ ಧಾರಣೆ: ಅಡಿಕೆ ಮಾರುಕಟ್ಟೆಯಲ್ಲಿ ಕಾಣದ ಉತ್ಸಾಹ

ಮಂಗಳೂರು: ಅಡಿಕೆ ಮಾರುಕಟ್ಟೆ ಕಳೆದ ಒಂದು ತಿಂಗಳುಗಳಿಂದ ಸ್ಥಿರವಾಗಿದ್ದು, ಮಾರುಕಟ್ಟೆಯಲ್ಲಿ ಧಾರಣೆ ಏರಿಕೆ ಕಾಣದ ಹಿನ್ನಲೆಯಲ್ಲಿ ಉತ್ಸಾಹ ಕಳೆಗುಂದಿದೆ. ಹೊಸ ಅಡಿಕೆ 450 ರೂ.ವಲ್ಲಿ ಸ್ಥಿರವಾಗಿದ್ದು, ಹಳೆ ಅಡಿಕೆ ಹಾಗೂ ಸಿಂಗಲ್ ಚೋಲ್ 535 ರೂ. ವಿನಲ್ಲಿ ಸ್ಥಿರವಾಗಿದೆ. ಹೊರ ದೇಶದಿಂದ ಹೇರಳ ಪ್ರಮಾಣದಲ್ಲಿ ಅಡಿಕೆ ಆಮದು ಪರಿಣಾಮ ಧಾರಣೆ ಸದ್ಯಕ್ಕೆ ಇಳಿಕೆ ಕಂಡಿದೆ ಎಂಬುದು ಮಾರುಕಟ್ಟೆ ತಜ್ಞರ ಅಭಿಪ್ರಾಯವಾಗಿದೆ. ಅಲ್ಲದೇ ಕಳೆದ ತಿಂಗಳು 550 ರೂ. ಆಸುಪಾಸು ಇದ್ದ ಧಾರಣೆ ಈಗ 535 ರೂ.ಗೆ ಇಳಿಕೆ ಕಂಡಿದ್ದು, ಇದು ಕೃಷಿಕರಿಗೆ ಹಿನ್ನಡೆಯಾಗಿದೆ. ಉಳಿದಂತೆ ಕಾಳು ಮೆಣಸು ದರ 680 ರೂ.ವಲ್ಲಿ ಸ್ಥಿರವಾಗಿದೆ.

ಕಾಸರಗೋಡು ತಾ. ಕಚೇರಿ ಹಿಂಭಾಗ ಮದ್ಯಪಾನಿಗಳ ಕಾಟ!

ಕಾಸರಗೋಡು: ನಗರದ ಕಾಸರಗೋಡು ತಾಲೂಕು ಕಚೇರಿ ಹಿಂಭಾಗದ ಓಪನ್ ಪ್ರದೇಶದಲ್ಲಿ ಮದ್ಯಪಾನಿಗಳ ತಂಡ ಹಾಗೂ ಕರ್ನಾಟಕ ಮದ್ಯ ಮಾರಾಟ ನಡೆಸುವ ತಂಡ ನಿರಂತರ ಸಕ್ರಿಯವಾಗಿದೆ ಎಂದು ಆರೋಪಿಸಲಾಗಿದೆ. ಹಾಡಹಗಲೇ ಈ ಪ್ರದೇಶಕ್ಕೆ ಮದ್ಯಸೇವನೆಗಾಗಿ ಬರುತ್ತಾರೆ. ಕರ್ನಾಟಕದಿಂದ ಲಭಿಸುವ ಕಡಿಮೆ ಬೆಲೆಯ ಪ್ಯಾಕೆಟ್ ಸಾರಾಯಿಯನ್ನು ಇಲ್ಲಿ ರಹಸ್ಯವಾಗಿ ಮಾರಾಟ ಮಾಡಲಾಗುತ್ತಿದೆ. ಮದ್ಯ ಸೇವಿಸಿ ಪ್ಯಾಕೆಟ್‌ಗಳನ್ನು ಅಲ್ಲೇ ಎಸೆದು ಹೋಗುತ್ತಾರೆ. ಸಬ್ ಜೈಲು, ಗ್ರಾಮ ಕಚೇರಿ, ತಾಲೂಕು ಸಪ್ಲೈ ಕಚೇರಿ, ಟ್ರಷರಿ ಮೊದಲಾದ ಸಂಸ್ಥೆಗಳು ಕಾರ್ಯಾಚರಿಸುತ್ತಿರುವ ನಗರದ ಹೃದಯ ಭಾಗದಲ್ಲಿ ಮದ್ಯಪಾನಿಗಳ ಅಟ್ಟಹಾಸ ಕಂಡು ಬರುತ್ತಿದೆ. ಕಾನೂನುಪಾಲಕರು ಕೂಡಲೇ ಇತ್ತ ಗಮನಹರಿಸಬೇಕಾಗಿದೆ.

ಕಾಂತಾವರ ಕ್ರಾಸ್ ಬಳಿ ಖಾಸಗಿ ಬಸ್ - ಕಾರು ಮುಖಾಮುಖಿ ಡಿಕ್ಕಿ

ಮೂಡುಬಿದಿರೆ: ಕಾರ್ಕಳ–ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿಯ ಬೆಳುವಾಯಿ ಕಾಂತಾವರ ಕ್ರಾಸ್ ಬಳಿ ಗುರುವಾರ ಖಾಸಗಿ ಬಸ್ ಮತ್ತು ಕಾರು ನಡುವೆ ಅಪಘಾತ ಸಂಭವಿಸಿದೆ. ಅಪಘಾತದ ಪರಿಣಾಮ ಎರಡೂ ವಾಹನಗಳಿಗೆ ಹಾನಿಯಾಗಿದೆ. ಕಾಂತಾವರ ಕ್ರಾಸ್ ಬಳಿಯ ಯು–ಟರ್ನ್ ಅನ್ನು ಬುಧವಾರದಿಂದ ಸಾರ್ವಜನಿಕರಿಗೆ ಸ್ಥಗಿತಗೊಳಿಸಲಾಗಿದ್ದರಿಂದ ಹಠಾತ್ ಸಂಚಾರ ಬದಲಾವಣೆ ಹಿನ್ನೆಲೆ ಈ ಅಪಘಾತ ಸಂಭವಿಸಿದೆ.

ಕದ್ದ ಫೋನ್‌ಗಳ ಪತ್ತೆಗೆ ಕೇಂದ್ರದ ಬ್ರಹ್ಮಾಸ್ತ್ರ

ಇದು ಸಂಚಾರ್ ಸಾಥಿ

ಐದೇ ನಿಮಿಷದಲ್ಲಿ ಬಯಲಾಗುತ್ತೆ ಜಾತಕ

ಉಡುಪಿ: ಉಡುಪಿಯಲ್ಲೀಗ 'ಸಂಚಾರ್ ಸಾಥಿ' ಆ್ಯಕ್ಟಿವ್ ಆಗಿದೆ. ಕಳೆದುಹೋದ ಅಥವಾ ಕಳವು ಮಾಡಲಾದ ಮೊಬೈಲ್ ಫೋನ್‌ಗಳ ದುರುಪಯೋಗವನ್ನು ತಡೆಯಲು ಹಾಗೂ ಅವುಗಳ ಮೂಲ ಮಾಲೀಕರನ್ನು ಪತ್ತೆಹಚ್ಚಲು ಕೇಂದ್ರ ಸರ್ಕಾರದ 'ಸಂಚಾರ್ ಸಾಥಿ' ವೆಬ್ ಪೋರ್ಟಲ್ ಮತ್ತು ಅಪ್ಲಿಕೇಶನ್ ಈಗ ಸಾರ್ವಜನಿಕರ, ಮೊಬೈಲ್ ವ್ಯಾಪಾರಿಗಳ ಪಾಲಿಗೆ ಅತ್ಯಂತ ಉಪಯುಕ್ತ ತಾಂತ್ರಿಕ ಬ್ರಹ್ಮಾಸ್ತ್ರವಾಗಿ ಮಾರ್ಪಟ್ಟಿದೆ.

ಬೆಳಕಿಗೆ ಬಂದ ಕೃತ್ಯ

ಇದಕ್ಕೆ ಪೂರಕವಾದ ಮಹತ್ವದ ಘಟನೆ ಇತ್ತೀಚೆಗೆ ಉಡುಪಿ ಜಿಲ್ಲೆಯಲ್ಲಿ ಬೆಳಕಿಗೆ ಬಂದಿದೆ. ಜಿಲ್ಲೆಯ ಕೆಲವು ಮೊಬೈಲ್ ಅಂಗಡಿಗಳಿಗೆ ಅಪರಿಚಿತ ವ್ಯಕ್ತಿಗಳು ಮೊಬೈಲ್ ಫೋನ್‌ಗಳನ್ನು ಮಾರಾಟ ಮಾಡಲು ಬಂದಿದ್ದರು. ಈ ಸಂದರ್ಭ ಅವರ ನಡವಳಿಕೆಯಿಂದ ಅಂಗಡಿಯ ಮಾಲೀಕರಿಗೆ ತೀವ್ರ ಸಂಶಯ ಮೂಡಿದೆ. ತಕ್ಷಣ ಜಾಗೃತರಾದ ಮಾಲೀಕರು ಆ ಮೊಬೈಲ್‌ಗಳನ್ನು ತಾವೇ ಖರೀದಿಸದೇ, 'ಸಂಚಾರ್ ಸಾಥಿ' ಆ್ಯಪ್ ಮೂಲಕವಾಗಿ ಇಂಟರ್‌ನೆಟ್‌ನಲ್ಲಿ ತಪಾಸಣೆಗೆ ಒಳಪಡಿಸಿದ್ದಾರೆ.

ಆಗ ಆ ಎಲ್ಲಾ ಮೊಬೈಲ್ ಫೋನ್‌ಗಳು ಈಗಾಗಲೇ ಬ್ಲಾಕ್ ಲಿಸ್ಟ್‌ನಲ್ಲಿ ಇರುವುದು ಪತ್ತೆಯಾಗಿದೆ. ಅಂದರೆ, ಆ ಮೊಬೈಲ್‌ಗಳ ಮೂಲ ಮಾಲೀಕರು ಅವುಗಳನ್ನು ಕಳೆದುಕೊಂಡು ದೂರುಗಳನ್ನು ದಾಖಲಿಸಿದ್ದರು. »ಪುಟ 6



ಆ್ಯಪ್ ಮೂಲಕ ಬಯಲು

ಯಾವುದೇ ಅಪರಿಚಿತ ವ್ಯಕ್ತಿಗಳು ಸೆಕೆಂಡ್ ಹ್ಯಾಂಡ್ ಮೊಬೈಲ್ ಮಾರಾಟ ಮಾಡಲು ಬಂದಾಗ, ಆ ಫೋನ್‌ಗಳು ಅಸಲಿ ಅಥವಾ ಕಳವು ಮಾಡಿದವು ಗಳೇ ಎಂಬುದನ್ನು ಕೇವಲ ಐದು ನಿಮಿಷಗಳಲ್ಲಿ ಈ ಆ್ಯಪ್ ಮೂಲಕ ಪತ್ತೆಹಚ್ಚಬಹುದಾಗಿದೆ. ಈ ಡಿಜಿಟಲ್ ತಂತ್ರಜ್ಞಾನದ ಜಾಗೃತಿಯು ಸದ್ಯದ ದಿನಗಳಲ್ಲಿ ಮೊಬೈಲ್ ಸಮ್ಮಿಶ್ರಿತ ಅಪರಾಧಗಳಿಗೆ ದೊಡ್ಡ ಮಟ್ಟದ ಬ್ರೇಕ್ ಹಾಕುತ್ತಿದೆ.

ಮೊದಲು ಪರಿಶೀಲಿಸಿ

ಸೆಕೆಂಡ್ ಹ್ಯಾಂಡ್ ಮೊಬೈಲ್ ಖರೀದಿಗೂ ಮುನ್ನ ಎಚ್ಚರ ಅಗತ್ಯ. ಸೈಬರ್ ವಂಚನೆ, ಕಳ್ಳತನ ಜಾಲದಿಂದ ತಪ್ಪಿಸಿಕೊಳ್ಳಲು ಯಾರೇ ಅಪರಿಚಿತ ವ್ಯಕ್ತಿಗಳು ಕಡಿಮೆ ಬೆಲೆಗೆ ಮೊಬೈಲ್ ಮಾರಾಟ ಮಾಡಲು ಬಂದಲ್ಲಿ ಆಮಿಷಕ್ಕೆ ಒಳಗಾಗದೆ ಮೊದಲು 'ಸಂಚಾರ್ ಸಾಥಿ' ಆ್ಯಪ್‌ನಲ್ಲಿ ಅದರ ಐಎಂಇಐ ಸಂಖ್ಯೆ ಹಾಕಿ ಪರಿಶೀಲನೆ ಮಾಡಬೇಕು. ಅಂಗಡಿ ಮಾಲೀಕರು ಇಂತಹ ಅಪರಿಚಿತ ಫೋನ್‌ಗಳ ತಪಾಸಣೆ ಮಾಡುವಾಗ ಅಪ್ಪಿತಪ್ಪಿ ತಮ್ಮ ಸ್ವಂತ ಸಿಮ್ ಕಾರ್ಡ್ ಬಳಸಬಾರದು. ಬದಲಿಗೆ ಮಾರಾಟ ಮಾಡಲು ಬಂದ ಗ್ರಾಹಕನ ಸಿಮ್ ಕಾರ್ಡ್ ಅನ್ನೇ ಅದಕ್ಕೆ ಹಾಕಿ ಪರಿಶೀಲಿಸುವುದು ಕಾನೂನಾತ್ಮಕ ಸುರಕ್ಷಿತ ಕ್ರಮ.

ಸೂಕ್ತ ಸವಲತ್ತು ಒದಗಿಸಲು ಆಗ್ರಹ

ಮಾನ್ಯತೆಗೆ ಕಾಯುತ್ತಿದ್ದಾರೆ ಅಧ್ಯಾಪಕರು, ಸಿಬ್ಬಂದಿಗಳು

ಸಮಾನ ಪ್ರತಿಫಲ ಲಭಿಸಬೇಕೆಂದು ಮನವಿ

ಕಾಸರಗೊಡು: ಕಾಸರಗೋಡಿನ 200ಕ್ಕೂ ಅಧಿಕ ಶಾಲೆಗಳ ಅಧ್ಯಾಪಕರು ಮತ್ತು ಸಿಬ್ಬಂದಿಗಳು ಸರ್ಕಾರದ ಸವಲತ್ತು ದೊರೆಯಲು ಮಾನ್ಯತೆ ಸಿಕ್ಕೀತೆಂಬ ಭರವಸೆಯಲ್ಲಿಯೇ ದಿನ ಕಲೆಯುತ್ತಿದ್ದಾರೆ.

ಕೇರಳದಲ್ಲಿ ವಿ.ಡಿ.ಸತೀಶನ್ ನೇತೃತ್ವದ ಐಕ್ಯ ರಂಗ ಸರ್ಕಾರದ ಮೊದಲ ಸಚಿವ ಸಂಪುಟ ಸಭೆಯಲ್ಲಿ ಅಂಗನವಾಡಿ, ಪೂರ್ವ ಪ್ರಾಥಮಿಕ ಸಿಬ್ಬಂದಿಗಳಿಗೆ , ಆಶಾ ಕಾರ್ಯಕರ್ತೆಯರಿಗೆ ಅರ್ಹ ಸವಲತ್ತುಗಳ ಘೋಷಿಸಿರುವ ಬೆನ್ನಲ್ಲೇ ತಮಗೂ ಮಾನ್ಯತೆ ನೀಡಿ ಸೂಕ್ತ ಸವಲತ್ತು ಹೆಚ್ಚಿಸಬೇಕೆಂದು ಕಾಸರಗೋಡು ಜಿಲ್ಲೆಯ 200ಕ್ಕೂ ಅಧಿಕ ಸರಕಾರಿ, ಅನುದಾನಿತ ವಲಯಗಳ ಪೂ.ಪ್ರಾ.ಶಾಲೆ (ಪ್ರಿ ಪ್ರೈಮರಿ ಶಾಲೆ)ಗಳ ಅಧ್ಯಾಪಕರು, ಸಹಾಯಕರು ಆಗ್ರಹಿಸಿದ್ದಾರೆ.

1000 ರೂ.ಗೌರವಧನ ಹೆಚ್ಚಳ

ಸಮಾನ ನೌಕರರಿಗೆ ಸಮಾನ ಪ್ರತಿಫಲ ಸಿಗಬೇಕೆಂದು 450ಕ್ಕೂ ಹೆಚ್ಚು ಸಿಬ್ಬಂದಿಗಳು ಮನವಿ ಮಾಡಿದ್ದಾರೆ. ಈ ಪೈಕಿ 20 ವರ್ಷಗಳಿಂದ ಸರ್ವೀಸ್ ನಡೆಸುತ್ತಿರುವ ಸಿಬ್ಬಂದಿಗಳಾಗಿದ್ದಾರೆ. ಇದೇ ವೇಳೆ ಅಂಗೀಕಾರ ವಿರುವ ಪೂ.ಪ್ರಾ.ಶಿಕ್ಷಕರಿಗೆ, ಸಹಾಯಕರಿಗೆ ಸರ್ಕಾರ 1000 ರೂ.ಗೌರವಧನ ಹೆಚ್ಚಿಸಿದೆ. »ಪುಟ 6



ಬೇಡಿಕೆ ಈಡೇರಿಸಲು ಆಗ್ರಹ

ಜಿಲ್ಲೆಯಲ್ಲಿ ಅತ್ಯುತ್ತಮ ರೀತಿಯಲ್ಲಿ ಕಾರ್ಯಾಚರಿಸುತ್ತಿರುವ ಉಳಿದ ಪೂರ್ವ ಪ್ರಾಥಮಿಕ ಶಾಲೆಗಳ ಅಂಗೀಕರಿಸಿ ಸವಲತು ಮಂಜೂರುಗೊಳಿಸಬೇಕೆಂಬ ಬೇಡಿಕೆ ವ್ಯಾಪಕಗೊಂಡಿದೆ. ಹೆಚ್ಚಿನವರು ಕನಿಷ್ಠ ವೇತನದಲ್ಲಿ ದುಡಿಯುವವರಾಗಿದ್ದಾರೆ. ತಿಂಗಳಿಗೆ ಕೇವಲ 2,500ರೂ. ವೇತನ ಪಡೆದು ಕರ್ತವ್ಯ ನಿರ್ವಹಿಸುವವರೂ ಇದ್ದಾರೆ. ಸರಕಾರದ ಅಂಗೀಕಾರವಿಲ್ಲದ ಪೂರ್ವ ಪ್ರಾಥಮಿಕ ಶಾಲೆಗಳನ್ನು ರಕ್ಷಕ ಶಿಕ್ಷಕ ಸಂಘಗಳು ನಿರ್ವಹಿಸುತ್ತಿವೆ. ಸರಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಉಳಿಸುತ್ತಿರುವುದು ಮುಖ್ಯವಾಗಿ ಪೂರ್ವ ಪ್ರಾಥಮಿಕ ಶಾಲೆಗಳಾಗಿವೆ ಎಂಬುದನ್ನು ಸರಕಾರ ಮರೆತಂತಿದೆ.

ತೆಕಟ್ಟೆ ಗ್ರಾಮ ಪಂಚಾಯತ್‌ನ ಸ್ವಚ್ಛತಾ ಕಾರ್ಯಕ್ಕೆ ಸಿಕ್ಕಿತು ನೋಡಿ ಪ್ರಶಂಸೆ

'ಸ್ವಚ್ಛತೆಯತ್ತ ಉಡುಪಿ ಜಿಲ್ಲೆ' ಮೆಚ್ಚುಗೆ ಪೋಸ್ಟರ್

ಕೋಟ: ಇಲ್ಲಿನ ತೆಕ್ಕಟ್ಟೆ ಗ್ರಾಮ ಪಂಚಾಯತ್ ಸ್ವಚ್ಛ ಭಾರತ್ ಪರಿಕಲ್ಪನೆಗೆ ಟೊಂಕ ಕಟ್ಟಿ ಶ್ರಮಿಸುತ್ತಿದೆ ತೆಕ್ಕಟ್ಟೆ ರಾಷ್ಟ್ರೀಯ ಒಳರಸ್ತೆಗಳನ್ನು ತ್ಯಾಜ್ಯ ಮುಕ್ತಗೊಳಿಸಲು ಸಂಕಲ್ಪ ತೊಟ್ಟು ಅವಿರತ ಶ್ರಮಿಸುತ್ತಿದೆ. ತ್ಯಾಜ್ಯ ಮುಕ್ತಗೊಳಿಸಲು ಪ್ರವಾಸಿ ಬಸ್ ಸೇರಿದಂತೆ ಪ್ರವಾಸಿಗರಿಗೆ ಎಚ್ಚರಿಕೆ ಕರೆಗಂಟೆ ನೀಡಿ ಜಾಗೃತಿ ಮೂಡಿಸು ತ್ತಿದೆ, ಆದರೆ ಇತ್ತೀಚಿಗೆ ತೆಕ್ಕಟ್ಟೆ ಗ್ರಾ.ಪಂ., ಎಸ್ ಎಲ್ಆರ್ ಎಂ ಘಟಕ, ಕೋಟದ ಪಂಚ ವರ್ಣ ಸಂಘಟನೆ, ಜೈ ಭಾರತ್, ತೆಕ್ಕಟ್ಟೆ ಫ್ರೆಂಡ್ಸ್ ಇವರ ಜಂಟಿ ಆಶ್ರಯದಲ್ಲಿ ತೆಕ್ಕಟ್ಟೆ ರಾಷ್ಟ್ರೀಯ ಹೆದ್ದಾರಿ ಬೃಹತ್ ಸ್ವಚ್ಛತಾ ಅಭಿಯಾನ ಕೈಗೊಂಡು ಬಾರಿ ಸದ್ದು ಮಾಡಿತ್ತು. ಅದನ್ನು ತನ್ನ ಸಾಮಾಜಿಕ ಜಾಲತಾಣದಲ್ಲಿ ಶೇರ್ ಮಾಡಿತ್ತು ಆದರೆ ರಾಜ್ಯ ಸರಕಾರದ ಗ್ರಾಮೀಣಾ ಭಿವೃದ್ಧಿ ಪಂ.ರಾಜ್ ಇಲಾಖೆ ಮೆಚ್ಚುಗೆ ವ್ಯಕ್ತಪಡಿಸಿ ತನ್ನ ವೈಬ್‌ಸೈಟ್ ಪೇಜ್‌ನಲ್ಲಿ 'ಸ್ವಚ್ಛತೆಯತ್ತ ಉಡುಪಿ ಜಿಲ್ಲೆ' ಎಂಬ ಪೋಸ್ಟರ್ ಪೋಸ್ಟರ್‌ನ್ನು ತನ್ನ ಅಳವಡಿಸಿಕೊಂಡು ಶೇರ್ ಮಾಡಿ ಪ್ರಶಂಸಿದೆ.



ಸ್ವಚ್ಛತೆಗೆ ಸಹಕರಿಸಿದ ವೆಲ್ಲರಿಗೂ ಕೃತಜ್ಞತೆ



ತೆಕ್ಕಟ್ಟೆ ಪಂ.ವ್ಯಾಪ್ತಿಯಲ್ಲಿ ಇತ್ತೀಚಿಗೆ ವಿವಿಧ ಸಂಘಟನೆಗಳ ನೇತೃತ್ವ ತೆಕ್ಕಟ್ಟೆ ರಾಷ್ಟ್ರೀಯ ಸ್ವಚ್ಛತಾ ಅಭಿಯಾನ ಹಮ್ಮಿಕೊಂಡಿತು. ಇದನ್ನು ಇಲಾಖೆ ಗುರು ತಿಸಿ ಇನ್‌ಸ್ಟಾಗ್ರಾಂನ ಪೋಸ್ಟರ್‌ನಲ್ಲಿ ಶೇರ್ ಮಾಡಿ ಪ್ರಶಂಸಿಸಿದೆ ಇದಕ್ಕೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇವೆ.

● ಸಂತೋಷ್ ಕುಮಾರ್, ಪಿಡಿಓ ತೆಕ್ಕಟ್ಟೆ

ಪ್ರತಿಯೊಬ್ಬರಲ್ಲೂ ಇರಲಿ ಜಾಗೃತಿ



ಪಂಚಾಯತ್ ಸ್ವಚ್ಛತಾ ಜಾಗೃತಿ ಪ್ರತಿಯೊಬ್ಬರಲ್ಲೂ ಬರಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿಹೆಚ್ಚಿನ ಸಮಸ್ಯೆ ಎದುರಿಸಬೇಕಾಗಿದೆ,ಕಂಡ ಕಂಡಲ್ಲಿ ತ್ಯಾಜ್ಯ ಎಸೆಯುವ ಮನಸ್ಥಿತಿ ಬದಲಾಯಿಸಿ ಸ್ಥಳೀಯಾ ಡಳಿತಗಳಿಗೆ ಸಹಕಾರ ನೀಡಿದರೆ ಪರಿಸರ ಪರಿಶುದ್ಧವಾಗಿರಿಸಿಕೊಳ್ಳಲು ಸಾಧ್ಯ.

● ರೇವತಿ ತೆಕಟ್ಟೆ , ತೆಕಟೆ ಎಸ್ ಎಲ್ಆರ್ ಎಂ ಘಟಕದ ಮುಖ್ಯಸ್ಥೆ

ಆಮೆಗತಿಯಲ್ಲಿ ಸಾಗುತ್ತಿರುವ ದೇವಳ ದ್ವಾರ ಸ್ಥಳಾಂತರ



ರಾಷ್ಟ್ರೀಯ ಹೆದ್ದಾರಿ 66ರ ಮುಲ್ಕಿ ಸಮೀಪದ ಬಪ್ಪನಾಡು ಬಳಿ ದೇವಸ್ಥಾನದ ದ್ವಾರ ಸ್ಥಳಾಂತರ ಕಾರ್ಯ ನಿಧಾನಗತಿಯಲ್ಲಿ ನಡೆಯುತ್ತಿದ್ದು, ಭಕ್ತಾದಿಗಳಿಗೆ ಹಾಗೂ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ.

ತುಂಬೆ ಅಣೆಕಟ್ಟಿನಲ್ಲಿ 4.95 ಮೀ.ಗೆ ಏರಿಕೆಯಾದ ನೀರಿನ ಮಟ್ಟ | ಸದ್ಯ ಮಂಗಳೂರಿನ ಕುಡಿಯುವ ನೀರಿನ ಆತಂಕ ದೂರ

ನೇತ್ರಾವತಿಯ ಮಡಿಲ ಕಳೆ ಹೆಚ್ಚಿಸಿದೆ ಘಟ್ಟ ಪ್ರದೇಶಗಳಲ್ಲಿ ಸುರಿದ ಮಳೆ

ಬಂಟ್ವಾಳ: ಘಟ್ಟ ಪ್ರದೇಶದಲ್ಲಿ ಮಳೆಯಾದ ಹಿನ್ನಲೆ ದ.ಕ.ಜಿಲ್ಲೆಯ ಜೀವನದಿ ನೇತ್ರಾವತಿ ನದಿಯಲ್ಲಿ ನೀರಿನ ಮಟ್ಟದಲ್ಲಿ ಕೊಂಚ ಸುಧಾರಣೆಯಾಗಿದ್ದು, ಗುರುವಾರ ಸಂಜೆಯ ವೇಳೆಗೆ ತುಂಬೆ ವೆಂಟಡ್ ಡ್ಯಾಂನಲ್ಲಿ 4.95 ಮೀ.ನಷ್ಟು ನೀರು ಸಂಗ್ರಹವಾಗಿದ್ದು, ಸದ್ಯ ಮಂಗಳೂರು ನಗರದ ಜನತೆಗೆ ಕುಡಿಯುವ ನೀರಿನ ಆತಂಕ ದೂರವಾಗಿದೆ.

ಕೆಲ ದಿನಗಳಿಂದ ಘಟ್ಟ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿದ್ದರೆ, ಜಿಲ್ಲೆಯಲ್ಲಿ ಹೇಳುವಂತ ಮಳೆಯಾಗಿಲ್ಲ, ಬಿಸಿಲಿನ ಜೊತೆಗೆ ಆಗಾಗ ಹನಿ ಮಳೆಯಾ ಗುತ್ತಿದೆ. ಬಿರುಸಿನ ಮಳೆ ಇನ್ನು ಆರಂಭವಾಗಿಲ್ಲ, ನೇತ್ರಾವತಿಯಲ್ಲಿ ನೀರಿನ ಒಳ ಹರಿವಿನಲ್ಲಿ ಹೆಚ್ಚಾಗಿ ರುವುದರಿಂದ ನೀರಿನ ಮಟ್ಟದಲ್ಲಿ ಏರಿಕೆ ಕಂಡು ಬಂದಿದೆ. ಸದ್ಯದ ಮಟ್ಟಿಗೆ ಮಂಗಳೂರಿನ ಜನತೆಯ ಕುಡಿಯುವ ನೀರಿನ ಆತಂಕ ದೂರವಾದಂತಾಗಿದೆ.ಇನ್ನೇನು ಮಳೆಗಾಲ ಆರಂಭವಾಗಲಿದೆ.

ಬಂಟ್ವಾಳದಲ್ಲೂ ನೀರಿನ ಸಮಸ್ಯೆಯಿಲ್ಲ

ಬಂಟ್ವಾಳದ ಜಕ್ರಿಬೆಟ್ಟು ಡ್ಯಾಂನಲ್ಲು ನೀರು ಶೇಖರಿಸಿಡಲಾಗಿದೆ. ಜಕ್ರಿಬೆಟ್ಟು ಡ್ಯಾಂ ನಿರ್ಮಾಣದಿಂದಾಗಿ ಬಂಟ್ವಾಳ ಪುರಸಭಾ ವ್ಯಾಪ್ತಿಯ ನಗರ ಪ್ರದೇಶ ಹಾಗೂ ವಿವಿಧೆಡೆಯಲ್ಲಿ ಅನುಷ್ಠಾನಗೊಂಡಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಿಂದ ತಾಲೂಕಿನಲ್ಲಿಯು ಕುಡಿಯುವ ನೀರಿಗೆ ಅಷ್ಟೊಂದು ಸಮಸ್ಯೆ ಉಂಟಾಗಿಲ್ಲ



ಒಳ ಹರಿವು ಹೆಚ್ಚಳದಿಂದ ಡ್ಯಾಂನಲ್ಲೂ ನೀರು ಏರಿಕೆ

ವಾರದ ಹಿಂದೆ ತುಂಬೆ ವೆಂಟೆಡ್ ಡ್ಯಾಂನಲ್ಲಿ 4 ಮೀ.ನಷ್ಟು ಮಾತ್ರ ನೀರು ಶೇಖರಣೆಯಾಗಿದ್ದು, ಎಎಂಆರ್ ಡ್ಯಾಂನಿಂದ ಹೆಚ್ಚುವರಿ ನೀರನ್ನು ತುಂಬೆ ಡ್ಯಾಂನತ್ತ ಹರಿಯ ಬಿಡಲಾಗಿತ್ತಲ್ಲದೆ ಮಳೆ ಸಹಿತ ಒಳ ಹರಿವಿನಲ್ಲಿ ಹೆಚ್ಚಳವಾದ ಪರಿಣಾಮ ತುಂಬೆ ಡ್ಯಾಂನಲ್ಲಿ ಇದೀಗ ನೀರಿನ ಸಂಗ್ರಹದಲ್ಲೂ ಹೆಚ್ಚಳವಾಗಿದೆ.

ಸ್ವರ್ಣ ನದಿ ಅಣೆಕಟ್ಟಿನಲ್ಲಿ ಆತಂಕಕಾರಿ ಮಟ್ಟಕ್ಕೆ ಕುಸಿದ ನೀರು

ಉಡುಪಿ ನಗರಸಭೆ ವ್ಯಾಪ್ತಿಗೆ ಕುಡಿಯುವ ನೀರು ಪೂರೈಸುವ ಬಜೆ ಜಲಾನಯನ ಪ್ರದೇಶದ ಸ್ವರ್ಣ ನದಿ ಅಣೆಕಟ್ಟಿನಲ್ಲಿ ನೀರಿನ ಮಟ್ಟ ತೀವ್ರವಾಗಿ ಕುಸಿದಿದೆ. ಮೇ ತಿಂಗಳ ಆರಂಭದಲ್ಲಿ ಡ್ಯಾಂನಲ್ಲಿ 2.7 ಮೀಟರ್ ನೀರು ಸಂಗ್ರಹವಿತ್ತು. ಆದರೆ ಭೀಕರ ಬಿಸಿಲು ಹಾಗೂ ಮಳೆಯ ಕೊರತೆಯಿಂದಾಗಿ ಮೇ 28 ರ ವೇಳೆಗೆ ನೀರಿನ ಮಟ್ಟ ಕೇವಲ 2 ಮೀಟರ್‌ಗೆ ಇಳಿಕೆಯಾಗಿದೆ. ಕೇವಲ ನಾಲ್ಕು ವಾರಗಳಲ್ಲಿ ಭಾರಿ ಪ್ರಮಾಣದ ನೀರು ಖಾಲಿಯಾಗಿದ್ದು, ಮುಂಗಾರು ಮಳೆ ವಿಳಂಬವಾದರೆ ಕಠಿಣ ಪರಿಸ್ಥಿತಿ ಎದುರಾಗಲಿದೆ.

ಪ್ರವರ್ಗ 3ರಲ್ಲಿ ಸೇರ್ಪಡೆಯಿಂದ ಬಂಟ ಸಮುದಾಯ ಸೌಲಭ್ಯಗಳಿಂದ ವಂಚಿತ 2

ಕದ್ರಿಯಲ್ಲಿ ಮಾವು ಮೇಳಕ್ಕೆ ಚಾಲನೆ: ವಿವಿಧ ತಳಿಯ ಹಣ್ಣುಗಳ ಮಾರಾಟ 3

ಚಾರಣ ತಾಣ ರಾಣಿಪುರದಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಳ 5

ಕಟಪಾಡಿಯಲ್ಲಿ 50 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ 6

ಸುತ್ತಮುತ್ತ

ಇಂದು ಮುಲ್ಕಿಗೆ ಸಂಯಮೀಂದ್ರತೀರ್ಥ ಶ್ರೀ ಆಗಮನ, ಭಿಕ್ಷಾ ಸೇವೆ

ಮುಲ್ಕಿ: ಶ್ರೀ ಕಾಶೀ ಮಠಾಧೀಶ ಶ್ರೀಮದ್ ಸಂಯಮೀಂದ್ರತೀರ್ಥ ಸ್ವಾಮೀಜಿ ಅವರು ಮುಲ್ಕಿ ಮೊಕ್ಕಾಂಗಾಗಿ ಶುಕ್ರವಾರ ಸಂಜೆ 6ಕ್ಕೆ ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಆಗಮಿಸಲಿದ್ದಾರೆ.



ಶ್ರೀ ದೇವರ ಭೇಟಿ, ಶ್ರೀಗಳಿಗೆ ಪಾದಪೂಜೆಯ ಬಳಿಕ ಶ್ರೀ ಕ್ಷೇತ್ರದ ಶ್ರೀ ವ್ಯಾಸಮಹರ್ಷಿ ವೇದಪಾಠ ಶಾಲೆಗೆ ಭೇಟಿ ನೀಡಲಿದ್ದಾರೆ. ಮೇ 30ಕ್ಕೆ ಶ್ರೀಗಳಿಂದ ಶ್ರೀ ದೇವರಿಗೆ ಪೂಜೆ, ಬಳಿಕ ಶತ ಚಂಡಿಕಾ ಹವನ, ಶ್ರೀ ದೇವರಿಗೆ ಮಹಾ ನೈವೇದ್ಯ, ಮಹಾಮಂಗಳಾರತಿ, ಶ್ರೀಗಳಿಂದ ಸಂಸ್ಥಾನ ದೇವರಿಗೆ ಪೂಜೆ, ಶ್ರೀಗಳಿಗೆ ಭಿಕ್ಷಾ ಸೇವೆ, ಭೂರಿ ಸಮಾರಾಧನೆ. ಸಂಜೆ ಸಭಾ ಕಾರ್ಯಕ್ರಮ ಶ್ರೀಗಳಿಂದ ಆಶೀರ್ವಚನ, ರಾತ್ರಿ ಪೂಜೆ, ಪ್ರಸಾದ ಗ್ರಹಣ ನಡೆಯಲಿದೆ. ಮೇ 31ಕ್ಕೆ ಶ್ರೀ ವಿಷ್ಣುಸಹಸ್ರನಾಮ ಕದಳೀ ಹವನ, ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಮತ್ತು ಶ್ರೀ ವೇದವ್ಯಾಸ ಸಹಸ್ರನಾಮ ಪಠಣ, ಹವನ ಪೂರ್ಣಾಹುತಿ, ಶ್ರೀ ದೇವರಿಗೆ ಮಹಾ ನೈವೇದ್ಯ, ಮಹಾಮಂಗಳಾರತಿ, ಶ್ರೀಗಳಿಂದ ಸಂಸ್ಥಾನ ದೇವರಿಗೆ ಪೂಜೆ, ಶ್ರೀಗಳಿಗೆ ಭಿಕ್ಷಾ ಸೇವೆ, ಭೂರಿ ಸಮಾರಾಧನೆ. ರಾತ್ರಿ ಪೂಜೆ, ಪ್ರಸಾದಗ್ರಹಣ ನಡೆಯಲಿದೆ. ಜೂ.1ಕ್ಕೆ ಮಠದಲ್ಲಿ ಶ್ರೀ ದೇವರಿಗೆ ಉಷಾ ಪೂಜೆ, ಬೆಳಗ್ಗೆ 8:30ಕ್ಕೆ ಸಂಸ್ಥಾನದ ಪಟ್ಟದ ದೇವರ ಸಮೇತ ಶ್ರೀ ಗಳು ದೇವಾಲಯಕ್ಕೆ ಚಿತ್ತೈಸಿ 11ಕ್ಕೆ ಸಂಸ್ಥಾನ ದೇವರಿಗೆ ಅಲಂಕಾರ ನಿತ್ಯಪೂಜೆ ಶ್ರೀ ದೇವರಿಗೆ ಮತ್ತು ಸಂಸ್ಥಾನ ದೇವರಿಗೆ ಏಕಕಾಲದಲ್ಲಿ ಮಹಾ ಪೂಜೆ, ನೈವೇದ್ಯ ಮಹಾಮಂಗಳಾರತಿ, ಸಂಸ್ಥಾನ ದೇವರಿಗೆ ಮತ್ತು ಶ್ರೀಗಳವರಿಗೆ ಸುವರ್ಣ ನಾಣ್ಯ ಸಹಿತ ಬೆಳ್ಳಿಯ ಕಲಶ ಸಮರ್ಪಣೆ, ಭೋಜನ ಪ್ರಸಾದ ನಡೆಯಲಿದ್ದದು, ಸಂಜೆ ಶ್ರೀಗಳ ಬೀಳ್ಕೊಡುಗೆ ನಡೆಯಲಿದೆ ಎಂದು ಶ್ರೀ ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ನಾಳೆ ಅರ್ತಿವೊಡಲು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ದೃಢಕಲಶ

ಮಂಗಳೂರು: ಕುಂಜತ್ತಬೈಲು ಕೊಂಗಿಬೈಲು ಅರ್ತಿವೊಡಲು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಮೇ 30ರಂದು ಶ್ರೀ ಅರ್ತಿವೊಡಲು ವಿಷ್ಣುಮೂರ್ತಿ ದೇವರಿಗೆ ದೃಢಕಲಶ ನಡೆಯಲಿದೆ.
ಬೆಳಗ್ಗೆ 8ರಿಂದ ದೇವತಾ ಪ್ರಾರ್ಥನೆ, ಸ್ವಸ್ತಿ ಪುಣ್ಯಾಹವಾಚನ, ಆದ್ಯಗಣಯಾಗ, ಶ್ರೀ ದೇವರಿಗೆ ಕಲಶಪ್ರತಿಷ್ಠೆ, ಅಧಿವಾಸ ಹೋಮ, ಕಲಶಾಭಿಷೇಕ, ಪ್ರಸನ್ನ ಪೂಜೆ ನಡೆಯಲಿದೆ. ಮಧ್ಯಾಹ್ನ 11ಕ್ಕೆ ಧನ್ವೋತ್ಸವ, 1ರಿಂದ ಅನ್ನಸಂತರ್ಪಣೆ, ರಾತ್ರಿ 7.30ಕ್ಕೆ ಶ್ರೀ ದೇವರಿಗೆ ರಂಗಪೂಜೆ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 31: 'ಮಂಚಿ ಉತ್ಸವ, ಅಂಡರ್ ಆರ್ಮ್ ಕ್ರಿಕೆಟ್ ಪಂದ್ಯಾಟ

ಬಂಟ್ವಾಳ: ಐದು ತಂಡಗಳ ಲೀಗ್ ಮಾದರಿಯ ಅಂಡರ್ ಆರ್ಮ್ ಕ್ರಿಕೆಟ್ ಪಂದ್ಯಾಟ ಸೀಸನ್-2 'ಮಂಚಿ ಉತ್ಸವ 2026' ಮೇ 31ರಂದು ಬಂಟ್ವಾಳ ತಾಲೂಕಿನ ಮಂಚಿ ಗ್ರಾಮ ಪಂಚಾಯತ್ ವ್ಯಾಪ್ತಿಯ ನೂಜಿಬೈಲ್ ಶಾಲಾ ಮೈದಾನದಲ್ಲಿ ನಡೆಯಲಿದೆ.
ಬೆಳಗ್ಗೆ 8.30ಕ್ಕೆ ಕ್ರೀಡಾಕೂಟದ ಉದ್ಘಾಟನಾ ಸಮಾರಂಭವನ್ನು ನಿವೃತ್ತ ಯೋಧ ಉದಯ ಕುಮಾರ್ ರಾವ್ ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಧಾರ್ಮಿಕ ಮುಖಂಡರಾದ ನಾರಾಯಣ ಭಟ್ ಕೈಯ್ಯೂರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಂಚಿ ಗ್ರಾಮ ಪಂಚಾಯತ್ ಸದಸ್ಯ ಬದ್ರುದ್ದೀನ್ ಪಲ್ಲ, ಪ್ರಮುಖರಾದ ಹಮೀದ್ ಕೈಯ್ಯೂರು, ಪುರಂದರ ಸಾಲ್ಯಾನ್, ಯಾಕುಬ್ ಸರಿತ್, ಮೊಹಮ್ಮದ್ ಮೋಂತಿಮಾರ್, ಅಬ್ದುಲ್ ಖಾದರ್ ಭಾಗವಹಿಸಲಿದ್ದಾರೆ. ಸಂಜೆ 5ಕ್ಕೆ ನಡೆಯುವ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕೊಳ್ನಾಡು ಗ್ರಾಮ ಪಂಚಾಯತ್ ಸದಸ್ಯರಾದ ಮಹಮ್ಮದ್ ಮಂಚಿ ವಹಿಸಲಿದ್ದಾರೆ. ವಿಟ್ಲ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಪ್ರಕಾಶ್ ದೇವಾಡಿಗ ಅವರು ಕ್ರೀಡಾಕೂಟದ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರಮುಖರಾದ ಆದ್ಯ ಬೇಕರಿ ಮಾಲಕರಾದ ನರಸಿಂಹ, ಮಹಮ್ಮದ್ ಮೂಸಾ, ಎಂ.ಕೆ. ಇಬ್ರಾಹಿಂ, ಲತೀಫ್ ಮಾರಿಪಲ್ಲ, ಹನೀಫ್ ಎಂ.ಎ ಅವರು ಭಾಗವಹಿಸಲಿದ್ದಾರೆ. ಅಲ್ಲದೇ ಮಂಚಿ ಫೆಸ್ಟ್ ಪ್ರಯುಕ್ತ ಮಂಚಿ ಜಂಕ್ಷನ್‌ನಲ್ಲಿ ಸಂಜೆ 6ಕ್ಕೆ ಹಗ್ಗಜಗ್ಗಾಟ ಸಹಿತ ವಿವಿಧ ಆಟೋಟ ಮತ್ತು ಮನೋರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಸಂಘಟಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ. 2: ಆರೋಗ್ಯ ತಪಾಸಣೆ ಶಿಬಿರ

ಮಂಗಳೂರು: ವಿಶ್ವ ಹಿಂದೂ ಪರಿಷದ್ ಬಜರಂಗದಳ ಸೇವಾ ವಿಭಾಗ ಮರೋಳಿ ಖಂಡ ಸಮಿತಿ, ಎ.ಜೆ. ವೈದ್ಯಕೀಯ ಮಹಾವಿದ್ಯಾಲಯ ಸಹಯೋಗದಲ್ಲಿ ಮರೋಳಿ ಜೋಡುಕಟ್ಟೆ ಸಮಾಜ ಸೇವಾ ಪ್ರತಿಷ್ಠಾನ ಸಹಕಾರದೊಂದಿಗೆ ತಿಂಗಳ ಪ್ರಥಮ ಮಂಗಳವಾರ ಮಾಸಿಕ ಆರೋಗ್ಯ ತಪಾಸಣೆ ಉಚಿತ ಶಿಬಿರವು ಜೂ.2ಕ್ಕೆ ಸಂಜೆ 4.30ರಿಂದ ಮರೋಳಿ ಜೋಡುಕಟ್ಟೆ ವಜ್ರಕಾಯ ರಂಗ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಸಾಮಾನ್ಯ ವೈದ್ಯಕೀಯ ತಪಾಸಣೆಗಳಾದ ಚರ್ಮ, ಕಿವಿ, ಮೂಗು, ಗಂಟಲು, ಕೀಲು ಮತ್ತು ಗಂಟು ನೋವು ತಪಾಸಣೆ, ಸ್ತ್ರೀರೋಗ ತಪಾಸನೆ, ಮಧುಮೇಹ, ರಕ್ತದೊತ್ತಡ ಪರೀಕ್ಷೆ, ಕಣ್ಣಿನ ತಪಾಸಣೆ, ದಂತ ತಪಾಸಣೆ, ಹೃದಯ ಸಂಬಂಧಿ ರೋಗ ತಪಾಸಣೆ (ಇಸಿಜಿ), ಕೆಲವು ವಿಧದ ರಕ್ತ ಪರೀಕ್ಷೆಗಳು, ಔಷಧಿ ವಿತರಣೆ, ಇನ್ನಿತರ ವೈದ್ಯಕೀಯ ಸೇವೆಗಳು ಲಭ್ಯವಿದೆ. ಮಾಹಿತಿಗಾಗಿ ದೂ.ಸಂ. 9611001000, 9480074482, 9535914259 ಅನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಸ್ವಚ್ಛತೆಯನ್ನು ಅಣಕಿಸುತ್ತಿದೆ ಮಾಣಿ-ಮೈಸೂರು ಮಾರ್ಗ | ಹೆಚ್ಚಿದ ಸಾಂಕ್ರಾಮಿಕ ರೋಗದ ಭೀತಿ

ತ್ಯಾಜ್ಯ ರಾಶಿಯ ಕೊಂಪೆಯಾದ ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲ

■ ಮಿಥುನ್ ಕರ್ಲಪ್ಪಾಡಿ





ಸಂಗಮ ವಿಶೇಷ

ಸುಳ್ಯ: ಮಾಣಿ-ಮೈಸೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲ ಈಗ ಅಕ್ಷರಶಃ ತ್ಯಾಜ್ಯ ಎಸೆಯುವ ಡಂಪಿಂಗ್ ಸ್ಥಳವಾಗಿ ಮಾರ್ಪಟ್ಟಿದೆ. ರಸ್ತೆಯಲ್ಲಿ ದಿನನಿತ್ಯ ಹೋಗುವ ಸಾವಿರಾರು ಪ್ರಯಾಣಿಕರು ಅಲ್ಲಲ್ಲಿ ತ್ಯಾಜ್ಯಗಳನ್ನು ಎಸೆಯುತ್ತಾ ಹೋಗುತ್ತಿದ್ದು, ಇದು ಪ್ರಕೃತಿ ಸೌಂದರ್ಯಕ್ಕೆ ಮಾರಕವಾಗಿದ್ದರೆ, ಮತ್ತೊಂದೆಡೆ ಮಳೆಗಾಲದಲ್ಲಿ ರೋಗ-ರುಜಿನಗಳಿಗೆ ಆಹ್ವಾನ ನೀಡುವಂತಿದೆ.
ಹೌದು, ಸುಳ್ಯ ಪಟ್ಟಣ ಪಂಚಾಯತ್ ಹಾಗೂ ಆಲೆಟ್ಟಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮೂಲಕ ಈ ರಾಷ್ಟ್ರೀಯ ಹೆದ್ದಾರಿ ಹಾದು ಹೋಗಿದೆ. ಪರಿವಾರಕಾನ ಎಂಬಲ್ಲಿ ಗೋಣಿ ಚೀಲದಲ್ಲಿ ಪ್ರವಾಸಿಗರು ರಾಶಿ ರಾಶಿ ತ್ಯಾಜ್ಯಗಳನ್ನು ಸುರಿದು ಹೋಗಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿಯೂ ಈ ಬಗ್ಗೆ ವಿಚಾರ ಪ್ರಸ್ತಾಪಗೊಂಡಿದ್ದು ಚರ್ಚೆಗೆ ಗ್ರಾಸವಾಗಿದೆ. ಮಾಣಿ-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬಹುತೇಕ ಎಲ್ಲಾ ವಾಹನಗಳು ಸಂಚರಿಸುತ್ತಿದ್ದು, ಜೊತೆಗೆ ದೇಗುಲ ದರುಶನ ಸೇರಿದಂತೆ ಸುಳ್ಯ ವಿಧಾನಸಭಾ ಕ್ಷೇತ್ರ ಹಾಗೂ ಕರಾವಳಿ ಜಿಲ್ಲೆ ಹಾಗೂ ಕೊಡಗನ್ನು ಸಂಪರ್ಕಿಸುವ ಹೆದ್ದಾರಿಯಾಗಿದೆ. ಈ ಹೆದ್ದಾರಿಯಲ್ಲಿ ಸಾಗುವ ಪ್ರವಾಸಿಗರು ಎಲ್ಲೆಂದರಲ್ಲಿ ತಮ್ಮ ವಾಹನಗಳನ್ನು ನಿಲ್ಲಿಸಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ತ್ಯಾಜ್ಯಗಳನ್ನು ಬಿಸಾಕಿ ತೆರಳುತ್ತಿದ್ದಾರೆ. ಇದರಿಂದ ಸ್ಥಳೀಯರಿಗೆ ಇದೀಗ ಇದರಿಂದ ಸಾಂಕ್ರಾಮಿಕ ರೋಗದ ಭೀತಿಯು ಎದುರಾಗಿದೆ.

ಹೂಳು ತುಂಬಿಕೊಂಡಿದೆ ಚರಂಡಿ

ಮಳೆಗಾಲ ಆರಂಭಕ್ಕೆ ಇನ್ನೇನು ಕೆಲ ದಿನಗಳು ಉಳಿಕೆಯಾಗಿರುವಂತೆ ರಾಷ್ಟ್ರೀಯ ಹೆದ್ದಾರಿಯ ಚರಂಡಿಗಳು ಹೂಳುಗಳಿಂದ ತುಂಬಿಕೊಂಡಿದ್ದು ರಸ್ತೆಗೆ ಬಿದ್ದ ನೀರು ಇಕ್ಕೆಲಗಳ ನೀರು ರಸ್ತೆಯಲ್ಲಿಯೇ ಹರಿಯುವಂತಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಕೂಡಲೇ ಕ್ರಮ ಕೈಗೊಂಡು ಪರಿಹಾರ ಕಲ್ಪಿಸಬೇಕಿದೆ.

ರೋಗ ಹರಡುವ ಭೀತಿ

ಇತ್ತ ಮಳೆಗಾಲ ಸಮೀಪಿಸುತ್ತಿದ್ದಂತೆ ಪ್ರವಾಸಿಗರು ಬೇಸಿಗೆ ರಜೆಯಲ್ಲಿ ಕುಕ್ಕೆ ಸುಬ್ರಹ್ಮಣ್ಯ, ಧರ್ಮಸ್ಥಳ ಸೇರಿದಂತೆ ಪುಣ್ಯ ಕ್ಷೇತ್ರಗಳಿಗೆ ಹಾಗೂ ದಕ್ಷಿಣದ ಕಾಶ್ಮೀರ ಎಂದೇ ಕರೆಯಲ್ಪಡುವ ಕೊಡಗಿಗೆ ತೆರಳುವ ಸಂದರ್ಭದಲ್ಲಿ ಪ್ರವಾಸಿಗರು ತಮ್ಮ ಕಾರು, ಬಸ್ ಹಾಗೂ ಇತರೆ ವಾಹನಗಳ ಪ್ರಯಾಣಿಕರು ತ್ಯಾಜ್ಯಗಳನ್ನು ರಾಷ್ಟ್ರೀಯ ಹೆದ್ದಾರಿ ಇಕ್ಕೆಲಗಳಲ್ಲಿ ಗೋಣಿಚೀಲಗಳಲ್ಲಿ ತುಂಬಿ ಎಸೆಯುತ್ತಿದ್ದಾರೆ. ಕೂಡಲೇ ಆರೋಗ್ಯ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಪರವಾರಕಾನ ಎಂಬಲ್ಲಿ ಸಿಸಿ ಟಿವಿ ಅಳವಡಿಸಿ ತ್ಯಾಜ್ಯ ಎಸೆಯುವುದನ್ನು ತಡೆಗಟ್ಟಿ ಸ್ಥಳೀಯರ ಆರೋಗ್ಯ ಮತ್ತು ಅರಣ್ಯವನ್ನು ಕಾಪಾಡಬೇಕಿದೆ ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಬೇಕಿದೆ ಚೆಕ್‌ಪೋಸ್ಟ್

ಈಗಾಗಲೇ ಸುಬ್ರಹ್ಮಣ್ಯ ರಸ್ತೆಯಲ್ಲಿ ಅಲ್ಲಲ್ಲಿ ತ್ಯಾಜ್ಯ ರಾಶಿಯನ್ನು ಕಂಡು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಚೆಕ್‌ಪೋಸ್ಟ್ ನಿರ್ಮಿಸಿ ಕಸ ಎಸೆಯುವವರ ವಿರುದ್ಧ ಕ್ರಮಕ್ಕೆ ಸೂಚನೆ ನೀಡಿದ್ದರು. ಇದೇ ರೀತಿ ಮಾಣಿ-ಮೈಸೂರು ಮಾರ್ಗದಲ್ಲೂ ಚೆಕ್‌ಪೋಸ್ಟ್ ನಿರ್ಮಿಸಬೇಕಿದೆ ಎಂಬುದು ಸ್ಥಳೀಯರ ಒತ್ತಾಯವಾಗಿದೆ.

ವಿವೇಕಾನಂದ ಕನ್ನಡ ಶಾಲೆ: ಸ್ಮಾರ್ಟ್ ಬೋರ್ಡ್ ಕಲಿಕಾ ಪ್ರಕ್ರಿಯೆಗೆ ಚಾಲನೆ



ಪುತ್ತೂರು: ಪ್ರಸ್ತುತದ ಸಮಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಗಳಾಗುತ್ತಿದ್ದು, ಸ್ಮಾರ್ಟ್ ಬೋರ್ಡ್ ಬಳಸಿ ನಡೆಯುತ್ತಿರುವ ಕಲಿಕಾ ಪ್ರಕ್ರಿಯೆ ಪರಿಣಾಮಕಾರಿ ಮಾಧ್ಯಮವಾಗಿದೆ. ಆ ಮೂಲಕ ಮಕ್ಕಳೇ ಸ್ಮಾರ್ಟ್ ಆಗಿ ತಮ್ಮ ಕೌಶಲಗಳನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ನಾನು ವಿವೇಕಾನಂದ ಪದವಿ ಕಾಲೇಜಿನ ಹಿರಿಯ ವಿದ್ಯಾರ್ಥಿಯಾಗಿದ್ದು, ನಮ್ಮೀ ಕನ್ನಡ ಶಾಲೆಗೆ ನೀಡಲಾಗುತ್ತಿರುವ ಸಹಕಾರಕ್ಕಾಗಿ ಹೆಮ್ಮೆ ಇದೆ ಎಂದು ಲಯನ್ಸ್ ಜಿಲಾ ಪಿ.ಆರ್.ಒ. ವಿ.ಎನ್. ಸುದರ್ಶನ್ ಪಡಿಯಾರ್ ಹೇಳಿದರು.
ಲಯನ್ಸ್‌ಕ್ಲಬ್‌ನಿಂದ ನಗರದ ವಿವೇಕಾನಂದ ಕನ್ನಡ ಶಾಲೆಗೆ ನೀಡಲಾಗಿರುವ ಸ್ಮಾರ್ಟ್ ಬೋರ್ಡ್ ಉದ್ಘಾಟಿಸಿ, ಮಾತನಾಡಿದರು.
ಮುಖ್ಯ ಅತಿಥಿ ಪುತ್ತೂರು ಲಯನ್ಸ್‌ನ ಅಧ್ಯಕ್ಷೆ ಪ್ರೇಮಲತಾ ರಾವ್ ಮಾತನಾಡಿ, ತಮ್ಮ ಅವಧಿಯಲ್ಲಿ ಶಾಲೆಗೆ ನೀಡುತ್ತಿರುವ ಈ ಕೊಡುಗೆಯು ಪೂರ್ಣಪ್ರಮಾಣದಲ್ಲಿ ಪ್ರಯೋಜನಕಾರಿಯಾಗಲಿದೆ ಎಂದರು.
ಶಾಲಾ ಸಂಚಾಲಕ ವಸಂತ ಸುವರ್ಣ, ಲಯನ್ಸ್ ಕಾರ್ಯದರ್ಶಿ ಅರವಿಂದ ಭಗವಾನ್ ರೈ, ಒರಿಜಿನಲ್ ರೀಜನ್ ಅಡ್ವೈಸರ್ ಸದಾಶಿವ ನಾಯಕ್, ಜಿಲ್ಲಾ ಚೇರ್ ಪರ್ಸನ್ ವತ್ಸಲಾ ರಾಜ್ಞಿ, ಕೋಶಾಧಿಕಾರಿ ಸುಧಾಕರ್ ಕೆ.ಪಿ., ಸದಸ್ಯರಾದ ತ್ರಿವೇಣಿ ಪೆರುವೋಡಿ, ಜಯಶ್ರೀ ಡಿ.ಸಿ., ಆನಂದ ರೈ, ವಿಶ್ವನಾಥ ಗೌಡ, ಅಜಿತ್ ಶೆಟ್ಟಿ, ಪ್ರಾಥಮಿಕ ವಿಭಾಗದ ಮುಖ್ಯ ಗುರು ನಳಿನಿ ವಾಗ್ಲೆ ಮತ್ತಿತರಿದ್ದರು. ವಿದ್ಯಾರ್ಥಿನಿ ಶ್ರೀರಕ್ಷಾ ಪ್ರಾರ್ಥಿಸಿದರು. ಶಾಲಾ ಪ್ರೌಢ ವಿಭಾಗದ ಮುಖ್ಯ ಗುರು ಆಶಾ ಬೆಳ್ಳಾರೆ ಪ್ರಾಸ್ತಾವಿಸಿದರು. ಶಾಲಾ ಅಧ್ಯಕ್ಷ ರಮೇಶ್ಚಂದ್ರ ಕೃತಜ್ಞತೆ ಸಲ್ಲಿಸಿದರು. ಶಿಕ್ಷಕಿ ರೇಷ್ಮಾ ಕಾರ್ಯಕ್ರಮ ನಿರ್ವಹಿಸಿದರು. ಶಾಲಾ ವೃತಿಕಾ ವಿಜ್ಞಾನ ಸಂಘದ ಸಹಶಿಕ್ಷಕರಾದ ರೇಷ್ಮಾ, ಶುಭಶ್ರೀ, ಶ್ವೇತಾ ಸಂಘಟಿಸಿದರು.

ನವೀಕೃತ ಕೈಗಾರಿಕಾ ಸಮಗ್ರ ವಿದ್ಯುತ್ ಕಾರ್ಯಾಗಾರ ಕೇಂದ್ರದ ಉದ್ಘಾಟನೆ



ಉಜಿರೆ: ಕೈಗಾರಿಕಾ ಕ್ಷೇತ್ರದಲ್ಲಿ ಇಂದು ಮಹಿಳೆಯರಿಗೂ ವಿಪುಲ ಅವಕಾಶಗಳಿವೆ. ಆದರೆ ಆಸಕ್ತ ಮಹಿಳೆಯರ ಸಂಖ್ಯೆ ಕಡಿಮೆ ಇದೆ. ಮುಂದಿನ ವರ್ಷದಿಂದ ಕೈಗಾರಿಕಾ ಕ್ಷೇತ್ರದಲ್ಲಿ ಹೊಸ ಉದ್ಯಮ ಆರಂಭಿಸುವ ಮಹಿಳೆಯರಿಗೆ ತಮ್ಮ ಸಂಸ್ಥೆಯ ವತಿಯಿಂದ ಬೆಂಗಳೂರಿನಲ್ಲಿ 21 ದಿನಗಳ ಉಚಿತ ತರಬೇತಿಯನ್ನು ನೀಡಲಾಗುವುದು ಎಂದು ಸ್ನೈಯ್ಡರ್ ಇಲೆಕ್ಟ್ರಿಕ್ ಫೌಂಡೇಶನ್ ಆಫ್ ಇಂಡಿಯಾ ಕಂಪೆನಿಯ ಉಪಾಧ್ಯಕ್ಷ ದೇವದಾಸ್ ಶೆಟ್ಟಿ ಹೇಳಿದರು.
ಅವರು ಮಂಗಳವಾರ ವೇಣೂರಿನಲ್ಲಿ ಎಸ್. ಡಿ.ಎಂ. ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ನವೀಕೃತ ಕೈಗಾರಿಕಾ ಸಮಗ್ರ ಉಪಕರಣಗಳ ಕಾರ್ಯಾಗಾರ ಕೇಂದ್ರ ಉದ್ಘಾಟಿಸಿ, ಮಾತನಾಡಿದರು.
ವಿದ್ಯಾರ್ಥಿನಿಯರಿಗೆ ತಮ್ಮ ಸಂಸ್ಥೆಯಿಂದ ವಿಶೇಷ ವಿದ್ಯಾರ್ಥಿವೇತನ ನೀಡಿ ಪ್ರೋತ್ಸಾಹಿಸುವುದಾಗಿ ಅವರು ಭರವಸೆ ನೀಡಿದರು. ಐವತ್ತು ವಿದ್ಯಾರ್ಥಿಗಳಿಗೆ ತಮ್ಮ ಕಂಪೆನಿಯ ವತಿಯಿಂದ ಅವರು ಟೂಲ್ ಕಿಟ್ ವಿತರಿಸಿದರು. ಕಂಪೆನಿಯ ಡಿ.ಜಿ.ಎಂ. ಪ್ರಶಾಂತ ಶೆಟ್ಟಿ ಶುಭಾಶಂಸನೆ ಮಾಡಿದರು.
ಅಧ್ಯಕ್ಷತೆ ವಹಿಸಿದ ಎಸ್.ಡಿ.ಎಂ. ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಿ. ಹರ್ಷೇಂದ್ರ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ತಮಗೆ ಸಿಗುವ ಎಲ್ಲಾ ಅವಕಾಶಗಳ ಸದುಪಯೋಗ ಪಡೆದು ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಸದಾ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು, ಅಡಗಿಸಿಕೊಳ್ಳಬಾರದು ಎಂದು ಸಲಹೆ ನೀಡಿದರು. ಉತ್ತಮ ಕೌಶಲವನ್ನು ಬೆಳೆಸಿಕೊಂಡು ಕಲಿಕೆಯೊಂದಿಗೆ ಗಳಿಕೆಗೂ ಆದ್ಯತೆ ನೀಡಬೇಕು ಎಂದು ಅವರು ಹೇಳಿದರು. ಸಂಸ್ಥೆಯ ಪ್ರಾಂಶುಪಾಲ ವಿಶ್ವೇಶ್ವರ ಪ್ರಸಾದ್ ಸ್ವಾಗತಿಸಿದರು. ರಾಮಚಂದ್ರ ಶೆಟ್ಟಿ ಧನ್ಯವಾದವಿತ್ತರು. ಪದ್ಮಪ್ರಸಾದ್ ಬಿ. ನಿರ್ವಹಿಸಿದರು.

ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಶಾಸಕ ಡಾ. ಭರತ್ ಶೆಟ್ಟಿ ಶಿಲಾನ್ಯಾಸ



ಮಂಗಳೂರು: ನಗರ ಶಿಶು ಅಭಿವೃದ್ಧಿ ಯೋಜನೆಯಡಿ, ಮಹಾತ್ಮ ಗಾಂಧಿ ಬೊಂದೇಲ್ ಅಂಗನವಾಡಿ ಕಟ್ಟಡ ನಿರ್ಮಾಣಕ್ಕಾಗಿ 2024-25ನೇ ಸಾಲಿನ ನಗರ ಯೋಜನೆಯ ಅಡಿಯಲ್ಲಿ 20 ಲಕ್ಷ ರೂ. ಅನುದಾನದ ಶಿಲಾನ್ಯಾಸ ಕಾರ್ಯಕ್ರಮವನ್ನು ಶಾಸಕ ಡಾ. ವೈ. ಭರತ್ ಶೆಟ್ಟಿ ಅವರು ಬೊಂದೇಲ್ ಕಂಬ್ಳ ಅಶ್ವತ್ಥ ಕಟ್ಟೆ ಸಮೀಪದ ಲೋಕೋಪಯೋಗಿ ಕಚೇರಿ ಮುಂಭಾಗದಲ್ಲಿ ನೆರವೇರಿಸಿದರು.
ಈ ಸಂದರ್ಭದಲ್ಲಿ ಯೋಜನಾಧಿಕಾರಿ ಶ್ವೇತಾ ಎನ್., ಸಂದೀಪ್, ಭೂ ನ್ಯಾಯ ಮಂಡಳಿಯ ಮಾಜಿ ಸದಸ್ಯ ಶಿವಾಜಿ ಕುಲಾಲ್, ರವೀಂದ್ರ ನಾಯ್ಕ್, ಅಂಗನವಾಡಿ ಪ್ರಮುಖರು ಹಾಗೂ ಸ್ಥಳೀಯ ನಾಗರಿಕರು ಉಪಸ್ಥಿತರಿದ್ದರು.

ಸಿಎಂ ಕಚೇರಿಯ ಸೂಚನೆ ಮೇರೆಗೆ ಕೊನೆಗೂ ಕಾಂಕ್ರೀಟ್ ರಸ್ತೆ ಪೂರ್ಣ



ಸುಳ್ಯ: ಮೇ 8ರಂದು ಗ್ರಾಮೀಣ ಸಂಪರ್ಕಕೊಂಡಿ ರಸ್ತೆ ಮರಳು ಅಭಾವದಿಂದ ಅರ್ಧಕ್ಕೆ ನಿಂತ ಕಾಮಗಾರಿ ಎಂಬ ತಲೆಬರಹದಲ್ಲಿ ಮೇ 8ರಂದು 'ಹೊಸ ದಿಗಂತ' ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಗೆ ಮುಖ್ಯಮಂತ್ರಿ ಕಚೇರಿ ಶೀಘ್ರವಾಗಿ ಸ್ಪಂದಿಸಿ ಸೂಚನೆ ನೀಡಿದ ಬೆನ್ನಲ್ಲೇ ಕಾಂಕ್ರೀಟ್ ಕಾಮಗಾರಿ ಇದೀಗ ಮುಕ್ತಾಯಗೊಂಡಿದೆ.
ಈ ಭಾಗದ ಗ್ರಾಮೀಣ ಭಾಗದ ರಸ್ತೆಯ ಕುರಿತಾಗಿ ವರದಿ ಪ್ರಕಟಗೊಂಡ ಬಳಿಕ ಮುಖ್ಯಮಂತ್ರಿ ಕಚೇರಿ ಸ್ಪಂದನೆಯಂತೆ ಗ್ರಾಮ ಪಂಚಾಯತ್ ಈ ಹಿಂದೆ ನೀಡಲಾಗಿದ್ದ ಗುತ್ತಿಗೆದಾರ ಟೆಂಡರ್ ಹಿಂಪಡೆದು ನೂತನ ಟೆಂಡರ್ ದಾರರಿಗೆ ನೀಡಿದ್ದು, ಅದರಂತೆ ಇದೀಗ ರಸ್ತೆ ಪೂರ್ಣಗೊಂಡಿದೆ.

ವೀರಕಂಭ ಗ್ರಾಮ ಪಂಚಾಯತ್‌ನಲ್ಲಿ ಟಾಸ್ಕ್ ಫೋರ್ಸ್ ಸಮಿತಿಯಿಂದ ಸಭೆ



ಬಂಟ್ವಾಳ: ತಾಲೂಕಿನ ವೀರಕಂಭ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಳೆಗಾಲದ ಮುನ್ನೆಚ್ಚರಿಕೆಯ ಪೂರ್ವ ತಯಾರಿ ಕುರಿತು ವೀರಕಂಭ ಗ್ರಾಮದ ಟಾಸ್ಕ್ ಫೋರ್ಸ್ ಸಮಿತಿ ಸಭೆಯು ಬಂಟ್ವಾಳ ತಾಲೂಕು ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರು, ವೀರಕಂಭ ಗ್ರಾಮ ಪಂಚಾಯತ್ ಆಡಳಿತ ಅಧಿಕಾರಿ ದಿನೇಶ್ ರವರ ಅಧ್ಯಕ್ಷತೆಯಲ್ಲಿ ವೀರಕಂಭ ಗ್ರಾಮ ಪಂಚಾಯತ್‌ನಲ್ಲಿ ಬುಧವಾರ ನಡೆಯಿತು.
ವೀರಕಂಭ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಲ್ಲುಕೋರೆಗಳ ಹೊಂಡಗಳು, ಕೆರೆಗಳು, ಕಾಲುಸಂಕಗಳ ಕುರಿತಾಗಿ ಮಳೆಗಾಲ ಪೂರ್ವದಲ್ಲಿ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ-ಕಸಸಂಗ್ರಹಣೆ ಸಮಸ್ಯೆ, ಸವಾಲು ಗಳು, ಕಾರ್ಯವಿಧಾನಗಳ ಕುರಿತು ಸಭೆಯಲ್ಲಿ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಎರಡು ಜನ ಕ್ಷಯ ರೋಗ ಫಲಾನುಭವಿಗಳಿಗೆ ಗ್ರಾಮ ಪಂಚಾಯತ್ ವತಿಯಿಂದ ಪೌಷ್ಟಿಕ ಆಹಾರ ಸಾಮಗ್ರಿ ಕಿಟ್ ಗಳನ್ನು ವಿತರಿಸಲಾಯಿತು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಕ್ರಿಯವಲ್ಲದ ಉದ್ಯೋಗ ಚೀಟಿಗಳ ಪರಿಶೀಲನೆ ಮತ್ತು ರದ್ದುಪಡಿಸುವ ಬಗ್ಗೆ ನಿರ್ಣಯಿಸಲಾಯಿತು. ವೀರಕಂಭ ಗ್ರಾಮ ಪಂಚಾಯತ್ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಂಭು ಕುಮಾರ ಶರ್ಮಾ, ಅಂಗನವಾಡಿ ಮೇಲ್ವಿಚಾರಕಿ ರೂಪಕಲಾ, ಗ್ರಾಮ ಆರೋಗ್ಯ ಸುರಕ್ಷಣಾಧಿಕಾರಿ ಇಲಾಖೆ ಜ್ಯೋತಿ, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಸ್ನೇಹ ಸಂಜೀವಿನಿ ಮಹಿಳಾ ಒಕ್ಕೂಟದ ಪದಾಧಿಕಾರಿಗಳು, ಟಾಸ್ಕ್ ಫೋರ್ಸ್ ಸಮಿತಿ ಯ ಸದಸ್ಯರು, ಪಂಚಾಯತ್ ಕಾರ್ಯದರ್ಶಿ ಸವಿತಾ, ಲೆಕ್ಕ ಸಹಾಯಕ ನವೀನ್ ರಾಬರ್ಟ್, ಪಂಚಾಯತ್ ಸಿಬ್ಬಂದಿಗಳು ಹಾಜರಿದ್ದರು. ಸಭೆಯ ನಂತರ ಕಲ್ಲು ಕೋರೆ ಪ್ರದೇಶಕ್ಕೆ ಹಾಗೂ ದ.ಕ. ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆ, ಮಜಿ - ವೀರಕಂಭಕ್ಕೆ ಭೇಟಿ ನೀಡಲಾಯಿತು.

ಹೆದ್ದಾರಿಗೆ ಬಹುಮಹಡಿ ಕಟ್ಟಡದ ತ್ಯಾಜ್ಯ ನೀರು: ಪ್ರಾಧಿಕಾರದಿಂದ ಕಾರ್ಯಾಚರಣೆ



ಮುಲ್ಕಿ: ಹಳೆಯಂಗಡಿ ಬಸ್ ತಂಗುದಾಣದ ಬಳಿ ಕಾರ್ಯಾಚರಿಸುತ್ತಿರುವ ಬಹು ಮಹಡಿ ಕಟ್ಟಡದ ತ್ಯಾಜ್ಯ ನೀರನ್ನು ರಾತ್ರೋರಾತ್ರಿ ಕಟ್ಟಡದ ಸಿಬ್ಬಂದಿಗಳು ರಾಷ್ಟ್ರೀಯ ಹೆದ್ದಾರಿ 66ಕ್ಕೆ ಹರಿಯ ಬಿಡುತ್ತಿದ್ದು, ದುರ್ವಾಸನೆಯುಕ್ತ ವಾತಾವರಣ ಸೃಷ್ಟಿಯಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ಹೆದ್ದಾರಿ ಪ್ರಾಧಿಕಾರದ ಸಿಬ್ಬಂದಿಗಳು ಸ್ವತಃ ಕಾರ್ಯಾಚರಣೆಗೆ ನಡೆಸಿ ತ್ಯಾಜ್ಯ ನೀರನ್ನು ಹೆದ್ದಾರಿಗೆ ಬಿಡದಂತೆ ಮಾಲಕರಿಗೆ ಕೊನೆಯ ಎಚ್ಚರಿಕೆ ನೀಡಿದ್ದಾರೆ.
ಬುಧವಾರ ಹೆದ್ದಾರಿ ಪ್ರಾಧಿಕಾರದ ಸಿಬ್ಬಂದಿ ಜೆಸಿಬಿ ಮೂಲಕ ಬಹು ಮಹಡಿ ಕಟ್ಟಡದ ಎದುರು ಭಾಗದ ರಸ್ತೆಯನ್ನು ಮುಚ್ಚಿದ್ದಾರೆ. ಈ ಸಂದರ್ಭ ಬಹು ಮಹಡಿ ಕಟ್ಟಡದಲ್ಲಿ ವಾಸ್ತವ್ಯವಿರುವ ನಾಗರಿಕರಿಗೆ ಹಾಗೂ ಹೆದ್ದಾರಿ ಇಲಾಖೆಯ ಸಿಬ್ಬಂದಿಗಳಿಗೆ ಮಾತಿನ ಚಕಮಕಿ ನಡೆದಿದೆ. ಹೆದ್ದಾರಿ ಪ್ರಾಧಿಕಾರದ ಸಿಬ್ಬಂದಿ ಮಾತನಾಡಿ, ಬಹು ಮಹಡಿ ಕಟ್ಟಡದ ಮಾಲೀಕರು ತ್ಯಾಜ್ಯ ನೀರನ್ನು ರಸ್ತೆ ಬಿಡುವ ಬಗ್ಗೆ, ಹೆದ್ದಾರಿ ಇಲಾಖೆ ಮೌನವಾಗಿದೆ ಹಾಗೂ ಹಣದ ಆಮಿಷ ಒಡ್ಡಲಾಗಿದೆ ಎಂದು ಇಲ್ಲ ಸಲ್ಲದ ಆರೋಪಗಳನ್ನು ಸಾರ್ವಜನಿಕರು ಮಾಡುತ್ತಿದ್ದು ಇದು ಸಹಿಸಲು ಸಾಧ್ಯವಿಲ್ಲ, ಈ ಬಾರಿ ಬಹು ಮಹಡಿ ಕಟ್ಟಡಕ್ಕೆ ಹೋಗುವ ದಾರಿಯನ್ನು ಮುಚ್ಚಲಾಗಿದೆ ಹೆದ್ದಾರಿಗೆ ತ್ಯಾಜ್ಯ ನೀರು ಬಿಡುವುದನ್ನು ಕೂಡಲೇ ನಿಲ್ಲಿಸಬೇಕು, ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಮತ್ತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.



ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಫೋಟೋವನ್ನು ದುರ್ಬಳಕೆ ಮಾಡಿ ಫೇಸ್ಬುಕ್‌ನಲ್ಲಿ ಎಡಿಟ್ ಮಾಡಿ ಸುಳ್ಳು ಸುದ್ದಿ ಪ್ರಚಾರ ಮಾಡಿರುವ ಡಾ.ಲಕ್ಷ್ಮೀಕಾಂತ ಸಿಂಗೆ ಎಂಬ ವ್ಯಕ್ತಿಯ ವಿರುದ್ಧ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಕಾನೂನು ಪ್ರಕೋಷ್ಠದ ವತಿಯಿಂದ ಮಂಗಳೂರು ಬರ್ಕೆ ಠಾಣೆಯಲ್ಲಿ ದೂರು ನೀಡಿ ಪ್ರಕರಣ ದಾಖಲಿಸಲಾಯಿತು. ಈ ಸಂದರ್ಭ ನಿಯೋಗದಲ್ಲಿ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಶ್ರೀಧರ್ ಶೆಟ್ಟಿ ಪುಳಿಂಚ, ಸಹ ಸಂಚಾಲಕ ಕೆ. ಪ್ರಮೋದ್ ಪೂಜಾರಿ, ಜಿಲ್ಲಾ ಒಬಿಸಿ ಮೋರ್ಚಾ ಉಪಾಧ್ಯಕ್ಷ ರಾಘವೇಂದ್ರ ರಾವ್, ವಕೀಲರಾದ ತುಳರಾಜ್ ಕೊಟ್ಟಾರಿ, ಜಗದೀಶ್ ಕಾವುಮಲೆ ಉಪಸ್ಥಿತರಿದ್ದರು.

ಬಂಟರ ಯಾನೆ ನಾಡವರ ಮಾತೃ ಸಂಘದ 105ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಅಜಿತ್ ಕುಮಾರ್ ಖೇದ

ಪ್ರವರ್ಗ 3ರಲ್ಲಿ ಸೇರ್ಪಡೆಯಿಂದ ಬಂಟ ಸಮುದಾಯ ಸೌಲಭ್ಯಗಳಿಂದ ವಂಚಿತ



ಮಂಗಳೂರು: ಬಂಟ ಸಮಾಜವನ್ನು ಕೇಂದ್ರ ಸರಕಾರವು ಮೀಸಲಾತಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿಲ್ಲ, ರಾಜ್ಯದ ಮೀಸಲಾತಿ ಪಟ್ಟಿಯಲ್ಲಿ ಬಂಟ ಸಮಾಜವನ್ನು ಪ್ರವರ್ಗ 2 (ಎ) ಯಲ್ಲಿ ಸೇರಲು ಅರ್ಹವಾಗಿದ್ದರೂ ಬಂಟ ಸಮುದಾಯವನ್ನು ಪ್ರವರ್ಗ 3 (ಬಿ)ಯಲ್ಲಿ ಸೇರಿಸಿರುವ ಕಾರಣ ಬಂಟರು ಶಿಕ್ಷಣ, ಉದ್ಯೋಗ, ಸಾಮಾಜಿಕ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಸಿಗುವ ಸೌಲಭ್ಯಗಳಿಂದ ವಂಚಿತವಾಗಿ ಬಂಟ ಸಮುದಾಯಕ್ಕೆ ತುಂಬಾ ಹಿನ್ನಡೆಯಾಗಿದೆ ಎಂದು ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷ ಕೆ. ಅಜಿತ್ ಕುಮಾರ್ ರೈ ಮಾಲಾಡಿ ತಿಳಿಸಿದರು.
ಬಂಟ್ಸ್ ಹಾಸ್ಟೆಲ್ ಬಳಿ ಇರುವ ಶ್ರೀಮತಿ ಎಸ್. ಎಂ. ಶೆಟ್ಟಿ ಸಭಾಂಗಣದಲ್ಲಿ ನಡೆದ ಬಂಟರ ಯಾನೆ ನಾಡವರ ಮಾತೃ ಸಂಘದ 105 ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸ್ಥಿತಿಗತಿಯನ್ನು ಸರ್ಕಾರ ತಿಳಿಸಬೇಕಿದೆ

2024-25ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆ ಉದ್ಘಾಟಿಸಿದ ಅವರು, ಬಂಟ ಸಮಾಜವನ್ನು ಕೇಂದ್ರ ಸರಕಾರದ ಮೀಸಲಾತಿ ಪಟ್ಟಿಯಲ್ಲಿ ಸೇರಿಸಲು ಹಾಗೂ ರಾಜ್ಯದ ಮೀಸಲಾತಿ ಪಟ್ಟಿಯಲ್ಲಿ ಬಂಟರನ್ನು ಪ್ರವರ್ಗ 3 (ಬಿ) ಯಿಂದ ಪ್ರವರ್ಗ 2 (ಎ) ಸೇರ್ಪಡೆಗೊಳಿಸಲು ಆಗತ್ಯವಿರುವ ಮಾಹಿತಿಯನ್ನು ಸಂಗ್ರಹಿಸಿ ಮೀಸಲಾತಿಯಲ್ಲಿ ಸೇರಿಸುವ ಉದ್ದೇಶದಿಂದ ಹಾಗೂ ಬಂಟ ಸಮಾಜದ ನಿಜವಾದ ಸ್ಥಿತಿಗತಿಯನ್ನು ಸರಕಾರದ ಗಮನಕ್ಕೆ ಬರುವಂತೆ ಮಾಡಬೇಕು. ಈ ನಿಟ್ಟಿನಲ್ಲಿ 'ಬಾಂಧವ್ಯ' ಎಂಬ ನಾಮಾಂಕಿತದೊಂದಿಗೆ ವಿಶ್ವವ್ಯಾಪಿಯಾಗಿ ನೆಲೆಸಿರುವ ಬಂಟರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ, ವೈವಾಹಿಕ, ಆರೋಗ್ಯ, ವಸತಿ, ಧಾರ್ಮಿಕ ಮತ್ತು ಒಟ್ಟು ಜೀವನದ ವ್ಯವಸ್ಥೆ ಹಾಗೂ ಇತರ ಸ್ಥಿತಿಗತಿಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ ಮಹೋನ್ನತವಾದ ದೂರಗಾಮಿ ಪರಿಣಾಮವನ್ನು ಬೀರುವ 'ವಿಶ್ವ ಬಂಟರ ಮಾಹಿತಿ ಕೋಶ'ವನ್ನು ತಯಾರು ಮಾಡುವ ಒಂದು ಅನುಕರಣೀಯ ಶ್ರೇಷ್ಠ ಕೆಲಸ ಮಾಡಲು ಕಾರ್ಯ ಪ್ರವೃತ್ತರಾಗಿದ್ದೇವೆ ಎಂದರು.
ಸಭೆಯಲ್ಲಿ 2023-24ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡಾವಳಿಗಳ ಮತ್ತು 2024-25 ನೇ ಸಾಲಿನ ವಾರ್ಷಿಕ ವರದಿಯನ್ನು ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಂ. ಶೆಟ್ಟಿ ಮಂಡಿಸಿದರು.
2024-25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಕೋಶಾಧಿಕಾರಿ ಸಿಎ ರಾಮ್ ಮೋಹನ್ ರೈ ಮಂಡಿಸಿದರು. ವಿದ್ಯಾರ್ಥಿ, ವಿದ್ಯಾರ್ಥಿನಿ ಭವನಗಳ, ಶಾಲಾ ಕಾಲೇಜುಗಳ, ತಾಲೂಕು ಸಮಿತಿಗಳ ವಾರ್ಷಿಕ ವರದಿ ಮಂಡನೆ ನಡೆಯಿತು. 2025-26 ನೇ ಸಾಲಿಗೆ ಲೆಕ್ಕ ಪರಿಶೋಧಕರಾಗಿ ಸಿಎ ದಯಾಚರಣ್ ಶೆಟ್ಟಿ ಪುನರಾಯ್ಕೆಗೊಂಡರು. ಉಪಾಧ್ಯಕ್ಷ ಕಾವು ಹೇಮನಾಥ ಶೆಟ್ಟಿ ಜೊತೆ ಕಾರ್ಯದರ್ಶಿ ಸಂಜೀವ ಶೆಟ್ಟಿ ಸಂಪಿಗೇಡಿ ಉಪಸ್ಥಿತರಿದ್ದರು. ಕಾವು ಹೇಮನಾಥ ಶೆಟ್ಟಿ ವಂದಿಸಿದರು. ಡಾ ಮಂಜುಳಾ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

ಸುತ್ತ ಮುತ್ತ

ಜೂ. 2: ಕೋಟ ಪಡುಕೆರೆ ಪದವಿ ಕಾಲೇಜಿನಲ್ಲಿ ಉದ್ಯೋಗ ಮೇಳ

ಕೋಟ: ಇಲ್ಲಿನ ಕೋಟ-ಪಡುಕೆರೆ ಲಕ್ಷ್ಮೀ ಸೋಮ ಬಂಗೇರ ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಗೀತಾನಂದ ಫೌಂಡೇಶನ್ ಮಣೂರು-ಪಡುಕೆರೆ ಇವರ ಸಹಭಾಗಿತ್ವದಲ್ಲಿ ಜೂ.2ರಂದು ಬೆಳಗ್ಗೆ 9ರಿಂದ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ. ಉದ್ಯೋಗ ಮೇಳದಲ್ಲಿ ಪ್ರತಿಷ್ಠಿತ ಬಹು ರಾಷ್ಟ್ರೀಯ ಕಂಪನಿಗಳು ಆಗಮಿಸುತ್ತಿದ್ದು ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಇಡಿ, ಬಿಇಡಿ, ಬಿಎ, ಬಿಕಾಂ, ಬಿಎಸ್‌ಡಬ್ಲ್ಯು, ಎಂಎಸ್‌ಡಬ್ಲ್ಯು, ಎಂಎ, ಎಂಕಾಂ, ಎಂಎಸ್ಸಿ, ಎಂಬಿಎ, ಬಿಬಿಎ, ಬಿಸಿಎ, ಬಿಟೆಕ್, ಎಂಟೆಕ್ ಮತ್ತಿತರ ಎಲ್ಲಾ ಉದ್ಯೋಗಾಕಾಂಕ್ಷಿಗಳು ಪಾಲ್ಗೊಳ್ಳಬಹುದು ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

ಮಂಗಳೂರಿನಲ್ಲಿ ಐಪಿಎಲ್ ಫೈನಲ್ 'ಫ್ಯಾನ್ ಪಾರ್ಕ್'

ಮಂಗಳೂರು: ಐಪಿಎಲ್ ಚುಟುಕು ಕ್ರಿಕೆಟ್ ಪಂದ್ಯಾಟ ಆರಂಭಗೊಂಡು ಕೊನೆಯ ಕೆಲ ಪಂದ್ಯ ಮಾತ್ರ ಬಾಕಿ ಇದ್ದು ಉಚಿತವಾಗಿ ದೊಡ್ಡ ಪರದೆಯ ಮುಂದೆ ಕೂತು ಮ್ಯಾಚ್ ವೀಕ್ಷಿಸುವ ಅವಕಾಶ ಮಂಗಳೂರಿನ ಕ್ರಿಕೆಟ್ ಪ್ರೇಮಿಗಳಿಗೆ ಮತ್ತೊಮ್ಮೆ ಒದಗಿದೆ. ಮೇ 29ರಂದು ನಡೆಯುವ ಐಪಿಎಲ್ ಪ್ಲೇ ಆಫ್ ಮತ್ತು ಮೇ 31ರ ಫೈನಲ್ ಪಂದ್ಯಾಟದ ಫ್ಯಾನ್ ಪಾರ್ಕನ್ನು ಮಂಗಳೂರಿನ ಲಾಲ್‌ಬಾಗ್‌ನ ಕರಾವಳಿ ಉತ್ಸವ ಮೈದಾನದಲ್ಲಿ ಆಯೋಜಿಸಲಾಗಿದೆ. ಈ ಆವೃತ್ತಿಯಲ್ಲಿ ಒಟ್ಟಾರೆ ದೇಶದ 50 ನಗರಗಳಲ್ಲಿ ಫ್ಯಾನ್ ಪಾರ್ಕ್ ಆಯೋಜಿಸಲಾಗುತ್ತಿದೆ ಎಂದು ಬಿಸಿಸಿಐ ಆಪರೇಷನಲ್ ಮ್ಯಾನೇಜರ್ ವಿಕಾಸ್ ಪಂಡಿತ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮಂಗಳೂರಿನಲ್ಲಿ 5 ಮತ್ತು ದೇಶದಲ್ಲಿ 11 ನೇ ಬಾರಿ ಐಪಿಎಲ್ ಫ್ಯಾನ್ ಪಾರ್ಕ್ ಆಯೋಜಿಸಲಾಗುತ್ತಿದೆ. ಮಂಗಳೂರು ನಗರದಲ್ಲಿ 8000 ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಯಾವ ರೀತಿ, ಕ್ರಿಕೆಟ್ ಮೈದಾನದಲ್ಲಿ ಸಿಕ್ಸ್ ಸಂಭ್ರಮ, ಉತ್ಸಾಹ ಇರುತ್ತದೆಯೋ ಅದೇ ವಾತಾವರಣ ಫ್ಯಾನ್ ಪಾರ್ಕ್ ನಲ್ಲಿಯೂ ಇರುತ್ತದೆ. ಎಲ್ಲರಿಗೂ ಉಚಿತ ಪ್ರವೇಶ ಇರಲಿದೆ ಎಂದರು. ಮಹಾಬಲ ಮಾರ್ಲ ಅವರು ಮಾತನಾಡಿ, ಫ್ಯಾನ್ ಪಾರ್ಕ್‌ನಲ್ಲಿ ಸಂಗೀತ, ಮನರಂಜನೆ, ಫುಡ್ ಕೋರ್ಟ್‌ಗಳು, ಮಕ್ಕಳ ಆಟಕ್ಕೆ ಪ್ರತ್ಯೇಕ ಸ್ಥಳ, ವರ್ಚುವಲ್ ಬ್ಯಾಟಿಂಗ್ ಜಾಗ, ಸೆಲ್ಫಿಗಾಗಿ ವಿವಿಧ ಚಟುವಟಿಕೆಗಳು ಇರಲಿದೆ. ಪಂದ್ಯದ ಮಧ್ಯಂತರ ಭಾಗದಲ್ಲಿ ಲಕ್ಕಿ ಕೂಪನ್ ಡ್ರಾ ಇರಲಿದೆ ಎಂದು ತಿಳಿಸಿದರು.

ಜೂ.2: ಆರೋಗ್ಯ ತಪಾಸಣೆ ಶಿಬಿರ

ಮಂಗಳೂರು: ವಿಶ್ವ ಹಿಂದೂ ಪರಿಷತ್, ಬಜರಂಗದಳ ಸೇವಾ ವಿಭಾಗ ಮರೋಳಿ ಖಂಡ ಸಮಿತಿ, ಎ.ಜೆ. ವೈದ್ಯಕೀಯ ಮಹಾವಿದ್ಯಾಲಯ ಸಹಯೋಗದಲ್ಲಿ ಮರೋಳಿ ಜೋಡುಕಟ್ಟೆ ಸಮಾಜ ಸೇವಾ ಪ್ರತಿಷ್ಠಾನ ಸಹಕಾರದೊಂದಿಗೆ ಪ್ರತಿ ತಿಂಗಳ ಪ್ರಥಮ ಮಂಗಳವಾರ ಮಾಸಿಕ ಆರೋಗ್ಯ ತಪಾಸಣೆ ಉಚಿತ ಶಿಬಿರ ನಡೆಯಲಿದೆ. ಈ ಬಾರಿಯ ಶಿಬಿರ ಜೂ. 2ರಂದು ಸಂಜೆ 4.30ರಿಂದ ಮರೋಳಿ ಜೋಡುಕಟ್ಟೆ ವಜ್ರಕಾಯ ರಂಗ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಸಾಮಾನ್ಯ ವೈದ್ಯಕೀಯ ತಪಾಸಣೆಗಳಾದ ಚರ್ಮ, ಕಿವಿ, ಮೂಗು, ಗಂಟಲು, ಕೀಲು ಮತ್ತು ಗಂಟು ನೋವು ತಪಾಸಣೆ, ಸ್ತ್ರೀರೋಗ ತಪಾಸನೆ, ಮಧುಮೇಹ, ರಕ್ತದೊತ್ತಡ ಪರೀಕ್ಷೆ, ಕಣ್ಣಿನ ತಪಾಸಣೆ (ಅಗತ್ಯವುಳ್ಳವರಿಗೆ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ), ದಂತ ತಪಾಸಣೆ (ಸ್ವಚ್ಛಗೊಳಿಸುವುದು, ಹುಳುಕು ಹಲ್ಲುಗಳ ಭರ್ತಿ), ಹೃದಯ ಸಂಬಂಧಿ ರೋಗ ತಪಾಸಣೆ (ಇಸಿಜಿ), ಕೆಲವು ವಿಧದ ರಕ್ತ ಪರೀಕ್ಷೆಗಳು, ಕೆಲವು ವಿಧದ ಔಷಧ ವಿತರಣೆ, ಇನ್ನಿತರ ವೈದ್ಯಕೀಯ ಸೇವೆಗಳು ಶಿಬಿರದಲ್ಲಿ ಲಭ್ಯವಿದೆ. ಮುಂದುವರಿದ ಚಿಕಿತ್ಸೆಗಾಗಿ ಎ.ಜೆ. ಆಸ್ಪತ್ರೆಗೆ ಹೋದಲ್ಲಿ ಕೆಲವು ಚಿಕಿತ್ಸೆಗಳು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ದೊರೆಯಲಿದೆ ಎಂದು ಪ್ರಕಟನೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9611001000 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಲ್ಲಾಪು-ತೋಕೂರು ರಸ್ತೆ ಸಂಚಾರ ಸ್ಥಗಿತ

ಮುಲ್ಕಿ: ಪಡುಪಣಂಬೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಲ್ಲಾಪು- ತೋಕೂರು ನಡುವಿನ ಮಾಗಂದಡಿ ಬಳಿ ಮೋರಿ ಅಳವಡಿಕೆ ಕಾಮಗಾರಿ ನಡೆಯಲಿದೆ. ಮೇ 29ರ ಬೆಳಗ್ಗೆ 9ರಿಂದ ಸಂಜೆ 5ರವರೆಗೆ ರಸ್ತೆಯನ್ನು ಬಂದ್ ಮಾಡಲಾಗುವುದು. ಸಾರ್ವಜನಿಕರು ಹಾಗೂ ವಾಹನ ಸವಾರರು ಬದಲಿ ರಸ್ತೆ ಬಳಸಿ ಗ್ರಾ.ಪಂ. ಜೊತೆ ಸಹಕರಿಸಬೇಕಾಗಿ ಪ್ರಕಟಣೆ ತಿಳಿಸಿದೆ

ರಾಮನಗರ ಮಾವು ಬೆಳೆಗಾರರ ಮಾರಾಟ ಸಂಘದ ನೇತೃತ್ವ | ನೈಸರ್ಗಿಕವಾಗಿ ಮಾಗಿಸಿದ ಹಣ್ಣಿನ ಮಾರಾಟ

ನಾಲ್ಕು ದಿನದ ಮಾವು ಮೇಳ ಕದ್ರಿ ಉದ್ಯಾನವನದಲ್ಲಿ ಆರಂಭ

ಮಂಗಳೂರು: ರಾಮನಗರ ಜಿಲ್ಲಾ ಮಾವು ತೋಟದ ಬೆಳೆಗಾರರ ಮಾರಾಟ ಸಂಘದ ವತಿಯಿಂದ ತೋಟಗಾರಿಕಾ ಇಲಾಖೆ ಸಹಕಾರದೊಂದಿಗೆ ನಗರದ ಕದ್ರಿ ಉದ್ಯಾನವನದಲ್ಲಿ ಆಯೋಜಿಸಿರುವ ನಾಲ್ಕು ದಿನಗಳ ಮಾವು ಮೇಳ ಗುರುವಾರ ಉದ್ಘಾಟನೆಗೊಂಡಿತು. ಕದ್ರಿ ಉದ್ಯಾನವನ ಸಮಿತಿ ಸದಸ್ಯ ಜಗನ್ನಾಥ ಗಾಂಭೀರ್ ಮಾವು ಮೇಳಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ತೋಟಗಾರಿಕಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಪ್ರವೀಣ್, ಪ್ರತಿವರ್ಷ ತೋಟಗಾರಿಕಾ ಇಲಾಖೆ ವತಿಯಿಂದಲೇ ಮಾವು ಮೇಳ ನಡೆಯುತ್ತಿತ್ತು. ಈ ಬಾರಿ ಇಲಾಖೆಯ ಸಹಕಾರದೊಂದಿಗೆ ರೈತರಿಂದಲೇ ಮೇಳ ನಡೆಯುತ್ತಿದೆ. ಮಾರುಕಟ್ಟೆಯಲ್ಲಿ ಕೃತಕವಾಗಿ ಮಾಗಿಸಿದ ಮಾವಿನ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿದೆ. ಆದರೆ, ಈ ಮೇಳದಲ್ಲಿ ರೈತರೇ ತಮ್ಮ ತೋಟಗಳಿಂದ ಕೊಯ್ದು ನೈಸರ್ಗಿಕವಾಗಿ ಮಾಗಿಸಿದ ಮಾವಿನ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿದೆ. ಮಾವನ್ನು ನೈಸರ್ಗಿಕವಾಗಿ ಮಾಗಿಸಲು ಸರಕಾರ ಪ್ರೋತ್ಸಾಹ ನೀಡುತ್ತಿದೆ ಎಂದರು.

ಮಾವು ಬೆಳೆಗಾರ ರಾಮನಗರದ ವಾಸು ಅವರು ಮಾತನಾಡಿ, ನಮ್ಮ ತೋಟಗಳಲ್ಲಿ ಬೆಳೆದ ನೈಸರ್ಗಿಕವಾಗಿ ಮಾಗಿಸಿದ ಗುಣಮಟ್ಟದ ಮಾವಿನ ಹಣ್ಣುಗಳನ್ನು ಮಾರಾಟಕ್ಕೆ ತಂದಿದ್ದೇವೆ. ಈ ಹಿಂದಿನ ವರ್ಷಗಳಲ್ಲಿ ಮಂಗಳೂರಿನ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಈ ಬಾರಿಯೂ ಖರೀದಿಸಿ ಪ್ರೋತ್ಸಾಹ ನೀಡಬೇಕು ಎಂದು ವಿನಂತಿಸಿದರು.

ಮಾವು ಬೆಳೆಗಾರರಾದ ನಿಂಗರಾಜು, ಪುಟ್ಟರಾಜು, ಮಾದೇಶ, ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು.






ಮೇಳದಲ್ಲಿ ಅಪರೂಪದ ತಳಿಯ ಹಣ್ಣುಗಳ ಮಾರಾಟ

ಮಾವು ಮೇಳದಲ್ಲಿ ಅಪರೂಪದ ತಳಿಗಳಾದ ಮಾಯಾ, ಶುಗರ್ ಬೇಬಿ, ಬ್ರೂನಿ ಕಿಂಗ್ ಮುಂತಾದವು ಗಮನ ಸೆಳೆಯುತ್ತಿವೆ. ಮಾಯಾ ತಳಿ ಆಸ್ಟ್ರೇಲಿಯಾ ಮೂಲದ್ದಾಗಿದ್ದು, ಹಣ್ಣಾಗುವ ಮೊದಲೇ ಉಪ್ಪು, ಮೆಣಸಿನ ಪುಡಿ ಬೆರೆಸಿ ಸವಿಯಬಹುದು. ಮಧುಮೇಹಿಗಳೂ ಈ ಹಣ್ಣನ್ನು ತಿನ್ನಬಹುದು. ಬ್ರೂನಿ ಕಿಂಗ್ ಐದು ಕೆಜಿವರೆಗೂ ತೂಗುತ್ತಿದ್ದು, ಇದನ್ನು ತರಕಾರಿ ಮಾವು ಎನ್ನುತ್ತಾರೆ. ಕಾಯಿಯನ್ನೇ ತಿನ್ನಬಹುದು ಎಂದು ರೈತರು ಮಾಹಿತಿ ನೀಡಿದರು.

16 ಮಳಿಗೆಗಳು

ಮಾವು ಮೇಳದಲ್ಲಿ ವಿವಿಧ ತಳಿಗಳಾದ ಆಲ್ಫಾನ್ಸೋ, ಬಾದಾಮಿ, ಮಲ್ಲಿಕಾ, ರಸಪುರಿ, ಮಲಗೋವಾ, ಸಿಂಧೂರ, ಕಾಲಪಾಡಿ, ತೋತಾಪುರಿ, ಬಂಗನಪಲ್ಲಿ, ಶುಗರ್ ಬೇಬಿ ಮುಂತಾದ ಹಣ್ಣುಗಳು ಮಾರಾಟಕ್ಕೆ ಲಭ್ಯವಿದೆ. ರಾಮನಗರದಿಂದ ಮಾವು ಬೆಳೆಗಾರರು ಮೇಳಕ್ಕೆ ಆಗಮಿಸಿದ್ದು, 16 ಸ್ಟಾಲ್‌ಗಳಿವೆ. ಹಲಸಿನ ಮಾರಾಟವೂ ಇದೆ. ಮೇ 31ರವರೆಗೆ ಬೆಳಗ್ಗೆ 8 ರಿಂದ ರಾತ್ರಿ 8.30ರವರೆಗೆ ಮಾರಾಟ ಇರಲಿದೆ.

ಮೇ 31: ಮಾಜಿ ಸಿಎಂ ವೀರಪ್ಪ ಮೊಯ್ಲಿ ಅವರಿಂದ ಉದ್ಘಾಟನೆ | ಸನ್ಮಾನ, ಗೌರವಾರ್ಪಣೆ

ಗಿಳಿಯಾರು ಕುಶಲ ಹೆಗ್ಡೆ ಜನ್ಮಶತಮಾನೋತ್ಸವ

ಕುಂದಾಪುರ: ಖ್ಯಾತ ವಕೀಲ ಹಾಗೂ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರದ ಜನಪ್ರಿಯ ಧುರೀಣ ದಿವಂಗತ ಗಿಳಿಯಾರು ಕುಶಲ ಹೆಗ್ಡೆಯವರ ಜನ್ಮಶತಮಾನೋತ್ಸವ ಸಮಾರಂಭವು ಮೇ 31ರಂದು ಮಧ್ಯಾಹ್ನ 3 ಗಂಟೆಗೆ ಕೋಟೇಶ್ವರದ ಸಹನಾ ಸಭಾಂಗಣದಲ್ಲಿ ವೈಭವದಿಂದ ಜರುಗಲಿದೆ.



ಗಿಳಿಯಾರು ಕುಶಲ ಹೆಗ್ಡೆ ಮೆಮೋರಿಯಲ್ ಚಾರಿಟೆಬಲ್ ಟ್ರಸ್ಟ್ ಆಶ್ರಯದಲ್ಲಿನಡೆಯಲಿರುವ ಈ ಕಾರ್ಯಕ್ರಮದಲ್ಲಿ ಸಾಧಕರಿಗೆ ಸನ್ಮಾನ, ರ‍್ಯಾಂಕ್ ವಿಜೇತರಿಗೆ ಗೌರವ ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ಧನ ಸಹಾಯ ವಿತರಿಸಲಾಗುವುದು.

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ ಸಮಾರಂಭ ಉದ್ಘಾಟಿಸಲಿದ್ದು, ಮಾಜಿ ಸಚಿವ ಬಿ. ರಮಾನಾಥ ರೈ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಕೋಟ ಶ್ರೀನಿವಾಸ ಪೂಜಾರಿ ಸಾಧಕರನ್ನು ಸನ್ಮಾನಿಸಲಿದ್ದು, ಶಾಸಕರಾದ ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರುರಾಜ ಗಂಟಿಹೊಳೆ ಕಲಾವಿದರನ್ನು ಗೌರವಿಸಿ, ಸಹಾಯಧನ ವಿತರಿಸಲಿದ್ದಾರೆ. ಮಾಜಿ ಸಂಸದ ಕೆ. ಜಯಪ್ರಕಾಶ ಹೆಗ್ಡೆ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಗಣ್ಯರಾದ ಡಾ. ಸುಭಾಶ್ಚಂದ್ರ ಶೆಟ್ಟಿ ಆನಂದ ಸಿ. ಕುಂದರ್ ಹಾಗೂ ಹಿರಿಯ ವಕೀಲ ಎ.ಎಸ್.ಎನ್. ಹೆಬ್ಬಾರ್ ವಿವಿಧ ನೆರವು ಹಸ್ತಾಂತರಿಸಲಿದ್ದಾರೆ.

ಕೋವಿಡ್ ಕಾಲದ ಮಾನವೀಯತೆ

1926ರಲ್ಲಿ ಜನಿಸಿ ಸ್ವಾತಂತ್ರ್ಯ ಚಳವಳಿ ಸಹಿತ ಹತ್ತಾರು ಸಂಸ್ಥೆಗಳ ಅಧ್ಯಕ್ಷರಾಗಿ ದುಡಿದಿದ್ದ ಕುಶಲ ಹೆಗ್ಡೆ, ಸಾರ್ವಜನಿಕ ಬದುಕಿನಲ್ಲಿ ಜನಾನುರಾಗಿಯಾಗಿದ್ದರು. ಅವರ ಸೇವಾ ಪರಂಪರೆಯನ್ನು ಅವರ ಹೆಸರಿನ ಸ್ಮಾರಕ ದತ್ತಿ ಸಂಸ್ಥೆಯು ಇಂದು ಅತ್ಯಂತ ಮಾದರಿಯಾಗಿ ಮುಂದುವರಿಸಿಕೊಂಡು ಹೋಗುತ್ತಿದೆ. ಕೇವಲ ಶಿಕ್ಷಣ ಮತ್ತು ವೈದ್ಯಕೀಯ ನೆರವಿಗಷ್ಟೇ ಸೀಮಿತವಾಗದೆ, ಜಾಗತಿಕ ಕೋವಿಡ್ ಸಾಂಕ್ರಾಮಿಕದ ಕಠಿಣ ದಿನಗಳಲ್ಲಿ ಈ ಟ್ರಸ್ಟ್ ಸರ್ಕಾರ ಹಾಗೂ ಜಿಲ್ಲಾಡಳಿತದೊಂದಿಗೆ ನೇರವಾಗಿ ಕೈಜೋಡಿಸಿತ್ತು. ಸಂಕಷ್ಟದಲ್ಲಿದ್ದ ನೂರಾರು ವಲಸೆ ಕಾರ್ಮಿಕರಿಗೆ ಮತ್ತು ಆಸರೆಯಿಲ್ಲದ ಬಡ ಕುಟುಂಬಗಳಿಗೆ ಅಗತ್ಯ ಆಹಾರ ಸಾಮಗ್ರಿ, ತುರ್ತು ನೆರವು ನೀಡುವ ಮೂಲಕ ಶ್ರಮಿಸಿತ್ತು. ಈ ಟ್ರಸ್ಟ್ ಕಳೆದ 25 ವರ್ಷಗಳಲ್ಲಿ 15 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಹಾಗೂ ನೂರಾರು ರೋಗಿಗಳಿಗೆ ಆರ್ಥಿಕ ಆಸರೆಯಾಗಿ ನಿರಂತರ ಸಮಾಜ ಸೇವೆ ಮಾಡಿದೆ.

ಸನ್ಮಾನ

ವಕೀಲ ವೃತ್ತಿಯಲ್ಲಿ 50 ವರ್ಷ ಪೂರೈಸಿದ ಮಟ್ಟಿ ಮಾಧವ ರಾವ್, ಮಕ್ಕಳ ಮೇಳದ ಎಚ್. ಶ್ರೀಧರ ಹಂದೆ, ಕ್ರೀಡಾಪಟು ಎನ್. ವಸಂತ ರಾವ್, ರಂಗಕರ್ಮಿ ಸತೀಶ ಪೈ, ನೃತ್ಯ ಸಂಘಟಕರು ಹಾಗೂ ವಿವಿಧ ಪ್ರಮುಖ ಸಂಸ್ಥೆಗಳನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಗುವುದು.

ವಿಶೇಷ ಆಕರ್ಷಣೆ ಕಾಳಿಂಗ-ಕಾಳಿಂಗ

ಸಂಜೆ 6 ಗಂಟೆಗೆ ಕುಂದಾಪುರದಲ್ಲೇ ಪ್ರಥಮ ಬಾರಿಗೆ ಅಪೂರ್ವ ಸಾಂಸ್ಕೃತಿಕ ಪ್ರಯೋಗ 'ಕಾಳಿಂಗ-ಕಾಳಿಂಗ' ಪ್ರದರ್ಶನಗೊಳ್ಳಲಿದೆ. ಸುಗಮ ಸಂಗೀತದ ಪಿತಾಮಹ ಪಿ. ಕಾಳಿಂಗ ರಾವ್ ಹಾಗೂ ಯಕ್ಷಗಾನದ ಯುಗ ಪ್ರವರ್ತಕ ಜಿ. ಆರ್. ಕಾಳಿಂಗ ನಾವಡ ಅವರ ಪದ-ಪದ್ಯಗಳ ಈ ಜುಗಲ್‌ಬಂದಿಗೆ ಡಾ. ದೀಪಕ್ ಶೆಟ್ಟಿ ಬಾರ್ಕೂರು ಮತ್ತು ರಾಘವೇಂದ್ರ ಕಾಂಚನ್ ನಿರೂಪಣೆ ಮಾಡಲಿದ್ದು, ಖ್ಯಾತ ಗಾಯಕರು ಹಾಗೂ ಭಾಗವತರು ಸಾಥ್ ನೀಡಲಿದ್ದಾರೆ ಎಂದು ಎಂದು ಪ್ರಕಟಣೆ ತಿಳಿಸಿದೆ.

ಸಂಘಸಂಸ್ಥೆಗಳಿಂದ ಕೋಟತಟ್ಟು ಕೊರಗ ಕಾಲೋನಿ 7 ಮನೆಗಳಿಗೆ ಬೀರು ಕೊಡುಗೆ

ಸಾಮಾಜಿಕ ಕಾರ್ಯ ಶ್ಲಾಘನೀಯ: ಕುಂದರ್

ಕೋಟ: ಸಮಾಜಸೇವೆಗೈಯಲು ಹಲವು ದಾರಿಗಳಿವೆ ಅದರಲ್ಲಿ ವಿವಿಧ ಸಂಘಸಂಸ್ಥೆಗಳ ಮೂಲಕ ಕೊರಗ ಸಮುದಾಯದ ಮನೆಗಳಿಗೆ ಬೀರು ಕೊಡುಗೆ ನೀಡಲು ಪ್ರೇರಣೆದಾಯಕರಾಗಿರುವ ಸಮಾಜಸೇವಕ ಶ್ರೀಕಾಂತ್ ಶೆಣೈ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಕೋಟದ ಧರ್ಮರತ್ನಾಕರ ಆನಂದ್ ಸಿ. ಕುಂದರ್ ಅಭಿಪ್ರಾಯಪಟ್ಟರು.



ಕೋಟತಟ್ಟು ಚಿಟ್ಟಿಬೆಟ್ಟು ಕೊರಗ ಕಾಲೋನಿಯ ಏಳು ಮನೆಗಳಿಗೆ ಸಮಾಜಸೇವಕ ಶ್ರೀಕಾಂತ್ ಶೆಣೈ ನೇತೃತ್ವದಲ್ಲಿ ವಿವಿಧ ಸಂಸ್ಥೆಗಳ ಸಹಕಾರದೊಂದಿಗೆ ಬೀರು ಹಸ್ತಾಂತರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೊರಗ ಸಮುದಾಯವನ್ನು ಕೀಳಾಗಿ ಕಾಣುವ ಕಾಲಘಟ್ಟ ಇದಲ್ಲ ಅವರು ನಮ್ಮಂತೆ ಈ ಸಮಾಜದಲ್ಲಿ ಸಮಾನರಾಗಿ ಗುರುತಿಸಿಕೊಂಡಿದ್ದಾರೆ ಎಂದರು.

ಸಭೆಯಲ್ಲಿ ಬೀರು ನಿರ್ಮಿಸಿ ಅತಿ ಕಡಿಮೆ ಬೆಲೆಯಲ್ಲಿ ಒದಗಿಸಿದ ಪ್ರವೀಣ್ ಮಣೂರು ಅವರಿಗೆ ಕೃತಜ್ಞತೆ ಸಲ್ಲಿಸಿ ಗೌರವಿಸಲಾಯಿತು.

ಸಭೆಯಲ್ಲಿ ಟ್ರಾವೆಲಿಂಕ್ಸ್ ಫ್ರೆಂಡ್ಸ್ ಅಧ್ಯಕ್ಷ ಸತೀಶ್ ಎಚ್ ಕುಂದರ್, ಕೋಟತಟ್ಟು ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ಕುಂದರ್, ಪಂಚವರ್ಣ ಯುವಕ ಮಂಡಲದ ಅಧ್ಯಕ್ಷ ಮನೋಹರ್ ಪೂಜಾರಿ, ಗೌರವಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ, ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ, ಶ್ರೀದೇವಿ ಕಿರಣ್ ಕಾಂಪ್ಲೆಕ್ಸ್‌ಗ್ರೂಪ್ ಮುಖ್ಯಸ್ಥಮಹೇಶ್ ಶೆಟ್ಟಿ ಮಣೂರು ಮಹಾಲಿಂಗೇಶ್ವರ ದೇಗುಲದ ಟ್ರಸ್ಟಿ ಅಶೋಕ್ ಶೆಟ್ಟಿಜೈ ಕುಂದಾಪ್ರ ಸೇವಾ ಟ್ರಸ್ಟ್ ಮುಖ್ಯಸ್ಥ ಪುಂಡಲೀಕ ಮೊಗವೀರ,ಕೋಟತಟ್ಟು ಪಂಚಾಯತ್ ಮಾಜಿ ಸದಸ್ಯೆ ವಿದ್ಯಾ ಸಾಲಿಯಾನ್, ನಡುವೆ ನಿಸ್ವಾರ್ಥ ಸೇವಾ ಟ್ರಸ್ಟ್‌ನ ಅಧ್ಯಕ್ಷ ಪ್ರದೀಪ್ ಶೆಟ್ಟಿ ಗೋಪಿನಾಥ್ ಕಿಣಿ, ದಸಂಸ ಕೋಟ ಹೋಬಳಿಯ ಶ್ಯಾಮಸುಂದರ್ ತೆಕ್ಕಟ್ಟೆ ಕುಮಾರ್ ಕೋಟ, ರಾಜು ಬೆಟ್ಟಿನ ಮನೆ, ಶ್ರೀ ದೇವಿಕಿರಣ್ ಕಾಂಪ್ಲೆಕ್ಸ್‌ನ ಪ್ರಮುಖರಾದ ಚೇತನ್ ಕುಮಾರ್, ಅವಿನಾಶ್ ಶೆಟ್ಟಿ ಜ್ಞಾನೇಶ್ ಆಚಾರ್, ಪಂಚವರ್ಣದ ದಿನೇಶ್ ಆಚಾರ್, ನವೀನ್ ಶೆಟ್ಟಿ ಕೊರಗ ಸಮುದಾಯದ ಲಕ್ಷ್ಮೀ, ರವಿ ಸಹಿತ ಅನೇಕರು ಉಪಸ್ಥಿತರಿದ್ದರು. ವಕೀಲ ಟಿ. ಮಂಜುನಾಥ್ ಗಿಳಿಯಾರು ನಿರೂಪಿಸಿದರು. ಕಾರ್ಯಕ್ರಮ ಸಂಯೋಜಕ ಶ್ರೀಕಾಂತ್ ಶೆಣೈ ಕೋಟ ಕೃತಜ್ಞತೆ ಸಲ್ಲಿಸಿದರು.

ವಿವಿಧ ಸಂಘ ಸಂಸ್ಥೆಗಳ ಸಹಕಾರ

ಸಂಘ-ಸಂಸ್ಥೆಗಳಾದ ಸಕಡ್ ಫೌಂಡೇಶನ್ ಕೋಟ, ಕೋಟದ ಪಂಚವರ್ಣ ಸಂಘಟನೆ ಕೋಟ, ಶ್ರೀ ಟೀಮ್ ದೇವಿಕಿರಣ್ ಕೋಟ, ಜೈಕುಂದಾಪ್ರ ಸೇವಾ ಟ್ರಸ್ಟ್, ಟ್ರಾವೆಲಿಂಕ್ಸ್ ಫ್ರೆಂಡ್ಸ್ ಕೋಟ, ನಿಸ್ವಾರ್ಥ ಸೇವಾ ಟ್ರಸ್ಟ್ ಕೋಟ ಬೀರು ನೀಡಿ ಸಹಕರಿಸಿದರು.

ಫಿಲೋಮಿನಾ ಕಾಲೇಜಿನ ಗ್ರಾಹಕರ ವೇದಿಕೆಗೆ ಜಿಲ್ಲಾ ಮಟ್ಟದ ಪ್ರಶಸ್ತಿ ಪ್ರದಾನ



ಪುತ್ತೂರು: ದಕ್ಷಿಣ ಕನ್ನಡ ಜಿಲ್ಲಾ ಗ್ರಾಹಕರ ಸಂಘಟನೆಗಳ ಒಕ್ಕೂಟದ ವತಿಯಿಂದ 2026ರ ಮೇ 23ರಂದು ಮಂಗಳೂರಿನ ಎಸ್‌ಡಿಎಂ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ವಾರ್ಷಿಕ ಕಾರ್ಯ ಮೌಲ್ಯಮಾಪನ ಹಾಗೂ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ 2025-26ನೇ ಸಾಲಿನ ಅತ್ಯುತ್ತಮ ಕಾರ್ಯ ಚಟುವಟಿಕೆ, ಗ್ರಾಹಕ ಜಾಗೃತಿ ಕಾರ್ಯಕ್ರಮಗಳು, ಸಮುದಾಯ ಸೇವಾ ಚಟುವಟಿಕೆಗಳು, ಶೈಕ್ಷಣಿಕ ಭೇಟಿಗಳು ಹಾಗೂ ಸಾಮಾಜಿಕ ಜಾಗೃತಿ ಅಭಿಯಾನಗಳನ್ನು ಪರಿಣಾಮಕಾರಿಯಾಗಿ ನಡೆಸಿದ ಹಿನ್ನೆಲೆಯಲ್ಲಿ ನಗರದ ಸೈಂಟ್ ಫಿಲೋಮಿನಾ (ಸ್ವಾಯತ್ತ) ಕಾಲೇಜಿನ ಪುತ್ತೂರು ಗ್ರಾಹಕರ ವೇದಿಕೆಗೆ 'ಜಿಲ್ಲಾ ಮಟ್ಟದ ಅತ್ಯುತ್ತಮ ಗ್ರಾಹಕರ ವೇದಿಕೆ' ಪ್ರಶಸ್ತಿ ಲಭಿಸಿತು.

ಗ್ರಾಹಕರವೇದಿಕೆಸಂಯೋಜಕಪ್ರವೀಣ್ ಡಿ. ವಿದ್ಯಾರ್ಥಿಗಳುಹಾಗೂಸಾರ್ವಜನಿಕರಿಗಾಗಿ ಗ್ರಾಹಕ ಜಾಗೃತಿ ಕಾರ್ಯಕ್ರಮಗಳು, ಪ್ರಾಯೋಗಿಕ ತರಬೇತಿಗಳು, ಶೈಕ್ಷಣಿಕ ಚಟುವಟಿಕೆಗಳು ಮತ್ತು ಸಮುದಾಯ ಸೇವಾ ಕಾರ್ಯಕ್ರಮ ಯಶಸ್ವಿಯಾಗಿ ಸಂಘಟಿಸಿದಕ್ಕಾಗಿ 'ಅತ್ಯುತ್ತಮ ಸಂಯೋಜಕ' ಪ್ರಶಸ್ತಿ, ಕಾಲೇಜಿನ ತೃತೀಯ ಬಿಕಾಂ ವಿದ್ಯಾರ್ಥಿನಿ ಸಫ್ರೀನಾ ಜಿಲ್ಲಾ ಗ್ರಾಹಕರ ಸಂಘಟನೆಗಳ ಒಕ್ಕೂಟ ನಡೆಸಿದ ವಾರ್ಷಿಕ ಮೌಲ್ಯಮಾಪನದಲ್ಲಿ 'ಅತ್ಯುತ್ತಮ ವಿದ್ಯಾರ್ಥಿ' ವಿಭಾಗದಲ್ಲಿ ದ್ವಿತೀಯ ಬಹುಮಾನ ಪಡೆದುಕೊಂಡರು. ದ.ಕ. ಜಿಲ್ಲಾ ಗ್ರಾಹಕರ ಸಂಘಟನೆಗಳ ಒಕ್ಕೂಟ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ನಾಗಶ್ರೀ ಮಿತ್ರ ವೃಂದ ಟ್ರಸ್ಟ್, ನಾಗಶ್ರೀ ಮಾತೃ ವೃಂದ: ಪದಾಧಿಕಾರಿಗಳ ಆಯ್ಕೆ

ಬಂಟ್ವಾಳ: ತೆಂಕಬೆಳ್ಳೂರು ಗ್ರಾಮದ ಕಮ್ಮಾಜೆಯ ನಾಗಶ್ರೀ ಮಿತ್ರ ವೃಂದ ಚಾರಿಟೇಬಲ್ ಟ್ರಸ್ಟ್ ಹಾಗೂ ನಾಗಶ್ರೀ ಮಾತೃ ವೃಂದದ ಮಹಾಸಭೆಯು ಧನುಪೂಜೆ ನಾಗಶ್ರೀ ವಿವೇಕ ಭವನದಲ್ಲಿ ನಡೆಯಿತು.






ಸಂಸ್ಥೆಗಳ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು. ನಾಗಶ್ರೀ ಮಿತ್ರ ವೃಂದ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷರಾಗಿ ಹರೀಶ್ ಮುಡ್ಕೈಕೋಡಿ ಅವರು ಆಯ್ಕೆಯಾದರೆ,ಪ್ರಧಾನ ಕಾರ್ಯದರ್ಶಿಯಾಗಿ ತಿರುಮಲೇಶ್ ಬೆಳ್ಳೂರು ಆಯ್ಕೆಗೊಂಡರು. ಉಳಿದಂತೆ ಗೌರವ ಮಾರ್ಗದರ್ಶಕರಾಗಿ ಶ್ರೀ ವಿವೇಕ ಚೈತನ್ಯಾನಂದ ಸ್ವಾಮೀಜಿ ಪೊಳಲಿ ತಪೋವನ, ಗೌರವಾಧ್ಯಕ್ಷರಾಗಿ ನಿವೃತ್ತ ಮುಖ್ಯೋಪಾಧ್ಯಾಯ ಅನಂತ್ ರಾಮ್ ಹೆರಳ್, ಉಪಾಧ್ಯಕ್ಷರಾಗಿ ತಿಮ್ಮಪ್ಪ ಕಮ್ಮಾಜೆ, ಜೊತೆ ಕಾರ್ಯದರ್ಶಿ, ದುರ್ಗಾ ಪ್ರಸಾದ್ ಕಮ್ಮಾಜೆ, ಕೋಶಾಧಿಕಾರಿಯಾಗಿ ತಿರುಲೇಶ್ ಬೆಳ್ಳೂರು, ಜೊತೆ ಕೋಶಾಧಿಕಾರಿಯಾಗಿ ಲೋಹಿತ್ ಹೆಬ್ಬಾರಬೆಟ್ಟು , ಕ್ರೀಡಾ ಕಾರ್ಯದರ್ಶಿಯಾಗಿ ರಂಜಿತ್ ಕಮ್ಮಾಜೆ, ಜೊತೆ ಕ್ರೀಡಾ ಕಾರ್ಯದರ್ಶಿಯಾಗಿ ಸುಧೀರ್ ತರವು ಹಾಗೂ ಸಂಘಟನಾ ಕಾರ್ಯದರ್ಶಿಗಳಾಗಿ ರಾಮಚಂದ್ರ ವರಕೋಡಿ, ರಾಮದಾಸ್ ಕಮ್ಮಾಜೆ, ತಿಮ್ಮಪ್ಪ ಕುಲಾಲ್ ಕಮ್ಮಾಜೆ, ಚಂದ್ರಹಾಸ ಅಜಿನಡ್ಕ, ಪದ್ಮನಾಭ ಮಂಗಾಜೆ ಆಯ್ಕೆಯಾಗಿದ್ದಾರೆ.

ನಾಗಶ್ರೀ ಮಾತೃ ವೃಂದ ಕಮ್ಮಾಜೆ" ಸಂಸ್ಥೆಯ 2026-27 ನೇ ಸಾಲಿನ ನೂತನ ಅಧ್ಯಕ್ಷರಾಗಿ ಸೌಮ್ಯ ಕಮ್ಮಾಜೆ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಲತಾ ಧನುಪೂಜೆ, ಪ್ರಧಾನ ಕಾರ್ಯದರ್ಶಿಯಾಗಿ ಶೋಭಿತಾ ಕಮ್ಮಾಜೆ, ಜೊತೆ ಕಾರ್ಯದರ್ಶಿಯಾಗಿ ಭವ್ಯ ಬೆಳ್ಳೂರು, ಕೋಶಾಧಿಕಾರಿಯಾಗಿ ದಿವ್ಯ ಬೆಳ್ಳೂರು, ಕ್ರೀಡಾ ಕಾರ್ಯದರ್ಶಿಯಾಗಿ ನಿಶಾ ಕಮ್ಮಾಜೆ, ಜೊತೆ ಕ್ರೀಡಾ ಕಾರ್ಯದರ್ಶಿ ಹಂಸಿಕಾ ಧನುಪೂಜೆ, ಸಂಘಟನಾ ಕಾರ್ಯದರ್ಶಿಗಳಾಗಿ ಸುಮಾ ಕಮ್ಮಾಜೆ, ಸಂಧ್ಯಾ ಧನುಪೂಜೆ, ವೇದಾವತಿ ಧನುಪೂಜೆ, ಸುಸ್ಮಿತಾ ಧನುಪೂಜೆ ರಮಿತಾ ಧನುಪೂಜೆ ಆಯ್ಕೆಯಾದರು.

ಸಭೆಯಲ್ಲಿ ಗತವರ್ಷದ ವರದಿ, ಲೆಕ್ಕಪತ್ರ ಮಂಡಿಸಲಾಯಿತು.

ನೆಟ್ಲಮುಡ್ನೂರು ಬಿಲ್ಲವ ಗ್ರಾಮ ಸಮಿತಿ ಸಭೆ



ಬಂಟ್ವಾಳ: ತಾಲೂಕಿನ ಮಾಣಿ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘದ ನೆಟ್ಲಮುಡ್ನೂರು ಗ್ರಾಮದ ಬಿಲ್ಲವ ಗ್ರಾಮ ಸಮಿತಿಯ ಕಾರ್ಯಕಾರಿ ಸಭೆಯು ಸೋಮಪ್ಪ ಪೂಜಾರಿ ಮಾದೇಲು ಮನೆಯಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀಧರ್ ಪೂಜಾರಿ ಮುಜಲ ವಹಿಸಿದ್ದರು.ಈ ಸಂದರ್ಭದಲ್ಲಿ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 615 ಅಂಕಗಳನ್ನು ಪಡೆದು ರಾಜ್ಯ ಮಟ್ಟದಲ್ಲಿ 10ನೇ ರ‍್ಯಾಂಕ್ ಗಳಿಸಿದ ರಮೇಶ್ ಪೂಜಾರಿ ಮೆಸ್ಕಾಂ ಹಾಗೂ ಡಾ. ತ್ರಿವೇಣಿ ರಮೇಶ್ ದಂಪತಿ ಪುತ್ರಿ ಪ್ರಗತಿ ಆರ್ ಸಾಲ್ಯಾನ್ ಹಾಗೂ ಒಡಿಸ್ಸಿ ನೃತ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದ ನಡು ಉರ್ದಿಲ ಜನಾರ್ದನ ಪೂಜಾರಿ ಮತ್ತು ಅಶ್ವಿತಾ ದಂಪತಿ ಪುತ್ರಿ ಆರಾಧ್ಯ ಪೂಜಾರಿ ಅವರನ್ನು ಸನ್ಮಾನಿಸಲಾಯಿತು.

ಕೋಟ: ಎಚ್.ಕೆ. ನಾಗರಾಜಗೆ ಪ್ರಶಸ್ತಿ ಪ್ರದಾನ

ಕೋಟ: ಶಿಕ್ಷಕರಾದ ಎ. ಶ್ರೀಪತಿ ಭಟ್ ಹೆಸರಿನ ಪ್ರಶಸ್ತಿಯನ್ನು ಪ್ರಸ್ತುತ ವರ್ಷದಿಂದ ಪ್ರಾರಂಭಿಸಲಾಗಿದೆ. ಈ ಬಾರಿ ಸಂಶೋಧನಾ ಪ್ರಬಂಧ ಮತ್ತು ಲೇಖನಗಳು ಜಾಗತಿಕ ಮನ್ನಣೆ ಪಡೆದಿರುವ ಎಚ್.ಕೆ. ನಾಗರಾಜರಿಗೆ ಕೋಟ ಹಂದಟ್ಟಿನ ಮಹಾವಿಷ್ಣು ಮಹಾಗಣಪತಿ ದೇವಸ್ಥಾನದಲ್ಲಿ 'ರಜತ ಫಲಕ' ನೀಡಿ ಗೌರವಿಸಲಾಯಿತು.



ಕೋಡಿಕಲ್ ಅಂಬೇಡ್ಕರ್ ಯುವ ಮಂಡಲದಲ್ಲಿ 'ಒಂದು ದಿನದ ಬೇಸಿಗೆ ಶಿಬಿರ'

ಮಕ್ಕಳಲ್ಲಿ ಶಿಸ್ತು, ಸೃಜನಾತ್ಮಕತೆ ಬೇಸಿಗೆ ಶಿಬಿರ ಬೆಳೆಸಲು ಸಹಕಾರಿ

ಮಂಗಳೂರು: ಡಾ.ಪಿ ದಯಾನಂದ ಪೈ- ಪಿ ಸತೀಶ್ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರಥಬೀದಿ ಮಂಗಳೂರು, ಕೊರಗರ ಜಿಲ್ಲಾ ಸಂಘ ಹಾಗೂ ಜಿಲ್ಲಾ ಕ್ಷಯರೋಗ ನಿರ್ಮೂಲನ ಕಚೇರಿ ಮಂಗಳೂರು ಸಹಯೋಗದಲ್ಲಿಅಂಬೇಡ್ಕರ್ ಯುವ ಮಂಡಲ ಕೋಡಿಕಲ್ ಮಂಗಳೂರು ವತಿಯಿಂದ ಒಂದು ದಿನದ ಬೇಸಿಗೆ ಶಿಬಿರವನ್ನು ಅಂಬೇಡ್ಕರ್ ಯುವ ಮಂಡಲ ಕೋಡಿಕಲ್‌ನಲ್ಲಿ ಮಂಗಳವಾರ ಆಯೋಜಿಸಲಾಯಿತು.



ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದ ಶಶಿಕಲಾ ಕೋಡಿಕಲ್ ಮಾತನಾಡಿ, ಇಂತಹ ಶಿಬಿರಗಳು ಮಕ್ಕಳಲ್ಲಿ ಆತ್ಮವಿಶ್ವಾಸ, ಶಿಸ್ತು ಹಾಗೂ ಸೃಜನಾತ್ಮಕತೆಯನ್ನು ಬೆಳೆಸಲು ಸಹಕಾರಿ ಆಗುತ್ತದೆ ಎಂದು ಹೇಳಿದರು.

ಬಳಿಕ ವಿವಿಧ ಶಿಕ್ಷಣಾತ್ಮಕ ಮತ್ತು ಮನರಂಜನಾ ಚಟುವಟಿಕೆಗಳನ್ನು ನಡೆಸಲಾಯಿತು. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಹಲವು ವೈವಿಧ್ಯಮಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು. ಮಕ್ಕಳಿಗೆ ಚಿತ್ರಕಲೆ, ಆಟೋಟ ಸ್ಪರ್ಧೆಗಳು, ಹಾಡುಗಾರಿಕೆ, ನೃತ್ಯ, ಗುಂಪು ಚಟುವಟಿಕೆಗಳು ಹಾಗೂ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಸಮಾರೋಪ ಸಮಾರಂಭ

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ದಕ್ಷಿಣ ಕನ್ನಡ ಕೊರಗರ ಜಿಲ್ಲಾ ಸಂಘದ ಅಧ್ಯಕ್ಷ ಸುಂದರ ಬೆಳುವಾಯಿ ಅವರು ವಹಿಸಿದ್ದರು. ದ.ಕ ಕೊರಗರ ಜಿಲ್ಲಾ ಸಂಘದ ಸಂಜೀವ ಕೋಡಿಲ್, ಜಿಲ್ಲಾ ಕ್ಷಯ ನಿರ್ಮೂಲನೆ ಅಧಿಕಾರಿಗಳ ಕಚೇರಿ ಮಂಗಳೂರು ಸಂಯೋಜಕ ಮನೋಜ್ ಕೊಡಿಕಲ್, ರಥಬೀದಿ ಡಾ.ಪಿ ದಯಾನಂದ ಪೈ- ಪಿ ಸತೀಶ್ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಮಾಜ ಕಾರ್ಯ ವಿಭಾಗದ ಸಂಯೋಜಕಿ ಅರುಣಾ ಕುಮಾರಿ ಉಪಸ್ಥಿತರಿದ್ದರು.

ಸಮಾಜ ಕಾರ್ಯ ವಿಭಾಗದ ವಿದ್ಯಾರ್ಥಿಗಳಾದ ಪ್ರವೀಣ್, ಐಶ್ವರ್ಯ, ಗಾಯತ್ರಿ, ಚೈತನ್ಯ , ತನುಶ್ರೀ, ನಾಗಭೂಷಣ್, ಗೀತಾಂಜಲಿ ಸಂಘಟಿಸಿದರು.

ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು.

ಕ್ಷಯ ರೋಗಿಗಳಿಗೆ 'ಸರ್ಕಾರದ ಅಕ್ಷಯ್ ಮಿತ್ರ' ಯೋಜನೆ

ಪೌಷ್ಟಿಕ ಆಹಾರ ಸಾಮಗ್ರಿ ವಿತರಣೆ



ಬಂಟ್ವಾಳ: ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಷನ್ ಬಂಟ್ವಾಳ ವಲಯದ ವತಿಯಿಂದ ಬಿ.ಮೂಡ ಗ್ರಾಮದ ಕೈಕಂಬ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾರತ ಸರ್ಕಾರದ ಅಕ್ಷಯ್ ಮಿತ್ರ ಯೋಜನೆಯಡಿ ಕ್ಷಯ ರೋಗಿಗೆ ಪೌಷ್ಟಿಕ ಆಹಾರ ಸಾಮಗ್ರಿ ಯನ್ನು ವಿತರಿಸಲಾಯಿತು.

ಈ ಸಂಧರ್ಭದಲ್ಲಿ ಅಸೋಸಿಯೇಷನ್‌ನ ವಲಯದ ಅಧ್ಯಕ್ಷರಾದ ರಾಜೇಂದ್ರ ಕೆ. , ವೈದ್ಯಾಧಿಕಾರಿ ಡಾ. ಅಶ್ವಿನಿ ಬಾಲಕೃಷ್ಣ ಮಾಜಿ ಅಧ್ಯಕ್ಷ ಹರೀಶ್ ಕುಂದರ್, ಗೌರವಾಧ್ಯಕ್ಷ ಕಿಶೋರ್, ಕಾರ್ಯದರ್ಶಿ ರವಿ ಕಲ್ಪನೆ, ಉಪಾಧ್ಯಕ್ಷ ಹರೀಶ್ ನಾಟಿ, ಕೋಶಾಧಿಕಾರಿ ಕೃಷ್ಣರಾಜ್ ರಾವ್, ಕಾರ್ಯದರ್ಶಿ ಪ್ರಶಾಂತ್ ಕಲ್ಲಡ್ಕ ಇದ್ದರು.

ಸುತ್ತಮುತ್ತ

ಧರ್ಮಸ್ಥಳ–ಕುಕ್ಕೆ ಸುಬ್ರಮಣ್ಯ ದೇವಳಕ್ಕೆ ಬಸ್ ಆರಂಭ

ಮಡಿಕೇರಿ: ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ಕುಕ್ಕೆಸುಬ್ರಹ್ಮಣ್ಯಕ್ಕೆ ಬರುವ ಯಾತ್ರಾರ್ಥಿಗಳ ಹಾಗೂ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಬಿಸಿಲೆ, ಕೂಡು ರಸ್ತೆ, ಶನಿವಾರಸಂತೆ, ಸೋಮವಾರಪೇಟೆ, ಕುಶಾಲನಗರ, ಮೈಸೂರು, ಬೆಂಗಳೂರು ಮಾರ್ಗದಲ್ಲಿ ಹೊಸ ನಾನ್ ಎಸಿ ಸ್ಲೀಪರ್ ಸಾರಿಗೆ ಮೇ 28ರಿಂದ ಆರಂಭಗೊಂಡಿದ್ದು ಇದರಿಂದ ಪ್ರಯಾಣಿಕರಿಗೆ ಅನುಕೂಲವಾಗಲಿದೆ.

ನಿರ್ಗಮನ ಸಮಯ ಇಂತಿದೆ

ಧರ್ಮಸ್ಥಳದಿಂದ ಬೆಳಗ್ಗೆ 6.30 ಗಂಟೆಗೆ ನಿರ್ಗಮನ, ಕುಕ್ಕೆ ಸುಬ್ರಹ್ಮಣ್ಯದಿಂದ ಬೆಳಗ್ಗೆ 8 ಗಂಟೆಗೆ ನಿರ್ಗಮನ, ಬಿಸಿಲೆ ಬೆಳಗ್ಗೆ 8.50ಕ್ಕೆ ನಿರ್ಗಮನ, ಶನಿವಾರಸಂತೆಯಿಂದ ಬೆಳಗ್ಗೆ 9.35ಕ್ಕೆ ನಿರ್ಗಮನ ಹಾಗೂ ಸೋಮವಾರಪೇಟೆಯಿಂದ ಬೆಳಗ್ಗೆ 10.30 ಗಂಟೆಗೆ ನಿರ್ಗಮನವಾಗಲಿದೆ. ಅದೇ ಬಸ್ಸು ಬೆಂಗಳೂರು ಕೆಂಪೇಗೌಡ ಬಸ್ಸು ನಿಲ್ದಾಣದಿಂದ 9.45 ಗಂಟೆಗೆ ನಿರ್ಗಮನಗೊಂಡು ಮೈಸೂರು, ಕುಶಾಲನಗರ, ಸೋಮವಾರಪೇಟೆ, ಶನಿವಾರಸಂತೆ, ಕೂಡುರಸ್ತೆ, ಬಿಸಿಲೆ, ಕುಕ್ಕೆಸುಬ್ರಹ್ಮಣ್ಯ ಮಾರ್ಗವಾಗಿ ಧರ್ಮಸ್ಥಳಕ್ಕೆ ಕಾರ್ಯಾಚರಣೆ ಮಾಡಲಿದೆ. ಪ್ರಯಾಣಿಕರು ಹತ್ತಿರದ ಬಸ್ಸು ನಿಲ್ದಾಣ ಅಥವಾ ಟಿಕೆಟು ಕೌಂಟರ್‌ನಿಂದ ಅಥವಾ ಆನ್‌ಲೈನ್ ಬುಕ್ಕಿಂಗ್ ಮಾಡಿಕೊಳ್ಳಬಹುದು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪುತ್ತೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀಹರಿ ಬಾಬು ಅವರು ತಿಳಿಸಿದ್ದಾರೆ.

ಕೊಡ್ಲಿಪೇಟೆ ಪರಿಸರದಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ಮಡಿಕೇರಿ: ಸೋಮವಾರಪೇಟೆ 66/11ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ಎಫ್2 ಕೊಡ್ಲಿಪೇಟೆ ಫೀಡರ್‌ನಲ್ಲಿ ಫೀಡರ್



ನಿರ್ವಹಣೆ ಕಾಮಗಾರಿ ಕೈಗೊಳ್ಳಲಿರುವುದರಿಂದ ಮೇ 30ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು. ಆದ್ದರಿಂದ ಅವರೆದಾಳು, ಬ್ಯಾಡಗೊಟ್ಟ, ದೊಡ್ಡಕುಂದ, ಚಿಕ್ಕಕುಂದ, ನೀರುಗುಂದ, ಬೆಸೂರು, ದೊಡ್ಡಭಂಡಾರ, ಕಟ್ಟೆಪುರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ರಾಮಚಂದ್ರ ಅವರು ತಿಳಿಸಿದ್ದಾರೆ.

ಮಂಗಳೂರಿನಲ್ಲಿ ಜೂ.4 ರಿಂದ 13ರ ವರೆಗೆ ಬ್ರಿಡ್ಜ್ ಪಂದ್ಯಾಟ

ಮಂಗಳೂರು: ಮ್ಯಾವೆರಿಕ್ಸ್ ಸಮರ್‌ನ್ಯಾಷನಲ್ಸ್ 2026 ಬ್ರಿಡ್ಜ್ ಪಂದ್ಯಾಟ ಜೂ.4 ರಿಂದ 13 ರವರೆಗೆ ನಗರದ ಸಂತ ಸೆಬಾಸ್ಟಿಯನ್ ಸೆಂಟನರಿ ಸಭಾಂಗಣದಲ್ಲಿ ನಡೆಯಲಿದೆ.

ಈ ಪಂದ್ಯಾಟವನ್ನು ಭಾರತೀಯ ಬ್ರಿಡ್ಜ್ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಬ್ರಿಡ್ಜ್ ಅಸೋಸಿಯೇಷನ್ ಅಡಿಯಲ್ಲಿರುವ ಕರಾವಳಿ ಬ್ರಿಡ್ಜ್ ಅಸೋಸಿಯೇಷನ್ ಆಯೋಜಿಸಿದೆ.

450ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗಿ ನಿರೀಕ್ಷೆ

ಈ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಭಾರತ ಹಾಗೂ ಪೋಲೆಂಡ್‌ನಿಂದ ವಿಶ್ವ ಚಾಂಪಿಯನ್ ಆಗಿರುವ ಬುರಾಸ್ ಕ್ರಿಸ್ತೋಫ್ ಜೆರ್ಜಿ, ಡೊಮಿನಿಕ್ ಫಿಲೋಪೋವಿಚ್, ಜಾಕೋಬ್ ಪಾತ್ರೆಹುವಾ ಮತ್ತು ಪ್ಯಾಟ್ರಿಕ್ ಪಾತ್ರೆ ಹುವಾ ಸೇರಿದಂತೆ ಸುಮಾರು 450ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಈ ಕ್ರೀಡಾಕೂಟದಿಂದ ಮಂಗಳೂರನ್ನು ಭಾರತದ ಮತ್ತು ವಿಶ್ವದ ಬ್ರಿಡ್ಜ್ ನಕಾಶೆಯಲ್ಲಿ ಗುರುತಿಸುವಂತೆ ಮಾಡಲಿದೆ ಎಂದು ಕರಾವಳಿ ಬ್ರಿಡ್ಜ್ ಅಸೋಸಿಯೇಷನ್ ಅಧ್ಯಕ್ಷ ಮಾರ್ಟಿನ್ ಟೆಕ್ಸೆರಾ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮನಸ್ಸಿನ ಆಟವಾಗಿರುವ (ಮೈಂಡ್ ಸ್ಪೋರ್ಟ್) 'ಬ್ರಿಡ್ಜ್ ಕ್ರೀಡೆಯನ್ನು ಮಂಗಳೂರಿನಲ್ಲಿ ಕೇವಲ 60 ವರ್ಷಗಳಿಂದ ಆಡಲಾಗುತ್ತಿದೆ. ಆದರೆ ಪ್ರಸ್ತುತ ತಲೆಮಾರಿನ ಯುವಕರು ಈ ಕ್ರೀಡೆಯನ್ನು ಕಲಿಯಲು ಹೆಚ್ಚಿನ ಆಸಕ್ತಿ ತೋರಿಸದ ಕಾರಣ, ಮಂಗಳೂರಿನಲ್ಲಿ ಇದರ ಆಟಗಾರರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಈ ಆಟವು ಏಷ್ಯನ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ನ ಭಾಗವಾಗಿರುವುದರಿಂದ, ನಗರದ ಯುವಜನತೆ ಇದನ್ನು ಕಲಿಯಲು ಮತ್ತು ಆಡಲು ಆಸಕ್ತಿ ವಹಿಸುತ್ತಾರೆ ಎಂದು ತಿಳಿಸಿದರು.

ಸಂಸ್ಥೆಯ ಖಜಾಂಚಿ ಪೀಟರ್ ಡಿಸೋಜ, ಸದಸ್ಯ ವಿನ್ಸೆಂಟ್ ಡಿಸೋಜ ಉಪಸ್ಥಿತರಿದ್ದರು.

ಯು.ಟಿ. ಫರೀದ್ ಫೌಂಡೇಷನ್‌ನಿಂದ ಉಳ್ಳಾಲ ತಾಲೂಕಿನ ಸಾಧಕರಿಗೆ ಅಭಿನಂದನೆ | ಸ್ಪೀಕರ್ ಖಾದರ್ ಹೇಳಿಕೆ

ಅಧಿಕಾರಿಗಳ ಶ್ರಮದಿಂದ ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಫಲಿತಾಂಶ

ಉಳ್ಳಾಲ: ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಸಾಧನೆ ಮಾಡಿದೆ. ಇದರ ಜೊತೆ ಉಳ್ಳಾಲ ತಾಲೂಕು ವ್ಯಾಪ್ತಿಯ ಶಾಲೆಗಳಿಗೆ ಅತ್ಯಧಿಕ ಫಲಿತಾಂಶ ಬಂದಿರುವುದು ಅತ್ಯಂತ ಸಂತಸದಾಯಕವಾಗಿದೆ. ಶಿಕ್ಷಣಕ್ಕೆ ವಿಶೇಷ ಒತ್ತು ನೀಡಿದ ಪರಿಣಾಮ ಈ ಫಲಿತಾಂಶ ಬರಲು ಸಾಧ್ಯವಾಗಿದೆ ಎಂದು ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ ಖಾದರ್ ಹೇಳಿದರು.

ಶಾಲೆಗಳಿಗೆ, ವಿದ್ಯಾರ್ಥಿಗಳಿಗೆ ಅಭಿನಂದನೆ

ಯು.ಟಿ ಫರೀದ್ ಫೌಂಡೇಶನ್ ಮಂಗಳೂರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮಂಗಳೂರು ದಕ್ಷಿಣ ವಲಯದ ಆಶ್ರಯದಲ್ಲಿ 2025–26 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ದಾಖಲಿಸಿದ ಶಾಲೆಗಳಿಗೆ ಹಾಗೂ ಗರಿಷ್ಠ ಅಂಕಗಳೊಂದಿಗೆ ತೇರ್ಗಡೆ ಹೊಂದಿದ ಉಳ್ಳಾಲ ತಾಲೂಕಿನ ವಿದ್ಯಾರ್ಥಿಗಳಿಗೆ ತೊಕ್ಕೊಟ್ಟು ಸಮೀಪದ ಕಲ್ಲಾಪುವಿನ ಖಾಸಗಿ ಸಭಾಂಗಣದಲ್ಲಿ ಬುಧವಾರ ನಡೆದ ಅಭಿನಂದನಾ ಸಮಾರಂಭ ಉದ್ದೇಶಿಸಿ ಮಾತನಾಡಿದರು.



2024–25ನೇ ಸಾಲಿನ ಎಸ್ಸೆಸ್ಸೆಲ್ಸಿ ತಾಲೂಕಿನಲ್ಲಿ ಪರೀಕ್ಷೆ ಬರೆದ 2,79,995 ವಿದ್ಯಾರ್ಥಿಗಳಲ್ಲಿ 2469 ವಿದ್ಯಾರ್ಥಿಗಳು ಫೇಲ್ ಆಗಿದ್ದರು. ಈ ಸಂದರ್ಭ ಶಿಕ್ಷಣಕ್ಕೆ ವಿಶೇಷ ಒತ್ತು ನೀಡುವಂತೆ ಶಿಕ್ಷಣ ಅಧಿಕಾರಿಗಳಿಗೆ ಸೂಚನೆ ನೀಡಿದ್ದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಫೇಲಾದವರ ಸಂಖ್ಯೆ 435ಕ್ಕೆ ಇಳಿದಿದೆ ಎಂದರು. ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಅಭಿವೃದ್ಧಿ ಆಗಬೇಕು.ಆ ನಿಟ್ಟಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಬೇಕಾದ ಅಗತ್ಯ ಮೂಲಭೂತ ವ್ಯವಸ್ಥೆಗಳನ್ನು ನೀಡಲಾಗುವುದು. ಆರಂಭಿಕ ಹಂತದಲ್ಲಿ ಪ್ರೌಢ ಶಾಲೆಗಳಿಗೆ ಬೇಕಾದ ಪೂರ್ಣ ವ್ಯವಸ್ಥೆಗಳನ್ನು ಕಲ್ಪಿಸಲಾಗುವುದೆಂದರು.

ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಮತಾ ಡಿ.ಎಸ್ ಗಟ್ಟಿ ಮಾತನಾಡಿ, ಉಳ್ಳಾಲದಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿದ ಕೀರ್ತಿ ಸ್ಪೀಕರ್ ಖಾದರ್ ಅವರಿಗೆ ಸಲ್ಲುತ್ತದೆ. ಅವರು ಶೈಕ್ಷಣಿಕ ರಂಗಕ್ಕೆ ಪ್ರೋತ್ಸಾಹ ನೀಡುವ ಜೊತೆ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಗುರುತಿಸಿ, ಪ್ರೋತ್ಸಾಹಿಸುತ್ತಿರುವ ಕಾರ್ಯ ಶ್ಲಾಘನೀಯವೆಂದರು.

ಪಿ.ಎ ಕಾಲೇಜು ಪದವಿ ವಿಭಾಗದ ಪ್ರಾಂಶುಪಾಲ ಸರ್ಫರಾಝ್ ಹಾಸಿಂ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯುವ ವಿಧಾನದ ಬಗ್ಗೆ ಮಾಹಿತಿ ನೀಡಿದರು.

> ಕಳೆದ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಾಲೂಕಿನ 2469 ವಿದ್ಯಾರ್ಥಿಗಳು ಫೇಲ್ ಆಗಿದ್ದರು. ಆಗ ಶಾಲೆಗಳಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಮೇಲೆ ವಿಶೇಷ ಗಮನ ಹರಿಸುವಂತೆ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದ್ದೆ. ಅದರ ಫಲವಾಗಿ ಈ ಬಾರಿ ಫೇಲ್ ಆದ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಇಳಿಕೆ ಕಂಡಿದೆ.
>
> ● ಯು.ಟಿ ಖಾದರ್

ಈ ಸಂದರ್ಭದಲ್ಲಿ ಅತ್ಯಧಿಕ ಅಂಕ ಪಡೆದ ವಿದ್ಯಾರ್ಥಿಗಳನ್ನು ಹಾಗೂ ಶೇ.100 ಫಲಿತಾಂಶ ಪಡೆದ ಶಾಲೆಗಳನ್ನು ಗೌರವಿಸಲಾಯಿತು. ಸ್ಪೀಕರ್ ಯು.ಟಿ ಖಾದರ್ ಅವರು ವಿದ್ಯಾರ್ಥಿಗಳನ್ನು ಶಾಲು ಹೊದಿಸಿ ಗೌರವಿಸಿದರು. ಗ್ಯಾರಂಟಿ ಯೋಜನೆಯ ಜಿಲ್ಲಾ ಉಪಾಧ್ಯಕ್ಷರಾದ ಸುರೇಖಾ ಚಂದ್ರಹಾಸ್, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸದಾಶಿವ ಉಳ್ಳಾಲ್, ಪ್ರಮುಖರಾದ ಕಣಚೂರು ಮೋನು, ಬಂಟ್ವಾಳ ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಚಂದ್ರಹಾಸ್ ಕರ್ಕೇರಾ, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯ ಸುರೇಶ್ ಭಟ್ನಗರ, ಜಿ.ಪಂ.ಮಾಜಿ ಸದಸ್ಯ ಎನ್.ಎಸ್ ಕರೀಮ್, ಪ್ರಮುಖರಾದ ಮನ್ಸೂರ್ ಮಂಚಿಲ, ಕೆ.ಎಂ.ಕೆ ಮಂಜನಾಡಿ, ಜಗದೀಶ್ ಶೆಟ್ಟಿ ರಫೀಕ್ ಅಂಬ್ಲಮೊಗರು, ಸಲಾಮ್ ಉಚ್ಚಿಲ, ಮುಸ್ತಫಾ ಮಲಾರ್, ರಝಾಕ್ ಕುಕ್ಕಾಜೆ, ಜಬ್ಬಾರ್ ಬೋಳಿಯಾರ್, ರಝಿಯಾ ಇಬ್ರಾಹಿಮ್, ಪುರುಷೋತ್ತಮ ಶೆಟ್ಟಿ ಪಿಲಾರ್, ದೇವಕಿ ಉಳ್ಳಾಲ ಮತ್ತಿತರರಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿ ಈಶ್ವರ್ ಸ್ವಾಗತಿಸಿ, ತ್ಯಾಗಂ ಹರೇಕಳ ನಿರೂಪಿಸಿದರು.

ಆತ್ಮಶಕ್ತಿ ನೀರುಮಾರ್ಗ ಶಾಖೆಯ ಚತುರ್ಥ ವಾರ್ಷಿಕೋತ್ಸವ, ಸಭೆ

ಗ್ರಾಹಕರ ಪ್ರೋತ್ಸಾಹದಿಂದ ಸಂಘದ ಪ್ರಗತಿ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ನೀರುಮಾರ್ಗ ಶಾಖೆಯ ಚತುರ್ಥ ವಾರ್ಷಿಕೋತ್ಸವ ಹಾಗೂ ಗ್ರಾಹಕರ ಸಭೆಯು ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಅಧ್ಯಕ್ಷತೆಯಲ್ಲಿ ನೀರುಮಾರ್ಗ ಶಾಖೆಯಲ್ಲಿ ಜರುಗಿತು.



ಸಂಘದ ಗ್ರಾಹಕರಾದ ಪುಟ್ಟಸ್ವಾಮಿ ಎಚ್., ಶ್ರೀಧರ, ರಾಜೇಶ್, ಶಶಿಪ್ರಭಾ ಹಾಗೂ ನಾರಾಯಣ ಪೂಜಾರಿ ಅವರು ದೀಪ ಪ್ರಜ್ವಲನೆ ಮಾಡುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಘದ ಸದಸ್ಯ ಪುಟ್ಟಸ್ವಾಮಿ ಎಚ್. ಅವರು 'ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ನೀರುಮಾರ್ಗ ಪರಿಸರದಲ್ಲಿರುವ ಉತ್ತಮ ಸೊಸೈಟಿ ಆಗಿದ್ದು ಇಲ್ಲಿನ ಜನರ ಅಚ್ಚುಮೆಚ್ಚಿನ ಸೊಸೈಟಿ ಆಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸದಸ್ಯರಾದ ಶಶಿಪ್ರಭಾ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ಸೇವಾ ಮನೋಭಾವದ ಸಿಬ್ಬಂದಿಯಿಂದ ಉನ್ನತ ಸ್ಥಾನಕ್ಕೆ ಏರುವುದರಲ್ಲಿ ಎರಡು ಮಾತಿಲ್ಲ ಎಂದು ಶ್ಲಾಘಿಸಿದರು. ಸದಸ್ಯರಾದ ಪ್ರಮೀಳಾ ಸದಾಶಿವ ಶೆಟ್ಟಿ ಮಾತನಾಡಿ, ಸಂಘದ ಶಾಖೆಗಳಲ್ಲಿ ಸಿಬ್ಬಂದಿಗಳ ಸಹಕಾರವು ಅತ್ಯುತ್ತಮವಾಗಿದ್ದು ದೈನಂದಿನ ವ್ಯವಹಾರಕ್ಕೆ ತುಂಬಾ ಉಪಯುಕ್ತ ಸಂಘ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

> **ಸದಸ್ಯರಿಗೆ ವಿಶೇಷ ಬಡ್ಡಿದರ**
>
> ನೀರುಮಾರ್ಗ ಶಾಖೆಯ ಚತುರ್ಥ ವಾರ್ಷಿಕೋತ್ಸವ ಪ್ರಯುಕ್ತ 500 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10 ಹಾಗೂ 1000 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10.50ವನ್ನು ನೀಡಲಾಗುತ್ತಿದ್ದು ಚಿನ್ನಾಭರಣ ಸಾಲಗಳಿಗೆ ಪ್ರತಿ ಗ್ರಾಂ ಗೆ ಗರಿಷ್ಟ ಮೌಲ್ಯ ರೂ. 12,000 ರವರೆಗೆ ಯಾವುದೇ ಸೇವಾ ಶುಲ್ಕವಿಲ್ಲದೆ ಸಾಲವನ್ನು ಸದಸ್ಯರಿಗೆ ನೀಡಲಾಗುವುದು.
>
> ● ಚಿತ್ತರಂಜನ್ ಬೋಳಾರ್

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಮಾತನಾಡಿ, ಗ್ರಾಹಕರ ಪ್ರೋತ್ಸಾಹದಿಂದ ಸಂಘವು ಉತ್ತಮ ಪ್ರಗತಿ ಹೊಂದಲು ಸಾಧ್ಯವಾಗಿದೆ. ಸಂಘವು ಕೇವಲ ಬ್ಯಾಂಕಿಂಗ್ ಮಾತ್ರವಲ್ಲದೆ, ವಿವಿಧ ಸಾಮಾಜಿಕ ಕಾರ್ಯ ತೊಡಗಿಸಿಕೊಂಡಿದೆ. ಜೊತೆಯಲ್ಲಿ ಸದಸ್ಯರ ಆರೋಗ್ಯದ ಕಾಳಜಿಯಿಂದ ನಿರಂತರವಾಗಿ ವೈದ್ಯಕೀಯ ಶಿಬಿರ ಆಯೋಜಿಸುತ್ತಾ ಬರುತ್ತಿದೆ. ಸಂಘದ ಸದಸ್ಯರಿಗೆ ವಿಮಾ ಸೌಲಭ್ಯ ನೀಡುತ್ತಿದೆ ಎಂದರು. ಸಂಘದ ನಿರ್ದೇಶಕ ಗೋಪಾಲ್ ಎಂ., ಸಿಇಒ ಸೌಮ್ಯ ವಿಜಯ್ ಮತ್ತಿತರರಿದ್ದರು. ಶಾಖೆಯ ಸಿಬ್ಬಂದಿ ಅನುಜಿತ ಸ್ವಾಗತಿಸಿ, ಸಿಬ್ಬಂದಿ ಸುಮಲತಾ ವಂದಿಸಿದರು. ಶಾಖೆಯ ಪ್ರಭಾರ ಶಾಖಾಧಿಕಾರಿ ವರಣ್ ರಾಜ್ ನಿರೂಪಿಸಿದರು.

ಶಿರ್ತಾಡಿ ಶಾಲೆಯಲ್ಲಿ ಮಾದರಿ ಕಾರ್ಯಕ್ರಮ | ನಿವೃತ್ತ ಶಿಕ್ಷಕರಿಗೆ ಗುರುವಂದನೆ

30 ವರ್ಷ ಬಳಿಕ ಒಂದಾದ ಹಳೆ ವಿದ್ಯಾರ್ಥಿಗಳು

ಮೂಡುಬಿದಿರೆ: ಶಿರ್ತಾಡಿ ಜವಾಹರ ಲಾಲ ನೆಹರು ಪ್ರೌಢಶಾಲೆಯ 1995–96 ನೇ ಸಾಲಿನ ವಿದ್ಯಾರ್ಥಿಗಳು ಮೂವತ್ತು ವರ್ಷಗಳ ಬಳಿಕ ಮತ್ತೆ ಒಂದಾಗಿ ವಿದ್ಯಾರ್ಥಿ ಜೀವನದ ಹಳೆಯ ದಿನಗಳನ್ನು ಮೆಲುಕು ಹಾಕಿ 'ಸಹಪಾಠಿಗಳ ಕುಟುಂಬ ಸಮ್ಮಿಲನ' ಕಾರ್ಯಕ್ರಮ ಹಾಗೂ ಶಿಕ್ಷಕರಿಗೆ ಗುರುವಂದನಾ ಸಲ್ಲಿಸುವ ಮಾದರಿ ಕಾರ್ಯಕ್ರಮ ನಡೆಯಿತು.



ಶಾಲಾಡಳಿತ ಮಂಡಳಿಯ ಅಧ್ಯಕ್ಷ ಎಸ್.ಡಿ.ಸಂಪತ್ ಸಾಮ್ರಾಜ್ಯ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಿತು. ಎಲ್ಲಾ ನಿವೃತ್ತ ಶಿಕ್ಷಕರು ಕಾರ್ಯಕ್ರಮ ಉದ್ಘಾಟಿಸಿದರು.

ನಿವೃತ್ತ ಶಿಕ್ಷಕ ಗೋವಿಂದ ಸುಬ್ಬಾ ಭಟ್, ಸಂಜಯಂತ ಕುಮಾರ್ ಶೆಟ್ಟಿ ಬಿ. ಚಕ್ರೇಶ್ವರ ಆರಿಗ, ಸರಸ್ವತಿ ಟೀಚರ್, ಸುಮಂತ್ರ ಟೀಚರ್, ಟಿ.ಕೆ. ವೆಂಕಟರಾವ್ ಹಾಗೂ ಕೆ. ಶ್ಯಾಮ ಹೆಗ್ಡೆ ಅವರನ್ನು ಈ ಸಂದರ್ಭದಲ್ಲಿ ಗೌರವಿಸಿ ಸನ್ಮಾನಿಸಲಾಯಿತು. ನಿವೃತ್ತ ಕಚೇರಿ ಸಹಾಯಕ ಲೂವಿಸ್ ಸಲ್ದಾನ್ಹ, ಜವಾನ ಸುಬ್ಬ, ಪ್ರಸ್ತುತ ಕಚೇರಿ ಸಹಾಯಕ ವಿನಾಯಕ ಕಾಮತ್, ಜವಾನ ಮುಹಮ್ಮದ್ ಅವರನ್ನು ಸನ್ಮಾನಿಸಲಾಯಿತು.

ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಪಡೆದ ವಿದ್ಯಾರ್ಥಿಗಳನ್ನು, ಸಹಪಾಠಿಗಳ ಸಾಧಕ ಮಕ್ಕಳನ್ನು ಅಭಿನಂದಿಸಲಾಯಿತು. ಇದೇ ಸಂದರ್ಭ ಶಾಲೆಗೆ ಅಗತ್ಯವಿದ್ದ ನೋಟೀಸ್ ಬೋರ್ಡನ್ನು ಹಸ್ತಾಂತರಿಸಲಾಯಿತು.

> **ಹಲವರಿಗೆ ಸನ್ಮಾನ**
>
> ರುಚಿಕರ ತಿಂಡಿ ನೀಡುತ್ತಿದ್ದ ಮಕ್ಕಿ ಹೋಟೆಲ್‌ನ ಜಗದೀಶ್ ಭಟ್, ಗೂಡಂಗಡಿ ಹೊಂದಿದ್ದ ರಾಜು ಶೆಟ್ಟಿ ಅವರ ಪತ್ನಿ ಗುಲಾಬಿ ಅಕ್ಕ ಮತ್ತು ಮಕ್ಕಿಯ ನದಿಯಲ್ಲಿ ದೋಣಿಯ ಮೂಲಕ ವಿದ್ಯಾರ್ಥಿಗಳನ್ನು ನದಿ ದಾಟಿಸುತ್ತಿದ್ದ ಜಕ್ರಿಬ್ಯಾರಿ ಅವರ ಪುತ್ರ ಆಲಿ ಜಕ್ರಿಯಾ ಅವರನ್ನು ಸನ್ಮಾನಿಸಲಾಯಿತು.

ಶಾಲಾಡಳಿತ ಮಂಡಳಿಯ ಕೋಶಾಧಿಕಾರಿ ಡಾ. ಆಶೀರ್ವಾದ್, ಸದಸ್ಯರಾದ ಸುರೇಶ್ ಅಂಚನ್, ಸುಧಾಕರ್, ನಿವೃತ್ತ ಮುಖ್ಯೋಪಾಧ್ಯಾಯರಾದ ಜಯರಾಮ್ ಹಾಗೂ ಪ್ರಸ್ತುತ ಮುಖ್ಯೋಪಾಧ್ಯಾಯಿನಿ ಸಾವಿತ್ರಿ ಅವರು ಅತಿಥಿಗಳಾಗಿ ಭಾಗವಹಿಸಿದ್ದರು. ಸಂಭಾಷಿಣಿ ಅವರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಕಾರ್ಯಕ್ರಮದಲ್ಲಿ ಸುರೇಖಾ ಕಾಶಿಪಟ್ಣ ಸ್ವಾಗತಿಸಿ, ದಿನೇಶ್ ಪೂಜಾರಿ ವಾಲ್ಪಾಡಿ ವಂದಿಸಿದರು. ಪ್ರಶಾಂತ್ ಕೆ. ಅವರು ಶಿಕ್ಷಕರ ಪರಿಚಯ ಮಾಡಿದರು. ನವೀನ್ ಬಂಗೇರ ಸನ್ಮಾನ ಪತ್ರ ವಾಚಿಸಿದರು. ಅಶ್ರಫ್ ವಾಲ್ಪಾಡಿ ಕಾರ್ಯಕ್ರಮ ನಿರೂಪಿಸಿದರು. ಮಮತಾ, ಬಿಂದು , ಸೂರಜ್, ಸುರೇಂದ್ರ, ಸತೀಶ್, ಪ್ರೀತಮ್, ಜನಾರ್ದನ, ಪ್ರಥ್ವೀರ ಆರಿಗ, ಪ್ರಿಯಾ, ಅನುಷಾ,ಮತ್ತಿತರರು ಸಹಕರಿಸಿದರು. ಬಳಿಕ ಶರಣ್ ಕೈಕಂಬ ಮತ್ತು ಬಳಗದವರಿಂದ ಸಂಗೀತ ರಸಮಂಜರಿ, ಸಹಪಾಠಿಗಳ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕದ್ರಿ ಶಿವಭಾಗ್ ವಾರ್ಡ್: ತಡೆಗೋಡೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 34ನೇ ಕದ್ರಿ ಶಿವಭಾಗ್ ವಾರ್ಡಿನ ಬಿಕರ್ನಕಟ್ಟೆ ನಾಗಬ್ರಹ್ಮ ದೈವಸ್ಥಾನದ ಹತ್ತಿರ ತಡೆಗೋಡೆ ನಿರ್ಮಾಣ ಕಾಮಗಾರಿಯು ಲೋಕೋಪಯೋಗಿ ಇಲಾಖೆಯ ರೂ. 30 ಲಕ್ಷ ವಿಶೇಷ ಅನುದಾನದಲ್ಲಿ ನಡೆಯಲಿದ್ದು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಗುದ್ದಲಿ ಪೂಜೆ ನಡೆಯಿತು.

ನಂತರ ಮಾತನಾಡಿದ ಶಾಸಕರು, ಮಳೆಗಾಲದಲ್ಲಿ ಈ ಪ್ರದೇಶಕ್ಕೆ ತೊಂದರೆ ಉಂಟಾಗುತ್ತಿದ್ದ ಬಗ್ಗೆ ಸ್ಥಳೀಯರು ಮಾಡಿದ ಮನವಿಗೆ ಅನುಗುಣವಾಗಿ, ಪದವು ಮೇಗಿನ ಮನೆ ನಾಯ್ಗರ ಮನೆತನದ ರಸ್ತೆಗೆ ತಾಗಿರುವ ರಾಜಕಾಲುವೆಗೆ ತಡೆಗೋಡೆ ಕಾಮಗಾರಿ ನಡೆಯಲಿದೆ. ಇಂದು ಕ್ಷೇತ್ರದ ಅಭಿವೃದ್ಧಿಗೆ ನೂರಾರು ಕೋಟಿ ಅನುದಾನಗಳ ಅಗತ್ಯವಿದ್ದರೂ ರಾಜ್ಯ ಸರಕಾರದಿಂದ ಯಾವುದೇ ಬೆಂಬಲ ದೊರೆಯುತ್ತಿಲ್ಲ, ಹಾಗಾಗಿ ಇರುವ ಅತ್ಯಲ್ಪ ಅನುದಾನಗಳನ್ನೇ ಬಳಸಿಕೊಂಡು ಅತೀ ಅಗತ್ಯವಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು ಶೀಘ್ರದಲ್ಲಿ ಇದು ಪೂರ್ಣಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

> ಕ್ಷೇತ್ರದ ಅಭಿವೃದ್ಧಿಗೆ ಅನುದಾನಗಳ ಅಗತ್ಯವಿದ್ದರೂ ರಾಜ್ಯ ಸರಕಾರದಿಂದ ಯಾವುದೇ ಬೆಂಬಲ ದೊರೆಯುತ್ತಿಲ್ಲ.
>
> ● ವೇದವ್ಯಾಸ ಕಾಮತ್

ಈ ವೇಳೆ ನಿಕಟಪೂರ್ವ ಪಾಲಿಕೆ ಸದಸ್ಯೆ ಕಾವ್ಯ ನಟರಾಜ್ ಆಳ್ವ, ವಾರ್ಡ್ ಅಧ್ಯಕ್ಷ ವಿಕ್ರಂ ಚೌಟ, ಯೋಗಿಶ್ ಶೆಣೈ, ನವೀನ್ ಶೆಣೈ, ಗೋಪಾಲಕೃಷ್ಣ ಶೆಣೈ, ಶಿವರಾಮ್ ಭಂಡಾರಿ, ದಿನೇಶ್ ಶೆಣೈ, ರಾಮಚಂದ್ರ ಚೌಟ, ಹರೀಶ್ ಪ್ರಭು, ಡಾ. ಯು. ಡಿ ನಾಯಕ್, ಉಮೇಶ್ ಶೆಣೈ, ರಾಜೇಶ್, ಸೇರಿದಂತೆ ಮತ್ತಿತರರಿದ್ದರು.

ಸರ್ವರ್ ಸಮಸ್ಯೆಯಿಂದ ಪಡಿತರ ವಿತರಣೆಗೆ ಅಡ್ಡಿ: ಕ್ರಮಕ್ಕೆ ಪ್ರಭು ಒತ್ತಾಯ

ಬಂಟ್ವಾಳ: ಆಹಾರ, ನಾಗರಿಕ ಸರಬರಾಜು ಇಲಾಖಾ ವತಿಯಿಂದ ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡಲಾಗುತ್ತಿರುವ ಪಡಿತರ ಅಕ್ಕಿಯು ಸರ್ವರ್ ಸಮಸ್ಯೆಯಿಂದಾಗಿ ಗ್ರಾಹಕರಿಗೆ ಸರಿಯಾಗಿ ತಲುಪಿಸಲಾಗದೆ ತುಂಬಾ ಅಡಚಣೆಯಾಗುತ್ತಿದ್ದು ಸರ್ವರ್ ಸಮಸ್ಯೆಯಿಂದಾಗಿ ಪಡಿತರ ಅಕ್ಕಿ ವಿತರಣೆಯಲ್ಲಿ ಆಗುತ್ತಿರುವ ವ್ಯತ್ಯಯವನ್ನು ನಿವಾರಣೆಗೆ ಕ್ರಮ ಕೈಗೊಳ್ಳುವಂತೆ ಸಿದ್ದಕಟ್ಟೆ ಪ್ರಾ.ಕೃ. ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು ಕರ್ಪೆ ಅವರು ಕರ್ನಾಟಕ ಸರಕಾರದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರಿಗೆ ಲಿಖಿತ ಮನವಿ ಮೂಲಕ ಆಗ್ರಹಿಸಿದ್ದಾರೆ.



ಸರ್ವರ್ ಸಮಸ್ಯೆಯಿಂದಾಗಿ ಗ್ರಾಹಕರು ತಮ್ಮ ಪಡಿತರ ಅಕ್ಕಿ ಪಡೆಯಲು ಸಂಬಂಧ ಪಟ್ಟ ನ್ಯಾಯಬೆಲೆ ಅಂಗಡಿಗಳಲ್ಲಿ ದಿನ ಪೂರ್ತಿ ಕಾಯುವ ಪರಿಸ್ಥಿತಿ. ನಿರ್ಮಾಣಗೊಂಡಿದೆ.ಗ್ರಾಮೀಣ ಭಾಗದ ಕೆಲ ನ್ಯಾಯಬೆಲೆ ಅಂಗಡಿಯಲ್ಲಿ ದಿನ ಪೂರ್ತಿ ಕಾದು ನಿಂತರೂ ಸರ್ವರ್ ಸಮಸ್ಯೆಯಿಂದ ಅಕ್ಕಿ ಲಭಿಸದೆ ಬರಿಗೈಯಲ್ಲಿ ವಾಪಸ್ ಹೋಗುವಂತಾಗಿದೆ ಎಂದು ಅವರು ಮನವಿಯಲ್ಲಿ ವಿವರಿಸಿದ್ದಾರೆ. ಸರಕಾರದ ಮಟ್ಟದಲ್ಲಿನ ಈ ರೀತಿಯ ತಾಂತ್ರಿಕ ಅಡಚಣೆಯಿಂದಾಗಿ ಕೂಲಿ ಕೆಲಸ ಮಾಡುತ್ತಿರುವ ಬಿಪಿಎಲ್ ಪಡಿತರ ಚೀಟಿದಾರ ಗ್ರಾಹಕರು ಸಕಾಲದಲ್ಲಿ ಅಕ್ಕಿ ಸಿಗದೆ ನ್ಯಾಯಬೆಲೆ ಅಂಗಡಿ ಸಿಬ್ಬಂದಿಗಳನ್ನು ತರಾಟೆಗೆ ತೆಗೆದು ಕೊಳ್ಳುತ್ತಿದ್ದಾರೆ. ಸಂಬಂಧಪಟ್ಟ ಆಹಾರ ಅಧಿಕಾರಿಗಳಲ್ಲಿ ವಿಚಾರಿಸಿದರೆ ಎರಡು ತಿಂಗಳ ಅಕ್ಕಿಯನ್ನು ಒಂದೇ ತಿಂಗಳಿನಲ್ಲಿ ನೀಡುತ್ತಿರುವುದರಿಂದ ಸರ್ವರ್ ಸಮಸ್ಯೆ ಉದ್ಭವಿಸಿದೆ ಎಂದು ಸಬೂಬು ನೀಡುತ್ತಿದ್ದಾರೆ. ಈ ವಿಚಾರದಲ್ಲಿ ಸಮರ್ಪಕ ಕಾರಣ ತಿಳಿಯದಿದ್ದು, ಸರ್ವರ್ ಸಮಸ್ಯೆ ತಿಂಗಳ ಅಂತ್ಯದವರೆಗೂ ಹೀಗೆಯೇ ಮುಂದುವರಿದರೆ ಕೆಲವರು ಪಡಿತರ ಅಕ್ಕಿ ಪಡೆಯುವಲ್ಲಿ ವಂಚಿತರಾಗಬಹುದು ಎಂದು ಪ್ರಭು ಅವರು ಮನವಿಯಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ. ಈ ನಡುವೆ ಮೇ ತಿಂಗಳ ಅಕ್ಕಿಯನ್ನು ರಾಜ್ಯ ಸರಕಾರ ವಿತರಿಸಿಲ್ಲ. ಕೇಂದ್ರ ಸರಕಾರವು ಮುಂಗಡವಾಗಿ 2 ತಿಂಗಳಿಗೆ ಬಿಡುಗಡೆ ಮಾಡಿದ ಅಕ್ಕಿಯನ್ನು ಹೊಂದಾಣಿಕೆ ಮಾಡಿಕೊಂಡು ಎರಡೆರಡು ಬಾರಿ ಗ್ರಾಹಕರಿಂದ ಬೆರಳ ಅಚ್ಚು (ತಂಬ್) ತೆಗೆದುಕೊಳ್ಳುವುದರಿಂದ ಸರ್ವರ್ ಸಮಸ್ಯೆಗೆ ಇನ್ನೊಂದು ಕಾರಣ ಎಂದು ಹೇಳಲಾಗುತ್ತಿದೆ.ಈ ಹಿನ್ನೆಲೆಯಲ್ಲಿ ಮೇ ತಿಂಗಳ ಅಕ್ಕಿಯನ್ನು ಜೂನ್ ಮೊದಲ ವಾರದವರೆಗೂ ನೀಡಲು ಸೂಕ್ತ ಆದೇಶ ನೀಡಬೇಕೆಂದು ಒತ್ತಾಯಿಸಿದ್ದಾರೆ.



ಬಂಟ್ವಾಳ ತಾಲೂಕಿನ ಮೋಂತಿಮಾರಿನ ದೇವಿನಗರ ಅಂಬಿಕಾಮಿತ್ರ ಮಂಡಳಿ ವತಿಯಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಿಸಲಾಯಿತು ಮಂಡಳಿ ಅಧ್ಯಕ್ಷ ದೀಕ್ಷಿತ್ ಶೆಟ್ಟಿ, ಗೌರವಾಧ್ಯಕ್ಷ ದಿನೇಶ್ ಸಾಲ್ಯಾನ್, ಮಾಜಿ ಗೌರವಾಧ್ಯಕ್ಷ ಸತೀಶ ಟೈಲರ್, ನೇಮಿರಾಜ ಶೆಟ್ಟಿ ನಿವೃತ್ತ ಮುಖ್ಯ ಶಿಕ್ಷಕಿ ದೇವಕಿ ಎಚ್., ವಿನುತಾ ಲಕ್ಷ್ಮಿ, ಉಪಾಧ್ಯಕ್ಷ ತಾರಾನಾಥ ದೇರಳ, ಕಾರ್ಯದರ್ಶಿ ಪುನೀತ್ ಕುಲಾಲ್, ದಿನೇಶ್ ಆಚಾರ್ಯ, ದೀಕ್ಷಿತ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.



ಕಟೀಲಿನ ದುರ್ಗಾನಗರ ಫ್ರೆಂಡ್ಸ್ ಕ್ಲಬ್ ಕೊಂಡೇಲ ತಂಡದಿಂದ 5ನೇ ವರುಷದ ಪುಸ್ತಕ ವಿತರಣಾ ಕಾರ್ಯಕ್ರಮ ಭ್ರಾಮರಿ ಸಭಾ ಭವನ ಪೂಪಾಡಿಕಲ್ ಮಲ್ಲಿಗೆಯಂಗಡಿಯಲ್ಲಿ ನಡೆಯಿತು. 45 ಶಾಲಾ ಮಕ್ಕಳಿಗೆ ಪುಸ್ತಕಾ ವಿತರಿಸಲಾಯಿತು. ಅಂಗನವಾಡಿ ಮುಖ್ಯಶಿಕ್ಷಕಿ ಎಲ್ಸಿ ಸಿಕ್ವೇರ, ರಂಗ ಕಲಾವಿದ ದುರ್ಗಾಪ್ರಸಾದ್ ಕೊಂಡೇಲ ಅವರನ್ನು ಸನ್ಮಾನಿಸಲಾಯಿತು. ಕಿನ್ನಿಗೋಳಿ ಪ.ಪಂ. ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ, ಸದಸ್ಯ ಲೋಕಯ್ಯ ಸಾಲ್ಯಾನ್ ಕೊಂಡೇಲ, ಕಿರಣ್ ಶೆಟ್ಟಿ ಕೊಡೆತ್ತೂರು, ಶೀನ ಪೂಜಾರಿ ಏಳಳ, ಪ್ರೀತಮ್ ಬಂಗೇರ ಬಜಪೆ, ಚಂದ್ರ ಪೂಜಾರಿ ಪೆರಾರ, ಕಿರಣ್ ಪೂಜಾರಿ ಎಕ್ಕಾರ್, ಸುಮಂತ್ ಮಿಜಾರ್, ಶಿವಾನಂದ ಪೂಜಾರಿ ಕಟೀಲು ಮೊದಲಾದವರಿದ್ದರು.

ಇಂದಿನಿಂದ ಸುಂಟಿಕೊಪ್ಪದಲ್ಲಿ 17ನೇ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸಂಭ್ರಮ

ಮಡಿಕೇರಿ: ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 17ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಮೇ 29, 30ರಂದು ಸುಂಟಿಕೊಪ್ಪದ ಎಸ್.ಎಸ್. ಇಂಟರ್‌ನ್ಯಾಷನಲ್ ಸಭಾಂಗಣದ ಕವಿಶಿಷ್ಠ ಪಂಜೆ ಮಂಗೇಶರಾಯರ ವೇದಿಕೆಯಲ್ಲಿ ನಡೆಯಲಿದೆ.

ನಗರದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಸಮ್ಮೇಳನದ ಸರ್ವಾಧ್ಯಕ್ಷ ಹಿರಿಯ ಸಾಹಿತಿ, ಕೇಂದ್ರ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ಅಬ್ದುಲ್ ರಶೀದ್ ಘನ ಉಪಸ್ಥಿತಿಯಲ್ಲಿ ಎರಡು ದಿನಗಳ ಕಾಲ ಕನ್ನಡ ನುಡಿ ಹಬ್ಬ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ ಎಂದು ವಿವರಿಸಿದರು.

ಮೇ 29ರಂದು ಬೆಳಗ್ಗೆ ರಾಷ್ಟ್ರಧ್ವಜ, ನಾಡಧ್ವಜ ಮತ್ತು ಪರಿಷತ್ತಿನ ಧ್ವಜಾರೋಹಣದೊಂದಿಗೆ ಸಮ್ಮೇಳನಕ್ಕೆ ಚಾಲನೆ ದೊರೆಯಲಿದೆ. ಸುಂಟಿಕೊಪ್ಪ ವ್ಯಾಪ್ತಿಯ 19 ಹಿರಿಯ ಚೇತನರ ಸ್ಮರಿಸುವ ದ್ವಾರವನ್ನು ಗಣ್ಯರು ಉದ್ಘಾಟಿಸಲಿದ್ದಾರೆ ಎಂದರು.

> **ಸಮ್ಮೇಳನಾಧ್ಯಕ್ಷರ ಮೆರವಣಿಗೆ**
>
> ಅಂದು ಬೆಳಗ್ಗೆ 9ಕ್ಕೆ ಸುಂಟಿಕೊಪ್ಪದ ಸರಕಾರಿ ಪ್ರಾಥಮಿಕ ಶಾಲೆಯಿಂದ ಮುಖ್ಯ ರಸ್ತೆಗಾಗಿ ಶ್ರೀ ಅಯ್ಯಪ್ಪ ದೇವಾಲಯದ ಮೂಲಕ ಗದ್ದೆಹಳ್ಳದ ಎಸ್.ಎಸ್. ಇಂಟರ್ ನ್ಯಾಷನಲ್ ಹಾಲ್‌ನಲ್ಲಿ ನಿರ್ಮಿಸಲಾಗಿರುವ ಗುಂಡುಗುಟ್ಟಿ ಮಂಜನಾಥಯ್ಯ ಸಭಾಂಗಣದವರೆಗೆ ಸಮ್ಮೇಳನಾಧ್ಯಕ್ಷ ಅಬ್ದುಲ್ ರಶೀದ್ ಅವರ ಮೆರವಣಿಗೆ ವಿವಿಧ ಕಲಾ ತಂಡಗಳೊಂದಿಗೆ ನಡೆಯಲಿದೆ ಎಂದರು. ಸಾಹಿತಿ ಡಿ.ಎನ್. ಕೃಷ್ಣಯ್ಯ ಮಹಾದ್ವಾರ, ಸಾಹಿತಿ ಜಿ.ಟಿ ನಾರಾಯಣ್ ರಾವ್ ಪುಸ್ತಕ ಮಳಿಗೆ, ಛಾಯಾಗ್ರಾಹಕ ದಿ.ಬಿ.ಎಫ್. ಮೊಹಿದ್ದೀನ್ ಚಿತ್ರಕಲಾ ಮತ್ತು ಛಾಯಾಚಿತ್ರ ಪ್ರದರ್ಶನ ಮಳಿಗೆ ಮಳಿಗೆ, ಕಮಲ ಕರಿಯಪ್ಪ ಜ್ಞಾಪಕಾರ್ಥ ಸ್ತ್ರೀಶಕ್ತಿ ಮಳಿಗೆ, ಗುಂಡುಗುಟ್ಟಿ ಮಂಜುನಾಥಯ್ಯ ಸಭಾಂಗಣ ಮತ್ತು ಕವಿಶಿಷ್ಯ ಪಂಜೆ ಮಂಗೇಶರಾಯರ ವೇದಿಕೆಯ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.

ಸಮ್ಮೇಳನ ಉದ್ಘಾಟನೆ

ಅಂದು ಬೆಳಗ್ಗೆ 10.30 ಕ್ಕೆ ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಸಮ್ಮೇಳನದ ನೆನಪಿಗಾಗಿ ಹೊರ ತರಲಾಗುವ ಸ್ಮರಣ ಸಂಚಿಕೆ 'ಸಾಹಿತ್ಯ ಸೌಹಾರ್ದ'ವನ್ನು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು ಬಿಡುಗಡೆಗೊಳಿಸಲಿದ್ದಾರೆ. ಸಾಹಿತಿ ಇ. ಸುಲೇಮಾನ್ ರಚಿಸಿದ ರಾಗವಿಲ್ಲದ ಕವಿತೆ, ಎಚ್.ಮಂಜುನಾಥ್ ರಚಿಸಿದ ಮನುಷ್ಯತ್ವದ ಸಾರ, ಜಯಪ್ರಕಾಶ್ ಪುತ್ತೂರು ರಚಿಸಿದ ವ್ಯಕ್ತಿತ್ವ ವಿಕಸನದ ವಿಚಾರ ಧಾರೆ, ಡಾ. ಬೆಸೂರು ಮೋಹನ್ ಪಾಳೆಗಾರ್ ರಚಿಸಿದ ಸ್ವಾತಂತ್ರ್ಯ ಕ್ರಾಂತಿಯ ಕಿಡಿ, ಗಣೇಶ ಶರ್ಮಾ ರಚಿಸಿದ ಮಕ್ಕಳ ಕಥೆ, ಹೇಮಂತ್ ಪಾರೇರ ರಚಿಸಿದ ಶಕುನದ ಹಕ್ಕಿ ಲಾವಣ್ಯ ಮೋಹನ್ ರಚಿಸಿದ 'ಛಾಯಾ' ಕೃತಿಯನ್ನು ಅತಿಥಿ ಗಣ್ಯರು ಇದೇ ಸಂದರ್ಭ ಅನಾವರಣಗೊಳಿಸಲಿದ್ದಾರೆ. ಬಳಿಕ ಗೀತ ಗಾಯನ ಕಾರ್ಯಕ್ರಮ ನಡೆಯಲಿದೆ ಎಂದು ಕೇಶವ ಕಾಮತ್ ಮಾಹಿತಿ ನೀಡಿದರು.

ವಿಚಾರಗೋಷ್ಠಿ

ಅಪರಾಹ್ನ ನಡೆಯುವ ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ವೈದ್ಯ ಮತ್ತು ಸಾಹಿತಿ ಡಾ.ಕೆ.ಬಿ ಸೂರ್ಯ ಕುಮಾರ್ ವಹಿಸಲಿದ್ದು, ಆಶಯ ನುಡಿಯನ್ನು ಸಾಹಿತಿ ಕಾಜೂರು ಸತೀಶ್ ನಡೆಸಿಕೊಡಲಿದ್ದಾರೆ. ಕೊಡಗು ಕಂಡ ಮಹಿಳಾ ಸಾಹಿತಿಗಳು ಮತ್ತು ಅವರ ಕೃತಿಗಳು ವಿಚಾರವಾಗಿ ಸಾಹಿತಿ ಎನ್.ಕೆ. ಮಾಲಾದೇವಿ ಮೂರ್ತಿ ಉಪನ್ಯಾಸ ನೀಡಲಿದ್ದಾರೆ. ಪ್ರವಾಸೋದ್ಯಮ ಮತ್ತು ಕೈಗಾರಿಕೋದ್ಯಮದಲ್ಲಿ ಆಗಬೇಕಾದ ಮೂಲಭೂತ ಸೌಕರ್ಯ ಕುರಿತು ಕೊಡಗು ಜಿಲ್ಲಾ ಹೋಂ ಸ್ಟೇ ಅಸೋಸಿಯೇಷನ್ ಅಧ್ಯಕ್ಷೆ ಮೋಂತಿ ಗಣೇಶ್ ಮಾತನಾಡಲಿದ್ದಾರೆ. ವನ್ಯಜೀವಿಗಳ ಉಪಟಳ ಕುರಿತು ಪತ್ರಕರ್ತ ಎಸ್.ಜಿ ಉಮೇಶ್ ಉಪನ್ಯಾಸ ನೀಡಲಿದ್ದಾರೆ.ಇದೇ ಸಂದರ್ಭ 10 ದತ್ತಿದಾನಿಗಳನ್ನು ಸನ್ಮಾನಿಸುವ ಕಾರ್ಯಕ್ರಮ ಮತ್ತು ತಾಲೂಕು ಮತ್ತು ಹೋಬಳಿ ಅಧ್ಯಕ್ಷರನ್ನು ಸನ್ಮಾನಿಸುವ ಕಾರ್ಯಕ್ರಮ ನಡೆಯಲಿದೆ ಎಂದರು.

ಸಮ್ಮೇಳನದ ದ್ವಿತೀಯ ದಿನವಾದ ಮೇ30 ರಂದು ಬೆಳಗ್ಗೆ 10 ಗಂಟೆಗೆ ನಡೆಯುವ ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಮಂಗಳೂರು ವಿವಿ ನಿವೃತ್ತ ಪ್ರೊ. ಕೋಡಿರ ಲೋಕೇಶ್ ಮೊಣ್ಣಪ್ಪ ವಹಿಸಿಕೊಳ್ಳಲಿದ್ದು, ಆಶಯ ನುಡಿಯನ್ನು ಶಕ್ತಿ ಪತ್ರಿಕೆಯ ಸಂಪಾದಕ ಜಿ.ಚಿದ್ವಿಲಾಸ್ ನಡೆಸಿಕೊಡಲಿದ್ದಾರೆ. ಕನ್ನಡ ಕಥಾ ಜಗತ್ತು ಮತ್ತು ಕೊಡಗು ಕುರಿತು ಸಾಹಿತಿ ಡಾ.ಜೆ. ಸೋಮಣ್ಣ, ಕೃಷಿ ಚಟುವಟಿಕೆಯಲ್ಲಿ ಆಧುನಿಕ ತಂತ್ರಜ್ಞಾನ ಬಳಕೆ ಕುರಿತು ಕೃಷಿ ವಿಜ್ಞಾನಿ ಡಾ. ಮುರಳೀಧರ್ ಮಾತನಾಡಲಿದ್ದಾರೆ. ಸಾಹಿತ್ಯ ಕ್ಷೇತ್ರದತ್ತ ಯುವ ಪೀಳಿಗೆಯನ್ನು ಆಕರ್ಷಿಸುವ ದಾರಿ ಕುರಿತು ಆರ್.ಕೆ.ಬಾಲಚಂದ್ರ ಮಾತನಾಡಲಿದ್ದು, ಕೊಡಗು ಕ್ರೀಡೆಯ ತವರೂರು ಆಗಬೇಕಾದ ಅನುಕೂಲತೆಗಳ ಕುರಿತು ಚೆಪ್ಪುಡಿರ ಕಾರ್ಯಪ್ಪ ಮಾತನಾಡಲಿದ್ದಾರೆ. ಅಪರಾಹ್ನ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಸಾಹಿತಿ ಕೃಪಾ ದೇವರಾಜ್ ವಹಿಸಲಿದ್ದು, ಆಶಯ ನುಡಿಯನ್ನು ಸಾಹಿತಿ ಲಾವಣ್ಯ ಮೋಹನ್ ಆಡಲಿದ್ದಾರೆ. ಮಧ್ಯಾಹ್ನ ಕನ್ನಡ ಗೀತ ಗಾಯನ, ಅಪರಾಹ್ನ ಬಹಿರಂಗ ಅಧಿವೇಶನ, ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ, ಸಮಾರೋಪ ಸಮಾರಂಭ ನಡೆಯಲಿದೆಯೆಂದು ತಿಳಿಸಿದರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಕುಶಾಲನಗರ ತಾಲೂಕು ಕಸಾಪ ಅಧ್ಯಕ್ಷ ಕೆ.ಎಸ್.ನಾಗೇಶ್, ಸಮ್ಮೇಳನದ ಸ್ವಾಗತ ಸಮಿತಿ ಉಪಾಧ್ಯಕ್ಷ ಹಾಗೂ ಹಣಕಾಸು ಸಮಿತಿ ಅಧ್ಯಕ್ಷ ಎ. ಲೋಕೇಶ್ ಕುಮಾರ್, ಸುಂಟಿಕೊಪ್ಪ ಹೋಬಳಿ ಅಧ್ಯಕ್ಷ ಪಿ.ಎಫ್.ಸಬಾಸ್ಟಿನ್, ಸ್ಮರಣ ಸಂಚಿಕೆಯ ಸಂಪಾದಕ ಬಿ.ಸಿ.ದಿನೇಶ್ ಇದ್ದರು.

ಸುತ್ತ ಮುತ್ತ

ಮೇ 31: ಕಾಸರಗೋಡು ಕೋಟೆ ಸವಾರಿ -2026 ಸೈಕಲ್ ಪ್ರವಾಸ

ಕಾಸರಗೋಡು: ವಿಶ್ವ ಬೈಸಿಕಲ್ ದಿನಾಚರಣೆಯ ಅಂಗವಾಗಿ ಕಾಸರಗೋಡು ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿ (ಡಿಟಿಪಿಸಿ), ಜಿಲ್ಲಾಡಳಿತ, ಕಾಸರಗೋಡು ಪೆಡಲರ್ಸ್ ಸೈಕ್ಲಿಂಗ್ ಕ್ಲಬ್ ಇವುಗಳ ಜಂಟಿ ಆಶ್ರಯದಲ್ಲಿ ಕಾಸರಗೋಡು ಫೋರ್ಟ್ ರೈಡ್ 2026 ಎಂಬ ಪಾರಂಪರಿಕ ಬೈಸಿಕಲ್ ರೈಡ್ ಆಯೋಜಿಸಲಾಗಿದೆ. ಮೇ 31ರಂದು ಬೆಳಿಗ್ಗೆ 6 ಗಂಟೆಗೆ ಹೊಸದುರ್ಗ ಕೋಟೆಯಿಂದ ಆರಂಭವಾಗುವ 70 ಕಿಲೋ ಮೀಟರ್ ಸೈಕಲ್ ಸವಾರಿ ಕುಂಬಳೆ ಆರಿಕ್ಕಾಡಿ ಕೋಟೆಯಲ್ಲಿ ಕೊನೆಗೊಳ್ಳಲಿದೆ. ಕಾಸರಗೋಡಿನ ಐತಿಹಾಸಿಕ ಪರಂಪರೆಯ ಸಂಕೇತಗಳಾದ ಹೊಸದುರ್ಗ ಕೋಟೆ, ಬೇಕಲಕೋಟೆ, ಚಂದ್ರಗಿರಿ ಕೋಟೆ, ಪೊವ್ವಲ್ ಕೋಟೆ, ಕುಂಬಳೆ ಆರಿಕ್ಕಾಡಿ ಕೋಟೆ ಸಂಪರ್ಕಿಸುವ ಮೂಲಕ ಈ ಸೈಕಲ್ ಸವಾರಿ ಹಮ್ಮಿಕೊಳ್ಳಲಾಗಿದೆ. ಪಾರಂಪರಿಕ ಪ್ರವಾಸೋದ್ಯಮವನ್ನು ಉತ್ತೇಜಿಸುವುದು, ಆರೋಗ್ಯಕರ ಜೀವನಶೈಲಿ ಪ್ರೋತ್ಸಾಹಿಸುವುದು ಮತ್ತು ಸೈಕ್ಲಿಂಗ್‌ನ್ನು ಪರಿಸರ ಸ್ನೇಹಿ ಸಾರಿಗೆ ವಿಧಾನವಾಗಿ ಬೆಂಬಲಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಭಾಗವಹಿಸಲಿದ್ದಾರೆ.

ಸೈಕಲ್ ಸವಾರಿಯಲ್ಲಿ ಪಾಲ್ಗೊಳ್ಳುವವರು ತಮ್ಮದೇ ಆದ ಬೈಸಿಕಲ್ ಮತ್ತು ಸುರಕ್ಷತಾ ಸಾಧನ ತರಬೇಕು. ಹೆಲ್ಮೆಟ್ ಕಡ್ಡಾಯ. ಸೀಮಿತ ಜನರಿಗೆ ಅವಕಾಶವಿದೆ. ಆಸಕ್ತ ಅಭ್ಯರ್ಥಿಗಳು ಡಿಟಿಪಿಸಿ ಕಾಸರಗೋಡು ವೆಬ್ ಸೈಟ್ ಮೂಲಕ ಮುಂಚಿತ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಡಿಟಿಪಿಸಿ ಕಾಸರಗೋಡು ಸಂಸ್ಥೆ 9495672162 ಮೊಬೈಲ್ ನಂಬರ್‌ಗೆ ಕರೆ ಮಾಡಬಹುದು

ಮೇ 31ರಂದು ಪದ್ಮಶಾಲಿ ಸಮಾಜ ಸೇವಾ ಸಮಿತಿ ವಾರ್ಷಿಕ ಮಹಾಸಭೆ

ಮಂಜೇಶ್ವರ: ಪದ್ಮಶಾಲಿ ಸಮಾಜ ಸೇವಾ ಸಮಿತಿ ಪೈವಳಿಕೆ ಇದರ ವಾರ್ಷಿಕ ಮಹಾಸಭೆ, ಉಚಿತ ಪುಸ್ತಕ ವಿತರಣೆ, ಶ್ರೀ ಸತ್ಯನಾರಾಯಣ ಪೂಜೆಯು ಮೇ 31ರಂದು ಬೆಳಗ್ಗೆ 8ರಿಂದ ಬಾಯಿಕಟ್ಟೆ ಶ್ರೀ ಅಯ್ಯಪ್ಪ ಭಜನಾ ಮಂದಿರದಲ್ಲಿ ಜರಗಲಿದೆ.

ಬೆಳಿಗ್ಗೆ 8ಗಂಟೆಗೆ ಶ್ರೀ ಸತ್ಯನಾರಾಯಣ ಪೂಜೆ ಆರಂಭ, 10ಗಂಟೆಗೆ ಮಹಾಪೂಜೆ, 10.30ಕ್ಕೆ ನಡೆಯಲಿರುವ ಸಭಾ ಕಾರ್ಯಕ್ರಮವನ್ನು ಸುಂದರ ಶೆಟ್ಟಿಗಾರ್ ಪೆರಿಯಪ್ಪಾಡಿ ಉದ್ಘಾಟಿಸುವರು. ಪದ್ಮಶಾಲಿ ಸಮಾಜ ಸೇವಾ ಸಮಿತಿ ಪೈವಳಿಕೆ ಇದರ ಅಧ್ಯಕ್ಷ ಉಮೇಶ್ ಶೆಟ್ಟಿಗಾರ್ ಕುಂಡೇರಿ ಅಧ್ಯಕ್ಷತೆ ವಹಿಸುವರು. ಬಂಗ್ರಮಂಜೇಶ್ವರ ಶ್ರೀ ವೀರಭದ್ರ ಮಹಮ್ಮಾಯಿ ದೇವಸ್ಥಾನದ ಅಧ್ಯಕ್ಷ ಗುರುಪ್ರಸಾದ್ ಶೆಟ್ಟಿಗಾರ್ ಕೋಡಿಬೈಲು, ಕಾರ್ಯದರ್ಶಿ ಹರಿಶ್ಚಂದ್ರ ಶೆಟ್ಟಿಗಾರ್ ಉದ್ಯಾವರ, ಕೋಶಾಽಕಾರಿ ಲಕ್ಷ್ಮಣ ಶೆಟ್ಟಿಗಾರ್ ಕುಂಜತ್ತೂರು, ಮಹಿಳಾ ವೇದಿಕೆ ಅಧ್ಯಕ್ಷೆ ಸಾವಿತ್ರಿ ಭಾಸ್ಕರ ಉದ್ಯಾವರ, ಯುವ ವೇದಿಕೆ ಅಧ್ಯಕ್ಷ ಕಿಶೋರ್ ಶೆಟ್ಟಿಗಾರ್ ಉದ್ಯಾವರ ಆತಿಥಿಗಳಾಗಿರುವರು.

ವಿದ್ಯಾರ್ಥಿಗಳಿಗೆ ಸನ್ಮಾನ

ಎಸ್‌ಎಸ್‌ಎಲ್‌ಸಿಯಲ್ಲಿ ಶೇಕಡಾ 90ಕ್ಕಿಂತ ಹೆಚ್ಚು ಅಂಕ ಪಡೆದ ಪೈವಳಿಕೆ ಗ್ರಾಮ ಸಮಿತಿಗೊಳಪಟ್ಟ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಹಿತೇಶ್ ರಾಜ್ ಧರ್ಮಡ್ಕ, ಗೀತಪ್ರಿಯ ಧರ್ಮಡ್ಕ, ಪ್ರೀತೇಶ್ ಬೊಳಂಪಾಡಿ, ಧ್ವನಿ ಪೈವಳಿಕೆ, ಶ್ರೀಆದ್ಯ ಪೈವಳಿಕೆ ಇವರನ್ನು ಅಭಿನಂದಿಸಲಾಗುವುದು. ನಾರಾಯಣ ಶೆಟ್ಟಿಗಾರ್, ಧೂಮ ಶೆಟ್ಟಿಗಾರ್, ನಾರಾಯಣ ಶೆಟ್ಟಿಗಾರ್ ಮುರ, ಉಮಾವತಿ ಕೃಷ್ಣ ಶೆಟ್ಟಿಗಾರ್, ಪದ್ಮಲತಾ ಈಶ್ವರ ಶೆಟ್ಟಿಗಾರ್ ಇವರನ್ನು ಗೌರವಿಸಲಾಗುವುದು. ಪುಸ್ತಕ ವಿತರಣೆ, ನೂತನ ಪದಾಧಿಕಾರಿಗಳ ಆಯ್ಕೆ, ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಲಿದೆ.

ಸೂರಂಬೈಲು ಶಾಲಾ ಎಲ್‌ಎಸ್‌ಎಸ್ ವಿಜೇತರು







ಕುಂಬಳೆ: ಕೇರಳ ರಾಜ್ಯ ಶಿಕ್ಷಣ ಇಲಾಖೆ ನಡೆಸಿದ ಎಲ್ ಎಸ್‌ಎಸ್ ಪರೀಕ್ಷೆಯಲ್ಲಿ ಸೂರಂಬೈಲು ಸರಕಾರಿ ಪ್ರೌಢಶಾಲೆಯ ಯಶಿಕಾ ಸಿ.ಎಸ್., ತೃಪ್ತಿ ಎಸ್., ದಿಶಿತಾ ಆರ್., ಫಾತಿಮಾ, ಸ್ಮಿತಿಕಾ ಎ.ಆರ್. ಉತ್ತೀರ್ಣ ರಾಗಿ ಸ್ಕಾಲರ್ ಶಿಪ್‌ಗೆ ಅರ್ಹತೆ ಪಡೆದಿದ್ದಾರೆ.

ಜಿಲ್ಲೆಯ ಪ್ರವಾಸೋದ್ಯಮ ವಲಯದಲ್ಲಿ ವಿನೂತನ ಯೋಜನೆಗಳ ಅನುಷ್ಠಾನ

ಚಾರಣ ತಾಣ ರಾಣಿಪುರದಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಳ

ಕಾಸರಗೋಡು: ಜಿಲ್ಲೆಯ ಪ್ರವಾಸೋದ್ಯಮ ವಲಯದಲ್ಲಿ ವಿವಿಧ ವಿನೂತನವಾದ ಹಾಗೂ ಆಕರ್ಷಕವಾದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಇದರಿಂದಾಗಿ ಪ್ರಸಿದ್ಧ ಚಾರಣ ತಾಣವಾದ ರಾಣಿಪುರಕ್ಕೆ ಆಗಮಿಸುವ ಸ್ವದೇಶಿ ಮತ್ತು ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲಿ ಭಾರೀ ಏರಿಕೆಯಾಗಿದೆ.

ಇದರೊಂದಿಗೆ ಕಳೆದ ಕೆಲವು ದಿನಗಳಲ್ಲಿ ಬೇಸಿಗೆ ಮಳೆ ಸುರಿದಿರುವ ಹಿನ್ನೆಲೆಯಲ್ಲಿ ರಾಣಿಪುರವು ಹಸಿರುವರ್ಣದಿಂದ ಕಂಗೊಳಿಸುತ್ತಿದೆ. ಜೊತೆಗೆ ಆಕರ್ಷಕವಾಗಿ ಗೋಚರಿಸುತ್ತಿರುವ ರಾಣಿಪುರವು ರಮ್ಯಾದ್ಭುತ ಪ್ರದೇಶವಾಗಿ ಪ್ರಖ್ಯಾತಿ ಪಡೆದಿದೆ. ಅನಿರೀಕ್ಷಿತವಾಗಿ ಬರುವ ಪ್ರವಾಸಿಗರ ದಟ್ಟಣೆಯಿಂದ ಕಾಸರಗೋಡು ಜಿಲ್ಲೆಯ ಮಲೆನಾಡು ಭಾಗದಲ್ಲಿರುವ ರಾಣಿಪುರದಲ್ಲಿ ಸಡಗರದ ಕಳೆ ಕಂಡುಬಂದಿದೆ.

ಕಳೆದ ಭಾನುವಾರದಿಂದ ರಾಣಿಪುರದಲ್ಲಿ ಭಾರೀ ಸಂಚಾರ ದಟ್ಟಣೆ ಗೋಚರಿಸುತ್ತಿದ್ದು, ದ್ವಿಚಕ್ರ ವಾಹನಗಳಲ್ಲಿ, ಟ್ಯಾಕ್ಸಿ ಜೀಪುಗಳಲ್ಲಿ, ಕಾರುಗಳಲ್ಲಿ, ಸಣ್ಣ ಬಸ್



ಮತ್ತಿತರ ವಾಹನಗಳಲ್ಲಿ ರಾಣಿಪುರ ಪ್ರವಾಸಿ ತಾಣಕ್ಕೆ ದಿನಂಪ್ರತಿ ನೂರಾರು ಮಂದಿ ಪ್ರವಾಸಿಗರು ಆಗಮಿಸಿ ಪ್ರಾಕೃತಿಕ ಸೊಬಗಿನೊಂದಿಗೆ ಅನುಷ್ಠಾನಗೊಂಡಿರುವ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆ ಕಣ್ತುಂಬ ವೀಕ್ಷಿಸಿ ಹರ್ಷ ವ್ಯಕ್ತಪಡಿಸುತ್ತಿದ್ದಾರೆ.

ವಾಹನ ನಿಲುಗಡೆಯ ಮೈದಾನ ತುಂಬಿ ತುಳುಕುತ್ತಿರುವುದರಿಂದ ಹಲವಾರು ಮಂದಿ ರಸ್ತೆ ಬದಿಗಳಲ್ಲಿ ವಾಹನಗಳ ನಿಲ್ಲಿಸುತ್ತಾರೆ. ಹಸಿರಿನಿಂದ

- ಹಸಿರುವರ್ಣದಿಂದ ಕಂಗೊಳಿಸುತ್ತಿರುವ ರಾಣಿಪುರ
- ಸ್ವದೇಶಿ ಮತ್ತು ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲೂ ಭಾರೀ ಏರಿಕೆ
- ರಾಣಿಪುರ ಟಿಕೆಟ್ ಕೌಂಟರ್‌ನಿಂದ 1 ಕಿಲೋ ಮೀಟರ್ ದೂರವಿರುವ ಡಿಟಿಪಿಸಿ ಕಾಟೇಜ್ ತನಕ ಹೆಚ್ಚಿದ ವಾಹನಗಳ ಸಾಲು

ಕಂಗೊಳಿಸುವ ರಾಣಿಪುರ ಹುಲ್ಲುಗಾವಲು ವೀಕ್ಷಣೆಗೆಂದೇ ಪ್ರವಾಸಿಗರು ತಲುಪುತ್ತಾರೆ. ಈ ನಿಟ್ಟಿನಲ್ಲಿ ಕಳೆದ ಐದು ದಿನಗಳಿಂದ ಮುಂಜಾನೆಯಿಂದ ಮುಸ್ಸಂಜೆಯವರೆಗೆ ಆರಣ್ಯಕ್ಕೆ ಹೊಂದಿಕೊಂಡಿರುವ ರಾಣಿಪುರ ಟಿಕೆಟ್ ಕೌಂಟರ್‌ನಿಂದ ಒಂದು ಕಿಲೋ ಮೀಟರ್ ದೂರವಿರುವ ಡಿಟಿಪಿಸಿ ಕಾಟೇಜ್ ತನಕ ವಾಹನಗಳ ಸಾಲು ಕಂಡುಬರುತ್ತಿದೆ.

ಪ್ರಬಲವಾದ ಬಿಸಿಲಿನ ತಾಪಮಾನದಿಂದ ಏಪ್ರಿಲ್ 1ರಿಂದ ಮೇ ತಿಂಗಳ 23ರ ವರೆಗೆ ರಾಣಿಪುರಕ್ಕೆ ಪ್ರವಾಸಿಗರ ಸಂಖ್ಯೆಯಲ್ಲಿ ಇಳಿಮುಖವಾಗಿತ್ತು. ಆದರೆ ಮೇ ಮಧ್ಯಭಾಗದಲ್ಲಿ ಸುರಿದ ಮಳೆಯಿಂದಾಗಿ ರಾಣಿಪುರವು ಹಸಿರಿನಿಂದ ಗೋಚರಿಸುವಂತಾಗಿ ಜೊತೆಗೆ ಅದಕ್ಕೆ ಹೊಂದಿಕೊಂಡು ಅಭಿವೃದ್ಧಿ ಚಟುವಟಿಕೆಗಳನ್ನು ನಿರ್ವಹಿಸಿದ ಕಾರಣ ಪ್ರವಾಸಿಗರ ಸಂಖ್ಯೆ ಏರುವಂತಾಯಿತು.

ಹೆಚ್ಚಿದ ಪ್ರವಾಸಿಗರ ದಂಡು

ಮೇ 24ರಂದು ಭಾನುವಾರ ಒಂದೇ ದಿನ 2166 ಮಂದಿ ಪ್ರವಾಸಿಗರು ರಾಣಿಪುರಕ್ಕೆ ಆಗಮಿಸಿದ್ದಾರೆ. ಈ ವರ್ಷ ಒಂದೇ ದಿನಕ್ಕೆ ಇಷ್ಟೊಂದು ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿರುವುದು ಇದೇ ಮೊದಲ ಬಾರಿಯಾಗಿದೆ. ಸ್ಥಳ ಸೌಕರ್ಯ ಕೊರತೆ ಅನುಭವಿಸುತ್ತಿರುವ ಪ್ರವೇಶ ಟಿಕೆಟ್ ಭಾಗವು ಪ್ರವಾಸಿಗರಿಂದ ತುಂಬಿ ತುಳುಕುತ್ತಿದೆ.

ಮೇ 23ರಂದು ಸಂಜೆಯೇ ರಾಣಿಪುರದ ಖಾಸಗಿ ಹೋಂ ಸ್ಟೇಗಳು, ಸರ್ವೀಸ್ ವಿಲ್ಲಾಗಳು ಪ್ರವಾಸಿಗರಿಂದ ತುಂಬಿದ್ದವು. ರಾತ್ರಿ ಆಗಮಿಸಿದ್ದ ಹಲವಾರು ಮಂದಿ ಪ್ರವಾಸಿಗರು ವಾಸ ಸೌಕರ್ಯವಿಲ್ಲದ ಹಿಂತಿರುಗಿದ್ದರು. ಕೇರಳ, ಕರ್ನಾಟಕ, ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳಿಂದ ಪ್ರವಾಸಿಗರು ರಮಣೀಯ ದೃಶ್ಯ ಆಸ್ವಾದಿಸಲು ರಾಣಿಪುರಕ್ಕೆ ಬರುತ್ತಿದ್ದಾರೆ.

ಮೂಲಭೂತ ಸೌಲಭ್ಯ ಪೂರೈಸಬೇಕು

ಬೇಸಗೆ ರಜೆ ಮುಗಿಯುತ್ತಾ ಬಂದಿರುವುದು ಪ್ರವಾಸಿಗರ ಸಂಖ್ಯೆಯಲ್ಲಿ ಹೆಚ್ಚಳ ಉಂಟಾಗಲು ಕಾರಣವಾಗಿದೆ. ಮುಂಬರುವ ದಿನಗಳಲ್ಲಿ ಮುಂಗಾರು ಮಾರುತ ಆರಂಭಗೊಂಡ ಬಳಿಕ ರಾಣಿಪುರಕ್ಕೆ ಪ್ರವಾಸಿಗರ ಸಂಖ್ಯೆಯಲ್ಲಿ ಮತ್ತಷ್ಟು ಏರಿಕೆ ಉಂಟಾಗುವ ಸಾಧ್ಯತೆಗಳಿವೆ. ಈ ಹಿನ್ನೆಲೆ ರಾಣಿಪುರ ಪ್ರದೇಶದಲ್ಲಿ ಸಾಕಷ್ಟು ಮೂಲಭೂತ ಸೌಲಭ್ಯ ಪೂರೈಸಲಾಗಿದ್ದರೂ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಸಹಿತ ಪ್ರವಾಸಿಗರಿಗೆ ಅಗತ್ಯದ ಆಹಾರ ವಸ್ತು ಪೂರೈಸುವ ಕ್ರಮ ಕೈಗೊಳ್ಳಬೇಕಾಗಿದೆ.

ಮಧೂರು ಶ್ರೀ ಕಾಳಿಕಾಂಬಾ ಮಠದ ನೂತನ ಸಮಿತಿ ಪದಗ್ರಹಣ

ಭೇದ ಭಾವ ಮರೆತು ಒಟ್ಟಾಗಿ ಶ್ರಮಿಸಬೇಕು

ಕಾಸರಗೋಡು: ಮಧೂರು ಶ್ರೀ ಕಾಳಿಕಾಂಬಾ ಮಠದ ನೂತನ ಆಡಳಿತ ಸಮಿತಿಗೆ ಅಧಿಕಾರ ಹಸ್ತಾಂತರ ಕಾರ್ಯಕ್ರಮ ಶ್ರೀ ಮಠದ ಸಭಾಂಗಣದಲ್ಲಿ ಜರಗಿತು.

ಸಂಘಟನಾ ಬದ್ಧತೆ ಮತ್ತು ಸಮಾಜಮುಖಿ ಚಿಂತನೆಗಳಿಗೆ ಕಾರ್ಯಕ್ರಮವು ಸಾಕ್ಷಿಯಾಯಿತು. ಅಧ್ಯಕ್ಷತೆಯನ್ನು ಹಾಲಿ ಅಧ್ಯಕ್ಷ ಪ್ರಭಾಕರ ಆಚಾರ್ಯ ಕೋಟೆಕಾರು ವಹಿಸಿದ್ದರು. ಈ ಸಂದರ್ಭ ನೂತನ ಸಮಿತಿಗೆ ಅಧಿಕಾರ ವಹಿಸಲಾಯಿತು.

ನೂತನ ಅಧ್ಯಕ್ಷರಾಗಿ ಪುರುಷೋತ್ತಮ ಆಚಾರ್ಯ ಮಠ ಕಂಬಾರು, ಪ್ರಧಾನ ಕಾರ್ಯದರ್ಶಿಯಾಗಿ ಅಮ್ಮೆ ನಿರಂಜನ ಆಚಾರ್ಯ ವಿವೇಕಾನಂದನಗರ, ಕೋಶಾಧಿಕಾರಿಯಾಗಿ ಐತಡ್ಕ ಸುಂದರ ಆಚಾರ್ಯ ಬದಿಯಡ್ಕ ಅಧಿಕಾರ ಸ್ವೀಕರಿಸಿದರು.

ಗುರುಪೀಠದ ಪ್ರಧಾನ ಕಾರ್ಯದರ್ಶಿ ಲೋಕೇಶ್ ಎಂ.ಬಿ. ಆಚಾರ್ಯ ಕಂಬಾರು, ಹಾಲಿ ಕಾರ್ಯದರ್ಶಿ ತಾರಾನಾಥ ಆಚಾರ್ಯ ಮಧೂರು, ಹಾಲಿ ಕೋಶಾಧಿಕಾರಿ ಯೋಗೇಂದ್ರ ಆಚಾರ್ಯ ಪರಕ್ಕಿಲ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಗತ ಸಾಲಿನ ಲೆಕ್ಕಪತ್ರ ಹಾಗೂ ವಾರ್ಷಿಕ ವರದಿ ಮಂಡಿಸಲಾಯಿತು. ಬಳಿಕ ಮಠದ ಸದಸ್ಯರು ಮತ್ತು ಭಕ್ತಾದಿಗಳು ಮಠದ ಮುಂದಿನ ಅಭಿವೃದ್ಧಿ,



ಸಮಾಜದ ಸಂಘಟನೆ ಹಾಗೂ ಧಾರ್ಮಿಕ ಯೋಜನೆಗಳ ಕುರಿತು ಹಲವು ಮಹತ್ವದ ಸಲಹೆ ಸೂಚನೆ ಹಂಚಿಕೊಂಡರು.

ಸಾಂಸ್ಕೃತಿಕ ಬಲವರ್ಧನೆಗೆ ಕರೆ

ಅಧಿಕಾರ ಹಸ್ತಾಂತರಿಸಿದ ಹಾಲಿ ಅಧ್ಯಕ್ಷ ಪ್ರಭಾಕರ ಆಚಾರ್ಯ ಕೋಟೆಕಾರು ಮಾತನಾಡಿ, ಸಮಾಜವನ್ನು ಒಗ್ಗೂಡಿಸುವ ಹಾಗೂ ಯುವಜನರನ್ನು ಸನ್ಮಾರ್ಗದಲ್ಲಿ ಸಂಘಟಿಸುವ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಸಮಾಜದ ಸಾಂಸ್ಕೃತಿಕ ಮತ್ತು ಧಾರ್ಮಿಕ ಬಲವರ್ಧನೆಗಾಗಿ ನಾವೆಲ್ಲರೂ ಭೇದ ಭಾವ ಮರೆತು ಒಟ್ಟಾಗಿ ಶ್ರಮಿಸಬೇಕು ಎಂದು ಕರೆ ನೀಡಿದರು.

ಮುಂದಿನ ವರ್ಷ ಬ್ರಹ್ಮಕಲಶದ ಸಂಕಲ್ಪ

ಅಧಿಕಾರ ಸ್ವೀಕರಿಸಿದ ನೂತನ ಅಧ್ಯಕ್ಷ ಪುರುಷೋತ್ತಮ ಆಚಾರ್ಯ ಮಠ ಕಂಬಾರು ಮಾತನಾಡಿ, ಮಠದ ಮುಂದಿನ ಮಹತ್ತರ ಯೋಜನೆ ಪ್ರಕಟಿಸಿದರು. ಶ್ರೀ ಮಠದ ಬ್ರಹ್ಮಕಲಶವನ್ನು ಮುಂದಿನ ವರ್ಷ ವಿಜೃಂಭಣೆಯಿಂದ ನೆರವೇರಿಸುವ ಕುರಿತು ನೂತನ ಸಮಿತಿ ಚಿಂತನೆ ನಡೆಸಿದೆ. ಈ ನಿಟ್ಟಿನಲ್ಲಿ ಮಠದ ವ್ಯಾಪ್ತಿಗೆ ಬರುವ ವಿವಿಧ ಪ್ರಾಂತ್ಯಗಳಲ್ಲಿ ಶೀಘ್ರದಲ್ಲೇ ಸಭೆಗಳನ್ನು ಆಯೋಜಿಸಿ ಸಮಾಜ ಬಾಂಧವರಿಗೆ ಮಾಹಿತಿ ನೀಡುವ ಮತ್ತು ಒಗ್ಗೂಡಿಸುವ ಕಾರ್ಯವನ್ನು ಕೈಗೊಳ್ಳಲಾಗುವುದು. ಎಲ್ಲರೂ ಮನಸ್ಸು ಮಾಡಿ ಕೈಜೋಡಿಸಿದರೆ ಯಾವುದೇ ಮಹತ್ಕಾರ್ಯವೂ ಅಸಾಧ್ಯವಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಗದೀಶ ಆಚಾರ್ಯ ಸ್ವಾಗತಿಸಿ, ನಿರೂಪಿಸಿದರು. ಅಮ್ಮೆ ನಿರಂಜನ ಆಚಾರ್ಯ ವಂದಿಸಿದರು.

ಗೋಡೆಗಳಲ್ಲಿ ಬಿರುಕು | ಸ್ಲ್ಯಾಬ್ ಕಿತ್ತು ಬೀಳುವ ಸ್ಥಿತಿಯಲ್ಲಿ..

ಅಪಾಯ ಭೀತಿಯಲ್ಲಿ ಮುಳಿಗದ್ದೆ ಅಂಗನವಾಡಿ ಕಟ್ಟಡ

ಮಂಜೇಶ್ವರ: ಪೈವಳಿಕೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಾಯಾರು ಸಮೀಪದ ಮುಳಿಗದ್ದೆ ಅಂಗನವಾಡಿ ಕಟ್ಟಡವು ಅತ್ಯಂತ ಅಪಾಯದ ಸನ್ನಿವೇಶ ಎದುರಿಸುತ್ತಿದೆ. ಸುಮಾರು 23 ವರ್ಷಗಳ ಹಿಂದೆ ನಿರ್ಮಿಸಲಾದ ಈ ಕಟ್ಟಡದ ಗೋಡೆಗಳಲ್ಲಿ ಬಿರುಕು ಕಾಣಿಸಿಕೊಂಡಿದ್ದು ಸ್ಲ್ಯಾಬ್ ಕಿತ್ತು ಬೀಳುವ ಸ್ಥಿತಿಯಲ್ಲಿದೆ.

ಅಂಗನವಾಡಿ ಕಟ್ಟಡವು ಅಪಾಯಕಾರಿ ಸ್ಥಿತಿಯಲ್ಲಿ ಇರುವುದರಿಂದ ಪುಟಾಣಿ ಮಕ್ಕಳನ್ನು ಇಲ್ಲಿಗೆ ಕಳುಹಿಸಲು ರಕ್ಷಕರು ಭಯಪಡುವಂತಾಗಿದೆ. 16 ವರ್ಷಗಳ ಹಿಂದೆ ಒಂದು ಬಾರಿ ಮಾತ್ರವೇ ಈ ಕಟ್ಟಡ ದುರಸ್ತಿ ಕಾಮಗಾರಿಯನ್ನು ನಡೆಸಲಾಗಿತ್ತು. ಪ್ರಸ್ತುತ 16 ಮಂದಿ ಮಕ್ಕಳು ಈ ಅಂಗನವಾಡಿಯಲ್ಲಿ ಕಲಿಯುತ್ತಿದ್ದಾರೆ. ಕಟ್ಟಡವು ಅಪಾಯಕಾರಿ ಸ್ಥಿತಿಯಲ್ಲಿರುವ ಹಿನ್ನೆಲೆಯಲ್ಲಿ ಶೌಚಾಲಯವನ್ನು ಕೂಡಾ ಉಪಯೋಗಿಸಲು ಸಾಧ್ಯವಾಗುವುದಿಲ್ಲ. ಪೈವಳಿಕೆ ಗ್ರಾಮ ಪಂಚಾಯತ್ ವ್ಯಾಪ್ತಿಯ 6ನೇ ವಾರ್ಡ್ ಆಗಿರುವ ಮುಳಿಗದ್ದೆಯ ಏಕೈಕ ಅಂಗನವಾಡಿ ಇದಾಗಿದೆ. ಅತ್ಯಂತ ಹಿಂದುಳಿದ ಪ್ರದೇಶದಲ್ಲಿರುವ ಈ ಅಂಗನವಾಡಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳು ಕಲಿಯುತ್ತಿದ್ದಾರೆ. ಕಟ್ಟಡದ ಅಪಾಯಕಾರಿ




ಸ್ಥಿತಿಯನ್ನು ಸಂಬಂಧಪಟ್ಟ ಅಽಕಾರಿಗಳಿಗೆ ಹಲವು ಬಾರಿ ತಿಳಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ.

ಶಿಥಿಲ ಕಟ್ಟಡದ ಅಂಗನವಾಡಿಗೆ ಮಕ್ಕಳನ್ನು ಕಳುಹಿಸುವುದಿಲ್ಲ

ಇನ್ನಾದರೂ ಮುಳಿಗದ್ದೆಯಲ್ಲಿ ಅಂಗನವಾಡಿಗಾಗಿ ನೂತನ ಕಟ್ಟಡ ನಿರ್ಮಿಸಬೇಕೆಂದು ರಕ್ಷಕರು ಹಾಗೂ ಸಾರ್ವಜನಿಕರು ಆಗ್ರಹಿಸಿದ್ದಾರೆ. ಅಲ್ಲಿಯವರೆಗೆ ತಾತ್ಕಾಲಿಕ ಕಟ್ಟಡದ ವ್ಯವಸ್ಥೆ ಮಾಡಲು ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ಕಟ್ಟಡದಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಲು ಭಯವಾಗುತ್ತಿದೆ. , ಶಿಥಿಲಗೊಂಡ ಕಟ್ಟಡದಲ್ಲೇ ಪುಟಾಣಿಗಳಿಗೆ ವಿದ್ಯಾರ್ಜನೆ ನಡೆಸುವುದಾದರೆ ತಮ್ಮ ಮಕ್ಕಳನ್ನು ಕಳುಹಿಸುವುದಿಲ್ಲ ಎಂದು ಪೋಷಕರು ಸ್ಪಷ್ಟಪಡಿಸಿದ್ದಾರೆ.

ಬೃಹತ್ ಪ್ರತಿಭಟನೆ ನಡೆಸುವ ಎಚ್ಚರಿಕೆ

ಶಿಥಿಲಗೊಂಡಿರುವ ಮುಳಿಗದ್ದೆ ಅಂಗನವಾಡಿ ಕಟ್ಟಡದ ಬಗ್ಗೆ ಸ್ಥಳೀಯಾಡಳಿತ ಸಂಸ್ಥೆಗಳ ನಿರ್ಲಕ್ಷ್ಯ ಮುಂದುವರಿದಿದೆ. ಪುಟ್ಟ ಮಕ್ಕಳ ಸುರಕ್ಷತೆ ವಿಚಾರ ದಲ್ಲಿ ಕ್ರಮ ಕೈಗೊಳ್ಳದ ಪೈವಳಿಕೆ ಗ್ರಾ.ಪಂ.ಆಡಳಿತದ ವಿರುದ್ಧ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ನಾಗರಿಕರು ಎಚ್ಚರಿಕೆ ನೀಡಿದ್ದಾರೆ.

ಉಳಿಯತ್ತಡ್ಕ: ವಿಶ್ವಬ್ರಾಹ್ಮಣ ಸಮಾಜದ ಮಕ್ಕಳ 'ವೈದಿಕ ಶಿಕ್ಷಣ' ಶಿಬಿರ ಸಂಪನ್ನ



ಕಾಸರಗೋಡು: ಗುರುಕೃಪಾ ವೈದಿಕ ಶಿಕ್ಷಣ ಸಮಿತಿ ಉಳಿಯತ್ತಡ್ಕ ಇದರ ವತಿಯಿಂದ ವಿಶ್ವಬ್ರಾಹ್ಮಣ ಸಮಾಜದ ಮಕ್ಕಳಿಗೆ ವೈದಿಕ, ಧಾರ್ಮಿಕ ಸಂಸ್ಕಾರ ಒದಗಿಸುವ 24ನೇ ವರ್ಷದ ವೈದಿಕ ಶಿಕ್ಷಣ ಶಿಬಿರ ಉಳಿಯತ್ತಡ್ಕ ಗುರುಕೃಪಾ ನಿವಾಸದಲ್ಲಿ ಸಂಪನ್ನಗೊಂಡಿತು.

ಸಂಸ್ಕಾರ -ಸಂಸ್ಕೃತಿಯ ಕಲಿಸಬೇಕು

ಕಾರ್ಯಕ್ರಮದ ಸಮಾರೋಪವನ್ನು ಉದ್ಘಾಟಿಸಿದ ಬ್ರಹ್ಮಶ್ರೀ ಪುರೋಹಿತರತ್ನ ಬಿ.ಕೇಶವ ಆಚಾರ್ಯ ಮಾತನಾಡಿ, ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನವನ್ನು ಬಾಲ್ಯದಲ್ಲಿಯೇ ಅಳವಡಿಸಿಕೊಂಡಿದ್ದಲ್ಲಿ ಸಮಾಜವು ಬಲಿಷ್ಠವಾಗಿ ಬೆಳೆಯುವುದು. ಇಂದಿನ ಆಧುನಿಕ ಯುಗದಲ್ಲಿ ಮಕ್ಕಳಿಗೆ ಸಂಸ್ಕಾರ - ಸಂಸ್ಕೃತಿಧಾರೆ ಎರೆಯುವುದು ಅತ್ಯಂತ ಆವಶ್ಯಕವಾಗಿದೆ ಎಂದರು.

ವೈದಿಕ ಪರಂಪರೆಯನ್ನು ಉಳಿಸುವಲ್ಲಿ ನಮ್ಮ ಪೂರ್ವಜರು ನಡೆದು ಬಂದ ದಾರಿಯನ್ನು ಮೆಲುಕು ಹಾಕಿದ ಅವರು, ವೈದಿಕ ಶಿಕ್ಷಣವು ಕೇವಲ ಮಂತ್ರ ಪಠಣವಲ್ಲ ಬದಲಾಗಿ ಅದು ಜೀವನ ನಡೆಸುವ ಅತ್ಯುತ್ತಮ ಮಾರ್ಗ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿ ಮುಳಿಗದ್ದೆ ವೆಂಕಟ್ರಮಣ ಆಚಾರ್ಯ ಮಾತನಾಡಿ, ಶಿಬಿರದ ಮಹತ್ವ ಮಕ್ಕಳಲ್ಲಿ ಸಂಸ್ಕಾರ ಬೆಳೆಸುವಲ್ಲಿ ಪೋಷಕರ ಪಾತ್ರದ ಬಗ್ಗೆ ಮಾಹಿತಿ ನೀಡಿದರು.

ಸಮಿತಿ ಕಾರ್ಯದರ್ಶಿ ರವೀಂದ್ರ ಆಚಾರ್ಯ ಮುಳ್ಳೇರಿಯ, ಕೋಶಾಧಿಕಾರಿ ಉಳುವಾರು ವೆಂಕಟ್ರಮಣ ಆಚಾರ್ಯ, ಗುರುಕೃಪಾ ಭಜನಾ ಸಂಘದ ಅಧ್ಯಕ್ಷ ಗುರುಪ್ರಸಾದ್ ಶರ್ಮ ಉಳಿಯತ್ತಡ್ಕ ಉಪಸ್ಥಿತರಿದ್ದರು.

ಅತಿಥಿಗಳಾಗಿ ಪ್ರಾಣೇಶ್ ತಲಪಾಡಿ, ಪುರೋಹಿತ ಗಣೇಶ ಆಚಾರ್ಯ ಮಧೂರು, ಪುರೋಹಿತ ಚಂದ್ರಶೇಖರ ಆಚಾರ್ಯ ಕಾಂತುಗುಡ್ಡೆ ಮತ್ತಿತರರು ಭಾಗವಹಿಸಿದ್ದರು. ಶಿಬಿರಾರ್ಥಿಗಳಿಗೆ ಏರ್ಪಡಿಸಲಾಗಿದ್ದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಭರತ್ ಆಚಾರ್ಯ ಸ್ವಾಗತಿಸಿ, ನವೀನ್ ಆಚಾರ್ಯ ಕಡಂಬಾರು ವಂದಿಸಿದರು. ಕಿರಣ್ ಶರ್ಮ ನಿರೂಪಿಸಿದರು.

ಗಾಯಕ ಹರೀಶ್ ಪಂಜಿಕಲ್ಲುಗೆ 'ಸ್ವರಗಾನ ಸಿರಿ 2026' ಗೌರವ ಪುರಸ್ಕಾರ ಪ್ರದಾನ



ಕಾಸರಗೋಡು: ಕೂಡ್ಲು ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಸ್ಥಾನದಲ್ಲಿ ಬ್ರಹ್ಮಕಲಶದ ಪ್ರಯುಕ್ತ ನಡೆದ ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆಯ ಸಾಂಸ್ಕೃತಿಕ ಕಲಾ ವೈಭವ ಕಾರ್ಯಕ್ರಮದಲ್ಲಿ ಸುಮಧುರ ಕಂಠದ ಗಾಯಕ ಹರೀಶ್ ಪಂಜಿಕಲ್ಲು ಅವರನ್ನು ಗಾಯಕರಿಗೆ ಕೊಡಮಾಡುವ ಸಂಸ್ಥೆ ಪ್ರತಿಷ್ಠಿತ ಪ್ರಶಸ್ತಿಯಾದ ಸ್ವರಗಾನ ಸಿರಿ 2026 ಗೌರವ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಗುರುರಾಜ್ ಕಾಸರಗೋಡು ಆಯೋಜನೆಯಲ್ಲಿ ದೇವಸ್ಥಾನದ ಬ್ರಹ್ಮಕಲಶಾಭಿಷೇಕ ಸಮಿತಿ ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ಕೆ.ಜಗದೀಶ್ ಕೂಡ್ಲು, ಸಂಸ್ಥೆಯ ಗೌರವಾಧ್ಯಕ್ಷ ಗಣೇಶ್ ಪ್ರಸಾದ್ ಆಳ್ವ ಜೊತೆ ಕಾರ್ಯದರ್ಶಿ ವರ್ಷಾ ಶೆಟ್ಟಿ, ಸದಸ್ಯೆ ಜಯಪ್ರಭಾ ವೈ. ಮತ್ತಿತರರಿದ್ದರು.

ಗಾಯಕ ಹರೀಶ್ ಪಂಜಿಕಲ್ಲು ಅವರು ದೇಲಂಪಾಡಿ ಗ್ರಾ.ಪಂ.ನ ಪಂಜಿಕಲ್ಲು ನಿವಾಸಿಯಾದ ಕೃಷಿಕ ಚೋಮ ಮತ್ತು ಭಾರತಿ ದಂಪತಿಯ ಪುತ್ರ. ಎಳವೆಯಿಂದಲೇ ಓದಿನೊಂದಿಗೆ ಗಾಯನದಲ್ಲಿ ಆಸಕ್ತಿ ಹೊಂದಿ ಹಾಡುಗಳ ಹಾಡುತ್ತಾ ಸ್ವಂತವಾಗಿ ಅಭ್ಯಾಸ ಮಾಡುತ್ತಾ ಇಂದು ಪ್ರಚಲಿತದಲ್ಲಿರುವ ಗಾಯಕರಾಗಿ ಹೊರಹೊಮ್ಮಿದ್ದಾರೆ.

ಮುಖ್ಯ ಪಾತ್ರ ವಹಿಸಿದ್ದಾರೆ

ಗಾಯನ, ಯಕ್ಷಗಾನ, ಸಾಹಿತ್ಯ, ಕ್ರೀಡೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಮುಂದುವರಿಯುತ್ತಿರುವ ಅವರು ತಮ್ಮದೇ ಆದ ಗಾಯನ ತಂಡ ರಚಿಸಿ ಕಾರ್ಯಕ್ರಮ ನೀಡುತ್ತಿದ್ದಾರೆ. ಕ್ರಿಕೆಟ್, ಕಬಡ್ಡಿ, ಮಲ್ಲಗಂಬ ಮುಂತಾದ ಕ್ರೀಡೆಗಳಲ್ಲಿ ಭಾಗವಹಿಸುತ್ತಿರುವ ಅವರು ಕ್ರಿಕೆಟ್‌ನಲ್ಲಿ ತಂಡದ ನೇತೃತ್ವ ವಹಿಸಿ ಹಲವಾರು ಕಡೆ ತಂಡಕ್ಕೆ ಪ್ರಥಮ ಸ್ಥಾನ ದೊರಕುವಲ್ಲಿ ಮುಖ್ಯ ಪಾತ್ರ ವಹಿಸಿದ್ದಾರೆ. ಮಲ್ಲಗಂಬ ಸ್ಪರ್ಧೆಯಲ್ಲಿ ಪಾಲ್ಗೊಂಡು ಸತತವಾಗಿ ಒಂಬತ್ತು ವರುಷ ಪ್ರಥಮ ಬಹುಮಾನ ಪಡೆದಿರುವ ಹೆಗ್ಗಳಿಕೆ ಅವರದ್ದಾಗಿದೆ.

ತಾತ್ಕಾಲಿಕ ಅಧ್ಯಾಪಕರ ನೇಮಕಾತಿಗೂ ಕೆ-ಟೆಟ್ ಕಡ್ಡಾಯಗೊಳಿಸಲು ನಿರ್ದೇಶನ

ಕಾಸರಗೋಡು: ಹೈಸ್ಕೂಲ್ ತನಕವಿರುವ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ನಡೆಸಲಾಗುತ್ತಿರುವ ತಾತ್ಕಾಲಿಕ ಅಧ್ಯಾಪಕರ ನೇಮಕಾತಿಗೂ ಕೆ-ಟೆಟ್ (ಯೋಗ್ಯತಾ ಪರೀಕ್ಷೆ) ಕಡ್ಡಾಯಗೊಳಿಸಿ ಕೇರಳ ರಾಜ್ಯ ಸರಕಾರವು ಆದೇಶ ಹೊರಡಿಸಿದೆ.

ಸುಪ್ರಿಂಕೋರ್ಟ್ ನೀಡಿದ ತೀರ್ಪಿನ ಆಧಾರದಲ್ಲಿ ಸರಕಾರವು ಈ ತೀರ್ಮಾನ ಕೈಗೊಂಡಿದೆ. ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ಶಾಶ್ವತವಾಗಿ ನೇಮಿಸಲ್ಪಡುವ ಅಧ್ಯಾಪಕರಿಗೆ ಮಾತ್ರವಲ್ಲ ತಾತ್ಕಾಲಿಕವಾಗಿ ನೇಮಕಾತಿ ಲಭಿಸುವ ಅಧ್ಯಾಪಕರೂ ಕೆ-ಟೆಟ್ ಪರೀಕ್ಷೆ ಉತ್ತೀರ್ಣರಾಗಬೇಕೆಂದು ಕಳೆದ ಸೆಪ್ಟೆಂಬರ್‌ನಲ್ಲಿ ಸರ್ವೋಚ್ಚ ನ್ಯಾಯಾಲಯ ಅಧಿಕೃತ ನಿರ್ದೇಶನ ಹೊರಡಿಸಿತ್ತು.

ನಿರ್ದೇಶನದಲ್ಲಿ ಉಲ್ಲೇಖ

ಅಧ್ಯಾಪಕರ ನೇಮಕಾತಿಯಲ್ಲಿ ಮೀಸಲಾತಿ ಹುದ್ದೆಗಳಿಗೆ ಅರ್ಹರಾದವರಿಂದ ಅರ್ಜಿ ಲಭಿಸದಿದ್ದಲ್ಲಿ ಮಾತ್ರವೇ ಅಂತಹ ಹುದ್ದೆಗಳಿಗೆ ಸಾರ್ವಜನಿಕ ವಿಭಾಗ ಪಟ್ಟಿಯಿಂದ ನೇಮಕಾತಿ ನಡೆಸಬಹುದೆಂದು ತಿಳಿಸಲಾಗಿದೆ. ಅಧ್ಯಾಪಕರ ನೇಮಕಾತಿಯಲ್ಲಿ ಮೀಸಲು ಕ್ರಮ ಸಂಪೂರ್ಣ ಪಾಲಿಸಲಾಗಿದೆ ಎಂಬುದನ್ನು ಶಾಲೆಗಳಿಗೆ



ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ

ನ್ಯಾಯಾಲಯದ ಈ ತೀರ್ಪಿನ ಆಧಾರದಲ್ಲಿ ಕಳೆದ ಜನವರಿ ಮತ್ತು ಫೆಬ್ರವರಿಯಲ್ಲಿ ರಾಜ್ಯ ಶಿಕ್ಷಣ ಇಲಾಖೆಯು ಹೊರಡಿಸಿರುವ ಅಧಿಸೂಚನೆಯಲ್ಲಿ ನಿರ್ದೇಶಿಸಿರು ವಂತೆ ಪೂರ್ಣ ಶಿಕ್ಷಣ ಅರ್ಹತೆ ಹೊಂದಿರುವವರನ್ನು ಮಾತ್ರವೇ ತಾತ್ಕಾಲಿಕ ಅಧ್ಯಾಪಕರನ್ನಾಗಿ ನೇಮಿಸ ಬೇಕೆಂದು ರಾಜ್ಯ ಶಿಕ್ಷಣ ನಿರ್ದೇಶಕರು ಹೊರಡಿಸಿದ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಪರಿಶೀಲನೆಗಾಗಿ ಬರುವ ಶಿಕ್ಷಣ ಅಧಿಕಾರಿಗಳು ಖಾತರಿಪಡಿಸಬೇಕೆಂದು ನಿರ್ದೇಶನದಲ್ಲಿ ಉಲ್ಲೇಖಿಸಲಾಗಿದೆ.

ಕುಟುಂಬಶ್ರೀ ಕಾಸರಗೋಡು ಜಿಲ್ಲಾ ಮಿಷನ್ ನೇತೃತ್ವದಲ್ಲಿ ನಮಸ್ತೆ ಕಲೆಕ್ಟರ್ ಕಾರ್ಯಕ್ರಮ

ವಿದ್ಯಾರ್ಥಿಗಳಿಗೆ ಅಧ್ಯಯನ ಕೊಠಡಿ, ಮೂಲ ಸೌಲಭ್ಯಕ್ಕೆ ಬೇಡಿಕೆ

ಕಾಸರಗೋಡು: ಕುಟುಂಬಶ್ರೀ ಕಾಸರಗೋಡು ಜಿಲ್ಲಾ ಮಿಷನ್ ನೇತೃತ್ವದಲ್ಲಿ ಕೊರಗ ವಿಶೇಷ ಯೋಜನೆಯ ಫಲಾನುಭವಿಗಳಾದ ವರ್ಕಾಡಿ, ಎಣ್ಮಕಜೆ, ಮಂಗಲ್ಪಾಡಿ, ಪೈವಳಿಕೆ - ಮೀಂಜ ಗಡಿ ಗ್ರಾಮಗಳ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಕಲೆಕ್ಟರೇಟ್‌ನಲ್ಲಿ ಹಮ್ಮಿಕೊಳ್ಳಲಾದ ನಮಸ್ತೆ ಕಲೆಕ್ಟರ್ ಕಾರ್ಯಕ್ರಮ ಹೃದಯಸ್ಪರ್ಶಿ ಅನುಭವಕ್ಕೆ ಸಾಕ್ಷಿಯಾಯಿತು.

ಭವಿಷ್ಯದ ನಾಗರಿಕರನ್ನು ಆಡಳಿತ ವ್ಯವಸ್ಥೆಯೊಂದಿಗೆ ಸಂಪರ್ಕಿಸುವ ಉದ್ದೇಶದಿಂದ ಕಾಸರಗೋಡು ಜಿಲ್ಲಾಡಳಿತ ಜಾರಿಗೆ ತಂದಿರುವ ನಮಸ್ತೆ ಕಲೆಕ್ಟರ್ ಯೋಜನೆ 7ನೇ ಕಾರ್ಯಕ್ರಮ ಇದಾಗಿದೆ. ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ತಮ್ಮ ಅಧಿಕೃತ ಕರ್ತವ್ಯಗಳ ಹೊರತಾಗಿಯೂ ಮಕ್ಕಳೊಂದಿಗೆ ಸಮಯ ಕಳೆದರು ಮತ್ತು ಅವರ ಪ್ರಶ್ನೆಗಳು ಹಾಗೂ ಕಾಳಜಿಗಳಿಗೆ ಉತ್ತರಿಸಿದಾಗ ಕಾರ್ಯಕ್ರಮ



ಔಪಚಾರಿಕ ಭೇಟಿ ಮೀರಿ ಪ್ರಜಾಪ್ರಭುತ್ವದ ಜೀವಂತ ಪಾಠವಾಯಿತು.

ಮೀಂಜ, ಮಂಗಲ್ಪಾಡಿ ಮತ್ತು ಎಣ್ಮಕಜೆ ಗ್ರಾ.ಪಂ.ಗಳ ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಅಧ್ಯಯನ ಕೊಠಡಿ, ಇನ್ನಿತರ ಸೌಲಭ್ಯಗಳ ಕೊರತೆಯ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಯಿತು. ದೂರದ ಪ್ರದೇಶಗಳಲ್ಲಿರುವುದರಿಂದ ಶಾಲೆಗಳನ್ನು ತಲುಪಲು ತೊಂದರೆಯಾಗುತ್ತಿದೆ ಮತ್ತು ಈ ಸ್ಥಳಗಳನ್ನು ವಿದ್ಯಾವಾಹಿನಿ ಯೋಜನೆಗೆ ಸೇರಿಸುವಂತೆ ಮಕ್ಕಳು ಜಿಲ್ಲಾಧಿಕಾರಿಗಳ ಮುಂದೆ ಬೇಡಿಕೆಯಿರಿಸಿದರು.

ಮೀಂಜ ಮತ್ತು ವರ್ಕಾಡಿ ಪ್ರದೇಶಗಳಲ್ಲಿ ಅಧ್ಯಯನ ಉದ್ದೇಶಕ್ಕಾಗಿ ಸಮುದಾಯ ಭವನ ನಿರ್ಮಿಸಬೇಕು ಎಂದು ಗಡಿ ಗ್ರಾಮಗಳ ವಿದ್ಯಾರ್ಥಿಗಳು ವಿನಂತಿಸಿದರು. ಈ ಸಮಸ್ಯೆಗಳ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ಸೈಕಲ್ ಕೇಳಿದ ಇಬ್ಬರು ಮಕ್ಕಳಿಗೆ ಸೈಕಲ್ ಖರೀದಿಸಲು ಜಿಲ್ಲಾಧಿಕಾರಿಗಳು ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕರಿಗೆ ತಿಳಿಸಿದರು. ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್, ಡಿಪಿಎಂ ಕೆ.ಟಿ.ಜಿತಿನ್ ಮತ್ತು ಕುಟುಂಬಶ್ರೀ ಆನಿಮೇಟರ್‌ಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾಲೇಜುಗಳಿಗೆ ವಿಸ್ತರಿಸಲು ನಿರ್ಧಾರ

ಜಿಲ್ಲಾಡಳಿತ ಮತ್ತು ವಿದ್ಯಾರ್ಥಿಗಳ ನಡುವಿನ ಸಂವಹನ ಬಲಪಡಿಸುವ -ಆಡಳಿತ ಪ್ರಕ್ರಿಯೆಯಲ್ಲಿ ಯುವಜನರ ಭಾಗವಹಿಸುವಿಕೆ ಖಚಿತಪಡಿಸಿ ಕೊಳ್ಳುವ ಉದ್ದೇಶದಿಂದ ಮಾರ್ಚ್ 18 ರಂದು ನಮಸ್ತೆ ಕಲೆಕ್ಟರ್ ಯೋಜನೆ ಪ್ರಾರಂಭಿಸಲಾಯಿತು. ಆಡಳಿತ ವ್ಯವಸ್ಥೆ ನೇರವಾಗಿ ಅರ್ಥಮಾಡಿಕೊಳ್ಳಲು ಅವಕಾಶ ಒದಗಿಸುವ ಈ ಯೋಜನೆ ಮುಂದಿನ ದಿನಗಳಲ್ಲಿ ಜಿಲ್ಲೆಯ ಹೆಚ್ಚಿನ ಸರಕಾರಿ ಶಾಲೆಗಳು, ಕಾಲೇಜುಗಳಿಗೆ ವಿಸ್ತರಿಸಲು ನಿರ್ಧರಿಸಲಾಗಿದೆ.

ತೆಂಗಿನಕಾಯಿ ಖರೀದಿ ಕೇಂದ್ರ ಉದ್ಘಾಟನೆ



ಮಂಜೇಶ್ವರ: ತುಳುಸಿರಿ ಫಾರ್ಮರ್ಸ್ ಸಂಸ್ಥೆ ಮಂಜೇಶ್ವರ ಇದರ ಆಶ್ರಯದಲ್ಲಿ ತೆಂಗಿನಕಾಯಿ ಖರೀದಿ- ಕೃಷಿಗೆ ಸಂಬಂಧಿಸಿದ ಸಲಕರಣೆಗಳ ಮಾರಾಟ ಕೇಂದ್ರದ ಉದ್ಘಾಟನೆಯನ್ನು ಉಪ್ಪಳ ಸಮೀಪದ ಜೋಡುಕಲ್ಲಿನಲ್ಲಿ ನಬಾರ್ಡ್‌ನ ಕಾಸರಗೋಡು ಜಿಲ್ಲಾ ಮೆನೇಜರ್ ಶರುನ್ ವಾಸ್ ನೆರವೇರಿಸಿದರು. ಕೃಷಿಗೆ ಸಂಬಂಧಿಸಿದ ವ್ಯವಹಾರಗಳ ಉತ್ತಮ ರೀತಿಯಲ್ಲಿ ನಿರ್ವಹಿಸಿ ಸಂಸ್ಥೆ ಅಭಿವೃದ್ಧಿ ಹೊಂದುವಂತಾಗಲಿ ಎಂದರು. ಮಾತ್ರವಲ್ಲದೆ ಈ ಸಂಸ್ಥೆಗೆ ನಬಾರ್ಡ್‌ನಿಂದ ಪ್ರೋತ್ಸಾಹ ಹಾಗೂ ಸವಲತ್ತು ಒದಗಿಸಿಕೊಡುವುದಾಗಿ ಭರವಸೆ ನೀಡಿದರು.

ಸಂಸ್ಥೆಯ ಸಂಯೋಜಕ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಮಾತನಾಡಿ, ಸಂಸ್ಥೆ ಪ್ರಗತಿಗೆ ಸಮಗ್ರ ಮಾರ್ಗದರ್ಶನ ನೀಡಿದರು. ಬಳಿಕ ಜರಗಿದ ನಿರ್ದೇಶಕರ ಮಾಸಿಕ ಸಭೆಯಲ್ಲಿ ಸಂಸ್ಥೆಯಿಂದ ರಸಗೊಬ್ಬರ, ಸಾವಯವ ಗೊಬ್ಬರ ಖರೀದಿ ಮಾಡುವ ಸದಸ್ಯರಿಗೆ ರಿಯಾಯಿತಿ ದರದಲ್ಲಿ ನೀಡುವುದಾಗಿ ತೀರ್ಮಾನಿಸಲಾಯಿತು. ಸಂಸ್ಥೆ ಅಧ್ಯಕ್ಷ ಸದಾನಂದ ಶೆಟ್ಟಿ ಕೊಮ್ಮಂಡ ಸ್ವಾಗತಿಸಿ, ನಿರ್ದೇಶಕ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ವಂದಿಸಿದರು.

ಸುತ್ತ ಮುತ್ತ

ನಾಲ್ಕು ವಿಧದ ಘನತ್ಯಾಜ್ಯ ವಿಂಗಡಣೆ: ನಾಗರಿಕರಲ್ಲಿ ಪುರಸಭೆ ಮನವಿ

ಕಾಪು: ಘನತ್ಯಾಜ್ಯ ವಸ್ತು ನಿರ್ವಹಣೆ ನೂತನ ನಿಯಮಗಳನ್ವಯ ಪುರಸಭೆ ವ್ಯಾಪ್ತಿಯ ಎಲ್ಲಾ ಸಾರ್ವಜನಿಕರು ಮತ್ತು ವ್ಯಾಪಾರಸ್ಥರು ಘನತ್ಯಾಜ್ಯ ವಸ್ತುಗಳನ್ನು ನಾಲ್ಕು ವಿಧಗಳಲ್ಲಿ ಕಡ್ಡಾಯವಾಗಿ ಮೂಲದಲ್ಲಿಯೇ ವಿಂಗಡಿಸಿ ಪುರಸಭೆಯ ಕಸ ಸಂಗ್ರಹಿಸುವ ಟಿಪ್ಪರ್‌ಗಳಿಗೆ ನೀಡಲು ಸೂಚಿಸಲಾಗಿದೆ.




ಸಾಂದರ್ಭಿಕ ಚಿತ್ರ

ಅಡುಗೆ ಮನೆಯಲ್ಲಿ ಸಂಗ್ರಹವಾಗುವ ಹಾಗೂ ಇತರೆ ಕರಗುವ ತ್ಯಾಜ್ಯ ವಸ್ತುಗಳನ್ನು ಹಸಿ ತ್ಯಾಜ್ಯ ಎಂದು, ಎಲ್ಲಾ ರೀತಿಯ ಪ್ಲಾಸ್ಟಿಕ್ ಮತ್ತು ಬಟ್ಟೆಯ ತ್ಯಾಜ್ಯವನ್ನು ಒಣ ತ್ಯಾಜ್ಯ ಎಂದು ಹಾಗೂ ಡೈಪರ್, ಸ್ಯಾನಿಟರಿ ನ್ಯಾಪ್ಕಿನ್ ಸೇರಿದಂತೆ ಸ್ಯಾನಿಟರಿ ತ್ಯಾಜ್ಯವನ್ನು ಹಾಗೂ ಬಣ್ಣದ ಡಬ್ಬ, ಕೀಟನಾಶಕ ಅವಧಿ ಮೀರಿದ ಔಷಧಿಗಳು ಬಳಸಿದ ಸಿರಿಂಜ್ ನೀಡಲ್ಸ್ ಬಲ್ಬ್, ಹಳೆಯ ಬ್ಯಾಟರಿ ಮುಂತಾದವುಗಳನ್ನು ವಿಶೇಷ ಕಾಳಜಿ ತ್ಯಾಜ್ಯ ಎಂದು ಪ್ರತ್ಯೇಕವಾಗಿ ವಿಂಗಡಿಸಿ ನೀಡುವ ಮೂಲಕ ಸ್ವಚ್ಛತೆಗೆ ಕೈ ಜೋಡಿಸುವಂತೆ ಕಾಪು ಪುರಸಭೆಯ ಮುಖ್ಯಾಧಿಕಾರಿ ಎನ್.ಎಂ. ಮೇಸ್ತ ಪ್ರಕಟಣೆಯಲ್ಲಿ ಕೋರಿದ್ದಾರೆ.

ಅಂಪಾರು ಸುಖಾನಂದ ಶೆಟ್ಟಿಗೆ ಮಾಹೆಯ ಪಿಎಚ್‌ಡಿ ಪದವಿ

ಕುಂದಾಪುರ: ಪ್ರತಿಷ್ಠಿತ ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕ ಸುಖಾನಂದ ಶೆಟ್ಟಿ ಇವರು ಪ್ರಸಿದ್ಧ ಲೇಖಕಿ ಹಾಗೂ ವಿಶ್ರಾಂತ ಪ್ರಾಧ್ಯಾಪಕಿ ಡಾ.ರೇಖಾ ಬನ್ನಾಡಿ ಅವರ



ಮಾರ್ಗದರ್ಶನದಲ್ಲಿ ಪ್ರಾದೇಶಿಕ ಜಾನಪದ ರಂಗ ಕಲೆಗಳ ಅಧ್ಯಯನ ಕೇಂದ್ರ (ಮಾಹೆ) ದ ಮೂಲಕ ಸಲ್ಲಿಸಿದ 'ಕೊಲ್ಲೂರು ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಪ್ರತಿಷ್ಠಿತ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಇವರು ನಿವೃತ್ತ ಪದವೀಧರ ಮುಖ್ಯೋಪಾಧ್ಯಾಯ ಎಚ್.ಬಿ.ಬಾಬಯ್ಯ ಶೆಟ್ಟಿ ಮತ್ತು ಅಂಪಾರು ಹೊಸ ಮನೆ ಶಾರದಾ ಬಿ.ಶೆಟ್ಟಿ ದಂಪತಿ ಪುತ್ರ.

ಮೊದಲನೇ ಪುಟದಿಂದ

ಕೇಂದ್ರದ ಬ್ರಹ್ಮಾಸ್ತ್ರ

ತಕ್ಷಣ ಅಂಗಡಿ ಯವರು ಆ ಮೊಬೈಲ್ ಸಂಬಂಧಿಸಿದ ಸೂಕ್ತ ಬಿಲ್ ಅಥವಾ ದಾಖಲೆ ಕೇಳಿದಾಗ, ಮಾರಾಟಕ್ಕೆ ತಂದಿದ್ದ ವ್ಯಕ್ತಿಗಳು ಯಾವುದೇ ದಾಖಲೆ ನೀಡಲಾಗದೆ ಪರಾರಿಯಾಗಿದ್ದಾರೆ.

ಆ ಎಲ್ಲಾ ಲಕ್ಷಾಂತರ ರೂಪಾಯಿ ಮೌಲ್ಯದ ಏಳು ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದು ಉಡುಪಿ ಜಿಲ್ಲಾ ಪೊಲೀಸ್ ಕಚೇರಿಗೆ ತಂದು ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಹಸ್ತಾಂತರಿಸಿದ್ದಾರೆ. ಸದ್ಯ ಪೊಲೀಸ್ ಇಲಾಖೆ ಸಿಇಐಆರ್ ಪೋರ್ಟಲ್ ಸಹಾಯದಿಂದ ಈ ಫೋನ್‌ಗಳ ಮೂಲ ಮಾಲೀಕರನ್ನು ಪತ್ತೆಹಚ್ಚಿ ಕಾನೂನು ಬದ್ಧವಾಗಿ ಹಸ್ತಾಂತರಿಸುವ ಪ್ರಕ್ರಿಯೆ ಆರಂಭಿಸಿದೆ.

ಅಧ್ಯಾಪಕರು, ಸಿಬ್ಬಂದಿ

ಕಾಸರಗೋಡು ಜಿಲ್ಲೆಯಲ್ಲಿ ಅಂಗೀಕಾರವಿರುವ 72 ಮಂದಿ ಅಧ್ಯಾಪಕರಿಗೆ, 31 ಮಂದಿ ಸಹಾಯಕರಿಗೆ ಮಾತ್ರವೇ ಈ ಸವಲತ್ತು ಲಭಿಸಲಿದೆ. 2012ನೇ ಆಗಸ್ಟ್ 1ರ ಮೊದಲು ಉದ್ಯೋಗಕ್ಕೆ ಸೇರ್ಪಡೆಗೊಂಡವರಿಗೆ ಈ ಪ್ರಯೋಜನ ದೊರಕಲಿದೆ. ಆದರ ಬಳಿಕದ ಪೂರ್ವ ಪ್ರಾಥಮಿಕ ಶಾಲೆ ಅಧ್ಯಾಪಕರಿಗೆ, ಸಹಾಯಕರಿಗೆ ಈ ಸವಲತ್ತು ಲಭ್ಯವಿಲ್ಲ. ಸುಪ್ರೀಂಕೋರ್ಟ್ ಅಂಗೀಕರಿಸಿದ ಸಮಾನ ನೌಕರಿಗೆ ಸಮಾನ ವೇತನ ಎಂಬುದನ್ನು ಕಾಸರಗೋಡು ಜಿಲ್ಲೆಯಲ್ಲೂ ಜಾರಿಗೊಳಿಸಬೇಕಾಗಿದೆ. ಪ್ರತಿಫಲದಲ್ಲಿ ಸಮಾನತೆ ಎಂಬುದು ಜಿಲ್ಲೆಯ ಪೂರ್ವ ಪ್ರಾಥಮಿಕ ವಲಯದ ಪ್ರಮುಖ ಬೇಡಿಕೆಯಾಗಿದೆ. 10 ವರ್ಷಗಳಿಗಿಂತ ಹೆಚ್ಚು ದುಡಿಯುತ್ತಿರುವವರಿಗೆ 12,500ರೂ., ಅದಕ್ಕಿಂತ ಕಡಿಮೆ ವರ್ಷಕ್ಕೆ 12,000ರೂ. ಎಂಬ ಬಗ್ಗೆ 2012ನೇ ಆಗಸ್ಟ್ 1ರಂದು ಸರ್ಕಾರ ತೀರ್ಮಾನ ಕೈಗೊಂಡಿತ್ತು. ಆದರ ಬಳಿಕ ಕಳೆದ ಎಲ್‌ಡಿಎಫ್ ಸರ್ಕಾರವು ಒಂದು ಸಾವಿರ ರೂ. ಹೆಚ್ಚಿಸಿತು. 13,500ರೂ., 13,000ರೂ. ಇದ್ದ ವೇತನ ಈಗಿನ ಸರಕಾರವು 14,500ರೂ., 14,000ರೂ. ಎಂಬುದಾಗಿ ಏರಿಸಿದೆ.

ವಿಶ್ವವಿದ್ಯಾಲಯ ಮಟ್ಟದ ಅಂತರ್ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 'ಆರೋಹ' 2026 ಸಮಾರೋಪ

ಕಾರ್ಕಳ ಸರ್ಕಾರಿ ಕಾಲೇಜು ಪ್ರಥಮ, ಡಾ.ಬಿಬಿ ಹೆಗ್ಡೆ ದ್ವಿತೀಯ



ಕೋಟ: ಲಕ್ಷ್ಮೀ ಸೋಮ ಬಂಗೇರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲಿನಡೆದ ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ ಆರೋಹ 2026ರ ಸಮಾರೋಪ ಸಮಾರಂಭದಲ್ಲಿ ವಿಜೇತರಾದ ಮೂರು ಕಾಲೇಜುಗಳಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿಗಳನ್ನು ನೀಡಲಾಯಿತು.

ಪ್ರಥಮ ಬಹುಮಾನ ರೂ. 40,000 ಗಳನ್ನು ಶ್ರೀ ಮಂಜುನಾಥ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಾರ್ಕಳ ಪಡೆದರೆ, ದ್ವಿತೀಯ ಬಹುಮಾನ ರೂ. 30,000 ಗಳನ್ನು ಡಾ. ಬಿಬಿ ಹೆಗ್ಡೆ ಕಾಲೇಜು ಕುಂದಾಪುರ ಪಡೆಯಿತು. ತೃತೀಯ ಬಹುಮಾನ ರೂ.20000 ಗಳನ್ನು ಎಸ್‌ಎಮ್‌ಎಸ್ ಕಾಲೇಜು ಬ್ರಹ್ಮಾವರ ಪಡೆದುಕೊಂಡಿತು.

ಅತಿಥಿಯಾಗಿದ್ದ ಸ್ಥಳೀಯ ಪ್ರಗತಿಪರ ಕೃಷಿಕ ಜಯರಾಮ ಶೆಟ್ಟಿ ಮಾತನಾಡಿ, ವಿದ್ಯಾರ್ಥಿಗಳ ಸಾಂಘಿಕ ಪ್ರಯತ್ನವನ್ನು ಶ್ಲಾಘಿಸಿದರು.

ಸ್ಥಳೀಯ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡೆನಿಸ್ ಬಾಂಜ್ ಮಾತನಾಡಿ, ಸರ್ಕಾರಿ ಪದವಿ ಕಾಲೇಜಿನಲ್ಲಿ ಸಂಘಟಿಸಲಾದ ಈ ಸಾಂಸ್ಕೃತಿಕ ಸ್ಪರ್ಧೆ ಮಾದರಿಯಾಗಿ ಮೂಡಿಬಂದಿದೆ ಎಂದು ಅಭಿಪ್ರಾಯಪಟ್ಟರು.

ಕಾಲೇಜಿನ ಹಳೆ ವಿದ್ಯಾರ್ಥಿ ಸಿನಿಮಾ ನಟ ಪುನೀತ್ ಶೆಟ್ಟಿ ಮಾತನಾಡಿ, ಈ ಕಾಲೇಜಿನಲ್ಲಿ ಈ ಹಿಂದೆ ತಾನು ವಿದ್ಯಾರ್ಥಿಯಾಗಿರುವಾಗ ಆರೋಹದ ಸಂಘಟನೆಯಲ್ಲಿ ಪಾಲ್ಗೊಂಡ ಅನುಭವವನ್ನು ಹಂಚಿಕೊಂಡು ವಿದ್ಯಾರ್ಥಿಗಳು ಬದುಕಿನಲ್ಲಿ ಕನಸುಗಳನ್ನು ಕಾಣಬೇಕು ಮತ್ತು ಅವುಗಳ ಬೆನ್ನತ್ತಿ ಹೋದರೆ ಮುಂದಿನ ದಿನಗಳಲ್ಲಿ ಯಶಸ್ಸನ್ನು ಪಡೆಯಲು ಸಾಧ್ಯ ಎಂದರು.

ಪ್ರಾಂಶುಪಾಲರಾದ ಡಾ.ರಾಜೇಂದ್ರ ಎಸ್ ನಾಯಕ ಅಧ್ಯಕ್ಷತೆ ವಹಿಸಿದರು. ಮಣೂರು ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ವಿಜಯ ಶುಭ ಹಾರೈಸಿದರು. ನಿರ್ಣಾಯಕರಾಗಿ ವಿದುಷಿ ದೀಕ್ಷಾ ವಿ., ನಿತಿನ್ ಶೆಟ್ಟಿ ಹಾಗೂ ಗೋಪಾಲ ಗಾಣಿಗ ಇವರು ಆಗಮಿಸಿದರು. ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ಡಾ.ರಮೇಶ್ ಆಚಾರ್ ಉಪಸ್ಥಿತರಿದ್ದರು.

ಉದ್ಘಾಟನಾ ಸಮಾರಂಭ

ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 'ಆರೋಹ'ವನ್ನು ಉದ್ಯಮಿ ಪ್ರಥ್ವಿರಾಜ್ ಶೆಟ್ಟಿ ಬಿಲ್ಲಾಡಿ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಕೇವಲ ಪಠ್ಯ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರದೆ, ಶಿಕ್ಷಣದ ಜತೆಗೆ ಸಾಂಸ್ಕೃತಿಕ, ಕ್ರೀಡೆ ಮೊದಲಾದ ಕ್ರಿಯಾತ್ಮಕ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಾಗ ಯಶಸ್ವಿಯಾಗಲು ಸಾಧ್ಯ ಎಂದು ಹೇಳಿದರು.

ಆತ್ಮವಿಶ್ವಾಸ ಬೆಳೆಸುತ್ತದೆ

ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ ಸಿ. ಕುಂದರ್ ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದ್ದು, ಇಂತಹ ಮಣೂರು-ಪಡುಕರೆ ಕಾಲೇಜಿನಲ್ಲಿ ಅಂತರ್‌ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳು ಯುವಜನರಲ್ಲಿ ಸೃಜನಶೀಲತೆ ಮತ್ತು ಆತ್ಮವಿಶ್ವಾಸವನ್ನು ಬೆಳೆಸುತ್ತವೆ ಎಂದರು.

ಪಡುಕರೆ ಕಾಲೇಜಿನ ಸ್ಪರ್ಧೆ ಪ್ರಾಂಶುಪಾಲ ರಾಜೇಂದ್ರ ಎಸ್. ನಾಯಕ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಣದ ಜತೆಗೆ ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಅಗತ್ಯ ಎಂದರು.

ಖಾಲಿಯಿರುವ ಶಿಕ್ಷಕ ಹುದ್ದೆ ತ್ವರಿತವಾಗಿ ಭರ್ತಿಗೆ ಕೊಡ್ಗಿ ಮನವಿ



ಕುಂದಾಪುರ: ಕುಂದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಬೆಂಗಳೂರಿನ ಸಮಗ್ರ ಶಿಕ್ಷಣ ಕರ್ನಾಟಕ ಕಚೇರಿಯಲ್ಲಿ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ಬುಧವಾರ ಭೇಟಿ ಮಾಡಿ ಕುಂದಾಪುರ ಭಾಗದ ಶಿಕ್ಷಣ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು.

ಕುಂದಾಪುರ ಕ್ಷೇತ್ರದ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿ ಗ್ರಾಮೀಣ, ಕರಾವಳಿ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ವಾತಾವರಣ ಗುಣಮಟ್ಟದ ಶಿಕ್ಷಣಕ್ಕಾಗಿ ಖಾಲಿಯಿರುವ ಶಿಕ್ಷಕ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡುವ ಬಗ್ಗೆ ಕ್ಷೇತ್ರದ ಶೈಕ್ಷಣಿಕ ಅಗತ್ಯತೆಗಳಿಗೆ ತಕ್ಷಣ ಸ್ಪಂದಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ ಅವರು, ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡುವಂತೆ ಕೋರಿದರು.

ಮೇ 31: ಯಕ್ಷಗಾನ ಕಲಾವಿದರ ವಾರ್ಷಿಕ ಸಮಾವೇಶ

ಉಡುಪಿ: ಯಕ್ಷಗಾನ ಕಲಾರಂಗದ ವತಿಯಿಂದ ಯಕ್ಷಗಾನ ಕಲಾವಿದರ ಸಮಾವೇಶವು ಮೇ 31ರಂದು ಶ್ರೀಕೃಷ್ಣ ಮಠ ಪರ್ಯಾಯ ಶ್ರೀ ಶೀರೂರು ಮಠದ ಆಶ್ರಯದಲ್ಲಿ ರಾಜಾಂಗಣದಲ್ಲಿ ನಡೆಯಲಿದೆ.

ಅಂದು ಬೆಳಿಗ್ಗೆ 9ರಿಂದ ಕಲಾವಿದರಿಗೆ ಕಸ್ತೂರ್ಬಾ ಮೆಡಿಕಲ್ ಕಾಲೇಜು, ಮಣಿಪಾಲದ ವೈದ್ಯರಿಂದ ವೈದ್ಯಕೀಯ ತಪಾಸಣೆ ಆರಂಭವಾಗಲಿದೆ. 10.30ಕ್ಕೆ ಪರ್ಯಾಯ ಶೀರೂರು ಮಠದ ದಿವಾನರಾದ ಡಾ. ಉದಯ ಕುಮಾರ್ ಸರಳತ್ತಾಯರು ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಬಳಿಕ ಕಲಾಮಂಡಲಮ್ ನಂದಕುಮಾರ್ ಮತ್ತು ತಂಡದವರಿಂದ 'ಕಲ್ಯಾಣ ಸೌಗಂಧಿಕಂ' ತುಳ್ಳಲ್ ತ್ರಯಮ್ ಪ್ರದರ್ಶನಗೊಳ್ಳಲಿದೆ. 12ರಿಂದ ಕಲೆ-ಕಲಾವಿದ-ಪ್ರೇಕ್ಷಕ: ಸಮನ್ವಯ ವಿಷಯದ ಕುರಿತು ಕಲಾವಿದರು ಚರ್ಚೆ ನಡೆಸಲಿದ್ದು, ಅರ್ಥಧಾರಿ, ಪ್ರಸಂಗಕರ್ತ ಪವನ್ ಕಿರಣ್‌ಕೆರೆ ಸಮನ್ವಯಕಾರರಾಗಿರುತ್ತಾರೆ. ಅಪರಾಹ್ನ 2.30ರಿಂದ ಸಮಾವೇಶದ ಸಮಾರೋಪ ಸಮಾರಂಭ ನಡೆಯಲಿದ್ದು, ಪರ್ಯಾಯ ಶೀರೂರು ಮಠಾಧೀಶ ಶ್ರೀ ವೇದವರ್ಧನತೀರ್ಥ ಶ್ರೀಪಾದರು ಆಶೀರ್ವಚಿಸಲಿದ್ದಾರೆ. ನಾಡೋಜ ಡಾ.ಜಿ. ಶಂಕರ್ ಅಧ್ಯಕ್ಷತೆವಹಿಸಲಿರುವ ಈ ಸಮಾರಂಭದಲ್ಲಿ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಶುಭಾಶಂಸನೆಗೈಯಲಿರುವರು. ಸಂಸದ ಕೋಟ ಶ್ರೀನಿವಾಸ ಪೂಜಾರಿ ಕಲಾವಿದರಿಗೆ ಉಡುಗೊರೆ ವಿತರಿಸಲಿರುವರು. ಶಾಸಕ ಯಶ್‌ಪಾಲ್ ಸುವರ್ಣ ಗೃಹ ನಿರ್ಮಾಣದ ಉಡುಗೊರೆ ವಿತರಿಸಲಿರುವರು. ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಕಿರಣ್ ಕುಮಾರ್ ಕೊಡ್ಗಿ, ಗುರುರಾಜ ಗಂಟಿಹೊಳೆ, ಮಾಜಿ ಸಚಿವರಾದ ಪ್ರಮೋದ್ ಮಧ್ವರಾಜ್, ಉದ್ಯಮಿಗಳಾದ ಆನಂದ ಸಿ. ಕುಂದರ್, ಪಣಂಬೂರು ವಾಸುದೇವ ಐತಾಳ್, ಪಿ. ಪುರುಷೋತ್ತಮ ಶೆಟ್ಟಿ ಮುನಿಯಾಲು ಉದಯ ಕುಮಾರ್ ಶೆಟ್ಟಿ ಕುಯಿಲಾಡಿ ಸುರೇಶ್ ನಾಯಕ್, ಸಿಎ ಗಣೇಶ್ ಕಾಂಚನ್, ಹರಿಯಪ್ಪ ಕೋಟ್ಯಾನ್, ಆನಂದ ಪಿ. ಸುವರ್ಣ, ಸಾಧು ಸಾಲಿಯಾನ್ ಅಭ್ಯಾಗತರಾಗಿ ಪಾಲ್ಗೊಳ್ಳುವರು. ಇದೇ ವೇಳೆ ವೈದ್ಯಕೀಯ ನೆರವು, ಗೃಹನಿರ್ಮಾಣದ ಉಡುಗೊರೆ ವಿತರಿಸಲಾಗುವುದು. ಯಕ್ಷನಿಧಿಯ ಸದಸ್ಯರಾದ ವೃತ್ತಿಮೇಳದ ಸುಮಾರು 1000 ಕಲಾವಿದರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಎಂದು ಅಧ್ಯಕ್ಷ ಎಂ. ಗಂಗಾಧರ ರಾವ್, ಕಾರ್ಯದರ್ಶಿ ಮುರಲಿ ಕಡೆಕಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಅದಮಾರು ಬಾಲ ವಿಕಾಸ ವೇದಿಕೆ ಭಜನಾ ಮಂಗಲೋತ್ಸವ



ಪಡುಬಿದ್ರಿ: ಅದಮಾರು ಆದರ್ಶ ಯುವಕ ಸಂಘದಲ್ಲಿ ಕಳೆದ ಹಲವಾರು ವರ್ಷಗಳಿಂದ ಬಾಲವಿಕಾಸ ವೇದಿಕೆ -ಮಕ್ಕಳ ಭಜನೆ ಮಂಡಳಿ ವಾರ್ಷಿಕ ಭಜನಾ ಮಂಗಲೋತ್ಸವ ಯುವಕ ಸಂಘದ ಸಭಾಭವನದಲ್ಲಿ ನಡೆಯಿತು.

ಗ್ರಾ.ಪಂ. ನಿವೃತ್ತ ಅಭಿವೃದ್ಧಿ ಅಧಿಕಾರಿ ನಾರಾಯಣ ಶೆಟ್ಟಿ ಉದ್ಘಾಟಿಸಿದರು. ಯುವಕ ಸಂಘದ ಅಧ್ಯಕ್ಷ ಸಂತೋಷ ಜೆ. ಶೆಟ್ಟಿ ಬರ್ಪಾಣಿ, ಮಹಿಳಾ ಮಂಡಲ ಅಧ್ಯಕ್ಷೆ ಸುಜಾತಾ ಶೆಟ್ಟಿ ಯುವಕ ಸಂಘದ ಮಾಜಿ ಅಧ್ಯಕ್ಷ ಎಲ್ಲೂರು ಶಶಿಧರ ಶೆಟ್ಟಿ ಭಜನಾ ಅರ್ಚಕ ರಮೇಶ ಆಚಾರ್ಯ, ನಿವೃತ್ತ ಯೋಧ ಬಾಲಕೃಷ್ಣ ಭಂಡಾರಿ ಇದ್ದರು. ಭಜನಾ ಕಾರ್ಯಕ್ರಮದಲ್ಲಿ ಪಾಂಡುರಂಗ ಭಜನಾ ಮಂಡಳಿ, ಬೈದಶ್ರೀ ಕುಣಿತ ಭಜನಾ ಮಂಡಳಿ ಎರ್ಮಾಳು, ದುರ್ಗಾ ಭಜನಾ ಮಂಡಳಿ ಕುಂಜೂರು, ಬಾಲ ವಿಕಾಸ ವೇದಿಕೆ ಮಕ್ಕಳ ಭಜನಾ ಮಂಡಳಿ, ಆದರ್ಶ ಮಹಿಳಾ ಮಂಡಳಿ ಯವರು ಭಾಗವಹಿಸಿದ್ದರು. ಗಣೇಶ್ ಸಾಲ್ಯಾನ್ ನಿರ್ವಹಿಸಿ ವಂದಿಸಿದರು.

ಕಟಪಾಡಿ: 50 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಶಿರ್ವ: ವಿದ್ಯಾರ್ಥಿಗಳು ಸಮಾಜಕ್ಕೆ ಹೊರೆಯಾಗದೆ ವರವಾಗುವಂತೆ ಬೆಳೆಸಬೇಕು ಎಂದು ಕಾಪು ಕ್ಷೇತ್ರದ ಶಾಸಕ ಸುರೇಶ್ ಶೆಟ್ಟಿ ಗುರ್ಮೆ ಹೇಳಿದರು.

ಬುಧವಾರ ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘ ಮಾನ್ಯ ಕಲ್ಚರಲ್ ಎಜ್ಯುಕೇಷನಲ್ ಫೌಂಡೇಶನ್ ಕಟಪಾಡಿ, ಇನ್ವೆಂಜರ್ ಫೌಂಡೇಶನ್ ಮಂಗಳೂರು ವತಿಯಿಂದ ಎಸ್‌ವಿಎಸ್ ಹಿರಿಯ ಪ್ರಾಥಮಿಕ ಶಾಲಾ ಸಭಾಂಗಣದಲ್ಲಿ ಏರ್ಪಡಿಸಿದ 2025-26ನೇ ಸಾಲಿನಲ್ಲಿ ಶೈಕ್ಷಣಿಕ, ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧನೆ ಮಾಡಿರುವ 50 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ಸಂಚಾಲಕ ಕೆ. ಸತ್ಯೇಂದ್ರ ಪೈ ಮಾತನಾಡಿ, ಮೂರೂ ಸಂಸ್ಥೆಗಳು ಮುಂಬರುವ ದಿನಗಳಲ್ಲೂ ಸಾಧ್ಯವಾದಷ್ಟು ಶೈಕ್ಷಣಿಕ ಆರೋಗ್ಯ ಸಂಬಂಧಿ ನೆರವು ನೀಡಲು ಬದ್ಧವಾಗಿದ್ದು, ಹೆಚ್ಚುಹೆಚ್ಚು ಸಾಮಾಜಮುಖಿ ಕಾಯಕದಲ್ಲಿ ತೊಡಗಿಕೊಳ್ಳುವ ಸಂಕಲ್ಪ ಹೊಂದಿದ್ದೇವೆ ಎಂದರು.

ಮಾನ್ಯ ಕಲ್ಚರಲ್ ಎಜ್ಯುಕೇಷನಲ್ ಫೌಂಡೇಶನ್ ಅಧ್ಯಕ್ಷ ಶಿವಾನಂದ ಕೋಟ್ಯಾನ್ ಕಟಪಾಡಿ ಮಾತನಾಡಿ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಈ ಕೆಲಸ ನಿರಂತರವಾಗಿ ಸಾಗುವಂತಾಗಲಿ ಎಂದರು.

ಉದ್ಯಮಿ ಸುನೀಲ್ ಸಾಲ್ಯಾನ್ ಕಡೆಕಾರು, ವಿಜಯ ಕರ್ನಾಟಕ ದಿನ ಪತ್ರಿಕೆ ಮಂಗಳೂರು ಆವೃತ್ತಿ ಸ್ಥಾನೀಯ ಸಂಪಾದಕ ರವೀಂದ್ರ ಶೆಟ್ಟಿ ಮುಖ್ಯ ಅತಿಥಿಗಳಾಗಿದ್ದರು. ಎಸ್‌ವಿಎಸ್ ವಿದ್ಯಾವರ್ಧಕಸಂಘದಸಂಘದಸದಸ್ಯಗಣೇಶ್ ಕಿಣಿ, ಆಡಳಿತಾಧಿಕಾರಿ ಸುಧಾಕರ್ ಬ್ರಹ್ಮಾವರ, ಎಸ್‌ವಿಎಸ್, ಎಸ್‌ವಿಕೆ ಆಂಗ್ಲಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯರಾದ ದೇವೇಂದ್ರ ನಾಯಕ್, ಸುಜಾತಾ ಜೆ. ಇದ್ದರು. ಪ್ರಕಾಶ್ ಸುವರ್ಣ ಕಟಪಾಡಿ ಅವರ ಪಂಜುರ್ಲಿ ಕೃತಿಯನ್ನು ಶಾಸಕ ಗುರ್ಮೆ ಸುರೇಶ್ ಶೆಟ್ಟಿಗೆ ಸಮರ್ಪಿಸಲಾಯಿತು. ಪ್ರಕಾಶ್ ಸುವರ್ಣ ಕಾರ್ಯಕ್ರಮ ನಿರೂಪಿಸಿದರು. ಭಾಸ್ಕರ್ ಕಾಮತ್ ವಂದಿಸಿದರು.

ಸನ್ಮಾನ

ಕಾಪು ತಾಲೂಕು ಜನಜಾಗೃತಿ ವೇದಿಕೆಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕೆ. ಸತ್ಯೇಂದ್ರ ಪೈ, ಜಾನಪದ ಪರಿಷತ್ ಹೊರನಾಡ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶಿವಾನಂದ ಕೋಟ್ಯಾನ್ ಕಟಪಾಡಿ, ಸ್ಕೂಲ್ ಲೀಡರ್ ಚಿತ್ರದ ಪ್ರಶಸ್ತಿ ವಿಜೇತ ನಿರ್ದೇಶಕ ರಜಾಕ್ ಪುತ್ತೂರು, ಸರಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟದ ಸಾಧಕಿ ಅಶ್ವಿನಿ ಸಂದೀಪ್, ಕಾಸರಗೋಡು ಪತ್ರಕರ್ತರ ಸಂಘದ ದತ್ತಿನಿಧಿ ಪ್ರಶಸ್ತಿ ವಿಜೇತ ಪ್ರಕಾಶ್ ಸುವರ್ಣ ಕಟಪಾಡಿ ಅವರನ್ನು ಸನ್ಮಾನಿಸಲಾಯಿತು. ಶೈಕ್ಷಣಿಕ, ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧನೆ ಮಾಡಿರುವ 50 ಮಂದಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ವತ್ತಿನೆಣೆಯ ಕಿರು ಮಂತ್ರಾಲಯ ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠ

ವೃಂದಾವನದ ಪ್ರಥಮ ಪ್ರತಿಷ್ಠಾ ವರ್ಧಂತ್ಯೋತ್ಸವ



ಬೈಂದೂರು: ವತ್ತಿನೆಣೆ ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠದ (ಕಿರು ಮಂತ್ರಾಲಯ) ಶ್ರೀ ಗುರು ರಾಘವೇಂದ್ರ ಸಾರ್ವಭೌಮರ ವೃಂದಾವನ ಪುನಃಪ್ರತಿಷ್ಠೆಮಹೋತ್ಸವದ ಪ್ರಥಮ ಪ್ರತಿಷ್ಠಾ ವರ್ಧಂತ್ಯೋತ್ಸವ ಗುರುವಾರ ಸಡಗರದಿಂದ ಜರುಗಿತು.

ಬೆಳಿಗ್ಗೆ ತಂತ್ರಿ ಕೇಂಜ ಶ್ರೀಧರ ತಂತ್ರಿಗಳ ಮಾರ್ಗದರ್ಶನದಲ್ಲಿ ಮಠದ ಪ್ರಧಾನ ಅರ್ಚಕ ಸುಬ್ರಾಯ ನಾವಡ ಹಾಗೂ ಮುರುಳಿ ನಾವಡ ಇವರ ಮುಂದಾಳತ್ವದಲ್ಲಿ ಮಹಾಪ್ರಾರ್ಥನೆ, ಪುಣ್ಯಾಹ, ದೇವನಾಂದಿ, ವಾಸ್ತುಹೋಮ, ವಾಸ್ತು ಪೂಜೆ, ಕಲಶಾಭಿಷೇಕ, ಸಾನಿಧ್ಯ ಕಲಶೋತ್ಸವ ನಡೆಯಿತು, ಮಧ್ಯಾಹ್ನ ನಡೆದ ಮಹಾಅನ್ನಸಂತರ್ಪಣೆಯಲ್ಲಿ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಸುಮಾರು ಎಂಟು ಸಾವಿರಕ್ಕೂ ಹೆಚ್ಚು ಭಕ್ತರು ಗುರುರಾಯರ ದರ್ಶನ ಪಡೆದು ಅನ್ನಪ್ರಸಾದ ಸ್ವೀಕರಿಸಿದರು. ದಿನವಿಡೀ ವಿವಿಧ ಭಜನಾ ತಂಡಗಳಿಂದ ಭಜನಾ ಸಂಕೀರ್ತನೆ ನಡೆಯಿತು. ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠ ಟ್ರಸ್ಟ್‌ನ ಅಧ್ಯಕ್ಷ ಪಿ. ಸೂಲಿಯಣ್ಣ ಶೆಟ್ಟಿ ಉಪಾಧ್ಯಕ್ಷ ಎಸ್. ರಾಜು ಪೂಜಾರಿ, ಕಾರ್ಯದರ್ಶಿ ಮಂಜುನಾಥ ಶೆಟ್ಟಿ ಸಮಿತಿಯ ಸರ್ವ ಸದಸ್ಯರು ಇದ್ದರು. ಸಂಜೆ ಯಕ್ಷ ರಾಘವ ಜನ್ಸಾಲೆ ಪ್ರತಿಷ್ಠಾನದ ಹಾಗೂ ಅತಿಥಿ ಕಲಾವಿದರ ಕೂಡುವಿಕೆಯಿಂದ ಶ್ರೀ ಕೃಷ್ಣ ಪಾರಿಜಾತ, ಕಾರ್ತವೀರ್ಯ ಯಕ್ಷಗಾನ ಪ್ರದರ್ಶನಗೊಂಡಿತು.